## ಅಧ್ಯಾಯ–1
## ಭಾರತಕ್ಕೆ ಯುರೋಪಿಯನ್ನರ ಆಗಮನ

**ಭಾರತ & ಯುರೋಪ್‌ನೊಂದಿಗೆ ವ್ಯಾಪಾರ ಸಂಬಂಧ**

- ಭಾರತ & ಯುರೋಪ್ ಮಧ್ಯೆ ಪ್ರಾಚೀನ ಕಾಲದಿಂದಲೂ ವ್ಯಾಪಾರ ಸಂಬಂಧವಿತ್ತು.
- ವ್ಯಾಪಾರದ ವಸ್ತುಗಳು:– **ಸಾಂಬಾರು ಪದಾರ್ಥಗಳು, ಮೆಣಸು, ಜಿರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ**
- ಮಧ್ಯಕಾಲದಲ್ಲೂ ಇದೇ ರೀತಿ ವ್ಯಾಪಾರ ಮುಂದುವರೆಯಿತು.
- ಏಷ್ಯಾದ ಸರಕುಗಳನ್ನು **ಅರಬ್ ವರ್ತಕರು** ಕಾನ್‌ಸ್ಟಾಂಟಿನೋಪಾಲ್ ನಗರಕ್ಕೆ ತಲುಪಿಸುತ್ತಿದ್ದರು.
- ಇಲ್ಲಿಂದ ಇಟಲಿ ವರ್ತಕರು ಕೊಂಡು ಯುರೋಪ್ ದೇಶಗಳಿಗೆ ಸಾಗಿಸುತ್ತಿದ್ದರು
- ಕಾನ್‌ಸ್ಟಾಂಟಿನೋಪಾಲ್ ನಗರ ಪೂರ್ವ ರೋಮ್ ಸಾಮ್ರಾಜ್ಯದ ರಾಜಧಾನಿ
- ಇದರಿಂದ ಕಾನ್‌ಸ್ಟಾಂಟಿನೋಪಾಲ್ **ಯುರೋಪಿನ ವ್ಯಾಪಾರದ ಹೆಬ್ಬಾಗಿಲು** ಎನಿಸಿತು.
- ಏಷ್ಯಾದ ಸರಕುಗಳು ಇಟಲಿ ವರ್ತಕರಿಗೆ ಒಳ್ಳೆಯ ಲಾಭವನ್ನು ತಂದುಕೊಡುತ್ತಿದ್ದವು.

**ಕಾನ್‌ಸ್ಟಾಂಟಿನೋಪಾಲ್ ನಗರ ಪತನ**

- ✓ 1453ರಲ್ಲಿ ಆಟೋಮನ್ ಟರ್ಕರು ಈ ನಗರವನ್ನು ವಶಪಡಿಸಿಕೊಂಡರು.
- ✓ ಈ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ವಶವಾದವು
- ✓ ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ವ್ಯಾಪಾರದ ಮೇಲೆ ತೀವ್ರತರ ತೆರಿಗೆ ವಿಧಿಸಿದರು.
- ✓ ವರ್ತಕರಿಗೆ ಈ ವ್ಯಾಪಾರ ಮಾರ್ಗದಿಂದ ಲಾಭದಾಯಕವಾಗಿ ಪರಿಣಮಿಸಲಿಲ್ಲ.
- ✓ ಇಟಲಿ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಪ್ರಯತ್ನ
- ✓ ಸ್ಪೇನ್ & ಪೋರ್ಚುಗಲ್ ರಾಜರು ಹೊಸ ಜಲಮಾರ್ಗ ಕಂಡುಹಿಡಿಯಲು ಸಾಹಸಿ ನಾವಿಕರಿಗೆ ಪ್ರೋತ್ಸಾಹ ನೀಡಿದರು.
- ✓ ಈ ನಾವಿಕರಿಗೆ ವೈಜ್ಞಾನಿಕ ಆವಿಷ್ಕಾರಗಳಾದ **ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದುಗಳು** ನೆರವಿಗೆ ಬಂದವು.

**ಭಾರತಕ್ಕೆ ಹೊಸ ಜಲಮಾರ್ಗ:–**

- ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೋಡಿಗಾಮ 1498ರಲ್ಲಿ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆಯ **'ಕಾಪ್ಪಡ್'** ತಲುಪಿದನು.
- ಇದರಿಂದ ಭಾರತ–ಯುರೋಪ್ ಮಧ್ಯೆ ಹೊಸ ಜಲಮಾರ್ಗ ಕಂಡುಹಿಡಿಯಲ್ಪಟ್ಟಿತು.
- ಭಾರತದೊಂದಿಗೆ ಮರುವ್ಯಾಪಾರ ಸಂಬಂಧ ಸ್ಥಾಪಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು.

**ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿನ ಕಂಪನಿಗಳು**

1) **ಪೋರ್ಚುಗೀಸರು**
2) **ಡಚ್ಚರು**
3) **ಇಂಗ್ಲೀಷರು**
4) **ಫ್ರೆಂಚರು**

**ಪೋರ್ಚುಗೀಸರು:–**

- ❖ ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊದಲಿಗರು
- ❖ ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು **ಪೋರ್ಚುಗೀಸರು.**
- ❖ ಪೋರ್ಚುಗೀಸರ ಮೊದಲ **ವೈಸರಾಯ್ ಫ್ರಾನ್ಸಿಸ್ಕೋ ಡಿ ಅಲ್ಮೇಡಾ**
- ❖ ಇವನು ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ **'ನೀಲಿ ನೀರಿನ ನೀತಿ'** ಜಾರಿಗೆ ತಂದನು.

**ಆಲ್ಫೋನ್ಸೊ ಆಲ್ಬುಕರ್ಕ್**

- ✓ ಭಾರತದಲ್ಲಿ **ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು** ಪರಿಗಣನೆ
- ✓ ಇವನು ಸಾ.ಶ 1510ರಲ್ಲಿ ಬಿಜಾಪುರ ಸುಲ್ತಾನನಿಂದ ಗೋವಾ ಗೆದ್ದನು
- ✓ **ಗೋವಾವನ್ನು** ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದನು.

- ಪೋರ್ಚುಗೀಸರು ಡಚ್ಚರು & ಇಂಗ್ಲೀಷರ ಆಗಮನದ ನಂತರ ರಾಜಕೀಯವಾಗಿ ಕಳೆಗುಂದಿದರು.

RAMALINGAPPA L

**ಡಚ್ಚರು:–**

- ಇವರು **ಹಾಲೆಂಡ್ ಅಥವಾ ನೆದರ್‌ಲ್ಯಾಂಡ್** ದೇಶದವರು
- 1602ರಲ್ಲಿ **ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ** ಸ್ಥಾಪನೆ
- ಉದ್ದೇಶ:– ಪೂರ್ವ ದೇಶಗಳಲ್ಲಿ ವ್ಯಾಪಾರ ನಡೆಸಲು
- ಭಾರತ, ಜಾವ, ಸುಮಾತ್ರ, ಇಂಡೋನೇಷಿಯಾ ಸಾಂಬಾರು ದ್ವೀಪಗಳಿಗೆ ಪ್ರವೇಶ
- ಇವರ ವ್ಯಾಪಾರ ಕೇಂದ್ರಗಳು:– **ಸೂರತ್, ಬ್ರೋಚ್, ಕ್ಯಾಂಬೆ, ಕೊಚ್ಚಿನ್, ನಾಗಪಟ್ಟಣಂ, ಮಚಲಿಪಟ್ಟಣ & ಚಿನ್ಸೂರ್**
- ಇವರು ಪೋರ್ಚುಗೀಸರ ಏಕಸ್ವಾಮ್ಯ ಮುರಿದರು.
- ಭಾರತಕ್ಕೆ ಬಂದ ಇಂಗ್ಲೀಷರು & ಫ್ರೆಂಚರ ಪೈಪೋಟಿಯನ್ನು ಹೆದರಿಸಲಾರದೆ ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತಗೊಂಡರು.

**ಡಚ್ಚರ ಅಧಿಕಾರ & ಅವನತಿ**

- ಕೇರಳದ ರಾಜಕೀಯದಲ್ಲಿ ಮಹತ್ವ ಕಾಲಘಟ್ಟದಲ್ಲಿ ಬದುಕಿ ಸಂಸ್ಥಾನವೊಂದನ್ನು ಪರಕೀಯರಿಂದ ರಕ್ಷಿಸಿದ **ವೈನಾಡ್‌ನ ರಾಜ ಮಾರ್ತಾಂಡ ವರ್ಮ.**
- 1729 ರಿಂದ 1758ರ ವರೆಗೆ ವೈನಾಡು ಸಂಸ್ಥನವನ್ನು ಆಳಿ ಸುತ್ತಮುತ್ತಲಿನ ಸಂಸ್ಥಾನಗಳಿಂದ ರಕ್ಷಿಸಿದ.
- ವೈನಾಡು ಸಂಸ್ಥಾನವನ್ನು **ಇಡೀ ದೇಶದಲ್ಲಿ ಎದ್ದು ಕಾಣುವಂತೆ** ಮಾಡಿದವರು ರಾಜ ಮಾರ್ತಾಂಡ ವರ್ಮ.
- ಕರಿಮೆಣಸಿನ ಆಸೆಯಿಂದ ಬಂದ ವಿದೇಶಿಯರನ್ನು ಸೋಲಿಸಿ ಆಡಳಿತದಲ್ಲಿ ಸುಧಾರಣೆಯನ್ನು ತಂದನು.
- ರಾಜಧಾನಿ **ಪದ್ಮನಾಭಪುರದಿಂದ ತಿರುವನಂತಪುರಕ್ಕೆ** ಸ್ಥಳಾಂತರಿಸಿದ.
- ತನ್ನ ಸಂಸ್ಥಾನ **'ವಿಶ್ವ ತಿರುವಾಂಕೂರು ಸಂಸ್ಥಾನ'** ಎಂದು ಹೆಸರಾಗುವಂತೆ ಮಾಡಿದನು.
- ಇವನು ಆಡಳಿತಕ್ಕೆ ಬರುವ ಮುಂಚೆ ಸಂಸ್ಥಾನದಲ್ಲಿ ಅನೇಕ ಗೊಂದಲಗಳಿದ್ದವು.
- ವೈನಾಡಿನ ಅರಸನಾಗಿದ್ದ **ರಾಮವರ್ಮ** ದುರ್ಬಲನಾಗಿದ್ದ.
- **ಡಚ್ಚ ಈಸ್ಟ್ ಇಂಡಿಯಾ ಕಂಪನಿ, ವೈನಾಡಿನ ಸುತ್ತಮುತ್ತಲಿನ ಸಂಸ್ಥಾನಗಳು, ವೈನಾಡಿನ ಪಾಳೆಗಾರರು** ಪ್ರಬಲರಾಗಿದ್ದರು.
- ತನ್ನ ಸೋದರ ಮಾವನಾಗಿದ್ದ ರಾಜವರ್ಮನಿಗೆ ಮಾರ್ತಾಂಡವರ್ಮ 10ನೇ ವಯಸ್ಸಿನಲ್ಲೇ ವೈನಾಡಿನ ಶ್ರೇಯಸ್ಸಿನ ಬಗ್ಗೆ ಉಪಾಯ ಹೇಳಿದ್ದನು.
- ಆಗ ರಾಮವರ್ಮ **ಮಧುರೈನ ಪಾಂಡೆಯರನ್ನು ಸಂಪರ್ಕಿಸಿ** ರಾಜ್ಯವನ್ನು ಬಲಪಡಿಸುತ್ತಾನೆ.
- ಮಾರ್ತಾಂಡವರ್ಮ ತನ್ನ 24ನೇ ವಯಸ್ಸಿನಲ್ಲಿ ಪಟ್ಟಕ್ಕೆ ಬರುತ್ತಾನೆ.
- ಗಡಿ ವಿಸ್ತರಿಸಲು 50 ಸಾವಿರ ಸೈನ್ಯವನ್ನು ಕಟ್ಟಿದನು.
- ಮೆಣಸು ಬೆಳೆಯುವ ಪ್ರದೇಶವನ್ನು ಪಡೆದನು.
- ಸುತ್ತಮುತ್ತಲಿನ ಪಾಳೆಗಾರರು & ಸಂಸ್ಥಾನದ ಅರಸರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಡಚ್ಚರ ವಿರುದ್ಧ ನಿಂತನು.
- **ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಸಂಸ್ಥಾನಗಳು & ಡಚ್ಚರ ಸೈನ್ಯವನ್ನು** ಸೋಲಿಸಿ **ನೆಡುಮಂಗಡ & ಕೊಟ್ಟಾರಕರ** ಎಂಬ ವ್ಯಾಪಾರ ಕೇಂದ್ರಗಳನ್ನು ಪಡೆದನು.
- ಮಾರ್ತಾಂಡವರ್ಮನು **"ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು"** ಎಂದು ಡಚ್ಚರಿಗೆ ಪತ್ರ ಬರೆದನು.
- 1741ರಲ್ಲಿ ಡಚ್ಚ ಕಂಪನಿ **ಕೊಟ್ಟಾರಕರ ಸಂಸ್ಥಾನವನ್ನು** ಮುಂದಿಟ್ಟುಕೊಂಡು ತಿರುವಾಂಕೂರಿನ ಮೇಲೆ ಯುದ್ಧ ಸಾರಿದನು.
- ಮಾರ್ತಾಂಡವರ್ಮ ಈ ಸೇನೆಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿದನು.
- ಡಚ್ಚರ ಪಡೆಗಳು ಕೊಚ್ಚಿಗೆ ಹಿಂತಿರುಗಿದವು.
- ಆದರೆ ಡಚ್ಚರು ಸಿಲೋನಿನಿಂದ ಸೈನ್ಯ ತರೆಸಿ ಮತ್ತೆ ದಾಳಿ ಮಾಡಿದರು.
- **1741 ಆಗಸ್ಟ್ 10** ರಂದು **ಕೊಳಚ್ಚಲ್** ಎಂಬಲ್ಲಿ ಮಾರ್ತಾಂಡವರ್ಮ & ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಯುದ್ಧ ನಡೆಯಿತು.
- ಅಂತಿಮವಾಗಿ ತಿರುವಾಂಕೂರು ಗೆದ್ದು 24 ಡಚ್ಚ ಅಧಿಕಾರಿಗಳನ್ನು ಸೆರೆಹಿಡಿದರು.
- ಆಗ ಮಾರ್ತಾಂಡವರ್ಮ ಡಚ್ಚರನ್ನು ಇಡೀ ದಕ್ಷಿಣಭಾರತದಿಂದ ಓಡಿಸಲು ಪಣತೊಟ್ಟ.
- ಕೇರಳ & ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರದಲ್ಲಿ ಹಕ್ಕು ಸ್ಥಾಪಿಸಿದನು.
- ಡಚ್ಚರ ಬಂದರುಗಳನ್ನು ಪಡೆದನು.
- ಇವನ ಆಳ್ವಿಕೆಯಲ್ಲಿ ಕೊಚ್ಚಿ ವಿಶ್ವದ ಪ್ರಮುಖ ಸಾಂಬಾರು ಪದಾರ್ಥಗಳ ಕೇಂದ್ರವಾಗಿ ಬೆಳೆಯಿತು.
- ತಿರುವಾಂಕೂರು ಸಂಸ್ತಾನ ಅತ್ಯಂತ ಶ್ರೀಮಂತ ಸಂಸ್ಥಾನವಾಯಿತು.
- 1753ರ ಆಗಸ್ಟ್ 15 ರಂದು ನಡೆದ ಒಪ್ಪಂದದಲ್ಲಿ ಡಚ್ಚರು ತಮ್ಮ ಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ನೀಡಿದರು.

RAMALINGAPPA L

- ಹೀಗೇ ಮಾರ್ತಾಂಡವರ್ಮನ ಆಡಳಿತ ಭಾರತದ ಇತಿಹಾಸದಲ್ಲಿ ಪ್ರಮುಖ ಕಾಲಘಟ್ಟವಾಗಿ ಗುರುತಿಸಲ್ಪಟ್ಟಿದೆ.

**ಇಂಗ್ಲೀಷರು:–**

- ಇಂಗ್ಲೇಂಡಿನ ರಾಣಿ ಎಲಿಜಿಬೆತ್ ಸಾ.ಶ 1600 ಡಿಸೆಂಬರ್ 31 ರಂದು **'ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ'** ಗೆ 15 ವರ್ಷಗಳ ವ್ಯಾಪಾರ ಪರವಾನಗಿ ನೀಡಿದಳು
- ಇದು 1613ರಲ್ಲಿ ಔಪಚಾರಿಕವಾಗಿ ವ್ಯಾಪಾರವನ್ನು ಆರಂಬಿಸಿತು.
- ಕಂಪನಿಗೆ ಜಹಾಂಗೀರ್ **ಸೂರತ್**ನಲ್ಲಿ ಮೊದಲ ದಾಸ್ತಾನು ಮಳಿಗೆ ಸ್ಥಾಪಿಸಲು ಫರ್ಮಾನು ನೀಡಿದನು.
- 1617 ರಲ್ಲಿ ಇಂಗ್ಲೇಂಡಿನ **ರಾಜ 1ನೇ ಜೇಮ್ಸ್**ನ ರಾಯಭಾರಿ **ಸರ್.ಥಾಮಸ್ ರೋ** ಜಂಹಾಗೀರನ ಆಸ್ಥಾನಕ್ಕೆ ಬಂದನು.
- ಇವನು ಜಹಾಂಗೀರನಿಂದ ಫ್ಯಾಕ್ಟರಿಗಳನ್ನು ಸ್ಥಾಪಿಸಲು ಅನುಮತಿ ಪಡೆದನು.
- ಆಗ್ರಾ, ಅಹಮದಾಬಾದ್, ಬ್ರೋಚ್‌ಗಳಲ್ಲಿ ಫ್ಯಾಕ್ಟರಿ ನಿರ್ಮಿಸಿದರು.
- 1639ರಲ್ಲಿ ಚಂದ್ರಗಿರಿ ರಾಜನಿಂದ ಮದ್ರಾಸ್‌ನಲ್ಲಿ ಭೂಮಿ ಪಡೆದು **ಸೆಂಟ್ ಜಾರ್ಜ್ ಫೋರ್ಟ್** ಕಟ್ಟಿಸಿದನು.
- ರಾಜಕುಮಾರ **2ನೇ ಚಾರ್ಲ್ಸ್‌ನು** ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡ್‌ಗಳಿಗೆ ಬಾಡಿಗೆಗ ನೀಡಿದನು.
- 1690 ರಲ್ಲಿ ಬಂಗಾಳದ ರಾಜ್ಯಪಾಲನಿಂದ **ಹೂಗ್ಲಿನದಿಯ** ದಡದ **ಸುತನತಿ, ಕಲ್ಕತ್ತ, ಗೋವಿಂದಪುರ** ಎಂಬ 3 ಹಳ್ಳಿಗಳನ್ನು ಖರೀಧಿಸಿ **ಪೋರ್ಟ್ ವಿಲಿಯಂ** ಕೋಟೆ ಕಟ್ಟಿಸಿದನು.
- ಇವರು ಮುಂದೆ ಮದ್ರಾಸ್, ಬಾಂಬೆ, ಕಲ್ಕತ್ತಾ ಇಂಗ್ಲೀಷರ ಪ್ರೆಸಿಡೆನ್ಸಿ ಕೇಂದ್ರಗಳಾದವು
- **ಕೊಲ್ಕತ್ತಾ** ಇಂಗ್ಲೀಷರ ರಾಜಧಾನಿಯಾಯಿತು.
- ಈ ಪ್ರದೇಶಗಳಲ್ಲಿ ನಾಗರಿಕ & ಅಪರಾಧ ಕಾನೂನುಗಳನ್ನು ಜಾರಿಗೆ ತಂದರು.

**ಫ್ರೆಂಚರು:–**

- ✓ 1664ರಲ್ಲಿ **ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು** ಸರ್ಕಾರ ಒಡೆತನದಲ್ಲಿ ಸ್ಥಾಪನೆ
- ✓ 1668ರಲ್ಲಿ ಪ್ರಪ್ರಥಮ ದಾಸ್ತಾನು ಮಳಿಗೆ **ಸೂರತನಲ್ಲಿ** ಸ್ಥಾಪಿಸಿದರು.
- ✓ **ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್, ಖಾಸಿಂಬಜಾರ್, ಬಾಲಸೂರ್**ಗಳಲ್ಲಿ ಸ್ಥಾಪಿಸಿದರು.
- ✓ ಫ್ರೆಂಚರು 1674 ರಲ್ಲಿ **ವಾಲಿಕೊಂಡಪುರಂ**ನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಹಳ್ಳಿಯನ್ನು ಪಡೆದನು.
- ✓ ಇದೇ ಮುಂದೆ **ಪುದುಚೇರಿ/ಪಾಂಡಿಚೇರಿಯಾಗಿ** ರಾಜದಾನಿಯಾಯಿತು.
- ✓ 1746 ರಲ್ಲಿ ಪಾಂಡಿಚೇರಿಗೆ ಗವರ್ನರ್ ಆಗಿ **ಡೂಪ್ಲೆ** ನೇಮಕ
- ✓ ಇವನು ಮಹತ್ವಾಕಾಂಕ್ಷಿ ಅಧಿಕಾರಿಯಾಗಿದ್ದು ದಕ್ಷಿಣ ಭಾರತದಲ್ಲಿ ಫ್ರೆಂಚರ ಅಧಿಪತ್ಯ ಸ್ಥಾಪಿಸಲು ಹವಣಿಸಿದನು.
- ✓ ಇದು ಕರ್ನಾಟಿಕ್ ಯುದ್ಧಗಳಿಗೆ ಕಾರಣವಾಯಿತು.

**ಕರ್ನಾಟಿಕ್ ಯುದ್ಧಗಳು:–**

- ಬ್ರಿಟಿಷರು & ಫ್ರೆಂಚರು ದಕ್ಷಿಣ ಭಾರತದಲ್ಲಿ ರಾಜಕೀಯ ಪ್ರಭಾವ ಉಳಿಸಿಕೊಳ್ಳಲು
- ಹೈದರಾಬಾದ್ ಸಂಸ್ಥಾನ & ಕರ್ನಾಟಿಕ್ ಪ್ರಾಂತ್ಯದಲ್ಲಿನ ರಾಜಕೀಯ ಅಸ್ಥಿರತೆಯ ಲಾಭ ಪಡೆಯಲು.

**ಒಂದನೇ ಕರ್ನಾಟಿಕ್ ಯುದ್ಧ (1746–48)**

- ✓ ಡೂಪ್ಲೆಯ ಕೋರಿಕೆಯ ಮೇರೆಗೆ **ಲಾಬೋರ್ಡಿನಾ** ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು **ಮಾರಿಷಸ್**ನಿಂದ ಬಂದು ಬ್ರಿಟಿಷರಿಂದ ಮದ್ರಾಸ್ಸನ್ನು ಪಡೆದನು.
- ✓ ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬ **ಅನ್ವರುದ್ದೀನನಲ್ಲಿ** ಮೊರೆ ಇಟ್ಟರು
- ✓ ಮದ್ರಾಸ್‌ನಿಂದ ಬಂದ ಅನ್ವರುದ್ದೀನನ ಸೇನೆ ಫ್ರೆಂಚರಿಂದ ಸೋತಿತು.
- ✓ ಆದರೆ ಲಾಬೋರ್ಡಿನಾನು ಬ್ರಿಟಿಷರಿಂದ ಹಣ ಪಡೆದು ಮದ್ರಾಸ್‌ನ್ನು ಬ್ರಿಟಿಷರಿಗೆ ನೀಡಿ ಮಾರಿಷಸ್‌ಗೆ ವಾಪಸ್ಸಾದನು.
- ✓ ಕೋಪಗೊಂಡ ಡೂಪ್ಲೆಯು ಮದ್ರಾಸ್ ಪಡೆಯಲು ವಿಫಲ ಯತ್ನ ಮಾಡಿದನು.
- ✓ ಈ ಯುದ್ಧ **'ಏಕ್ಸ್–ಲಾ–ಚಾಪೆಲ್'** ಒಪ್ಪಂದದೊಂದಿಗೆ ಕೊನೆಯಾಯಿತು.

**ಎರಡನೇ ಕರ್ನಾಟಿಕ್ ಯುದ್ಧಗಳು (1749–54)**

**ಕಾರಣಗಳು:–**

- ಫ್ರೆಂಚರು ಅಸಫ್‌ಜಾನ ಮಗ **ಸಲಾಬತ್‌ಜಂಗನನ್ನು** ಹೈದರಾಬಾದಿನ ನಿಜಾಮನಾಗಿ ಮಾಡಿದರು.
- ಇವನ ರಕ್ಷಣೆಗೆ ಫ್ರೆಂಚರು ಸೈನ್ಯ ಸಮೇತ **'ಬುಸ್ಸಿ'** ಎಂಬ ಅಧಿಕಾರಿಯನ್ನು ನೇಮಿಸಿದರು.
- ಫ್ರೆಂಚರ ಸಹಾಯದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾದನು.



RAMALINGAPPA L

**ಯುದ್ಧ:–**

- ❖ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ **ರಾಬರ್ಟ್ ಕ್ಲೈವ್** ಕರ್ನಾಟಕದ ರಾಜಧಾನಿ **ಆರ್ಕಾಟಿನ** ಮೇಲೆ ದಾಳಿ ಮಾಡಿ ಫ್ರೆಂಚರನ್ನು & ಚಂದಾಸಾಹೇಬನನ್ನು ಸೋಲಿಸಿದನು.
- ❖ ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು.
- ❖ ಈ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗ **ಮಹಮ್ಮದ್ ಆಲಿಯನ್ನು** ನವಾಬನಾಗಿ ನೇಮಕ ಮಾಡಿದರು.
- ❖ ಈ ಯುದ್ಧ **'ಪಾಂಡಿಚೇರಿ ಒಪ್ಪಂದ'** ದೊಂದಿಗೆ ಮುಕ್ತಾಯವಾಯಿತು.

**ಪರಿಣಾಮಗಳು:–**

- ➢ ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು
- ➢ ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು ತಂದಿತು.
- ➢ ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

**ಮೂರನೆಯ ಕರ್ನಾಟಕ್ ಯುದ್ಧ (1756–63)**

- ✓ ಫ್ರೆಂಚರ **ಕೌಂಟ್ ಡಿ ಲಾಲಿ** ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.
- ✓ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್ ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನು.
- ✓ ಬುಸ್ಸಿಯನ್ನು ಸೆರೆಹಿಡಿದನು
- ✓ ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರಿಸಿಕೊಂಡನು
- ✓ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ 1761ರಲ್ಲಿ ಲಾಲಿಯು ಶರಣಾದನು

**ಪರಿಣಾಮಗಳು:–**

- ❖ 1763ರ **'ಪ್ಯಾರಿಸ್ ಒಪ್ಪಂದ'** ಸಹಿ ಹಾಕಲಾಯಿತು
- ❖ ಇದರ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.
- ❖ ಫ್ರೆಂಚರು ಸಂಪೂರ್ಣವಾಗಿ ಸೋತು ಭಾರತದಲ್ಲಿ ತಮ್ಮ ನೆಲಗಳನ್ನು ಕಳೆದುಕೊಂಡರು
- ❖ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು
- ❖ ಬ್ರಿಟಿಷರು ಪ್ರಬಲರಾಗಿ ದಕ್ಷಿಣ ಭಾರತವನ್ನು ಗೆಲ್ಲಲು ಮುಂದಾದರು.

**ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ:–**

- ➢ 18ನೇ ಶತಮಾನದ ವೇಳೆಗೆ ದಕ್ಷಿಣ ಭಾರತದ ಮೇಲೆ ರಾಜಕೀಯವಾಗಿ ನಿಯಂತ್ರಣ ಸಾಧಿಸಿದರು
- ➢ ಸಂಪದ್ಭರಿತ ಬಂಗಾಳ ಪ್ರಾಂತ್ಯದ ಮೇಲೆ ನಿಯಂತ್ರಣ ಸಾಧಿಸಲು ಮುಂದಾದರು
- ➢ ಬಂಗಾಳ ಕೃಷಿ, ಕೈಗಾರಿಕೆ, ವಾಣಿಜ್ಯ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಿತ್ತು
- ➢ ಈಸ್ಟ್ ಇಂಡಿಯಾ ಕಂಪನಿ ಅಪಾರ ಲಾಭ ಗಳಿಸುತ್ತಿತ್ತು.
- ➢ 1717ರಲ್ಲಿ ಮೊಗಲ್ ದೊರೆ **ಫಾರೂಕ್‌ಶಿಯಾರ್**‌ನು ನೀಡಿದ **'ಮುಕ್ತ ವ್ಯಾಪಾರದ ಅನುಮತಿ ಪತ್ರ' (ದಸ್ತಕ್‌ಗಳು)** ಈ ಲಾಭಕ್ಕೆ ಕಾರಣವಾಯಿತು.
- ➢ ಕಂಪನಿಯ ನೌಕರರು ದಸ್ತಕ್‌ಗಳನ್ನು ದುರುಪಯೋಗ ಪಡಿಸಿಕೊಂಡರು
- ➢ ಬಂಗಾಳದ ನವಾಬರು ದಸ್ತಕ್‌ಗಳ ದುರುಪಯೋಗವನ್ನು ವಿರೋಧಿಸಿದರು
- ➢ ಇದೇ ವಿಚಾರ ಕಂಪನಿ & ನವಾಬರ ನಡುವೆ ಸಂಘರ್ಷಕ್ಕೆ ಕಾರಣವಾಯಿತು.

**ಪ್ಲಾಸಿ ಕದನ (1757)**

- ○ ಬಂಗಾಳದ ನವಾಬ **ಅಲಿವರ್ದಿ ಖಾನನು** 1756ರಲ್ಲಿ ನಿಧನನಾದನು
- ○ ಇವನ ಮೊಮ್ಮಗನಾದ **ಸಿರಾಜ್–ಉದ್–ದೌಲ್** ಅಧಿಕಾರಕ್ಕೆ ಬಂದನು.
- ○ ಸಿರಾಜ್–ಉದ್–ದೌಲ್ & ಬ್ರಿಟಿಷರ ಮಧ್ಯೆ ಪ್ಲಾಸಿ ಕದನ ನಡೆಯಿತು.

**ಕಾರಣಗಳು:–**

- ➢ **ದಸ್ತಕ್‌ಗಳ ದುರುಪಯೋಗ**
- ➢ **ಅನುಮತಿ ಇಲ್ಲದೆ ಕೋಟೆಯ ದುರಸ್ಥಿ:–**
  - ○ ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾ ಕೋಟೆಯನ್ನು ಬಲಪಡಿಸಿದನು.
  - ○ ಸಿರಾಜ್‌ನ ಅನುಮತಿಯಿಲ್ಲದೆ ಕೋಟೆ ದುರಸ್ಥಿ ಪಡಿಸಿದ್ದರಿಂದ ಫಿರಂಗಿಗಳನ್ನು ತೆಗೆಯಲು ಸೂಚಿಸಿದನು
  - ○ ಬ್ರಿಟಿಷರು ಇದನ್ನು ಪಾಲಿಸಲ್ಲಿಲ್ಲ
- ➢ **ಕಪ್ಪುಕೋಣೆ ದುರಂತ:–**
  - ○ ಸಿರಾಜನು **ಪೋರ್ಟ್ ವಿಲಿಯಂ ಕೋಟೆಯನ್ನು** ಪಡೆದು ಕೆಲವರನ್ನು ಸೆರೆಹಿಡಿದನು.

- ಆಕ್ರಮಣದಲ್ಲಿ ಸೆರೆಸಿಕ್ಕ **146** ಬ್ರಿಟಿಷರನ್ನು ಚಿಕ್ಕ ಕೊಠಡಿಯಲ್ಲಿ ಬಂಧಿಸಿದನು
- ಇದರಲ್ಲಿ 123 ಮಂದಿ ಅಸುನೀಗಿದರು.
- ಈ ಸುದ್ದಿ ಕೇಳಿ ಕೆರಳಿದ **ರಾಬರ್ಟ್ ಕ್ಲೈವ್** ಬಲಿಷ್ಠ ಸೇನೆಯೊಂದಿಗೆ ಬಂಗಾಳಕ್ಕೆ ಬಂದನು

**ಯುದ್ಧದ ಘಟನೆಗಳು:–**

- ❖ ರಾಬರ್ಟ್ ಕ್ಲೈವ್ ಮೊದಲು ಸಿರಾಜನ ವಿರೋಧಿಗಳಾದ **ಮಾಣಿಕ್ ಚಂದ್, ಓಮೀಚಾಂದ್, ಜಗತ್‌ಸೇಠ್**‌ರನ್ನು ತನ್ನತ್ತ ಸೆಳೆದನು.
- ❖ ಸಿರಾಜನ ಸೇನಾಪತಿ ಮೀರ್‌ಜಾಫರ್‌ನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು.
- ❖ ಧೈರ್ಯಗೊಂಡ ರಾಬರ್ಟ್ ಕ್ಲೈವ್ **1757 ಜೂನ್ 23** ರಂದು ನವಾಬ ಸಿರಾಜನ ಮೇಲೆ ಯುದ್ಧ ಸಾರಿದನು.
- ❖ ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್‌ನನ್ನು ಸೆರೆಹಿಡಿದು ಕೊಲ್ಲಲಾಯಿತು.

**ಪರಿಣಾಮಗಳು:–**

- ➢ ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ & ವ್ಯಾಪಾರಿಗಳಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
- ➢ **ಮೀರ್‌ಜಾಫರ್** ಬಂಗಾಳದ ನವಾಬನಾದನು
- ➢ ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ಅನಿರ್ಬಂಧಿತ ವ್ಯಾಪಾರದ ಹಕ್ಕನ್ನು ಪಡೆಯಿತು.
- ➢ ಮೀರ್‌ಜಾಫರ್ ಕಂಪನಿಗೆ 17 ಕೋಟಿ 70 ಲಕ್ಷಗಳನ್ನು ನೀಡಿದನು.
- ➢ ಮೀರ್‌ಜಾಫರ್ ಕಂಪನಿಯ ಕೈಗೊಂಬೆಯಾದನು.
- ➢ ನವಾಬನ ಬೊಕ್ಕಸ ಬರಿದಾಯಿತು.
- ➢ ಬ್ರಿಟಿಷರು ಮೀರ್‌ಜಾಫರ್ ಅಸಮರ್ಥನೆಂದು ನವಾಬನ ಸ್ಥಾನದಿಂದ ಕೆಳಗಿಳಿಸಿ ಅಳಿಯ **ಮೀರ್‌ಖಾಸಿಂ**ನನ್ನು ನವಾಬನನ್ನಾಗಿ ಮಾಡಿದರು.

## ಬಕ್ಸಾರ್ ಕದನ (1764)

**ಕಾರಣಗಳು:–**

- ✓ ಸಮರ್ಥ ಆಡಳಿಗಾರನಾದ ಮೀರ್‌ಖಾಸಿಂ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು.
- ✓ ಶೀಘ್ರವೇ ಮೀರ್‌ಖಾಸಿಂ **ತನ್ನನ್ನು ಸ್ವತಂತ್ರ್ಯ ರಾಜನೆಂದು** ಭಾವಿಸಿದನು.
- ✓ ದಸ್ತಕ್‌ಗಳ ದುರ್ಬಳಕೆ ತಿಳಿದು ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತವೆಂದು ಘೋಷಿಸಿದನು.
- ✓ ಭಾರತೀಯ ವ್ಯಾಪಾರಿಗಳು ಬ್ರಿಟಿಷರ ಜೊತೆ ನೇರ ಸ್ಪರ್ಧೆಗಿಳಿದರು.
- ✓ ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿತ್ತು.
- ✓ ಬ್ರಿಟಿಷರು ಮತ್ತೆ ಮೀರ್‌ಜಾಫರ್‌ನನ್ನು ನವಾಬನನ್ನಾಗಿ ಮಾಡಿದರು.

**ಯುದ್ಧದ ಘಟನೆಗಳು:–**

- ➢ ಬ್ರಿಟಿಷರ ಕುಟಿಲತೆಯನ್ನು ತಿಳಿದ ಮೀರ್‌ಖಾಸಿಂ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.
- ➢ ಭಾರತೀಯ ವ್ಯಾಪಾರಿಗಳು & ಕಸುಬುದಾರರು ಇವನ ಬೆಂಬಲಕ್ಕೆ ನಿಂತರು.
- ➢ ಮೀರ್‌ಖಾಸಿಂನು ಮೊಗಲ್ ದೊರೆ 2ನೇ ಷಾಆಲಂ, ಔದ್‌ನ ನವಾಬ ಷುಜಾ–ಉದ್–ದೌಲ್‌ರೊಂದಿಗೆ ಒಪ್ಪಂದ ಮಾಡಿಕೊಂಡನು.
- ➢ ಆಗ ಮೀರ್‌ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು **ಹೆಕ್ಟರ್ ಮನ್ರೋ** ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ **ಬಕ್ಸಾರ್** ಎಂಬಲ್ಲಿ ಮುಖಾಮುಖಿಯಾದವು.
- ➢ ಇದರಲ್ಲಿ ಮೀರ್‌ಖಾಸಿಂ ಸೋತನು.
- ➢ 2ನೇ ಷಾಆಲಂ ಶರಣಾದನು.

**ಪರಿಣಾಮಗಳು:–**

- ❖ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು 2ನೇ ಷಾಆಲಂ ನೀಡಿದನು
- ❖ 2ನೇ ಷಾಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ಎಲ್ಲಾ ಹಕ್ಕುಗಳನ್ನು ಬಿಟ್ಟುಕೊಟ್ಟನು.
- ❖ ಷುಜಾ–ಉದ್–ದೌಲ್‌ನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ನೀಡಿದನು.
- ❖ ಮೀರ್‌ಜಾಫರ್ ಮರಣದ ನಂತರ ಇವನ ಮಗನಿಗೆ ವಿಶ್ರಾಂತಿ ವೇತನ ನೀಡಿದರು
- ❖ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸಿತು.
- ❖ ಬ್ರಿಟಿಷರು ಬಂಗಾಳ, ಬಿಹಾರ, ಒರಿಸ್ಸಾ & ಔದ್‌ನ ನಿಜವಾದ ಒಡೆಯರೆಂದು ದೃಢೀಕರಿಸಿತು.

RAMALINGAPPA L

- 1765ರಲ್ಲಿ ರಾಬರ್ಟ್ ಕ್ಲೈವ್ ಬಂಗಾಳದಲ್ಲಿ **"ದ್ವಿ ಪ್ರಭುತ್ವ"** ಪದ್ಧತಿಯನ್ನು ಜಾರಿಗೆ ತಂದನು.
- ಅಂದರೆ, ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು
- ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

## ಅಧ್ಯಾಯ–2
## ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**ಹಿನ್ನೆಲೆ:–**

- ಕಾರ್ನಾಟಿಕ್ ಯುದ್ಧಗಳಲ್ಲಿ ಫ್ರೆಂಚರ ಸೋಲು
- ಪ್ಲಾಸಿ & ಬಕ್ಸಾರ್ ಕದನಗಳಲ್ಲಿ ಬಂಗಾಳ ವಶ
- 1765ರ ವೇಳೆಗೆ ಬಹುತೇಕ ಪೂರ್ವಭಾಗದ ಭಾರತದ ಮೇಲೆ ಪ್ರಭುತ್ವ ಸ್ಥಾಪಿಸಿದರು.
- ಭಾರತದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ **ಮೈಸೂರು** & **ಮರಾಠ ರಾಜ್ಯಗಳು** ಪ್ರಬಲವಾಗಿದ್ದವು.
- ಆದ್ದರಿಂದ **ಬ್ರಿಟಿಷರ ಆಟಾಟೋಪ ಬಂಗಾಳ** & **ಬೊಂಬಾಯಿಗೆ ಸೀಮಿತಗೊಂಡಿತ್ತು.**
- ಬ್ರಿಟಿಷರ ಮುಂದಿನ ವಿಸ್ತರಣಾ ನೀತಿಗೆ ಅಡ್ಡಿಯಾಗಿದ್ದವರು **ಮರಾಠ ಪೇಶ್ವೆಗಳು** & **ಮೈಸೂರು ಸಂಸ್ಥಾನದ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್**
- ವಾಯುವ್ಯ ಭಾರತದಲ್ಲಿ ಸಿಖ್ಖರು ಪ್ರಬಲ ವಿರೋಧಿಗಳಾಗಿದ್ದರು.
- ಬ್ರಿಟಿಷರು **ಸಹಾಯಕ ಸೈನ್ಯ ಪದ್ಧತಿ** & **ದತ್ತು ಮಕ್ಕಳಿಗೆ ಹಕ್ಕಿಲ್ಲ** ನೀತಿಗಳಿಂದ ಭಾರತೀಯ ರಾಜ್ಯಗಳನ್ನು ಕಬಳಿಸಿದರು.

**ಭಾರತದ ದಕ್ಷಿಣ, ಪಶ್ಚಿಮ & ವಾಯುವ್ಯ ಭಾಗಗಳಲ್ಲಿ ನಡೆಸಿದ ಯುದ್ಧಗಳು.**

1) **ಮೂರು ಆಂಗ್ಲೋ–ಮರಾಠ ಯುದ್ಧಗಳು**
2) **ನಾಲ್ಕು ಆಂಗ್ಲೋ–ಮೈಸೂರು ಯುದ್ಧಗಳು**
3) **ಎರಡು ಆಂಗ್ಲೋ–ಸಿಖ್ ಯುದ್ಧಗಳು**

**ಮೊದಲ ಆಂಗ್ಲೋ–ಮರಾಠ ಯುದ್ಧ (1775–1782)**

- ಮೊಗಲ್ ದೊರೆ **2ನೇ ಷಾಆಲಂ**ನನ್ನು ಮರಾಠರು ದೆಹಲಿ ಸಿಂಹಾಸನದ ಮೇಲೆ ಕುಳ್ಳರಿಸಿದರು.
- ಆಗ 2ನೇ ಷಾಆಲಂ ಬ್ರಿಟಿಷರಿಗೆ ನೀಡಿದ್ದ **ಕೋರಾ** & **ಅಲಹಾಬಾದ್**ಗಳನ್ನು ಮರಾಠರಿಗೆ ನೀಡಿದನು.
- ಇದರಿಂದ ಮರಾಠರಿಗೆ & ಬ್ರಿಟಿಷರಿಗೆ ವೈರತ್ವ ಉಂಟಾಯಿತು.
- ಮರಾಠರ ಬಲಿಷ್ಠ ಪೇಶ್ವೆ **ಮಾಧವ್‌ರಾವ್** ಮರಣ ಮರಾಠರಿಗೆ ತುಂಬಲಾರದ ನಷ್ಟವಾಯಿತು.
- ಇವನ ತಮ್ಮ **ನಾರಾಯಣರಾವ್ ಪೇಶ್ವೆಯಾದನು** ಆದರೂ ಚಿಕ್ಕಪ್ಪ **ರಘೋಬನು** ಇವನನ್ನು ಕೊಲೆ ಮಾಡಿಸಿದನು.
- ಇದರಿಂದ ಪೇಶ್ವೆ ಸ್ಥಾನಕ್ಕೆ ಕಲಹ ಉಂಟಾಯಿತು.
- **ನಾನಾ ಪಡ್ನವೀಸ್**ನ ನೇತೃತ್ವದಲ್ಲಿ ರಘೋಬನ ಬದಲಿಗೆ **2ನೇ ಮಾಧವರಾವ್**ನನ್ನು ಪೇಶ್ವೆ ಎಂದು ಘೋಷಣೆ
- ಆಗ ರಘೋಬನು ಬ್ರಿಟಿಷರ ಸಹಾಯ ಕೋರಿದನು.
- ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು
- ಬ್ರಿಟಿಷರು & ಮರಾಠ ಒಕ್ಕೂಟದ ನಡುವೆ 1775–1782ರವರೆಗೆ ನಡೆದ ಕದನಗಳಲ್ಲಿ ಮರಾಠರು ಅಹಮದಾಬಾದ್‌ನ್ನು ಕಳೆದುಕೊಂಡರು.
- ಮರಾಠರು ಬ್ರಿಟಿಷರೊಂದಿಗೆ **'ಸಾಲ್‌ಬಾಯ್ ಒಪ್ಪಂದ'** ವನ್ನು ಮಾಡಿಕೊಂಡರು.
- **ಎರಡನೇ ಮಾಧವರಾವ್**ನನ್ನು ಪೇಶ್ವೆಯಾಗಿ ನೇಮಿಸಲಾಯಿತು.

**ಲಾರ್ಡ್ ವೆಲ್ಲೆಸ್ಲಿ (1798–1805) & ಸಹಾಯಕ ಸೈನ್ಯ ಪದ್ಧತಿ:**

- ✓ ಲಾರ್ಡ್ ವೆಲ್ಲೆಸ್ಲಿಯು ಗವರ್ನರ್ ಜನರಲ್ ಆಗಿ ಬಂದು ಭಾರತದಲ್ಲಿ ದೊಡ್ಡ ಮಟ್ಟದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಲು ಪ್ರಯತ್ನ.
- ✓ ಈ ವೇಳೆಗೆ **ಬಲಿಷ್ಠ ಮರಾಠ** & **ಮೈಸೂರು ರಾಜ್ಯಗಳು** ದುರ್ಬಲಗೊಂಡಿದ್ದು ಇವನ ವಿಸ್ತರಣಾ ನೀತಿಗೆ ಅನುಕೂಲವಾಯಿತು.
- ✓ ಇವನು ತನ್ನ ಗುರಿಯನ್ನು ಸಾಧಿಸಲು ಮೂರು ವಿಧಾನಗಳನ್ನು ಅನುಸರಿಸಿದನು.

1) **ಸಹಾಯಕ ಸೈನ್ಯ ಪದ್ಧತಿ**
2) **ಹೊಸ ರಾಜ್ಯಗಳ ಮೇಲೆ ಯುದ್ಧಗಳು**
3) **ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸುವುದು.**

**ಸಹಾಯಕ ಸೈನ್ಯ ಪದ್ಧತಿ:–**

- ಉದ್ದೇಶ:– **ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಲು**

RAMALINGAPPA L

- ಇದನ್ನು ವೆಲ್ಲೆಸ್ಲಿಯು **1798**ರಲ್ಲಿ ಜಾರಿಗೆ ತಂದನು.
- ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ & ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದ

**ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:–**

1) **ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು**
2) **ಸೇನೆಯ ವೇತನ & ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.**
3) **ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು**
4) **ಬ್ರಿಟಿಷರ ಅನುಮತಿಯಿಲ್ಲದೆ ಆಸ್ಥಾನದಲ್ಲಿ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ**
5) **ಭಾರತದ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಅನುಮತಿ ಬೇಕು**
6) **ಕಂಪನಿಯು ಆ ರಾಜ್ಯಕ್ಕೆ ಆಂತರಿಕ & ಬಾಹ್ಯ ರಕ್ಷಣೆಯನ್ನು ಒದಗಿಸುವುದು.**

**ಪರಿಣಾಮಗಳು:–**

- ✓ ಬ್ರಿಟಿಷರ ಸೈನಿಕ ನಿರ್ವಹಣೆ ಸುಲಭವಾಯಿತು.
- ✓ ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಯಿತು.
- ✓ ಭಾರತೀಯ ರಾಜ್ಯಗಳನ್ನು ಆರ್ಥಿಕವಾಗಿ ತೀವ್ರ ಶೋಷಣೆಗೆ ಗುರಿಪಡಿಸಲಾಯಿತು.
- ✓ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮೊದಲ ದೇಶೀಯ ಸಂಸ್ಥಾನ **ಹೈದರಾಬಾದ್ ಸಂಸ್ಥಾನ**
- ✓ ಈ ಒಪ್ಪಂದಕ್ಕೆ ಸಹಿ ಹಾಕಿದ ಇತರೆ ರಾಜ್ಯಗಳೆಂದರೆ **ಮೈಸೂರು, ಔಧ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್ & ಗ್ವಾಲಿಯಾರ್**

**ಎರಡನೇ ಆಂಗ್ಲೋ–ಮರಾಠ ಯುದ್ಧ (1803–05)**

- ಕಾರಣ:– **ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ**
- ಇಲ್ಲಿ ಸಿಂಧಿಯಾ ಮನೆತನದ **ದೌಲತ್ ರಾವ್ ಮತ್ತು ಪೇಶ್ವೆ 2ನೇ ಬಾಜಿರಾವ್** ಒಂದು ಕಡೆಯಾದರೆ
- ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಿದ್ದರು.
- 1802ರಲ್ಲಿ ಹೋಳ್ಕರ್ ಸೈನ್ಯ **ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು** ಸೋಲಿಸಿತು.
- ಆಗ ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು.
- ಆಗ ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು.
- ಪೇಶ್ವೆ 2ನೇ ಬಾಜಿರಾವ್ **ಬೆಸ್ಸಿನ್ ಒಪ್ಪಂದಕ್ಕೆ** ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದನು.
- ಇದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ & ಸಿಂಧಿಯಾ ಮರಾಠ ಮನೆತನೆಗಳು ಒಗ್ಗೂಡಿದವು.
- 1803–05ರ ಅವಧಿಯಲ್ಲಿ ವೆಲ್ಲೆಸ್ಲಿಯು ಮರಾಠ ನಾಯಕರನ್ನು ಅನೇಕ ಯುದ್ಧಗಳಲ್ಲಿ ಸೋಲಿಸಿದನು.
- ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಯ ಸಾಲದ ಹೊರೆ ಹೆಚ್ಚಿತು.
- ಇದರಿಂದ ತೀವ್ರ ಟೀಕೆಗೆ ಒಳಗಾಗಿ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದನು.
- ತಾತ್ಕಾಲಿಕ ಶಾಂತಿ ನೆಲೆಸಿತು.

**ಮೂರನೇ ಆಂಗ್ಲೋ–ಮರಾಠ ಯುದ್ಧ (1817–18)**

- ಮರಾಠ ಮನೆತನಗಳು ತಮ್ಮ ಘನತೆ & ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆಸಿದವು.
- ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದ.
- 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷರ ರೆಸಿಡೆನ್ಸಿಯ ಮೇಲೆ ದಾಳಿ ಮಾಡಿ ಸುಟ್ಟನು.
- ನಾಗಪುರದ ಅಪ್ಪಾಸಾಹೇಬ & ಮಲ್ಹಾರರಾವ್ ಹೋಳ್ಕರ್ ಕೂಡ ಬ್ರಿಟಿಷರಿಂದ ಸೋತರು.
- 1818ರಲ್ಲಿ ಪೇಶ್ವೆ 2ನೇ ಬಾಜಿರಾವ್ ಬ್ರಿಟಿಷರ ವಿರುದ್ಧ ಕೋರೇಗಾವ್ & ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು.
- ಆಗ ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಪಡಿಸಿ **2ನೇ ಬಾಜಿರಾವ್**ನಿಗೆ ವಿಶ್ರಾಂತಿ ವೇತನವನ್ನು ನೀಡಿದರು.
- ಶಿವಾಜಿಯ ವಂಶಸ್ಥ **ಪ್ರತಾಪಸಿಂಹನನ್ನು** ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿದರು.

- ಬ್ರಿಟಿಷರು 1818 ರಿಂದ 1857 ರವರೆಗೆ ಅಖಂಡ ಭಾರತವನ್ನು ಗೆಲ್ಲುವ ಕಾರ್ಯವನ್ನು ಪೂರ್ಣಗೊಳಿಸಿದರು.
- ಈ ಸಮಯದಲ್ಲಿ ಪಂಜಾಬ್, ಸಿಂಧ್ & ಔದ್ ಗಳನ್ನು ಆಕ್ರಮಿಸಿದರು.

**ಆಂಗ್ಲೋ–ಸಿಖ್ ಯುದ್ಧಗಳು:–**


RAMALINGAPPA L

- ✓ 1809ರಲ್ಲಿ ಬ್ರಿಟಿಷರು ಪಂಜಾಬಿನಲ್ಲಿ **ರಣಜಿತ್‌ಸಿಂಗ್** ಜೊತೆ **'ನಿರಂತರ ಮೈತ್ರಿ ಒಪ್ಪಂದ'**ವನ್ನು ಮಾಡಿಕೊಂಡಿದ್ದರು
- ✓ ಆದರೆ 1839ರಲ್ಲಿ ರಣಜಿತ್‌ಸಿಂಗ್‌ನ ಮರಣದ ನಂತರ ಬ್ರಿಟಿಷರು **'ನಿರಂತರ ಮೈತ್ರಿ ಒಪ್ಪಂದ'** ವನ್ನು ಉಲ್ಲಂಘಿಸಿ ಪಂಜಾಬ್ ಗೆಲ್ಲಲು ಸಂಚು ರೂಪಿಸಿದರು.
- ✓ 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ & ಪಂಜಾಬ್ ಸೈನ್ಯಕ್ಕೂ ಯದ್ಧ ಆರಂಭವಾಯಿತು.
- ✓ ಆಗ ಹಿಂದೂ, ಮುಸ್ಲಿಂ ಹಾಗೂ ಸಿಖ್ಖರೆಲ್ಲರೂ ಒಂದಾಗಿ ಶೌರ್ಯವನ್ನು ಮೆರೆದರು
- ✓ ಆದರೆ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು.
- ✓ ಕೊನೆಗೆ 1846ರಲ್ಲಿ ಅವಮಾನಕ **'ಲಾಹೋರ್ ಒಪ್ಪಂದಕ್ಕೆ'** ಸಹಿ ಹಾಕಬೇಕಾಯಿತು.
- ✓ ಆಗ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು.
- ✓ ಪಂಜಾಬ್ ಬ್ರಿಟಿಷರ ಆಶ್ರಿತ ರಾಜ್ಯವಾಯಿತು.
- ✓ 1848ರಲ್ಲಿ ಬ್ರಿಟಿಷರು ಪಂಜಾಬಿನ ಮೇಲೆ ನೇರ ಆಳ್ವಿಕೆ ಹೇರಲು ಹೊರಟಾಗ ಪಂಜಾಬಿಗಳು ಪ್ರತಿಭಟಿಸಿದರು.
- ✓ ಈ ಪ್ರತಿಭಟನೆಗಳು **ಚಟ್ಟಾರ್ ಸಿಂಗ್ ಅಟ್ಟಾರಿವಾಲ** & **ಮೂಲರಾಜ್** ನೇತೃತ್ವದಲ್ಲಿ ಕ್ರಮವಾಗಿ **ಲಾಹೋರ್** & **ಮುಲ್ತಾನ್** ಗಳಲ್ಲಿ ನಡೆಸಿದರು.
- ✓ ಇಲ್ಲಿ ಪಂಜಾಬಿಗಳಿಗೆ ಮತ್ತೆ ಸೋಲಾಯಿತು.
- ✓ ಅಂತಿಮವಾಗಿ ಲಾರ್ಡ್ ಡಾರ್ಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದರು.

### ಡಾಲ್‌ಹೌಸಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ:–

- ❖ 1848 ರಲ್ಲಿ ಬ್ರಿಟಿಷರ ಗವರ್ನರ್ ಆಗಿ ಭಾರತಕ್ಕೆ ಬಂದನು.
- ❖ ಎಲ್ಲಾ ದೇಶಿಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಲು ಪ್ರಯತ್ನ ನಡೆಸಿದನು.
- ❖ ಅದಕ್ಕಾಗಿ **ದತ್ತು ಮಕ್ಕಳಿಗೆ ಹಕ್ಕಿಲ್ಲ** ನೀತಿಯನ್ನು ಜಾರಿಗೆ ತಂದನು.
- ❖ ಇದರ ಪ್ರಕಾರ:– **ಯಾವುದೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರದ ಹಕ್ಕಿರಲ್ಲಿಲ್ಲ.**
- ❖ ಇಂತಹ ರಾಜ್ಯವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಲಾಗುತ್ತಿತ್ತು.
- ❖ ಈ ನೀತಿಗೆ ಒಳಪಟ್ಟ ರಾಜ್ಯಗಳು:– **ಸತಾರ, ಜೈಪುರ್, ಸಂಬಲ್‌ಪುರ, ಉದಯಪುರ, ಝಾನ್ಸಿ** & **ನಾಗಪುರ**
- ❖ ಈ ನೀತಿಯನ್ನು ಬ್ರಿಟಿಷರು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡರು.
- ❖ ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದಿಂದ ಭಾರತೀಯ ರಾಜರು & ಜನವರ್ಗವು ಬ್ರಿಟಿಷರ ವಿರುದ್ಧ ಮಲೆತು ನಿಂತಿತು.
- ❖ ಮಡುಗಟ್ಟಿದ ಆಕ್ರೋಶ & ರಾಜ್ಯಾಭಿಮಾನದ ಕಿಚ್ಚು ಬ್ರಿಟಿಷ್ ಪ್ರಭುತ್ವದ ವಿರುದ್ಧ ಬಂಡೇಳುವಂತೆ ಮಾಡಿತು.
- ❖ ಇದರ ಪರಿಣಾಮ 1857 ರ ಸಿಪಾಯಿ ದಂಗೆಗೆ ಕಾರಣವಾಯಿತು.

## ಅಧ್ಯಾಯ–3

# ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

### ವ್ಯಾಪಾರ ಕಂಪನಿಯಾಗಿದ್ದು ನಂತರ ಆಡಳಿತಗನಾಗಿದ್ದು ಹೇಗೆ?

- ➢ ಮರಾಠ ರಾಜಮನೆತನಗಳಲ್ಲಿ ಭಾರತ ಹಂಚಿಕೆಯಾಗಿತ್ತು. ಪರಿಸ್ಥಿತಿ ಅವಲೋಕನೆ
- ➢ ಪರಸ್ಪರ ಕಚ್ಚಾಡುತ್ತಿದ್ದ ರಾಜರ ನಡುವೆ ಒಡೆದು ಆಳುವ ನೀತಿ ಬಳಕೆ
- ➢ ಅಧೀನಕ್ಕೆ ತೆಗೆದುಕೊಳ್ಳಲು ಸಂಧಾನ & ಯುದ್ಧ ಮಾರ್ಗ ಬಳಕೆ
- ➢ ಭಾರತವನ್ನು ಶಾಶ್ವತವಾಗಿ ತಮ್ಮಲ್ಲಿ ಉಳಿಸಿಕೊಳ್ಳಲು ಆಲೋಚನೆ
- ➢ ಭಾರತ ಒಂದು ದೇಶವೆಂಬ ಸಾಮೂಹಿಕ ಕಲ್ಪನೆಯಿರಲಿಲ್ಲ
- ➢ ಅನೇಕ ರಾಜ್ಯಗಳನ್ನು ವಿವಿಧ ಕಾರಣಗಳಿಂದ ಒಂದುಗೂಡಿಸಿದರು.
- ➢ ಏಕರೂಪ ರಾಜಕೀಯ & ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು.
- ➢ ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂಕಂದಾಯ, ವ್ಯಾಪಾರ & ಕೃಷಿ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆ ಜಾರಿ.

### ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆ:–

#### ನಾಗರೀಕ ಸೇವೆಗಳು

- ಲಾರ್ಡ್ ಕಾರ್ನ್‌ವಾಲೀಸ್‌ನು **ನಾಗರಿಕ ಸೇವಾ ವ್ಯವಸ್ಥೆ**ಯನ್ನು ಜಾರಿ
- ಕಂಪನಿ ವ್ಯಾಪಾರ ಮಾಡಲು ಅನೇಕ ನೌಕರರ ನೇಮಕ
- ಕಂಪನಿಯು ಈ ನೌಕರರಿಗೆ ಖಾಸಗಿ ವ್ಯಾಪಾರಕ್ಕೆ ಅನುಮತಿ ನೀಡಿತ್ತು.
- ಇದರಿಂದ ನೌಕರರು ಅನೈತಿಕ ಮಾರ್ಗಗಳಿಂದ ಹಣ ಸಂಪಾದನೆ



RAMALINGAPPA

- ಇದನ್ನು ತಡೆಯಲು 1773ರಲ್ಲಿ ಇಂಗ್ಲೇಂಡ್ ಸರ್ಕಾರ **ರೇಗ್ಯುಲೇಟಿಂಗ್ ಕಾಯ್ದೆ** ಜಾರಿ ಮಾಡಿತು.
- ನಾಗರಿಕ ಸೇವೆಗೆ ಸೇರುವವರಿಗೆ 1800 ರಲ್ಲಿ ಶಿಕ್ಷಣ ನೀಡಲು **ಕಲ್ಕತ್ತಾದಲ್ಲಿ ಪೋರ್ಟ್ ವಿಲಿಯಂ ಕಾಲೇಜು** ಸ್ಥಾಪನೆ.
- 1853 ರಲ್ಲಿ ನಾಗರಿಕ ಸೇವೆಗಳ ನೇಮಕಾತಿ ಕಂಪನಿಯ ನಿರ್ದೇಶಕರೇ ಮಾಡಿದರು
- 1853ರ ನಂತರ ನೇಮಕಾತಿಗೆ **ಸ್ಪರ್ಧಾತ್ಮಕ ಪರೀಕ್ಷೆ ಜಾರಿ**
- ಇದು ಭಾರತೀಯರಿಗೆ ಹೆಚ್ಚು ಪ್ರಯೋಜವಾಗಲಿಲ್ಲ
- ಕಾರ್ನ್‌ವಾಲೀಸ್‌ನು:– **"ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯು ಭ್ರಷ್ಟ"** ಎಂದನು.
- ಕೆಳದರ್ಜೆಯ ಉದ್ಯೋಗಗಳು ಮಾತ್ರ ಭಾರತೀಯರಿಗೆ ನೀಡಲಾಗುತ್ತಿತ್ತು.

## ನ್ಯಾಯಾಂಗ ವ್ಯವಸ್ಥೆ:–

- ಮೊಘಲರಿಂದ ಬ್ರಿಟಿಷರಿಗೆ ಅಧಿಕಾರ ಹಸ್ತಾಂತರದ ಕಾಲದಲ್ಲಿ ಹೊಸ ನ್ಯಾಯಾಂಗ ವ್ಯವಸ್ಥೆ ಆರಂಭ
- **1764**ರ ಬಕ್ಸಾರ್ ಕದನದ ನಂತರ 2ನೇ ಷಾಆಲಂನು **ಕಂದಾಯ ವಸೂಲಿ ಹಕ್ಕನ್ನು** ಬ್ರಿಟಿಷರಿಗೆ ನೀಡಿದನು.
- ಬಂಗಾಳದಲ್ಲಿ ದ್ವಿ ಪ್ರಭುತ್ವ ಆಡಳಿತ ಜಾರಿ.
- **ಕಂದಾಯ ವಸೂಲಿ, ನಾಗರಿಕ** & **ಅಪರಾಧ ನ್ಯಾಯ ನಿರ್ವಹಣೆ** ವ್ಯವಸ್ಥೆಯನ್ನು ಬ್ರಿಟಿಷರಿಗೆ ನೀಡಿಕೆ
- ಬ್ರಿಟಿಷರು ವಸೂಲಾದ ಕಂದಾಯದ ನಿರ್ವಹಣಾ ಆಡಳಿತ ತಮ್ಮಲ್ಲೇ ಇಟ್ಟುಕೊಂಡರು.
- ಬ್ರಿಟಿಷರು **ಹೆಚ್ಚು ಕೇಂದ್ರೀಕೃತ ನ್ಯಾಯಾಂಗ ಪದ್ಧತಿ** ಜಾರಿ ಮಾಡಿದರು.
- ಬ್ರಿಟಿಷರು ಮೊಘಲರ ಅಧಿಕಾರವನ್ನು ಹಿಂದಕ್ಕೆ ಸರಿಸಿ ತಾವೇ ಸಾರ್ವಭೌಮರಾದರು.
- ಇವರು **ಹೊಸ ನ್ಯಾಯಾಂಗ ವ್ಯವಸ್ಥೆ** ಜಾರಿ ಮಾಡಿದರು.
- **ವಾರನ್ ಹೇಸ್ಟಿಂಗ್‌ನು** ಹೊಸ ನ್ಯಾಯಾಂಗ ವ್ಯವಸ್ಥೆ ಜಾರಿ
- ಈ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯಲ್ಲಿ ಎರಡು ಬಗೆಯ ನ್ಯಾಯಾಲಯಗಳನ್ನು ಹೊದಿರಬೇಕಿತ್ತು.
- **ದಿವಾನಿ ಅದಾಲತ್** ಎಂಬ **'ನಾಗರಿಕ ನ್ಯಾಯಾಲಯ'** ಹಾಗೂ ಫೌಜುದಾರಿ ಅದಾಲತ್ ಎಂಬ **'ಅಪರಾಧಿ ನ್ಯಾಯಾಲಯ'** ಜಾರಿ
- ನಾಗರೀಕ ನ್ಯಾಯಾದಾನದ ಸಂದರ್ಭದಲ್ಲಿ ಹಿಂದೂಗಳಿಗೆ **ಹಿಂದೂ ಶಾಸ್ತ್ರ ಗ್ರಂಥಗಳ ಪ್ರಕಾರ** & ಮುಸ್ಲಿಂರಿಗೆ **ಷರಿಯತ್ ಕಾನೂನುಗಳ ಪ್ರಕಾರ** ನ್ಯಾಯದಾನ ನೀಡಲಾಗುತ್ತಿತ್ತು.
- ಅಪರಾಧಿಗಳ ಪ್ರಕರಣಗಳಿಗೆ ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ
- ಬ್ರಿಟಿಷ್ ಕಾನೂನು ಜಾರಿಗೆ ತರುವುದರ ಮೂಲಕ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತಂದರು.
- ನಾಗರಿಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.
- ಅಪರಾಧಿ ನ್ಯಾಯಾಲಯಗಳು ಖಾಜಿಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಣೆ.

## ಪೋಲಿಸ್ ವ್ಯವಸ್ಥೆ:–

- ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಪೋಲಿಸ್ ಇಲಾಖೆ ಹೊಂದಿತ್ತು.
- **ಲಾರ್ಡ್ ಕಾರ್ನ್‌ವಾಲೀಸ್‌ನು** ಮೊದಲ ಬಾರಿಗೆ ವ್ಯವಸ್ಥಿತವಾದ **ಪೋಲಿಸ್ ವಿಭಾಗವನ್ನು** ಅಸ್ತಿತ್ವಕ್ಕೆ ತಂದನು.
- ಕಾರ್ನ್‌ವಾಲೀಸ್‌ನು **'ಸೂಪರಿಡೆಂಟೆಂಟ್ ಆಫ್ ಪೋಲಿಸ್'** ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಿದನು.
- 1793ರಲ್ಲಿ ಪ್ರತಿ ಜಿಲ್ಲೆಯನ್ನು **ಠಾಣೆ**ಗಳನ್ನಾಗಿ ವಿಭಾಗಿಸಿ ಪ್ರತಿ ಠಾಣೆಯನ್ನು **ಕೊತ್ವಾಲರ** ಅಧೀನದಲ್ಲೂ, ಹಳ್ಳಿಗಳು ಚೌಕಿದಾರರ ಅಧೀನದಲ್ಲೂ ಇರುವಂತೆ ಮಾಡಿದನು.
- ಕೊತ್ವಾಲರು **ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳನ್ನು** ನಿಯಂತ್ರಿಸುತ್ತಿದ್ದರು.
- **1770**ರ ದಶಕದಲ್ಲಿ **ಭೀಕರ ಕ್ಷಾಮಭೀತಿ** ತಲೆದೋರಿದಾಗ ಇಡೀ ಪೋಲಿಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೆ ತಂದರು.
- 1781ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೆ ತಂದರು.
- ಪೋಲಿಸ್ ಅಧಿಕಾರಿಗಳು **ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ** ಒಳಪಟ್ಟರು.
- 1861ರಲ್ಲಿ **ಪೋಲಿಸ್ ಕಾಯ್ದೆ**ಯನ್ನು ಜಾರಿಗೆ ತರಲಾಯಿತು.
- 1902ರಲ್ಲಿ **ಪೋಲಿಸ್ ಕಮಿಷನ್ ಕಾಯ್ದೆಯ** ವಿದ್ಯಾರ್ಹತೆಯನ್ನು ಪಡೆದವರನ್ನು ಹುದ್ದೆಗೆ ನೇಮಿಸುವ ಅವಕಾಶ ಕಲ್ಪಿಸಲಾಯಿತು.
- ಈ ಕಾಯ್ದೆ ಕಾನೂನು & ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯ.
- ಅಧಿಕಾರಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ.
- ಆದರೂ ಭಾರತೀಯರ ಬಗೆಗೆ ಇದ್ದ ತಾರತಮ್ಯ ಕಡಿಮೆಯಾಗಲಿಲ್ಲ

## ಸೈನಿಕ ವ್ಯವಸ್ಥೆ:–

- ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯವು ಆಧಾರಸ್ತಂಭವಾಗಿತ್ತು.

RAMALINGAPPA L

- ಭಾರತೀಯರನ್ನು ಸೈನ್ಯದಲ್ಲಿ ಸೇರಿಸಿಕೊಂಡು ಅವರಿಂದಲೇ ಭಾರತವನ್ನು ಗೆದ್ದರು.
- ಸೈನ್ಯದ ಶಕ್ತಿಯನ್ನು ಬಳಸಿಕೊಂಡು ಭಾರತದ ಒಳಗಡೆ & ವಿದೇಶಿ ಶಕ್ತಿಗಳಿಂದ ಸಾಮ್ರಾಜ್ಯ ರಕ್ಷಿಸಿದರು.
- ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು.
- ಭಾರತೀಯರಿಗೆ ಲಭಿಸುತ್ತಿದ್ದ ಉನ್ನತ ಹುದ್ದೆ ಎಂದರೆ, **ಸುಬೇದಾರ್ ಸ್ಥಾನ** ಮಾತ್ರ
- ಬಹುತೇಕ ಭಾರತೀಯರು **ಕೂಲಿ ಸೈನಿಕರಾಗಿದ್ದರು.**
- **ಪೀಲ್ ಸಮಿತಿಯ** ವರದಿಯ ನಂತರ ಸೈನ್ಯ ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಲಾಯಿತು.

## ಭೂಕಂದಾಯ ನೀತಿಗಳು:–

- ✓ ಬ್ರಿಟಿಷರು ಬಂಗಾಳ ಪ್ರಾಂತ್ಯವನ್ನು ತಮ್ಮ ಕೇಂದ್ರವಾಗಿಟ್ಟುಕೊಂಡರು.
- ✓ ಈಸ್ಟ್ ಇಂಡಿಯಾ ಕಂಪನಿಯು ಬ್ರಿಟಿಷ್ ಸರ್ಕಾರಕ್ಕೆ ವಾರ್ಷಿಕ ನಾಲ್ಕು ಲಕ್ಷ ಪೌಂಡ್ ಪಾವತಿಸಬೇಕಿತ್ತು.
- ✓ ಆದ್ದರಿಂದ ಕಂಪನಿಯು ತನ್ನ ಆರ್ಥಿಕ ಹಿತಾಸಕ್ತಿಯನ್ನು ಸುಸ್ಥಿರಗೊಳಿಸಬೇಕಕಿತ್ತು.
- ✓ ಇದ್ದರಿಂದ ಹೊಸ ಬಗೆಯ ಕಂದಾಯ ನೀತಿಯನ್ನು ಜಾರಿಗೊಳಿಸಬೇಕಿತ್ತು.

### ಖಾಯಂ ಜಮೀನ್ದಾರಿ ಪದ್ಧತಿ:–

- ನಿರ್ದಿಷ್ಟ ಕಂದಾಯ ಹಣ ಪಡೆಯಲು **ಲಾರ್ಡ್ ಕಾರ್ನ್‌ವಾಲೀಸ**ನು 1793ರಲ್ಲಿ **ಬಂಗಾಳ & ಬಿಹಾರ** ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿ ಜಾರಿ.
- ಇದನ್ನು **'ಖಾಯಂ ಜಮೀನ್ದಾರಿ ಪದ್ಧತಿ'** ಎನ್ನುವರು
- ಇದರ ಪ್ರಕಾರ ಜಮೀನ್ದಾರನು ಭೂಮಾಲೀಕನಾದನು.
- **ಜಮೀನ್ದಾರನು ಪ್ರತಿವರ್ಷ ನಿಗಧಿತ ಕಂದಾಯ** ಮೊತ್ತವನ್ನು ಸರ್ಕಾರಕ್ಕೆ ಸಲ್ಲಿಸಬೇಕಿತ್ತು.
- ಇದರಿಂದ ಭೂಮಾಲೀಕನಿಗೆ ಹೆಚ್ಚಿನ ಲಾಭವಾಯಿತು.
- ಕಾರಣ ಸರ್ಕಾರಕ್ಕೆ ಸಲ್ಲಿಸಬೇಕಾದ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ವಸೂಲಿ ಮಾಡಿ ಹಣವನ್ನು ಇವನೇ ಇಟ್ಟುಕೊಳ್ಳುತ್ತಿದ್ದ.
- ಅನಾವೃಷ್ಟಿ & ಅತಿವೃಷ್ಟಿಯ ಕಾರಣದಿಂದ ಕಂದಾಯ ವಸೂಲಿ ಮಾಡದಿದ್ದಾಗ ಸರ್ಕಾರಕ್ಕೆ ಕಂದಾಯ ನಿಲ್ಲಿಸುತ್ತಿದ್ದ
- ಆಗ ಇವನ ಭೂಮಿಯ ಒಡೆತನವನ್ನು ಸರ್ಕಾರ ಕಸಿದುಕೊಳ್ಳಲಾಗುತ್ತಿತ್ತು.
- ಇದರಿಂದ ಬ್ರಿಟಿಷರಿಗೆ & ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗೆ ಲಾಭವಾಗಲಿಲ್ಲ.
- ಇದರಿಂದ ಬ್ರಿಟಿಷರು ತಮಗೆ ನೆರವಾಗುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ವರ್ಗ ಸೃಷ್ಟಿ ಮಾಡಿತು.
- ರೈತರು, ರೈತ ಕೂಲಿಕಾರ್ಮಿಕರು ಜಮೀನ್ದಾರರ ಭೂಮಿಯಲ್ಲಿ ಕೆಲಸ ಸಿಗದೇ ಶೋಷಣೆಗೆ ಒಳಗಾಗಿ ಅತಂತ್ರ ಸ್ಥಿತಿಯಲ್ಲಿ ಬದುಕು ನಡೆಸಬೇಕಾಯಿತು.
- **ಚಾರ್ಲ್ಸ್ ಮೆಟಕಾರ್ಫ್** ಹೇಳುವಂತೆ **"ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು"** ಎಂದನು.

### ಮಹಲ್ವಾರಿ ಪದ್ಧತಿ:–

- **ಉತ್ತರ ಪ್ರದೇಶ, ಮಧ್ಯಪ್ರದೇಶ, ಪಂಜಾಬ್, ದೆಹಲಿ** ಪ್ರಾಂತ್ಯಗಳಲ್ಲಿ ಮಹಲ್ಲುಗಳೇ **ಸಾಮೂಹಿಕ ಒಪ್ಪಂದ** ಮಾಡಿಕೊಂಡಿದ್ದವು.
- ಮಹಲ್ಲುಗಳೇ ಕಂದಾಯವನ್ನು ಸರ್ಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿ ಮಾಡಿದರು.
- ಈ ಪದ್ಧತಿಯನ್ನು **ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್** ಪ್ರಯೋಗಿಸಿದರು.
- ಮಹಲ್ ಎಂದರೆ, **ತಾಲ್ಲೂಕು** ಎಂದರ್ಥ.
- ದೊಡ್ಡ & ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು.
- ಕಂಪನಿ ಸರ್ಕಾರದ ಅಧಿಕಾರಿಗಳು ಉತ್ಪಾದನೆಗಿಂತ ಹೆಚ್ಚು ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು.
- ಅನೇಕ ಜಮೀನ್ದಾರರು ತಮ್ಮ ಭೂಮಾಲೀಕತ್ವವನ್ನು ಕಳೆದುಕೊಂಡರು.
- ಇವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

### ರೈತವಾರಿ ಪದ್ಧತಿ:–

- ✓ ರೈತವಾರಿ ಪದ್ಧತಿಯನ್ನು ಮೊದಲಿಗೆ **ಬಾರಮಹಲ್ ಪ್ರಾಂತ್ಯ**ದಲ್ಲಿ 1792ರಲ್ಲಿ **ಅಲೆಕ್ಸಾಂಡರ್ ರೀಡ್** ಜಾರಿಗೊಳಿಸಿದರು.
- ✓ **ಥಾಮಸ್‌ಮನ್ರೊ ಮದ್ರಾಸ್ & ಮೈಸೂರು ಪ್ರಾಂತ್ಯ**ದಲ್ಲಿ 1801ರಲ್ಲಿ ಜಾರಿಗೊಳಿಸಿದರು.
- ✓ ಇದರ ಪ್ರಕಾರ ಸರ್ಕಾರ & ರೈತರ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು.
- ✓ **ಭೂಮಿ ಉಳಿಮೆ ಮಾಡುತ್ತಿದ್ದವನನ್ನು ಭೂಮಿಯ ಮಾಲೀಕನೆಂದು** ಸರ್ಕಾರ ಮಾನ್ಯಮಾಡಿತು.
- ✓ ರೈತನೇ ನೇರವಾಗಿ **50% ಕಂದಾಯ** ಪಾವತಿಸಬೇಕಿತ್ತು.
- ✓ ಕಂದಾಯವನ್ನು **30 ವರ್ಷಗಳ** ಅವಧಿಗೆ ನಿರ್ಧರಿಸಲಾಯಿತು.

- ✓ ಸಣ್ಣ ರೈತರಿಗೆ ತಮ್ಮ ಅಧೀನದಲ್ಲಿದ್ದ ಭೂಮಿಯ ಮೇಲಿನ ಹಕ್ಕನ್ನು ನೀಡಿತ್ತು
- ✓ ಆದರೂ ಭೂಕಂದಾಯದ ವಾರ್ಷಿಕ ಮೊತ್ತ ಹೆಚ್ಚು ನಿಗಧಿಪಡಿಸಿದ್ದರಿಂದ ರೈತರು ಸಂಕಷ್ಟಕ್ಕೆ ಗುರಿಯಾದರು.
- ✓ ಕಂದಾಯ ವಸೂಲಿ ಮಾಡಲು ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತಿದ್ದರು.
- ✓ ಬೆಳೆಗಳು ಫಸಲು ನೀಡದಿದ್ದಾಗ ರೈತರು ಲೇವಾದೇವಿಗಾರರಿಂದ ಸಾಲ ಪಡೆದು ಪಾವತಿಸದಿದ್ದಾಗ ಸಣ್ಣಪುಟ್ಟ ಜಮೀನನ್ನು ಮಾರಾಟ ಮಾಡುತ್ತಿದ್ದರು.
- ✓ ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೆ

**ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:–**

- ➢ ಇದರಿಂದ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಠಿ
- ➢ ರೈತರು ವಿವಿಧ ಬಗೆಯ ಸಂಕಷ್ಟಕ್ಕೆ ಗುರಿಯಾಗಿ ನಿರ್ಗತಿಕರಾದರು
- ➢ ಭೂಮಿ ಮಾರಾಟದ ವಸ್ತುವಾಯಿತು.
- ➢ ಇದನ್ನು ಪರಭಾರೆ ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಿತ್ತು.
- ➢ ಅನೇಕ ಜಮೀನ್ದಾರರು ಕಂದಾಯ ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ➢ ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡಿತು.
- ➢ ಕೈಗಾರಿಕಾ ಕ್ರಾಂತಿಯಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ➢ ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

**ಆಧುನಿಕ ಶಿಕ್ಷಣ ಆರಂಭ:–**

- ❖ ಭಾರತೀಯರಿಗೆ ಸಾಂಪ್ರದಾಯಿಕ ಶಿಕ್ಷಣವು ನಿರಂತರವಾಗಿ ಚಾಲ್ತಿಯಲ್ಲಿತ್ತು.
- ❖ ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ರಾಜ್ಯವ್ಯವಸ್ಥೆ ನೆಲೆಗೊಂಡು ಶಿಕ್ಷಣವನ್ನು ನೀಡುತ್ತಿದ್ದರು.
- ❖ 18ನೇ ಶತಮಾನದ ಹೊಸ ಬ್ರಿಟಿಷ್ ಆಡಳಿತ ಕಾಲಘಟ್ಟದಲ್ಲಿ ಬದಲಾವಣೆ ಉಂಟಾಯಿತು.
- ❖ ಭಾರತದಲ್ಲಿದ್ದ ಐರೋಪ್ಯ & ಆಂಗ್ಲೋ–ಇಂಡಿಯನ್ ಸಮುದಾಯದ ಮಕ್ಕಳಿಗೆ ಹೊಸ ಶಾಲೆ ಆರಂಭ
- ❖ ಈ ಶಿಕ್ಷಣ ಕ್ರಮವು ವಿಸ್ತರಣೆ ಆಗದಿದ್ದರಿಂದ ಸ್ಥಳೀಯ ಮಕ್ಕಳಿಗೆ ಪ್ರಯೋಜವಾಗಲಿಲ್ಲ.
- ❖ ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ **ವಾರನ್ ಹೇಸ್ಟಿಂಗ್ಸ್**
- ❖ 1781ರಲ್ಲಿ ಇವನು **ಕಲ್ಕತ್ತಾದಲ್ಲಿ ಮದರಸಾವನ್ನು** ಆರಂಭಿಸಿದನು.
- ❖ **ಜೊನಾಥನ್ ಡಂಕನ್** ಎಂಬ ಬ್ರಿಟಿಷ್ ಅಧಿಕಾರಿ 1792ರಲ್ಲಿ **ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜು** ಆರಂಭಿಸಿದನು.
- ❖ ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು **ಚಾರ್ಲ್ಸ್ ಗ್ರಾಂಟ್**
- ❖ 1828ರಲ್ಲಿ **ವಿಲಿಯಂ ಬೆಂಟಿಕನು** ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಪ್ರೋತ್ಸಾಹ ದೊರೆಯಿತು.
- ❖ ಗವರ್ನರ್ ಕಾರ್ಯಾಂಗದ ಸಭೆಗೆ ಕಾನೂನು ಸದಸ್ಯನನ್ನಾಗಿ ಮೆಕಾಲೆಯನ್ನು ನೇಮಕ ಮಾಡಲಾಯಿತು.
- ❖ ಮೆಕಾಲೆ ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಿತಿಗೆ ಅಧ್ಯಕ್ಷರಾದರು.
- ❖ **1835ರ ಮೆಕಾಲೆ** ವರದಿ ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.
- ❖ ಮೆಕಾಲೆ ಯೋಜನೆಯ ಪ್ರಮುಖ ಅಂಶ:– **ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ, ಅಭಿರುಚಿ, ಅಭಿಪ್ರಾಯ, ನೀತಿ & ಬುದ್ಧಿವಂತಿಕೆಯಲ್ಲಿ ಇಂಗ್ಲೀಷರಾಗುವ ಹೊಸ ಭಾರತೀಯ ವಿದ್ಯಾವಂತ ವರ್ಗ ಸೃಷ್ಠಿ ಮಾಡುವುದು.**
- ❖ **ಸರ್ ಚಾರ್ಲ್ಸ್ ವುಡ್ಸ್‌ನ 1854 ಆಯೋಗ**
- ❖ ಇದರ ಶಿಫಾಸ್ಸುಗಳ ಆಧಾರದ ಮೇಲೆ ಲಾರ್ಡ್ ಡಾಲ್‌ಹೌಸಿಯು **ಕಲ್ಕತ್ತಾ, ಬಾಂಬೆ, ಮದರಾಸುಗಳಲ್ಲಿ** ನೂತನ ವಿ.ವಿ. ಸ್ಥಾಪನೆ – 1857
- ❖ ಶಿಕ್ಷಣ ಸಾರ್ವತ್ರಿಕರಣಗೊಂಡಿತು.

**ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:–**

- ➢ ಭಾರತೀಯರು ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮ ಹಾಗೂ ರಾಷ್ಟ್ರೀಯವಾದಿ ದೃಷ್ಠಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯ
- ➢ ಸ್ಥಳೀಯ ಭಾಷೆಗಳು & ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು.
- ➢ ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲಿ ಏಕತೆಯ ಸ್ವರೂಪ ಕಾಣುತ್ತೇವೆ.
- ➢ ವೃತ್ತಿ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.
- ➢ ಇದರಿಂದ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.



RAMALINGAPPA L

- ಹೊಸ ಸಾಮಾಜಿಕ & ಧಾರ್ಮಿಕ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು.
- **ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೋರವರ** ಚಿಂತನೆಗಳು ಭಾರತೀಯ ವಿದ್ಯಾವಂತ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ತಂದವು.
- ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗಳ ಪ್ರಭಾವ ಭಾರತೀಯರ ಮೇಲೆ ಉಂಟಾಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳಲು ಸಾಧ್ಯವಾಯಿತು.

## ಸಂವಿಧಾನತ್ಮಕ ಬೆಳವಣಿಗೆ

**1773ರ ರೆಗ್ಯುಲೇಟಿಂಗ್ ಆಯ್ದೆ:–**

- 1765ರಲ್ಲಿ ಜಾರಿಗೊಂಡ ದಿವಾನಿ ಹಕ್ಕಿನ ನಂತರ ಕಂಪನಿ ಅಧಿಕಾರಿಗಳು ದುರಾಸೆಯಿಂದ ಶ್ರೀಮಂತರಾದರು.
- ಇವರ ಭ್ರಷ್ಟಾಚಾರ ವಿಪರೀತವಾಯಿತು.
- ಇಂಗ್ಲೇಂಡಿನ ಶಾಸನ ಸಭೆ ಸದಸ್ಯ **ಎಡ್ಮಂಡ್ ಬರ್ಕ್**ನು ಕಂಪನಿಯ ತೆರಿಗೆಯನ್ನು ಅಪರಾಧ ತೆರಿಗೆ ಎಂದು ಟೀಕಿಸಿದರು.
- ಭಾರತದಲ್ಲಿ ಕಂಪನಿ ಅನೈತಿಕ ವ್ಯವಹಾರಗಳಲ್ಲಿ ತೊಡಗಿತ್ತು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ.
- ಇವರು ಸಂಪಾದಿಸಿದ ಹಣ ಇಂಗ್ಲೇಂಡಿನ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿತ್ತು.
- ಕಂಪನಿಯನ್ನು ನಿಯಂತ್ರಿಸಲು ಈ ಕಾಯ್ದೆ ಜಾರಿ

**ರೆಗ್ಯುಲೇಟಿಂಗ್ ಕಾಯ್ದೆಯ ನಿಬಂಧನೆಗಳು:–**

- ✓ ಬಂಗಾಳದ ಪ್ರೆಸಿಡೆನ್ಸಿಯು ಮುಂಬಾಯಿ & ಮದ್ರಾಸ್ ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರ ಪಡೆಯಿತು.
- ✓ ಬಂಗಾಳದ ಗವರ್ನರ್‌ನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.
- ✓ ಗವರ್ನರ್ ಜನರಲ್‌ನಿಗೆ ಬಾಂಬೆ & ಮದ್ರಾಸ್ ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ & ಮೇಲ್ವಿಚಾರಣೆ ಮಾಡುವ ಅಧಿಕಾವನ್ನು ಈ ಕಾಯ್ದೆ ನೀಡಿತು.
- ✓ ಬಂಗಾಳ ಸರ್ಕಾರದ & ಇಂಗ್ಲೇಂಡಿನ ನಿರ್ದೇಶಕ ಮಂಡಳಿಯ ಪೂರ್ವಾನುಮತಿಯಿಲ್ಲದೆ ಬಾಂಬೆ & ಮದ್ರಾಸ್ ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ
- ✓ ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ **ಸುಪ್ರೀಂಕೋರ್ಟ್** ಅನ್ನು ಸ್ಥಾಪಿಸಲಾಯಿತು.
- ✓ ಇದರ ಪ್ರಕಾರ ಕಂಪನಿಯನ್ನು ಒಳಗೊಂಡಂತೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೇಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯವಾಗಿತ್ತು.

**1784ರ ಪಿಟ್ಸ್ ಇಂಡಿಯಾ ಕಾಯ್ದೆ:–**

- ಉದ್ದೇಶ:– **ರೆಗ್ಯುಲೇಟಿಂಗ್ ಕಾಯಿದೆಯ ಅನಿಶ್ಚತೆಗಳನ್ನು ನಿವಾರಿಸಲು.**
- ಬ್ರಿಟಿಷ್ ಸರ್ಕಾರದ ಅಧಿಕಾರ & ಕಂಪನಿಯ ಸರ್ಕಾರದ ಅಧಿಕಾರದ ಮಿತಿಗಳು ಸ್ಪಷ್ಟಪಡಿಸುವುದು.
- 6 ಜನ ಸದಸ್ಯರನ್ನು ಒಳಗೊಂಡ **ನಿಯಂತ್ರಣ ಮಂಡಳಿ** ರಚನೆ.
- ಇದು ನಾಗರಿಕ, ಮಿಲಿಟರಿ, ಕಂದಾಯ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ & ಮೇಲ್ವಿಚಾರಣೆ ಮಾಡುವ ಅಧಿಕಾರ ಪಡೆದಿತ್ತು.
- ಇಂಗ್ಲೇಂಡಿನಲ್ಲಿ **ನಿರ್ದೇಶಕ ಮಂಡಳಿ** & **ನಿಯಂತ್ರಣ ಮಂಡಳಿ** ಎರಡು ಜಾರಿಯಲ್ಲಿದ್ದವು.
- ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಃ ಅವರದೇ ಸ್ವಂತ ಹಕ್ಕಿಲ್ಲ ಎಂದು ಹೇಳಿ ಭಾರತೀಯರ ರಾಜಕೀಯ ಹಕ್ಕುಗಳನ್ನು ಮೊಟಕುಗೊಳಿಸಿತು.
- ಭಾರತದಲ್ಲಿದ್ದ ಕಂಪನಿಯ ಅಧೀನ ಪ್ರದೇಶಗಳಿಗೆ ಇಂಗ್ಲೇಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

**ಚಾರ್ಟರ್ ಕಾಯ್ದೆಗಳು:–**

- ✓ ಉದ್ದೇಶ:– **ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿಯನ್ನು ವಿಸ್ತರಿಸುವುದು.**
- ✓ **1793, 1813, 1833, 1853** ರಲ್ಲಿ ನಾಲ್ಕು ಚಾರ್ಟರ್ ಕಾಯ್ದೆಗಳನ್ನು ಜಾರಿಗೆ ತಂದರು.
- ✓ ಪ್ರತಿ 20 ವರ್ಷಕ್ಕೊಮ್ಮೆ ಕಂಪನಿಯ ಪರವಾನಗಿಯನ್ನು ನವೀಕರಣ ಮಾಡುವಾಗ ಅನಿಸರಿಸುವ ನೀತಿಗಳನ್ನು ಇದರಲ್ಲಿ ಸೇರಿಸಲಾಯಿತು.

**1813ರ ಚಾರ್ಟರ್ ಕಾಯ್ದೆ:–**

- ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರಲು ಅಧಿಕಾರ ನೀಡಿತು.
- **ಮುಕ್ತ ವ್ಯಾಪಾರದ ಹೊಸ ಶಕೆ** ಆರಂಭವಾಯಿತು.
- **ಅನುಮತಿ ಮತ್ತು ಪರವಾನಗಿಯ ಹೊಸ ಕಾಲ** ಆರಂಭವಾಯಿತು.

RAMALINGAPPA L

- **ಗವರ್ನರ್ ಜನರಲ್ & ಸೇನೆಯ ಮಹಾಮುಖ್ಯಸ್ಥರನ್ನು** ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರ ಹೊಂದಿತ್ತು.
- ಚರ್ಚುಗಳಿಗೆ ಭಾರತಕ್ಕೆ ಪ್ರವೇಶಿಸಲು ಅಧಿಕೃತ ಅವಕಾಶವನ್ನು ನೀಡಲಾಯಿತು.
- ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ನೈತಿಕ & ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಂಡವು.

**1833ರ ಚಾರ್ಟರ್ ಕಾಯ್ದೆ:–**

- ಬಂಗಾಳದ ಗವರ್ನರ್ ಜನರಲ್‌ನನ್ನು **ಭಾರತದ ಗವರ್ನರ್ ಜನರಲ್** ಆಗಿ ನಾಮಕರಣ ಮಾಡಲಾಯಿತು.
- ಭಾರತದ ಎಲ್ಲಾ ವ್ಯಾಪಾರಿ ಸರಕುಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
- ದೇಶಿ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲಾ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತ್ತು.
- ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಯಲ್ಲಿ ಉಳಿದ ಸದಸ್ಯರ ಜೊತೆ ಗವರ್ನರ್ ಜನರಲ್‌ನಿಗೆ ಯಾವುದಾದರೂ ವಿಷಯದ ಮೇಲೆ ಒಮ್ಮತ ಮೂಡದಿದ್ದಾಗ ಅವನು ಬಹುಮತದ ನಿರ್ಣಯವನ್ನು ತಿರಸ್ಕರಿಸಲು ಇದ್ದ ಕಾರಣಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕಾಯಿತು.
- ಧರ್ಮ, ಬಣ್ಣ & ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ
- ಗವರ್ನರ್ ಜನರಲ್‌ನ ಕಾರ್ಯಾಂಗದ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಲಾಯಿತು.
- ಎಲ್ಲಾ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು.

**ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಯಲ್ಲಿ ಜಾರಿಗೊಂಡ ಕಾಯ್ದೆಗಳು:**

- ✓ ಕಂಪನಿಯ ದುರಾಡಳಿತ & ಭಾರತ ವಿರೋಧಿ ಕಾಯ್ದೆಗಳಿಂದ 1857ರಲ್ಲಿ ಸಿಪಾಯಿ ದಂಗೆ ಉಂಟಾಯಿತು.
- ✓ ಕಂಪನಿಯ ಆಡಳಿತವು ಬ್ರಿಟನ್ ರಾಣಿಗೆ ಹಸ್ತಾಂತರವಾಯಿತು.
- ✓ **1858, 1861, 1892, 1909, 1919, 1935ರ** ಕಾಯ್ದೆಗಳು ಜಾರಿ

**ಭಾರತ ಸರ್ಕಾರದ ಕಾಯ್ದೆ – 1858**

- ❖ ಇದನ್ನು 1857ರ ಸೈನಿಕ & ನಾಗರಿಕ ಕ್ರಾಂತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು
- ❖ ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡಿಸುವಂತಾಯಿತು.
- ❖ **ನವೆಂಬರ್ 1 1858** ರಂದು ಬ್ರಿಟಿಷ್ **ರಾಣಿ ವಿಕ್ಟೋರಿಯಾ** ಘೋಷಣೆ ಹೊರಡಿಸಿ ಭಾರತವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಘೋಷಿಸಿದರು.

**ಪ್ರಮುಖ ಅಂಶಗಳು:–**

- ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದಾಯಿತು.
- ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.
- ಗವರ್ನರ್ ಹುದ್ದೆಯನ್ನು ಬದಲಿಸಿ **ವೈಸ್‌ರಾಯ್** ಎಂದು ಪದನಾಮ ಬಳಕೆ
- ಮೊದಲ ವೈಸ್‌ರಾಯ್ **ಲಾರ್ಡ್ ಕ್ಯಾನಿಂಗ್**
- **ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ** ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು.
- ಇವರು **ಬ್ರಿಟಿಷ್ ಮಂತ್ರಿಮಂಡಲದ** ಸದಸ್ಯರಾಗಿದ್ದರು.
- ಇವರ ಸಹಾಯಕ್ಕೆ 15 ಸದಸ್ಯರನ್ನು ಒಳಗೊಂಡ ಭಾರತ ಮಂಡಲಿ ನೇಮಕ

**1861ರ ಭಾರತೀಯ ಪರಿಷತ್ ಕಾಯ್ದೆ**

- ಭಾರತೀಯರಿಗೆ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಾನವನ್ನು ಕಲ್ಪಿಸಲಾಯಿತು.
- ಭಾರತೀಯರು ಬ್ರಿಟಿಷರ ಬಗ್ಗೆ ತಿಳಿದಿರುವ ಅಭಿಪ್ರಾಯವನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ ನೀಡಲಾಯಿತು.
- ಇದನ್ನು **'ಪಾಲಿಸಿ ಆಫ್ ಅಸೋಸಿಶನ್'** ಎನ್ನುವರು.

**ಅಂಶಗಳು:–**

- ❖ ವೈಸ್‌ರಾಯ್ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ
- ❖ ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರವನ್ನು ಗವರ್ನರ್ ಜನರಲ್‌ಗೆ ನೀಡಲಾಯಿತು.

**1892ರ ಭಾರತೀಯ ಪರಿಷತ್ ಕಾಯ್ದೆ:–**

- ✓ 1892ರಲ್ಲಿ ಕಾಯ್ದೆ ಭಾರತೀಯರಿಗಿದ್ದ ಶಾಸನ ಸಭೆಗಳ ಪ್ರಾತಿನಿಧ್ಯವನ್ನು ವಿಸ್ತರಿಸಲಾಯಿತು.

**ಪ್ರಮುಖ ಅಂಶಗಳು:–**

- ಕೇಂದ್ರ & ಪ್ರಾಂತೀಯ ಶಾಸನ ಸಭೆಗಳಲ್ಲಿ ಹೆಚ್ಚುವರಿ ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಲಾಯಿತು.



RAMALINGAPPA L

- ಶಾಸನ ಸಭೆಯ ಅಧಿಕಾರವನ್ನು ಹೆಚ್ಚಿಸಿ ಅವುಗಳಲ್ಲಿ ಬಜಟ್ ಬಗ್ಗೆ ಚರ್ಚಿಸುವ ಅಧಿಕಾರ ನೀಡಲಾಯಿತು.
- ಆರು ದಿನಗಳ ಮುಂಚೆ ಮುನ್ಸೂಚನೆ ನೀಡಿ ಸಾರ್ವಜನಿಕ ಆಸಕ್ತಿಯ ವಿಷಯಗಳ ಬಗ್ಗೆ ಸರ್ಕಾರವನ್ನು ಪ್ರಶ್ನಿಸುವ ಹಕ್ಕನ್ನು ನೀಡಲಾಯಿತು.

**1909ರ ಭಾರತೀಯ ಪರಿಷತ್ ಕಾಯ್ದೆ:-**

- ಇದನ್ನು **ಮಿಂಟೋ-ಮಾರ್ಲೆ ಸುಧಾರಣಾ ಕಾಯ್ದೆ** ಎನ್ನುವರು
- **ಭಾರತದ ವೈಸ್‌ರಾಯ್ ಲಾರ್ಡ್ ಮಿಂಟೋ ಮತ್ತು ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಲಾರ್ಡ್ ಮಾರ್ಲೆ**
- ಬ್ರಿಟಿಷರು ಭಾರತೀಯರನ್ನು ಒಡೆದು ಆಳುವ ಈ ಕಾಯ್ದೆಯನ್ನು ಬಳಸಿಕೊಂಡರು.

**ಪ್ರಮುಖ ಅಂಶಗಳು:-**

- ✓ ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.
- ✓ ಪ್ರಾಂತ್ಯಗಳಲ್ಲಿ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
- ✓ ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ
- ✓ ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆ ಜಾರಿ.

**1919ರ ಭಾರತೀಯ ಪರಿಷತ್ ಕಾಯ್ದೆ:-**

- ಇದನ್ನು **ಮಾಂಟೆಗೋ-ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆ** ಎನ್ನುವರು
- ಮೊದಲನೆ ಮಹಾಯುದ್ಧದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರ ಭಾಗವಹಿಸಲು ಪ್ರೇರೇಪಿಸುವ ಹಿನ್ನೆಲೆ
- ಗುರಿ:- **ಭಾರತೀಯರಿಗೆ ಹಂತಹಂತವಾಗಿ ಜವಾಬ್ದಾರಿ ಸರ್ಕಾರವನ್ನು ನೀಡುವುದೇ ಬ್ರಿಟಿಷ್ ಸರ್ಕಾರದ ಗುರಿ ಎಂದು ಘೋಷಣೆ**

**ಪ್ರಮುಖ ಅಂಶಗಳು:-**

- ಕೇಂದ್ರದಲ್ಲಿ **ದ್ವಿಸದನ ಶಾಸಕಾಂಗದ** ರಚನೆಗೆ ಅವಕಾಶ ನೀಡಲಾಯಿತು.
- ಪ್ರಾಂತ್ಯಗಳಲ್ಲಿ ದ್ವಿಸರ್ಕಾರ ಪದ್ಧತಿಗೆ ಅವಕಾಶ ನೀಡಲಾಯಿತು.
- ಭಾರತಕ್ಕೆ ಒಬ್ಬ **ಹೈ ಕಮಿಷನರ್**‌ರನ್ನು ನೇಮಕ ಮಾಡಲಾಯಿತು.
- ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
- ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
- ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಇಂಡಿಯನ್ನರು & ಯುರೋಪಿಯನ್ನರಿಗೆ ವಿಸ್ತರಿಸಿತು.

**1935ರ ಭಾರತ ಸರ್ಕಾರದ ಕಾಯ್ದೆ:-**

- ಭಾರತದ ಸಂವಿಧಾನದ ರಚನೆಗೆ ಬುನಾದಿ
- ಈ ಕಾಯ್ದೆ ರೂಪಗೊಳ್ಳಲು **1928ರ ಮೋತಿಲಾಲ್ ನೆಹರು** ವರದಿ ಮುಖ್ಯ.
- ಭಾರತ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನು ಆಧರಿಸಿವೆ.
- ಭಾರತಕ್ಕೆ ಸಂಪೂರ್ಣ ಜವಾಬ್ದಾರಿ ಸರ್ಕಾರ ರಚಿಸಲು ಅವಕಾಶ
- ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳು & ದೇಶೀಯ ಸಂಸ್ಥಾನಗಳಿಗೂ ಅನ್ವಯವಾಗವ ಅಂಶಗಳನ್ನು ಹೊಂದಿತ್ತು.

**ಪ್ರಮುಖ ಅಂಶಗಳು:-**

- ✓ ಇದು **ಅಖಿಲ ಭಾರತ ಒಕ್ಕೂಟ** ರಚಿಸಲು ಅವಕಾಶ
- ✓ ಕೇಂದ್ರದಲ್ಲಿ **ದ್ವಿ ಸರ್ಕಾರ**ವನ್ನು ಸ್ಥಾಪಿಸಲಾಯಿತು.
- ✓ **ಭಾರತೀಯ ರಿಸರ್ವ್ ಬ್ಯಾಂಕ್** ಸ್ಥಾಪನೆಗೆ ಅವಕಾಶ
- ✓ ಪ್ರಾಂತ್ಯಗಳಲ್ಲಿನ **ದ್ವಿಸರ್ಕಾರ ಪದ್ಧತಿ ರದ್ದು**
- ✓ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
- ✓ ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ

**ಅಧ್ಯಾಯ-4**

## ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರತಿರೋಧಗಳು

- ಕರ್ನಾಟಕವು ಏಕೀಕರಣದ ಪೂರ್ವದಲ್ಲಿ ಅಧಿಕಾರಿಶಾಹಿಗಳಲ್ಲಿ ಹಂಚಿಕೆಯಾಗಿತ್ತು.
- 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯ ಸಾಧಿಸುವ ಪ್ರಯತ್ನ
- ವ್ಯಾಪಾರ & ಕೃಷಿ ಕ್ಷೇತ್ರಗಳಲ್ಲಿ ಜನರನ್ನು ಶೋಷಿಸತೊಡಗಿದರು.
- ಇದು ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು.
- ದೇಶೀಯ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸಿದರು.
- ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದರು.

RAMALINGAPPA L

- ಜಮೀನ್ದಾರರು ಸಂಸ್ಥಾನಗಳ ರಾಜರು ಐಕ್ಯತೆಯಿಲ್ಲದೆ ಒಬ್ಬೊಬ್ಬರಾಗಿ ಬಂಡೇಳಲು ಪ್ರಯತ್ನಿಸಿದರು.
- ಆಗ ಮೈಸೂರು ರಾಜ್ಯದ ಸಂಕ್ರಮಣವನ್ನು ಬಳಸಿಕೊಂಡು **ಹೈದರ್** & **ಟಿಪ್ಪು** ಬ್ರಿಟಿಷರ ವಿರುದ್ಧ ದೊಡ್ಡ ಪ್ರತಿರೋಧವನ್ನು ಒಡ್ಡಿದರು.
- ಭಾರತದ ಚರಿತ್ರೆಯಲ್ಲಿ **18ನೇ ಶತಮಾನವನ್ನು ರಾಜಕೀಯ ಸಮಸ್ಯೆಗಳ ಶತಮಾನ** ಎಂದು ಗುರುತಿಸಲಾಗಿದೆ.
- 1707 ರಲ್ಲಿ ಮೊಘಲ್ ಚಕ್ರವರ್ತಿ **ಔರಂಗಜೇಬ್**ನ ಮರಣ
- ಇವನ ಮರಣ ಮೊಗಲರ ರಾಜಕೀಯ ಸಾರ್ವಭೌಮತ್ವವನ್ನು ಕುಗ್ಗಿಸಿತು.
- ದಕ್ಷಿಣ ಭಾರತದಲ್ಲಿ ಮೊಗಲರ ರಾಜಕೀಯ ಹತೋಟಿ ತಪ್ಪಿತು.
- ಕರ್ನಾಟಿಕ್ ಪ್ರದೇಶಗಳಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು ಆರಂಭ
- 1704 ರಲ್ಲಿ **ಚಿಕ್ಕದೇವರಾಜ ಒಡೆಯರ್ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ** ಮೇಲೆ ದುಷ್ಪರಿಣಾಮ ಬೀರಿತು.
- ಅಲ್ಲಿ ಉತ್ತರಾಧಿಕಾರದ ಸಮಸ್ಯೆ ಕಂಡುಬಂದು ಆಡಳಿತವೂ ಕುಸಿಯಿತು.
- ಈ ಬೆಳವಣಿಗೆಗಳು ಆ ಕಾಲದ ಮೈಸೂರಿನ ರಾಜಕೀಯವನ್ನು ಮುಸುಕುಗೊಳಿಸಿತು.
- ಇದರ ಪರಿಣಾಮವಾಗಿ **ಮೈಸೂರು, ಕರ್ನಾಟಕ ರಾಜ್ಯಗಳ ಭೂಪ್ರದೇಶಗಳಲ್ಲಿ ಹೈದರ್** & **ಟಿಪ್ಪು** ಪ್ರಾಮುಖ್ಯತೆ ಗಳಿಸಿದರು.

### ಹೈದರ್ ಆಲಿ ಹೇಗೆ ಅಧಿಕಾರಕ್ಕೆ ಬಂದನು?

- ಒಬ್ಬ ಸಾಮಾನ್ಯ ಸೈನಿಕನಾಗಿ ಮೈಸೂರು ರಾಜ್ಯದ ಸೇವೆಗೆ ಸೇರಿದ.
- ಇಲ್ಲಿ ಇವನು ತನ್ನ ಚಾಣಾಕ್ಷತನದಿಂದ ಹೆಸರಾದನು.
- ಇವನು **ದೇವನಹಳ್ಳಿ ಮುತ್ತಿಗೆ** & **ಆರ್ಕಾಟ್‌ನ ನಿಜಾಮನ ಸೈನಿಕ ಕಾರ್ಯಾರಚಣೆ**ಯಲ್ಲಿ ಪ್ರವರ್ಧಮಾನಕ್ಕೆ ಬಂದನು.
- ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು.
- ಶಸ್ತ್ರಗಳ ಉಪಯೋಗದಲ್ಲಿ ಖ್ಯಾತಿ ಗಳಿಸಿ **'ನವಾಬ್ ಹೈದರಾಲಿಖಾನ್'** ಎಂದು ಹೆಸರಾದನು.
- ಚುರುಕಿನ ಸೈನಿಕ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು.
- ಮೈಸೂರು ಅರಸ **2ನೇ ಕೃಷ್ಣರಾಜ ಒಡೆಯರ**ನ್ನು ಮೂಲೆಗುಂಪಾಗಿಸಿ ಅಧಿಕಾರಕ್ಕೆ ಬಂದನು.
- **ಮರಾಠರು, ಹೈದರಾಬಾದಿನ ನಿಜಾಮ** & **ಆರ್ಕಾಟಿನ ನವಾಬರು** ಹೋರಾದಲ್ಲಿ ನಿರತರಾಗಿದ್ದರು
- ಇದನ್ನು ರಾಜಕೀಯ ಪ್ರಾಬಲ್ಯಕ್ಕಾಗಿ ಬ್ರಿಟಿಷರು & ಫ್ರೆಂಚರು ಬಳಸಿಕೊಳ್ಳತೊಡಗಿದರು.

### ಮೊದಲನೆ ಆಂಗ್ಲೋ-ಮೈಸೂರು ಯುದ್ಧ (1767–69)

- ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಬಲ್ಯನ್ನು ಬ್ರಿಟಿಷರು, ಹೈದರಾಬಾದಿನ ನಿಜಾಮ, ಮರಾಠರಲ್ಲಿ ಅಸಹನೆ ಮೂಡಿಸಿತು.
- ಬ್ರಿಟಿಷರು ತನ್ನ ಸಾಮ್ರಾಜ್ಯ ವಿಸ್ತರಣೆಗೆ ಮುಳ್ಳಾಗಿದ್ದ ಹೈದರ್‌ನನ್ನು ನಾಶಮಾಡಲು ತಂತ್ರ ರೂಪಿಸಿದರು.
- ಹೈದರ್ ಮರಾಠರು & ನಿಜಾಮನನ್ನು ತನ್ನೆಡೆಗೆ ಸೆಳೆಯಲು ವಿಫಲನಾದ.
- **ಬ್ರಿಟಿಷರು ಮರಾಠರು ಮತ್ತು ನಿಜಾಮ**ನೊಂದಿಗೆ ಒಪ್ಪಂದ ಮಾಡಿಕೊಂಡು **ತ್ರಿಪಕ್ಷ ಒಕ್ಕೂಟ** ರಚನೆ
- ಹೈದರ್ ಚಾಣಕ್ಷ ರಾಜಕೀಯ ತಂತ್ರಗಳಿಂದ ಮಿತ್ರಕೂಟವನ್ನು ಒಡೆದನು.
- 1767ರಲ್ಲಿ ಹೈದರಾಲಿ ಮತ್ತು ನಿಜಾಮ, ಬ್ರಿಟಿಷರ ಆಶ್ರಿತ ರಾಜ್ಯ ಆರ್ಕಾಟಿಗೆ ಮುತ್ತಿಗೆ ಹಾಕಿದರು.
- **ತಿರುಚನಾಪಳ್ಳಿ, ತಿರುವಣ್ಣಾಮಲೈ, ಅಂಬೂರು** ಕದನಗಳು ನಡೆದವು
- ಹೈದರಾಲಿಯು ಬ್ರಿಟಿಷರಿಗೆ ನಡುಕ ಹುಟ್ಟಿಸಿದನು.
- ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ **'ಮದ್ರಾಸ್ ಒಪ್ಪಂದ'** ಕ್ಕೆ 1769ರಲ್ಲಿ ಸಹಿ ಹಾಕಿದರು.

### 2ನೇ ಆಂಗ್ಲೋ-ಮೈಸೂರು ಯುದ್ಧ (1780–84)

- ✓ ಕಾರಣ:– **ತಿರುವಂಕೂರು** & **ತಂಜಾವೂರು ರಾಜ್ಯಗಳ ರಾಜಕೀಯ ಸನ್ನಿವೇಶಗಳು.**
- ✓ **ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತು**ಗಳನ್ನು ಉಲ್ಲಂಘಿಸಿದರು.
- ✓ ಮರಾಠರು ಶ್ರೀರಂಗಪಟ್ಟಣದ ಕಡೆ ನುಗ್ಗಿದಾಗ ಹೈದರ್ ಬ್ರಿಟಿಷರ ಸಹಾಯ ಅಪೇಕ್ಷಿಸಿದನು.
- ✓ ಆದರೆ ಬ್ರಿಟಿಷರು ಇದನ್ನು ತಿರಸ್ಕರಿಸಿದರು.
- ✓ ಮಾಹೆಯು ಫ್ರೆಂಚರ ವಸಾಹತುವಾಗಿದ್ದು ಹೈದರ್‌ನ ನಿಯಂತ್ರಣದಲ್ಲಿತ್ತು.
- ✓ **ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡರು ಇದು ಯುದ್ಧಕ್ಕೆ ಕಾರಣವಾಯಿತು.**

**ಯುದ್ಧದ ಘಟನೆಗಳು:–**

- ಹೈದರ್ ಕರ್ನಾಟಿಕ್ ಪ್ರಾಂತ್ಯದ ಕೋಟೆಗಳು & ಕಾಂಚೀಪುರ ವಶ
- ಹೈದರ್ ಆರ್ಕಾಟಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು.

RAMALINGAPPA L

- **ಸರ್ ಐರ್‌ಕೂಟ್‌ನ** ನೇತೃತ್ವದಲ್ಲಿ ಬ್ರಿಟಿಷ್ ಸೇನೆ ಹೈದರ್ ಸೈನ್ಯವನ್ನು ಹಿಮ್ಮೆಟಿಸಿತು.
- ಹೈದರ್‌ನಿಗೆ ಫ್ರೆಂಚರ ಸಹಾಯ ದೊರೆಯಲಿಲ್ಲ.
- ಹೈದರ್ ಬ್ರಿಟಿಷ್ ಪ್ರದೇಶಗಳಿಗೆ ಮುತ್ತಿಗೆ ಹಾಕಿ ಅಪಾರ ಸಂಪತ್ತು–ಶಾಸ್ತ್ರಾಸ್ತ್ರ ಲೂಟಿ.
- 1781ರ **ಪೋರ್ಟೋನೋವೆ ಕದನದಲ್ಲಿ** ಹೈದರ್ ಸೋತನು.
- **ಪುಲಿಕಾಟ್ & ಸೋಲಿಗಾನೂರು ಕದನದಲ್ಲಿ** ಆರ್ಥಿಕ ಹಾನಿ ಅನುಭವಿಸಿತು.
- ಬ್ರಿಟಿಷರು ಮರಾಠರು & ನಿಜಾಮನನ್ನು ತನ್ನ ಕಡೆ ಸೆಳೆದರು
- 1782 ರಲ್ಲಿ **ಹೈದರ್ ಅನಾರೋಗ್ಯದಿಂದ ಮರಣ** ಹೊಂದಿದನು.
- ಮಗ ಟಿಪ್ಪು ಯುದ್ಧ ಮುಂದುವರಿಸಿ **ಮಂಗಳೂರಿನಲ್ಲಿ** ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- 1784ರಲ್ಲಿ **'ಮಂಗಳೂರು ಒಪ್ಪಂದ'** ದೊಂದಿಗೆ ಯುದ್ಧ ಕೊನೆಗೊಂಡಿತು.

**ಟಿಪ್ಪು ಸುಲ್ತಾನ:–**

- ಟಿಪ್ಪು ಬ್ರಿಟಷರನ್ನು ತನ್ನ ಶತ್ರುಗಳೆಂದು ಭಾವಿಸಿದನು.
- ಕುಟೀಲ ನೀತಿಯಿಂದ ಭಾರತವನ್ನು ಕಬಳಿಸುತ್ತಿದ್ದ ಬ್ರಿಟಿಷರನ್ನು ತನ್ನ ಪರಮ ವೈರಿಗಳೆಂದು ಭಾವಿಸಿದನು.
- ಬ್ರಿಟಿಷರನ್ನು ಭಾರತದಿಂದ ಓಡಿಸುವುದು ಆದ್ಯ ಕರ್ತವ್ಯ ಎಂದು ಭಾವಿಸಿದನು.
- ಬ್ರಿಟಿಷರಿಗೆ ವ್ಯಾಪಾರದಲ್ಲಿ ನಷ್ಟ ಉಂಟುಮಾಡಲು ಪ್ರಯತ್ನಿಸಿದನು.
- ಬ್ರಿಟಿಷರ ವಿರೋಧಿಗಳನ್ನು ಸಂಘಟಿಸುವ & ನೆರವು ಅಪೇಕ್ಷಿಸುವ ಪ್ರಯತ್ನ.
- ಬ್ರಿಟಿಷರ ವ್ಯಾಪಾರ ಏಕಸ್ವಾಮ್ಯವನ್ನು ಮುರಿಯಲು ಪ್ರಯತ್ನಿಸಿದನು.
- ಟಿಪ್ಪು ಬ್ರಿಟಿಷರ ಬದ್ಧ ವೈರಿಯಾದನು.

**3ನೇ ಆಂಗ್ಲೋ–ಮೈಸೂರು ಯುದ್ಧ (1792)**

ಯುದ್ಧಕ್ಕೆ ನೇರ ಕಾರಣ:– **ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ.**

- ✓ ತಿರುವಾಂಕೂರಿನ ರಾಜ ನೆರೆಯ ಕೊಚ್ಚಿ ಸಂಸ್ಥಾನದಲ್ಲಿ ಬ್ರಿಟಿಷರ ಬೆಂಬಲದಿಂದ ಕೋಟೆ ನಿರ್ಮಿಸಿದನು.
- ✓ ಡಚ್ಚರಿಂದ ಆಯಕೋಟೆ & ಕಾಂಗನೂರು ಕೋಟೆಗಳನ್ನು ಪಡೆದುಕೊಂಡಿದ್ದನು ಇವು ಮಂಗಳೂರು ಒಪ್ಪಂದದ ಉಲ್ಲಂಘನೆಯಾಗಿತ್ತು.

**ಯುದ್ಧದ ಘಟನೆಗಳು:–**

- ಬ್ರಿಟಿಷರು **ಮೆಡೋಸ್‌ನ** ನಾಯಕತ್ವದಲ್ಲಿ ಕಾರವಾರ, ಕೋಯಮುತ್ತೂರು, ದಿಂಡಿಗಲ್ ವಶ
- ಟಿಪ್ಪು ಬಾರಾಮಹಲ್ ಪ್ರಾಂತ್ಯವನ್ನು ಮುತ್ತಿ ಸತ್ಯಮಂಗಲ ವಶ
- ತಿರುಚನಾಪಳ್ಳಿಯ ಮುತ್ತಿಗೆ ವಿಫಲ
- **ಲಾರ್ಡ್ ಕಾರ್ನ್‌ವಾಲೀಸನು** ನಾಯಕತ್ವ ವಹಿಸಿಕೊಂಡನು.
- ಇವನು **ಕೋಲಾರ & ಹೊಸಕೋಟೆಗ**ಳನ್ನು ಪಡೆದು ಬೆಂಗಳೂರಿನತ್ತ ಮುನ್ನುಗಿದನು.
- ಬೆಂಗಳೂರು ಪಡೆದು ಕೋಟೆ ನಾಶ ಮಾಡಿದನು.
- ನಿಜಾಮ & ಮರಾಠರ ಸಹಾಯವನ್ನು ಬ್ರಿಟಿಷರು ಬೇಡಿದರು.
- ನಿಜಾಮ & ಮರಾಠರು ಬ್ರಿಟಿಷರಿಗೆ ಸಹಾಯಕ್ಕೆ ದಾವಿಸಿದರು
- ಸಂಘಟಿತ ಸೇನೆ ಶ್ರೀರಂಗಪಟ್ಟಣ ಕೋಟೆಯನ್ನು ಹಾಳುಗೆಡವಿದರು
- ಟಿಪ್ಪು ಅನಿವಾರ್ಯವಾಗಿ **'ಶ್ರೀರಂಗಪಟ್ಟಣ ಒಪ್ಪಂದ'** ಕ್ಕೆ ಸಹಿ ಹಾಕಿದನು.

**ಪರಿಣಾಮಗಳು:–**

- ❖ ಅಸಮಾನ ಷರತ್ತುಗಳಿದ್ದ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಟಿಪ್ಪುವಿನಿಂದ ಸಹಿ
- ❖ ಟಿಪ್ಪು ಅರ್ಧ ರಾಜ್ಯವನ್ನು ಬಿಟ್ಟುಕೊಟ್ಟನು.
- ❖ 3 ಕೋಟಿ ಯುದ್ಧ ನಷ್ಟ ಭರ್ತಿ ನೀಡಿದನು.
- ❖ ಅದುವರೆಗೂ ಟಿಪ್ಪು ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಟ್ಟನು.
- ❖ ಯುದ್ಧ ಖೈದಿಗಳ ಬಿಡುಗಡೆ.
- ❖ ಬ್ರಿಟಿಷರ ಸಂಘಟಿತ ಸೇನೆ ಶ್ರೀರಂಗಪಟ್ಟಣದಿಂದ ಹಿಂದೆ ಸರಿಯಿತು.

**4ನೇ ಆಂಗ್ಲೋ–ಮೈಸೂರು ಯುದ್ಧ**

- ಟಿಪ್ಪು 3ನೇ ಆಂಗ್ಲೋ–ಮೈಸೂರು ಯುದ್ಧದ ಸೋಲನ್ನು ಸವಾಲಾಗಿ ಸ್ವೀಕರಿಸಿದನು.
- ನ್ಯಾಯಾಯುತವಾಗಿ ಭೂಪ್ರದೇಶ & ಹಣವನ್ನು ನೀಡಿ ತನ್ನ ಇಬ್ಬರು ಮಕ್ಕಳನ್ನು ಹಿಂದಕ್ಕೆ ಕರೆಸಿಕೊಂಡನು.
- ಬ್ರಿಟಿಷರ ಅಧೀನದಲ್ಲಿದ್ದ ಮಲೆಯಾಳಂ ಭೂಪ್ರದೇಶಗಳು ತನಗೆ ಸೇರಬೇಕೆಂದು ಟಿಪ್ಪು ವಾದಿಸಿದನು. ಆದರೆ ಬ್ರಿಟಿಷರು ಅದನ್ನು ಪುಷ್ಟೀಕರಿಸಲಿಲ್ಲ.
- 1798ರಲ್ಲಿ **ಲಾರ್ಡ್ ವೆಲ್ಲೆಸ್ಲಿ ಗವರ್ನರ್** ಆಗಿ ನೇಮಕಗೊಂಡು ಟಿಪ್ಪುವಿನ ವಿರುದ್ಧ ಚಟುವಟಿಕೆಗಳು ಚುರುಕುಗೊಂಡವು.



RAMALINGAPPAL

- ಟಿಪ್ಪುವು ದೇಶಿಯ ರಾಜ್ಯರು & ಫ್ರೆಂಚರೊಂದಿಗಿನ ಸಂಬಂಧಗಳು ವೆಲ್ಲೆಸ್ಲಿಯು ಟಿಪ್ಪುವಿನ ವಿಚಾರದಲ್ಲಿ ದ್ವೇಷ ಬೆಳೆಯಲು ಕಾರಣ
- ಟಿಪ್ಪು ಫ್ರೆಂಚರ ಸಹಕಾರ ಪಡೆಯಲು ರಾಯಭಾರಿಯನ್ನು ಕಳುಹಿಸಿದನು. ಇದು ಬ್ರಿಟಿಷರಿಗೆ ಅಸಮಾಧಾನ ತಂದಿತು.
- **ಸಹಾಯಕ ಸೈನ್ಯ ಪದ್ಧತಿ** ಒಪ್ಪಿಕೊಳ್ಳಲು ಟಿಪ್ಪುಗೆ ಸೂಚಿಸಿದರು.
- ಆದರೆ ಟಿಪ್ಪು ಇದನ್ನು ನಿರಾಕರಿಸಿದನು.
- 1790ರಲ್ಲಿ ಯುದ್ಧ ಆರಂಭವಾಯಿತು.
- ಅಭೇದ್ಯವಾದ ಕೋಟೆಯನ್ನು ಬ್ರಿಟಿಷರು ಭೇದಿಸಿದರು.
- 1799ರಲ್ಲಿ ಟಿಪ್ಪು ಮರಣ ಹೊಂದಿದನು.
- ಇದು ಬ್ರಿಟಿಷರಿಗೆ ಇಡೀ ಭಾರತವನ್ನೇ ತಮ್ಮ ಕೈವಶವಾದ ಸಂತೋಷವನ್ನು ತಂದಿತು.
- ಟಿಪ್ಪುವಿನ ಭೌಗೋಳಿಕ ಪ್ರದೇಶವನ್ನು ಮರಾಠರು, ನಿಜಾಮನೊಂದಿಗೆ ಹಂಚಿಕೊಂಡರು.
- ಸಣ್ಣ ಪ್ರಾಂತ್ಯವನ್ನು ಮೈಸೂರಿನ ಒಡೆಯರ ರಾಜವಂಶದ ಪ್ರತಿನಿಧಿಗೆ ವರ್ಗಾಯಿಸಲಾಯಿತು.

**10ನೇ ಚಾಮರಾಜೇಂದ್ರ ಒಡೆಯರ್ (1881–1894):–**

- ಬ್ರಿಟಿಷ್ ಸರ್ಕಾರ 1881ರಲ್ಲಿ ಮೈಸೂರು ಸಿಂಹಾಸನವನ್ನು 10ನೇ ಚಾಮರಾಜೇಂದ್ರ ಒಡೆಯರ್‌ಗೆ ನೀಡಿತು.
- ಕಮೀಷನರ್ ಆಡಳಿತ ಕೊನೆಗೊಂಡು, ರೆಸಿಡೆಂಟ್ ಎಂಬ ಪ್ರತಿನಿಧಿ ನೇಮಕ.
- ದಿವಾನರಾಗಿ ಸಿ. **ರಂಗಚಾರ್ಲು** ನೇಮಕ
- ಇವರು ಒಳ್ಳೆಯ ಆಡಳಿತಗಾರ & ಉದಾರ ಮನೋಭಾವವುಳ್ಳವರು
- **ಮೈಸೂರು ಪ್ರಜಾಪ್ರತಿನಿಧಿ ಸಭೆ** ಆರಂಭ.
- 1881ರಲ್ಲಿ **ಕೋಲಾರದ ಚಿನ್ನದ ಗಣಿ** ಆರಂಭ
- 1882ರಲ್ಲಿ **ಬೆಂಗಳೂರು–ಮೈಸೂರು ರೈಲುಮಾರ್ಗ** ಆರಂಭ

**ದಿವಾನ ಕೆ.ಶೇಷಾದ್ರಿ ಅಯ್ಯರ್:–**

- ✓ ಇವರಿಗೆ ದೇಶದ ಸಮಸ್ಯೆಗಳ ಬಗ್ಗೆ ಅರಿವಿತ್ತು.
- ✓ **ದೇಶದ ಹಣಕಾಸಿನ ಸ್ಥಿತಿಯನ್ನು** ಉತ್ತಮಗೊಳಿಸಿದ.
- ✓ **ಹೊಸ ರೈಲುಮಾರ್ಗಗಳ ರಚನೆಗೆ** ಕಾರಣರಾದರು.
- ✓ ಆಡಳಿತ ಸೇವೆಗೆ ಪ್ರತಿಭಾವಂತ ಯುವಕರನ್ನು ಆಯ್ಕೆ ಮಾಡಲು **ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ** ಆರಂಭ.
- ✓ **ನೀರಾವರಿ ವ್ಯವಸಾಯಕ್ಕೆ** ಹೆಚ್ಚಿನ ಗಮನ ನೀಡಿದರು.
- ✓ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ **ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆ** ಆರಂಭ
- ✓ ಚಾಮರಾಜೇಂದ್ರ ಒಡೆಯರ್ ಮೈಸೂರಿಗೆ ಬಂದಿದ್ದ **ವಿವೇಕಾನಂದರಿಗೆ** ಆಶ್ರಯ ನೀಡಿದ್ದರು.
- ✓ **ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕ ಹೋಗಲು ಆರ್ಥಿಕ ಸಹಾಯ**
- ✓ ಸಾಹಿತ್ಯ ಪ್ರೇಮಿಯಾಗಿ ಅನೇಕ ವಿದ್ವಾಂಸರಿಗೆ ಆಶ್ರಯ.
- ✓ ಪ್ರಮುಖರಾದ **ಬಸವಪ್ಪಶಾಸ್ತ್ರಿಗಳು.** ಇವರು **'ಅಭಿನವ ಕಾಳಿದಾಸ'** ಎನಿಸಿಕೊಂಡರು.
- ✓ ಇವರು **ಮೈಸೂರು ರಾಜ್ಯಗೀತೆ 'ಕಾಯೋ ಶ್ರೀಗೌರಿ'** ಯನ್ನು ರಚಿಸಿದರು.

**ನಾಲ್ವಡಿ ಕೃಷ್ಣರಾಜ ಒಡೆಯರ್ (1894–1940):–**

- ಇವರ ರಾಜ ಪ್ರತಿನಿಧಿಯಾಗಿ ತಾಯಿ **ಮಹಾರಾಣಿ ವಾಣಿವಿಲಾಸ ಸನ್ನಿಧಾನ ಕೆಂಪು ನಂಜಮ್ಮಣಿ** ಆಡಳಿತ ನಡೆಸಿದರು.
- ಇವರಿಗೆ ಆಡಳಿತದಲ್ಲಿ **ದಿವಾನರು** & **ಸಲಹಾ ಸಮಿತಿ ಸದಸ್ಯರು** ನೆರವು ನೀಡಿದರು.

**ಇವರ ಅಭಿವೃದ್ಧಿ ಕಾರ್ಯಗಳು:–**

- ❖ ಚಿನ್ನದ ಗಣಿ ಸುಧಾರಣೆ
- ❖ ಕಾಲೇಜು ಸ್ಥಾಪನೆ
- ❖ ಮಾರಿಕಣಿವೆ ಜಲಾಶಯ ನಿರ್ಮಾಣ
- ❖ ರೈಲು ಮಾರ್ಗ, ಆಸ್ಪತ್ರೆ ಸ್ಥಾಪನೆ
- ❖ ಕಾವೇರಿ ಜಲಪಾತದಿಂದ ಶಿವನಸಮುದ್ರದಲ್ಲಿ ಜಲವಿದ್ಯುತ್ ಕೇಂದ್ರ ಸ್ಥಾಪನೆ.
- ❖ ಇಲ್ಲಿಂದ **ಕೋಲಾರದ ಚಿನ್ನದ ಗಣಿಗೆ** & **ಬೆಂಗಳೂರಿಗೆ ವಿದ್ಯುತ್ ಸರಬರಾಜು** ಮಾಡಲಾಯಿತು.
- ❖ ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ **ಬೆಂಗಳೂರು** ಮೊದಲನೆದು.

**1902ರಲ್ಲಿ ನಾಲ್ವಡಿ ಕೃಷ್ಣರಾಜರು ಆಡಳಿತ ವಹಿಸಿಕೊಂಡರು.**
**ಇವರ ಕಾಲದ ದಿವಾನರು:–**

- ಪಿ.ಎನ್. ಕೃಷ್ಣಮೂರ್ತಿ
- ವಿ.ಪಿ. ಮಾದವರಾಯರು
- ಸರ್ ಎಂ.ವಿಶ್ವೇಶ್ವರಯ್ಯ
- ಕಾಂತರಾಜ ಅರಸು
- ಸರ್ ಆಲ್ಬಿಯನ್ ಬ್ಯಾನರ್ಜಿ

RAMALINGAPPA L

- ➢ ಸರ್ ಮಿರ್ಜಾ ಇಸ್ಮಾಯಿಲ್

**ಸುಧಾರಣೆಗಳು:–**

- ಪ್ರಜೆಗಳಲ್ಲಿ ವಿದ್ಯಾಭ್ಯಾಸ ವ್ಯಾಪಕವಾಗಿ ಹರಡುವ ಆಸಕ್ತಿ.
- **ಪ್ರಾಥಮಿಕ ಶಾಲೆಗಳಲ್ಲಿ ಶುಲ್ಕವನ್ನು ರದ್ದು** ಮಾಡಲಾಯಿತು.
- **ಹೆಣ್ಣು ಮಕ್ಕಳ ವಿದ್ಯಾಭ್ಯಾಸದ** ಏಳಿಗೆಗೆ ನೆರವು ಸಿಕ್ಕಿತು.
- **ಮೈಸೂರು ವಿಶ್ವವಿದ್ಯಾಲಯದ** ಸ್ಥಾಪನೆ
- **ವಿದೇಶಿ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ಜಾರಿ.**
- 1905ರಲ್ಲಿ **ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಟಾಟಾರವರ** ಬೆಂಬಲದಿಂದ ಸ್ಥಾಪನೆ.
- **ನೀರಾವರಿ ಸೌಲಭ್ಯಕ್ಕೆ ವಿಶೇಷ ಗಮನ.**
- **ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು** ನಿರ್ಮಾಣ.
- **ದೊಡ್ಡ** & **ಸಣ್ಣ ಪ್ರಮಾಣದ ಕೈಗಾರಿಕೆಗಳ** ಸ್ಥಾಪನೆ.

ಉದಾ:–

- ➢ ಭದ್ರಾವತಿ ಕಬ್ಬಿಣ & ಉಕ್ಕಿನ ಕಾರ್ಖಾನೆ
- ➢ ಸಿಮೆಂಟ್ ಕಾರ್ಖಾನೆ
- ➢ ಕಾಗದದ ಕಾರ್ಖಾನೆ
- ➢ ಮಂಡ್ಯದ ಸಕ್ಕರೆ ಕಾರ್ಖಾನೆ
- ➢ ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ
- ➢ ಬೆಂಗಳೂರಿನ ಸಾಬೂನು ಕಾರ್ಖಾನೆ
- ➢ ಬೆಳಗೊಳದ ರಾಸಾಯನಿಕ ವಸ್ತು & ಕೃತಕ ಗೊಬ್ಬರಗಳ ಕಾರ್ಖಾನೆ.

- ❖ **ನ್ಯಾಯ ವಿಧಾಯಕ ಸಭೆಯನ್ನು** ರಚಿಸಲಾಯಿತು. **ರಾಜ್ಯಂಗದ ಬದಲಾವಣೆಯಲ್ಲಿ ದೊಡ್ಡ ಹೆಜ್ಜೆ.**
- ❖ ಇವರಿಗೆ **ಲಲಿತಕಲೆಗಳಲ್ಲಿ** ತುಂಬಾ ಅಭಿರುಚಿ.
- ❖ ಸಂಗೀತ ವಿದ್ವಾಂಸರಿಗೆ ಪ್ರೋತ್ಸಾಹ.
- ❖ ವಿದ್ವಾಂಸರಾದ **ಶ್ಯಾಮಶಾಸ್ತ್ರೀ, ಎಂ. ಹಿರಯಣ್ಣ, ವೀಣೆಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ.**
- ❖ ಇವರ ಆಡಳಿತದಿಂದ ಮೈಸೂರು **ರಾಜ್ಯ 'ಮಾದರಿ ರಾಜ್ಯ'**ವೆನಿಸಿತು
- ❖ **ಮಹಾತ್ಮ ಗಾಂಧಿಯವರು** ಇವರನ್ನು **"ರಾಜರ್ಷಿ"** ಎಂದು ಕರೆದಿದ್ದಾರೆ.

**ಜಯಚಾಮರಾಜ ಒಡೆಯರ್ (1940–1950):–**

- ✓ ಇವರು ವಿಶ್ವಪರ್ಯಟನೆ ಮಾಡಿ **ಲೋಕಾನುಭವ** ಪಡೆದರು.

**ಇವರ ಕಾಲದ ದಿವಾನರು:–**

- ➢ ಮಿರ್ಜಾ ಇಸ್ಮಾಯಿಲ್
- ➢ ನ್ಯಾಪ್ತಿ ಮಾಧವರಾವ್
- ➢ ಆರ್ಕಾಟ್ ರಾಮಸ್ವಾಮಿ ಮೊದಲಿಯರ್

- ❖ ಇವರು ವಿದ್ವಾಂಸರು, ಸಂಗೀತಜ್ಞರು, ವಾಗ್ಮಿ, ಸಾಹಿತ್ಯ, ಕಲೆಗಳ ಪೋಷಕರು.
- ❖ ಇವರು ಗ್ರಂಥಗಳು, ಭಕ್ತಿಗೀತೆಗಳನ್ನು ರಚಿಸಿದ್ದಾರೆ.
- ❖ ಸ್ವಾತಂತ್ರ್ಯ ನಂತರ ಮೈಸೂರು ರಾಜ್ಯ ರಾಜಪ್ರಮುಖರಾದರು.

**ದೋಂಡಿಯಾ ವಾಘ್ (1800):–**

- ✓ **ಚನ್ನಗಿರಿಯ** ಮರಾಠ ಕುಟುಂಬದಲ್ಲಿ ಜನನ.
- ✓ ಇವನ ಶೌರ್ಯ ಪರಾಕ್ರಮಗಳಿಂದ ಜನರು ಇವನಿಗೆ **'ವಾಘ್'** ಎಂದು ಕರೆದರು.
- ✓ ಮರಾಠಿಯಲ್ಲಿ ವಾಘ್ ಎಂದರೆ **ಹುಲಿ.**
- ✓ 1789ರಲ್ಲಿ **ಹೈದರ್ ಆಲಿ ಸೈನ್ಯದಲ್ಲಿ** ಸೇರಿ ಸೇನಾನಾಯಕನಾದನು.
- ✓ ಖಾಸಗಿಯಾಗಿ ಒಂದು ಸೈನ್ಯವನ್ನು ರಚಿಸಿದನು.
- ✓ ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದನು.
- ✓ ಟಿಪ್ಪುವಿನ ಜೊತೆ ಮನಸ್ತಾಪದಿಂದ ಸೆರೆಮನೆ ಸೇರಿದ.
- ✓ 4ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬ್ರಿಟಿಷರಿಂದ ಬಿಡುಗಡೆ.
- ✓ ಒಂದು ಸೈನ್ಯ ಕಟ್ಟಿ ಕಾರ್ಯಾಚರಣೆ ಆರಂಭಿಸಿದ.
- ✓ ಇವನ ಸೇನೆ ಟಿಪ್ಪುವಿನ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಿಗೊಳಿಸಲ್ಪಟ್ಟ ಪಾಳೇಗಾರರು
- ✓ **ಶಿವಮೊಗ್ಗ** & **ಬಿದನೂರು ಕೋಟೆಗಳನ್ನು** ಪಡೆದನು.
- ✓ ಚಿತ್ರದುರ್ಗ ಕೋಟೆ ಪಡೆಯಲು ವಿಫಲ ಪ್ರಯತ್ನ.
- ✓ **ಗವರ್ನರ್ ಲಾರ್ಡ್ ವೆಲ್ಲೆಸ್ಲಿ ಬಂಡಾಯವನ್ನು** ಹತ್ತಿಕ್ಕಲು ಆರಂಭಿಸಿದ.
- ✓ ಬ್ರಿಟಿಷರು **ಶಿವಮೊಗ್ಗ, ಹೊನ್ನಾಳಿ, ಹರಿಹರಗಳ** ಮೇಲೆ ಆಕ್ರಮಣ.
- ✓ ದೋಂಡಿಯಾ ತನ್ನ ನೆಲಯನ್ನು ಕಳೆದುಕೊಂಡನು.
- ✓ ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡಾಗ ಇವನು ನಿಜಾಮನ ಗುತ್ತಿಯ ಕಡೆ ಪಲಾಯನಗೈದ.
- ✓ ನಿಜಾಮನು ಗುತ್ತಿಯನ್ನು ಮುತ್ತಿದಾಗ ಮರಾಠ ಪ್ರದೇಶಕ್ಕೆ ಓಡಿದನು
- ✓ ಮರಾಠ ಸೈನ್ಯ ಇವನನ್ನು ಸೋಲಿಸಿ ಶಸ್ತ್ರಾಸ್ತ್ರ ಪಡೆಯಿತು.

RAMALINGAPPA L

- ✓ ಅತೃಪ್ತ ಪಾಳೇಗಾರರು & ಮಾಹೆಯ ಫ್ರೆಂಚರು ದೋಂಡಿಯಾಗೆ ಸಹಾಯ ಮಾಡಿದರು,

**ವಾಘ್‌ನ ಅಂತ್ಯ:–**

- ➢ ದೇಶಿಯ ಸಂಸ್ಥಾನಗಳ ರಾಜರ ಸಹಾಯ ಬ್ರಿಟಿಷರು ಕೋರಿದರು
- ➢ ತುಂಗಾಭದ್ರಾ & ಮಲಪ್ರಭಾ ನದಿಗಳ ನಡುವೆ ಇವನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಮುತ್ತಿತು.
- ➢ ರಾಯಚೂರಿನಿಂದ ಹೊರಟ ಇವನನ್ನು ಹಿಂಬಾಲಿಸಿತು.
- ➢ ನಿಜಾಮ & ಮರಾಠ ಸೈನ್ಯದ ನಡುವೆ ಸಿಲುಕಿದ ಸೈನ್ಯವನ್ನು ಬ್ರಿಟಿಷರು **'ಯಾಪಲಪರವಿ'** ಎಂಬಲ್ಲಿ ಕಾರ್ಯಾಚರಣೆ ನಡೆಸಿ **'ಕೋನ್‌ಗಲ್'** ಎಂಬಲ್ಲಿ ಹತ್ಯ ಮಾಡಲಾಯಿತು.

**ಕಿತ್ತೂರಿನ ಬಂಡಾಯ ವೀರರಾಣಿ ಚೆನ್ನಮ್ಮ (1824):–**

- ❖ **ದತ್ತು ಮಕ್ಕಳಿಗೆ ಹಕ್ಕಿಲ್ಲ** ಎಂಬ ನೀತಿಯ ವಿರುದ್ಧ.
- ❖ **ಕಿತ್ತೂರು ಬೆಳಗಾವಿ** & **ದಾರವಾಡ** ನಡುವೆ ಇರುವ ಊರು.
- ❖ ಕಿತ್ತೂರು ಸಂಸ್ಥಾನದ **ಮಲ್ಲಸರ್ಜಾ** ಮರಣದ ನಂತರ ಇವಳು ಆಡಳಿತದಲ್ಲಿ ಆಸಕ್ತಿ
- ❖ ನಂತರ ಹಿರಿಯ ಮಗ **ಶಿವಲಿಂಗರುದ್ರಸರ್ಜ** ಆಡಳಿತ ನಡೆಸಿದನು.
- ❖ ಇವನ ದೈಹಿಕ ಪರಿಸ್ಥಿಯಿಂದಾಗಿ ಚೆನ್ನಮ್ಮ ನಿಜ ಆಡಳಿತ ನಡೆಸಿದಳು
- ❖ ಶಿವಲಿಂಗರುದ್ರಸರ್ಜ ಮರಾಠರ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ನೀಡಿದನು.
- ❖ ಇದಕ್ಕೆ ಬ್ರಿಟಿಷರು ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ನೀಡಿ ವಾರ್ಷಿಕ ಕಪ್ಪ ಕಾಣಿಕೆ ಪಡೆಯುತ್ತಿದ್ದರು
- ❖ ಈ ಒಪ್ಪಂದ **ಥಾಮಸ್ ಮನ್ರೋನ** ಕಾಲದಲ್ಲಿ ಜಾರಿ.
- ❖ ಶಿವಲಿಂಗರುದ್ರಸರ್ಜ ಮರಣದ ನಂತರ **'ಶಿವಲಿಂಗಪ್ಪ'** ಎಂಬ ಹುಡುಗನನ್ನು ಚೆನ್ನಮ್ಮ ದತ್ತು ಪಡೆದಳು.
- ❖ **ಥಾಕ್ರೆ ಧಾರವಾಡದ ಕಲೆಕ್ಟರ್** & **ಪೊಲಿಟಿಕಲ್ ಏಜೆಂಟ್** ಆಗಿದ್ದರು.
- ❖ ಬಾಂಬೆ ಗವರ್ನರ್‌ಗೆ ದತ್ತಕದ ಬಗ್ಗೆ ಪತ್ರ ಬರೆದು ಕಿತ್ತೂರು ಪಡೆಯಲು ಪ್ರಯತ್ನಿಸಿದನು.
- ❖ ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.
- ❖ ಆಗ ಚೆನ್ನಮ್ಮ ಥ್ಯಾಕರೆಯ ಪ್ರಯತ್ನ ವಿಫಲಗೊಳಿಸಲು ಯುದ್ಧಕ್ಕೆ ಸಿದ್ಧತೆ ನಡೆಸಿದಳು.
- ❖ ಈ ಯುದ್ದದಲ್ಲಿ ಥ್ಯಾಕರೆ ಗುಂಡೇಟಿಗೆ ಬಲಿಯಾದನು.
- ❖ ಅನೇಕ ಬ್ರಿಟಿಷ್ ಸೈನಿಕರನ್ನು ಸೆರೆಮನೆಗೆ ದೂಡಲಾಯಿತು.
- ❖ **ಕರ್ನಲ್ ಡೀಕ್**‌ನ ನೇತೃತ್ವದ ಬ್ರಿಟಿಷ್ ಸೇನೆ ಕಿತ್ತೂರಿಗೆ ಮುತ್ತಿಗೆ ಹಾಕಿತು.
- ❖ ಸೈನಿಕರು ವೀರಾವೇಶದಿಂದ ಹೋರಾಡಿದರೂ ಸೋತು ಚೆನ್ನಮ್ಮ ಸೆರೆಯಾದಳು.
- ❖ ಚೆನ್ನಮ್ಮನನ್ನು **ಬೈಲಹೊಂಗಲ ಕೋಟೆ**ಯಲ್ಲಿ ಇರಿಸಲಾಯಿತು.
- ❖ **ಚೆನ್ನಮ್ಮ ಇಂದಿಗೂ ನಾಡಿಗೆ ಆದರ್ಶಪ್ರಾಯಳಾಗಿದ್ದಾಳೆ.**

**ಸಂಗೊಳ್ಳಿ ರಾಯಣ್ಣ (1829–30)**

- ✓ ಕಿತ್ತೂರಿನ ಚೆನ್ನಮ್ಮನೊಂದಿಗೆ ರಾಯಣ್ಣನ ಹೆಸರು ಅಜರಾಮರ & ಆದರ್ಶಪ್ರಾಯವೆನಿಸಿದೆ.
- ✓ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಟುವುದು ತನ್ನ ಕರ್ತವ್ಯ ಎಂದು ಭಾವಿಸಿ, ಚೆನ್ನಮ್ಮನ ಜೊತೆ ಹೋರಾಡಿದನು.
- ✓ ಯುದ್ಧದಲ್ಲಿ ಸೆರೆಯಾಳಾಗಿ ಬಂದಿಸಲ್ಪಟ್ಟು ಬಿಡುಗಡೆಯಾದನು.
- ✓ ಈತನ ಬಗ್ಗೆ ಮೌಖಿಕ ಆಕರಗಳು ಲಭ್ಯ.
- ✓ ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರದ ಅಭಿಮಾನ ಬೆಳೆಸಿಕೊಂಡ
- ✓ ಭೌಗೋಳಿಕ ಆಯಕಟ್ಟಿನಲ್ಲಿ ಸಭೆ ನಡೆಸಿ ಯೋಜನೆ ರೂಪಿಸಿದ.
- ✓ ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾದ ತಾಲ್ಲೂಕು ಕಛೇರಿಗಳು & ಖಜಾನೆಗಳನ್ನು ಲೂಟಿ ಮಾಡುವುದು ತನ್ನ ಉದ್ದೇಶ.
- ✓ ಕಾರ್ಯಾಚರಣೆಯ ಸ್ಥಳಗಳು:– **ನಂದಗಡ, ಖಾನಪುರ, ಸಂಪಗಾವಿ.**
- ✓ ರಾಯಣ್ಣನು ಚೆನ್ನಮ್ಮನ ಕುಮ್ಮಕ್ಕಿನಿಂದ ಕಾರ್ಯಾರಚಣೆ ಮಾಡುತ್ತಿದ್ದಾನೆ ಎಂದು ತಿಳಿದ ಬ್ರಿಟಿಷರು ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿಗೆ ಸ್ಥಳಾಂತರಿಸಿದರು.
- ✓ ರಾಯಣ್ಣನನ್ನು ಸೆರೆಹಿಡಿಯಲು ಚೆನ್ನಮ್ಮನ ವಿರೋಧಿಗಳಾದ ದೇಸಾಯಿಗಳನ್ನು ಪ್ರಚೋದಿಸಿದರು.
- ✓ **ಅಮಲ್ದಾರ ಕೃಷ್ಣರಾಯ** ಸಂಚಿಗೆ ಕೈಜೋಡಿಸಿದನು.
- ✓ ಸಂಚಿಗೆ ಬಲಿಯಾದ ರಾಯಣ್ಣನನ್ನು ಬಂಧಿಸಿ ದಾರವಾಡಕ್ಕೆ ತಂದರು.
- ✓ ಮುಖ್ಯ ಅಪರಾಧಿಯೆಂದು ಘೋಷಿಸಿ 1831ರಲ್ಲಿ **ನಂದಗಡ**ದಲ್ಲಿ ಗಲ್ಲಿಗೇರಿಸಲಾಯಿತು.
- ✓ ಇತನ ಸೈನಿಕರು ಶರಣಾಗತರಾಗಿ ಜೀವಾವಧಿ ಶಿಕ್ಷೆಗೆ ಗುರಿ.

RAMALINGAPPA L

**ಅಮರಸುಳ್ಯ ಬಂಡಾಯ:–**

- ರೈತ ಬಂಡಾಯದ ಹಿನ್ನೆಲೆಯಲ್ಲಿ 1835–37ರ ಅವಧಿಯಲ್ಲಿ **ಕರಾವಳಿ & ಕೊಡಗು ಪ್ರಾಂತ್ಯ**ದಲ್ಲಿ ಕಂಡುಬಂತು.
- ಹಾಲೇರಿ ರಾಜವಂಶದ **ಚಿಕ್ಕವೀರರಾಜೇಂದ್ರ**ನನ್ನು 1834ರಲ್ಲಿ ಪದಚ್ಯುತಿಗೊಳಿಸಿ ಬೆಂಗಳೂರು ಮೂಲಕ **ವೆಲ್ಲೂರಿಗೆ & ಕಾಶಿಗೆ** ಸಾಗಿಸಿದರು.
- ಕೊಡಗಿನಲ್ಲಿ ರಾಜಕೀಯ ಅಸಮಾಧಾನ ಸೃಷ್ಟಿ.
- ಇದರ ವಿರುದ್ಧ **ಸ್ವಾಮ ಅಪರಂಪಾರ, ಕಲ್ಯಾಣಸ್ವಾಮಿ, ಪುಟ್ಟಬಸಪ್ಪ** ಸಶ್ತ್ರಸ್ತ ಬಂಡಾಯ ಸಂಘಟಿಸಿದರು.
- **ಸ್ವಾಮಿ ಅಪರಂಪಾರ** ಬಂಡಾಯದ ಮುಖಂಡನಾದನು.
- 1835ರಲ್ಲಿ ಇತನನ್ನು ಬ್ರಿಟಿಷರು ಬಂಧಿಸಿ **ಬೆಂಗಳೂರಿಗೆ** ರವಾನಿಸಿದರು
- 1837ರಲ್ಲಿ **ಕಲ್ಯಾಣಸ್ವಾಮಿ** ಬಂಧಿಸಿ ಮೈಸೂರಿನ ಸೆರೆಮನೆಯಲ್ಲಿಡಲಾಯಿತು.

**ಪುಟ್ಟಬಸಪ್ಪ:–**

- ಕೆಳಕೊಡಗಿನ ಜನರ **ಕಲ್ಯಾಣಸ್ವಾಮಿಯ** ನಿಧನ ನಂತರ ಬಂಡಾಯ ಮುಂದುವರೆಸಿದರು.
- ಕೆನರಾ ಪ್ರಾಂತ್ಯದ **ಸುಳ್ಯ, ಬೆಳ್ಳಾರೆ, ಪುತ್ತೂರು** ಈ ಬಂಡಾಯದ ಕೇಂದ್ರಗಳಾದವು.
- ಸುಳ್ಯದ ರೈತ ಕೊಡಗಿನ **ಶನಿವಾರಸಂತೆ ಪುಟ್ಟಬಸಪ್ಪ** ಎಂಬ ರೈತನನ್ನು **ಕಲ್ಯಾಣಸ್ವಾಮಿ**ಯನ್ನಾಗಿ ಆರಿಸಿದ್ದು, ತನನ್ನು **ಸ್ವಾಮಿ ಅಪರಂಪಾರ** ಎಂದು ಕರೆದುಕೊಮಡನು
- ಮುಂದೆ ಇವನೇ ಬಂಡಾಯದ ನಾಯಕತ್ವ ವಹಿಸಿಕೊಂಡನು.
- ಘಟ್ಟ ಪ್ರದೇಶದಲ್ಲಿ ಈ ಬಂಡಾಯ ಆರಂಭ.
- ಬಂಡುಕೋರರ ಸರ್ಕಾರ ರಚನೆಯ ನಂತರ ತಂಬಾಕು & ಉಪ್ಪಿನ ಮೇಲಿನ ಸುಂಕ ರದ್ದು ಮಾಡಲಾಗುವುದು ಎಂದನು.
- ಶ್ರೀಮಂತ ರೈತರು, ಪಾರುಪತ್ತೆಗಾರರು, ಭೂಹಿಡುವಳಿದಾರರಿಗೆ ಆಶ್ವಾಸನೆ ನೀಡಿದನು.
- **ಬೆಳ್ಳಾರೆಯಲ್ಲಿದ್ದ** ಸರ್ಕಾರಿ ಕಛೇರಿ ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದನು.
- ಸುಳ್ಯ & ಸುತ್ತಮುತ್ತಲಿನ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನನ್ನು ಹತ್ಯೆ ಮಾಡಿದ್ದು ಜನಪ್ರಿಯತೆಯನ್ನು ಹೆಚ್ಚಿಸಿತು
- ಹೋರಾಟಗಾರರು **ಪುತ್ತೂರಿ**ನಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿದರು.
- ಇದರ ಉದ್ದೇಶ:– **ಬ್ರಿಟಿಷರು ಮಂಗಳೂರನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿದ್ದರು.**
- **ಪಾಣೆಮಂಗಳೂರು & ಬಂಟ್ವಾಳ**ದಲ್ಲಿ ಕಾರ್ಯಾಚರಣೆ ನಡೆಸಿದರು
- **ಬಂಟ್ವಾಳದ ಜೈಲು & ಖಜಾನೆ ಲೂಟಿ.**
- ಹತ್ತಿಕ್ಕಲು ಬ್ರಿಟಿಷರು **ಕಣ್ಣಾನೂರು, ತಲ್ಲಿಚೇರಿ & ಬಾಂಬೆಯ** ಸೈನ್ಯವನ್ನು ಅಪೇಕ್ಷಿಸಿದರು.
- ಇದನ್ನು ತಿಳಿದ **ಪುಟ್ಟಬಸಪ್ಪ ಸುಳ್ಯಕ್ಕೆ** ಪಲಾಯನ.
- ಬ್ರಿಟಿಷ್ ಸೇನೆ ಸ್ಥಳೀಯ ಸಹಕಾರದಿಂದ ಪುಟ್ಟಬಸಪ್ಪ & ಸಹಚರರನ್ನು ಬಂಧಿಸಿತು.
- ಇದರಲ್ಲಿ **ಪುಟ್ಟಬಸಪ್ಪ, ಲಕ್ಷ್ಮಪ್ಪ, ಬಂಗರಸ, ಕೆದಂಬಾಡಿ ರಾಮಯ್ಯಗೌಡರು, ಗುಡ್ಡೆಮನೆ ಅಪ್ಪಯ್ಯರನ್ನು** ಗಲ್ಲಿಗೇರಿಸಲಾಯಿತು.

**ಸುರಪುರ & ಕೊಪ್ಪಳ ಬಂಡಾಯ:–**

**ಸುರಪುರ:–**

- ✓ ಇದು ಯಾದಗಿರಿ ಜಿಲ್ಲೆಯಿಂದ 50 ಕಿ.ಮೀ ದೂರದಲ್ಲಿದೆ.
- ✓ ಔರಂಗಜೇಬನ ಕಾಲದಿಂದ ಮಹತ್ವ ಪಡೆದಿತ್ತು.
- ✓ ನಿಜಾಮ & ಮರಾಠ ಪೇಶ್ವೆ ಕಾಲದಲ್ಲಿ ಸಾಮಂತ ರಾಜ್ಯವಾಯಿತು
- ✓ ವೆಂಕಟಪ್ಪ ನಾಯಕನ ಕಾಲದಲ್ಲಿ ಸುರಪುರ ಬ್ರಿಟಿಷ್ ವಿರೋಧಿ ಬಂಡಾಯದ ಕಿಚ್ಚು.

**ವೆಂಕಟಪ್ಪ ನಾಯಕ:–**

- ತಂದೆ **ಕೃಷ್ಣಪ್ಪನಾಯಕ** ಮರಣದ ನಂತರ ಪಟ್ಟಕ್ಕೆ ಬಂದನು.
- 1834ರಲ್ಲಿ ಜನಿಸಿ ಅಪ್ರಾಪ್ತ ವಯಸ್ಸಿಗೆ ಪಟ್ಟಕ್ಕೆ ಬಂದನು.
- ಆದರೆ ತಂದೆಯ ಸಹೋದರ **ಪೆದ್ದನಾಯಕ** ತಗಾದೆ ತೆಗೆದು ಸುರಪುರದ ಆಂತರಿಕ ರಾಜಕೀಯ ಅಚುವಟಿಕೆಗಳು ಕ್ಷೋಭೆಗೊಂಡವು.
- 1842ರಲ್ಲಿ ಬ್ರಿಟಿಷರು **ಮೆಡೋಸ್ ಟೇಲರ್ ಪೊಲಿಟಿಕಲ್ ಏಜೆಂಟನನ್ನಾ**ಗಿ ನೇಮಿಸಿ ಪರೋಕ್ಷ ಹತೋಟಿ ಸ್ಥಾಪನೆ.
- **ಟೇಲರ್ ಸುರಪುರವನ್ನು ಅಭಿವೃದ್ಧಿ ಪಡಿಸಿದನು.**
- **ಪೆದ್ದನಾಯಕ**ನನ್ನು ಸಂಸ್ಥಾನದ ದಿವಾನನನ್ನಾಗಿ ನೇಮಕ.
- ಸಂಸ್ಥಾನದಲ್ಲಿ **ಭೂಸಮೀಕ್ಷೆ** ನಡೆಸಿದನು.
- ಸಂಸ್ಥಾನದಲ್ಲಿ **ಆದಾಯ ಹೆಚ್ಚಾಯಿತು.**
- ವೆಂಕಟಪ್ಪನಾಯಕನಿಗೆ ಸೂಕ್ತ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದ
- 1853ರಲ್ಲಿ ವೆಂಕಟಪ್ಪನಾಯಕ ಅಧಿಕಾರಕ್ಕೆ ಬಂದನು.



RAMALINGAPPAL

**ಸುರಪುರದ ದಂಗೆ:–**

- ❖ 1857ರ ಹೋರಾಟದಲ್ಲಿನ **ನಾನಾಸಾಹೇಬನ** ಪ್ರತಿನಿಧಿಗಳು **ಸುರಪುರದ**ಲ್ಲಿದ್ದಾರೆ ಎಂಬ ಪುಕಾರಿ ಕಂಡುಬಂತು.
- ❖ ಆಗ ಬ್ರಿಟಿಷರು ರಾಜನನ್ನು ಸಂಶಯದಿಂದ ಕಂಡರು.
- ❖ ರಾಜನ ಅವಧಿಯ ಆಡಳಿತದ ಬಗ್ಗೆ ವರದಿ ನೀಡಲು **ಬ್ರಿಟಿಷ್ ಸರ್ಕಾರದ ಕ್ಯಾಂಪ್‌ಬೆಲ್** ಎಂಬ ಅಧಿಕಾರಿಯನ್ನು ನೇಮಿಸಿತು.
- ❖ ಇವನು ರಾಜನು ಆಡಲಿತ ದುರ್ವ್ಯವಹಾರಗಳಲ್ಲಿ ನಿರತನಾಗಿದ್ದಾನೆ ಎಂದು ವರದಿ ಮಾಡಿ ಹೈದರಾಬಾದ್‌ನ ರೆಸಿಡೆಂಟ್‌ಗೆ ಸಲ್ಲಿಸಿದನು
- ❖ ವೆಂಕಟಪ್ಪನಾಯಕನನ್ನು ಕರ್ನಾಟಕದ ಚರಿತ್ರೆಯಲ್ಲಿ 1857ರ ಕ್ರಾಂತಿಯ ನಾಯಕ ಎಂದು ವರ್ಣಿಸಿದ್ದಾರೆ.
- ❖ 1858ರಲ್ಲಿ **ಬ್ರಿಟಿಷ್ ಸೈನ್ಯ ಸುರಪುರವನ್ನು** ಆಕ್ರಮಿಸಿತು.
- ❖ ಬ್ರಿಟಿಷರು ಸುರಪುರದ ಕೋಟೆಯನ್ನು ವಶಪಡಿಸಿಕೊಂಡರು.

**ಕೊಪ್ಪಳದ ವೀರಪ್ಪ:–**

- ✓ ಕೊಪ್ಪಳ & ಸನಿಹದ ಭೌಗೋಳಿಕ ಪ್ರದೇಶ ನಿಜಾಮನ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿತ್ತು.
- ✓ ಇಲ್ಲಿ ನಿಜಾಮನ ದೌರ್ಜನ್ಯ ಕಂಡುಬಂತು.
- ✓ ಆಗ ಕೊಪ್ಪಳದ ಜಮೀನ್ದಾರರು ಬಂಡೆದ್ದರು.
- ✓ ಬಂಡೆದ್ದವರಲ್ಲಿ ಪ್ರಮುಖರಲ್ಲಿ ವೀರಪ್ಪ ಒಬ್ಬ.
- ✓ ವೀರಪ್ಪ ಜಮೀನ್ದಾರನಾಗಿದ್ದು ಕೊಪ್ಪಳ & ಸನಿಹದ ಕೋಟೆಗಳನ್ನು ಪಡೆದನು.
- ✓ ವೀರಪ್ಪನಿಗೆ ಅನೇಕ ರೈತರು & ಜಮೀನ್ದಾರರು ಕೈಜೋಡಿಸಿದರು.
- ✓ ನಿಜಾಮನೊಂದಿಗೆ ಸಂಕರ್ಪ ಸಾಧಿಸಿದ ಬ್ರಿಟಿಷರು ಬಂಡಾಯವನ್ನು ಸದೆಬಡಿಯಲು ಸೈನ್ಯ ನಿಯೋಜನೆ.
- ✓ ಹೋರಾಟ ಮಾಡಿದ ವೀರಪ್ಪ ಕೊನೆಗೆ ಮರಣ ಹೊಂದಿದ.
- ✓ ಬ್ರಿಟಿಷರು ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಂಡರು.

**ಹಲಗಲಿಯ ಬೇಡರ ದಂಗೆ:–**

- ➢ **ಬಾಗಲಕೋಟೆ** ಜಿಲ್ಲೆಯ **ಮುಧೋಳ** ತಾಲ್ಲೂಕಿನಲ್ಲಿ **ಹಲಗಲಿ** ಪುಟ್ಟ ಹಳ್ಳಿ.
- ➢ ಇದು ಮುದೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತ್ತು.
- ➢ 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆ ಪ್ರದೇಶಗಳಲ್ಲಿ ಶಸ್ತ್ರಗಳ ಬಳಕೆಯ ನಿರ್ಬಂಧಿಸಿ ಕಾಯ್ದೆ ಜಾರಿಮಾಡಿದರು.
- ➢ ಇದನ್ನು ಹಲಗಲಿಗೂ ಸಹ ಅನ್ವಯಿಸಿತು.
- ➢ ಬೇಡರು ತಲೆತಲಾಂತರಗಳಿಂದ ಬೇಟೆಯಾಡಲು ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಒಪ್ಪಿಸಲು ಸಿದ್ಧರಿರಲಿಲ್ಲ.
- ➢ ಬೇಡರು ತಮ್ಮ ಪರಂಪರಾನುಗತ ಹಕ್ಕನ್ನು ಪಡೆಯಲು ಬ್ರಿಟಿಷರ ವಿರುದ್ಧ ಬಂಡೆದ್ದರು.
- ➢ ಇದರಲ್ಲಿ **ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರ** ಜೊತೆ ಸೇರಿದರು.
- ➢ ಬಂಡಾಯವನ್ನು ಹತ್ತಿಕ್ಕಲು ಬ್ರಿಟಿಷ್ ಸೇನೆ ಹಲಗಲಿ ತಲುಪಿತು.
- ➢ ಬೇಡರನ್ನು ನಿಷ್ಕಾರುಣವಾಗಿ & ದಮನಕಾರಿಯಾಗಿ ಹತ್ತಿಕ್ಕಿದರು.
- ➢ ಬಂಡಾಯಗಾರರನ್ನು ಗಲ್ಲಿಗೇರಿಸುವ ಮೂಲಕ ಕೊನೆಗೊಂಡಿತು.

**ಅಧ್ಯಾಯ–5**

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

- ❖ 19ನೆಯ ಶತಮಾನವನ್ನು "ಭಾರತೀಯ ಪುನರುಜ್ಜೀವನ ಕಾಲ" ಎನ್ನುವರು. ಕಾರಣ
- ❖ ಪಾಶ್ಚಾತ್ಯ ನಾಗರಿಕತೆಯ ಸಂಕರ್ಪ ಭಾರತೀಯರಿಗೆ ದೊರೆಯಿತು.
- ❖ ಇಂಗ್ಲೀಷ್ ಶಿಕ್ಷಣದ ಸೌಲಭ್ಯ ದೊರೆಯಿತು.
- ❖ ಭಾರತೀಯರಲ್ಲಿ ವೈಚಾರಿಕ ಮನೋಭಾವನೆ ಬೆಳೆಯಿತು.
- ❖ ಮೂಢನಂಬಿಕೆಗಳನ್ನು ಪ್ರಶ್ನಿಸಲು ಪ್ರೇರೇಪಸಿತು.
- ❖ ದ್ವಂದ್ವ, ವಿರೋಧಾಭಾಸ, ಸ್ವಹಿತಾಸಕ್ತಿಗಳ ಅರಿವು ಮೂಡಿಸಿತು.
- ❖ ಭಾರತೀಯರಿಗೆ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಇತ್ತು
- ❖ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯ ವಿಚಾರಗಳ ಪರಿಚಯ.
- ❖ ಪಾಶ್ಚಾತ್ಯ ಶಿಕ್ಷಣದಿಂದ ಜಾಗೃತರಾಗಿ ಸುಧಾರಣೆಗೆ ಪ್ರಯತ್ನಿಸಿದರು.

**ಪ್ರಮುಖರು:–**

- ➢ ರಾಮ್ ಮೋಹನ್ ರಾಯ್
- ➢ ದಯಾನಂದ ಸರಸ್ವತಿ
- ➢ ಮಹದೇವ ಗೋವಿಂದ ರಾನಡೆ
- ➢ ಜ್ಯೋತಿಬಾಫುಲೆ
- ➢ ಸ್ವಾಮಿ ವಿವೇಕಾನಂದ
- ➢ ಅನಿಬೆಸೆಂಟ್
- ➢ ಸಯ್ಯದ್ ಅಹಮದ್‌ಖಾನ್

RAMALINGAPPA L

**ಬ್ರಹ್ಮ ಸಮಾಜ:–**

- ✓ ಸಂಸ್ಥಾಪಕರು:– **ರಾಜಾರಾಮ್ ಮೋಹನ್ ರಾಯ್**
- ✓ ಇವರನ್ನು **ಭಾರತೀಯ ನವೋದಯದ ಜನಕ** ಎನ್ನುವರು
- ✓ ಇವರು **ಸಂಸ್ಕೃತ, ಅರೇಬಿಕ್, ಪರ್ಷಿಯನ್, ಇಂಗ್ಲೀಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್** ಭಾಷೆಗಳಲ್ಲಿ ಪಾಂಡಿತ್ಯ.
- ✓ **ಹಿಂದೂ, ಮುಸ್ಲಿಂ, ಸೂಫಿ, ಕ್ರೈಸ್ತ & ಬೌದ್ಧಮತಗಳ** ಸಂಸ್ಕೃತಿ & ತತ್ವಗಳ ಅಧ್ಯಯನ.
- ✓ ಮೂರ್ತಿಪೂಜೆಯನ್ನು ಪ್ರಶ್ನಿಸಿದರು
- ✓ ತಮ್ಮ ಸಿದ್ಧಾಂತಗಳ ಪ್ರತಿಪಾದನೆಗೆ **ಉಪನಿಷತ್‌ಗಳನ್ನು ಮುಂದು** ಮಾಡಿದರು.
- ✓ **ಆಧುನಿಕ ವಿಜ್ಞಾನ** & **ಇಂಗ್ಲೀಷ್ ಶಿಕ್ಷಣವು** ಭಾರತದ ನವೀಕರಣಕ್ಕೆ ಅತ್ಯಾವಶಕವೆಂದು ಪ್ರತಿಪಾದಿಸಿದರು.
- ✓ **ಸ್ತ್ರೀ ಶೋಷಣೆ**ಯನ್ನು ವಿರೋಧಿಸಿದರು.
- ✓ **ಸತಿಪದ್ಧತಿ, ಬಾಲ್ಯವಿವಾಹಗಳ** ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಿದರು.
- ✓ ಇವರನ್ನು **ಸಂಪ್ರದಾಯವಾದಿ ಹಿಂದೂಗಳು** ಇವರನ್ನು ಖಂಡಿಸಿದರು.
- ✓ **ಲಾರ್ಡ್ ವಿಲಿಯಂ ಬೆಂಟಿಂಕ್** ಜಾರಿಗೊಳಿಸಿದ **'ಸತಿಸಹಗಮನ ನಿಷೇಧ ಪದ್ಧತಿ'**ಯನ್ನು ಬೆಂಬಲಿಸಿದರು.
- ✓ ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರಯತ್ನ.
- ✓ **ಬಂಗಾಳಿ ಭಾಷೆಯಲ್ಲಿ 'ಸಂವಾದ ಕೌಮುದಿ'** ಪತ್ರಿಕೆ ಆರಂಭಿಸಿದರು

**ಬ್ರಹ್ಮ ಸಮಾಜದ ಸುಧಾರಣೆಗಳು:–**

- ➢ ಬ್ರಹ್ಮಸಮಾಜ ಹಿಂದೂ ಧರ್ಮದಲ್ಲಿದ್ದ ಆಚಾರ, ವಿಚಾರಗಳ ಸುಧಾರಣೆಗಾಗಿ ಪ್ರಯತ್ನಿಸಿತು.
- ➢ ವಿಗ್ರಹಾರಾಧನೆ & ಬಹುದೇವತಾ ಆರಾಧನೆಯನ್ನು ವಿರೋಧಿಸಿತು
- ➢ ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು.
- ➢ ಯಜ್ಞಯಗಾಧಿಗಳನ್ನು ಖಂಡಿಸಿತು.
- ➢ ಪುರೋಹಿತಶಾಹಿಯನ್ನು ವಿರೋಧಿಸಿತು.
- ➢ ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆ ಜಾಗೃತಗೊಳಿಸಲು ಸಹಾಯ

**ಆರ್ಯಸಮಾಜ:–**

- ❖ ಇದನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿದರು.
- ❖ ದೇಶಾದ್ಯಂತ ಉಪನ್ಯಾಸ ನೀಡಿ **ವೇದಗಳು ಸತ್ಯ & ಜ್ಞಾನದ ಮೂಲ**ವೆಂದರು.
- ❖ **ವೇದಗಳಿಗೆ ಹಿಂತಿರುಗಿ** ಎಂಬ ಘೋಷಣೆ ಮಾಡಿದರು.
- ❖ **ವಿಗ್ರಹಾರಾಧನೆ, ಜಾತಿಪದ್ಧತಿ**ಯನ್ನು ಖಂಡಿಸಿದರು.
- ❖ ಜಾತಿಯು **ಯೋಗ್ಯತೆಯಿಂದ** ಹೊರತು, **ಹುಟ್ಟಿನಿಂದಲ್ಲ** ಎಂದರು.
- ❖ **ಅರ್ಥಹೀನ ಪದ್ಧತಿಗಳನ್ನು & ಪುರೋಹಿತಾಹಿಯ ಅಧಿಕಾರವನ್ನು** ತಿರಸ್ಕರಿಸಿದರು.
- ❖ **ವಿಧವಾ ವಿವಾಹವನ್ನು ಪ್ರೋತ್ಸಾಹಿ**ಸಿದರು.
- ❖ **ಸ್ವದೇಶಿ ವಸ್ತುಗಳ ಬಳಕೆಗೆ** ಕರೆನೀಡಿದರು.
- ❖ **ಸತ್ಯರ್ಥ ಪ್ರಕಾಶ** ಎಂಬ ಕೃತಿಯಲ್ಲಿ ತಮ್ಮ ವಿಚಾರಗಳನ್ನು ಪ್ರತಿಪಾದಿಸಿದರು.
- ❖ ಶುದ್ಧಿ ಚಳುವಳಿ ಆರ್ಯಸಮಾಜದ ಮುಖ್ಯ ಚಟುವಟಿಕೆಯಾಗಿತ್ತು.
- ❖ ಆರ್ಯಸಮಾಜವು ಅನೇಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿತು.
- ❖ ಇವರ **ಸ್ವರಾಜ್ಯ & ಸ್ವಧರ್ಮ** ಬೋಧನೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರೇರಣೆ ನೀಡಿದವು.
- ❖ ಇವರು ದೇಶ & ಭಾರತೀಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದರು
- ❖ **ಸ್ವಾಭಿಮಾನ & ಸ್ವಾವಲಂಬನೆ**ಯನ್ನು ಜನರಲ್ಲಿ ಮೂಡಿಸಲು ಪ್ರಯತ್ನ
- ❖ **ಭಾರತೀಯರಿಗೇ ಭಾರತ** ಎಂಬ ಘೋಷಣೆಯನ್ನು ನೀಡಿದರು.

**ಪ್ರಾರ್ಥನಾ ಸಮಾಜ:–**

- ➢ ಇದನ್ನು **ಆತ್ಮಾರಾಂ ಪಾಂಡುರಂಗರು ಮುಂಬೈನಲ್ಲಿ** ಸ್ಥಾಪಿಸಿದರು.
- ➢ ಮಾನವನ ಸೇವೆಯೇ ಪರಮಾತ್ಮನ ಸೇವೆ ಇದರ ನೆಲೆಗಟ್ಟು.
- ➢ ಇದು ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ ನೀಡಿತು.
- ➢ **ಡೆಕ್ಕನ್ ಶಿಕ್ಷಣ ಸಂಸ್ಥೆಯ** ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿಗೆ ಪ್ರಯತ್ನ
- ➢ **ವಿಧವಾ ವಿವಾಹ, ಸ್ತ್ರೀಶಿಕ್ಷಣ, ಅಂತರ್ಜಾತಿ ವಿವಾಹ, ಸಹಭೋಜನ** ಕಾರ್ಯಕ್ರಮಗಳಿಗೆ ಪ್ರೋತ್ಸಾಹ.
- ➢ **ಬಾಲ್ಯವಿವಾಹ, ಜಾತಿಪದ್ಧತಿ, ವಿಗ್ರಹಾರಾಧನೆ, ಪರ್ಧಾಪದ್ಧತಿ**ಯನ್ನು ವಿರೋಧಿಸಿತು.
- ➢ ಸರ್ವಧರ್ಮಗಳು ಸತ್ಯದ ಪ್ರತೀಕ ಅವುಗಳನ್ನು ಗೌರವಿಸಬೇಕು.
- ➢ **ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು, ವಿಧವಾಶ್ರಮಗಳನ್ನು** ಸ್ಥಾಪಿಸಿದರು.
- ➢ **ಎಂ.ಜಿ. ರಾನಡೆಯವರು** ಇದನ್ನು ಜನಪ್ರಿಯಗೊಳಿಸಿದರು.
- ➢ ಸಮಾಜವನ್ನು ಸುಧಾರಿಸದೇ ಆರ್ಥಿಕ & ರಾಜಕೀಯ ಕ್ಷೇತ್ರಗಳ ಪ್ರಗತಿ ಅಸಾಧ್ಯ.



RAMALINGAPPA L

- ಹಿಂದೂ & ಮುಸ್ಲಿಂ ಏಕತೆಯ ಪ್ರತಿಪಾದಕರಾಗಿದ್ದರು.
- ಇವರು ರಾಷ್ಟ್ರೀಯ ಕಾಂಗ್ರೇಸ್‌ನಲ್ಲಿ ಸಕ್ರೀಯವಾಗಿದ್ದರು.
- ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೌಢಶಾಲೆಗಳನ್ನು ತೆರೆದರು.

**ಸತ್ಯಶೋಧಕ ಸಮಾಜ:–**

- ಸ್ಥಾಪಾಕರು:– **ಜ್ಯೋತಿಭಾ ಫುಲೆ**
- ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕ, ಇಲ್ಲದಿದ್ದರೆ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಿಲ್ಲ.
- ಇದು **ಪಾನನಿಷೇಧವನ್ನು** ಒತ್ತಾಯಿಸಿತು.
- **ಸ್ತ್ರೀಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆ, ಜನರನ್ನು ಶೋಷಿಸುವುದು, ಅಸ್ಪೃಶ್ಯತಾ ಆಚರಣೆಗಳನ್ನು** ವಿರೋಧಿಸಿತು.
- **ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ** ನಡೆಸಿತು.
- **ವಿದ್ಯಾರ್ಥಿನಿಯರ ಶಿಕ್ಷಣಕ್ಕೆ** ಶಾಲೆ ತೆರೆದರು.
- ಶೂದ್ರರು ಅನುಭವಿಸುತ್ತಿದ್ದ ಗುಲಮಗಿರಿಯನ್ನು ಉಗ್ರವಾಗಿ ಖಂಡಿಸಿದರು.
- ಸಮಾಜದ ಸುಧಾರಣೆಗಾಗಿ **ಉಚಿತ & ಕಡ್ಡಾಯ ಶಿಕ್ಷಣವನ್ನು** ಪ್ರತಿಪಾದಿಸಿದರು.
- ಇದರಿಂದ ಪ್ರಭಾವಿತರಾದ **ಶಾಹು ಮಹಾರಾಜರು** ಶಾಲೆಗಳನ್ನು ತೆರೆದು ಕಾರ್ಯ ನಿರ್ವಹಿಸಿದರು.
- ಇದು **ರೈತಪರವಾದ ಹೋರಾಟಗಳನ್ನು** ನಡೆಸಿತು.
- ಇವರು ಶೋಷಣೆಯ ಬಗ್ಗೆ **'ಗುಲಾಮಗಿರಿ'** ಪುಸ್ತಕದಲ್ಲಿ ತಿಳಿಸಿದ್ದಾರೆ.
- **ಪತ್ನಿ ಸಾವಿತ್ರಿಬಾಯಿ ಫುಲೆ** ಕೂಡ ಮಹಿಳಾ ಶಿಕ್ಷಣಕ್ಕಾಗಿ ಪ್ರಯತ್ನ.
- **ಡಾ.ಬಿ.ಆರ್. ಅಂಬೇಡ್ಕರ್**‌ರವರು ಫುಲೆಯ ತತ್ವಗಳಿಂದ ಪ್ರಭಾವಿತರಾದರು.

**ಆಲಿಘರ್ ಚಳುವಳಿ:–**

- ಉದ್ದೇಶ:– **ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ತಾತ್ವಿಕ ವಿಚಾರಗಳನ್ನು ಬದಲಿಸಿ ಪೂರ್ವ ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವುದು.**
- ಇದರ ನಾಯಕತ್ವ ವಹಿಸಿದವರು:– **ಸರ್ ಸೆಯ್ಯದ್ ಅಹಮದ್‌ಖಾನ್**
- ಮುಸ್ಲಿಂ ಸಮುದಾಯಕ್ಕೆ ಆಧುನಿಕ ಶಿಕ್ಷಣ ನೀಡಲು **'ಆಂಗ್ಲೋ–ಓರಿಯಂಟಲ್'** ಕಾಲೇಜನ್ನು ಆರಂಭಿಸಿದರು.
- ಇದೇ ಮುಂದೆ **ಆಲಘರ್ ಮುಸ್ಲಿಂ ವಿಶ್ವವಿದ್ಯಾನಿಲಯ** ಎಂದು ಹೆಸರು ಪಡೆಯಿತು.
- ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣ ನೀಡುವುದು.
- ಪಾಶ್ಚಾತ್ಯ ಶಿಕ್ಷಣದಿಂದ ನವೀಕೃತ ಸಮಾಜ ನಿರ್ಮಾಣ ಸಾಧ್ಯ ಎಂದು ನಂಬಿದ್ದರು.
- ಇವರು ರಾಷ್ಟ್ರೀಯ ಕಾಂಗ್ರೇಸ್‌ನಿಂದ ದೂರವೇ ಉಳಿದು ಮುಸಲ್ಮಾನ ಸಮುದಾಯವನ್ನು ಒಗ್ಗೂಡಿಸಿದರು.
- ಸ್ತ್ರೀ ಶಿಕ್ಷಣವನ್ನು ಬೆಂಬಲಿಸಿದರು.
- ಬಹುಪತ್ನಿತ್ವವನ್ನು ಹಾಗೂ ವಿಧವಾ ವಿವಾಹದ ವಿರುದ್ಧದ ವಿಚಾರಗಳನ್ನು ಖಂಡಿಸಿದರು.

**ರಾಮಕೃಷ್ಣ ಮಿಷನ್:–**

- ರಾಮಕೃಷ್ಣ ಪರಮಹಂಸರು **ಬಂಗಾಳದ ದಕ್ಷಿಣೇಶ್ವರ**ದಲ್ಲಿನ **ಕಾಳಿದೇವಾಲಯ**ದ ಅರ್ಚಕರು.
- ಇವರ ಚಿಂತನೆಯು ಭಾರತೀಯ ಸಂಸ್ಕೃತಿಯ ಆಧಾರವಾಗಿತ್ತು.
- ಎಲ್ಲಾ ಪಂಥಗಳು ಸಮಾನ, ಯಾವ ದೇವರು, ಪಂಥ ಮುಖ್ಯ ಅನ್ನುವುದಕ್ಕಿಂತಲೂ ಆಧ್ಯಾತ್ಮದ ಸಾಕ್ಷಾತ್ಕಾರವು ಮುಖ್ಯ.
- ಇವರು **ವಿಗ್ರಹಾರಾಧನೆಯಲ್ಲಿ ನಂಬಿಕೆ** ಹೊಂದಿದ್ದರು.
- ಇವರು ನಿಸ್ವಾರ್ಥ ದೈವಭಕ್ತಿಯನ್ನು ಹೊಂದಿದ್ದರು.
- **ಸ್ವಾಮಿ ವಿವೇಕಾನಂದರು** ಇವರ ಆತ್ಮೀಯ ಶಿಷ್ಯರು.

**ಸ್ವಾಮಿ ವಿವೇಕಾನಂದರು:–**

- ತಮ್ಮ ಗುರುಗಳ ಧ್ಯೆಯೋದರ್ಶನಗಳನ್ನು ಪ್ರಚಾರ ಮಾಡಲು **'ರಾಮಕೃಷ್ಣ ಮಿಷನ್'** ಸ್ಥಾಪಿಸಿದರು.
- ಇದರ ಉದ್ದೇಶ:– **ಸರ್ವಧರ್ಮ ಸಮನ್ವಯ ತತ್ವವನ್ನು ಪ್ರಚಾರ ಮಾಡುವುದು & ಅನುಷ್ಠಾನಗೊಳಿಸುವುದು.**
- ಇದು ಜಗತ್ತಿನ ಎಲ್ಲೆಡೆ ಶಾಖೆಗಳನ್ನು ಹೊಂದಿದೆ.
- ಇದರಲ್ಲಿ **ಪ್ರಾಚೀನ ಆಧುನಿಕ & ಪಾಶ್ಚಾತ್ಯ ತತ್ವಜ್ಞಾನಗಳ** ಮಿಲನವನ್ನು ಗಮನಿಸಬಹುದು.
- ವಿವೇಕಾನಂದರು **ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ.**
- ವ್ಯಕ್ತಿ & ವ್ಯಕ್ತಿಯ ಇರುವಿಕೆಗೆ & ಸಾಮರ್ಥ್ಯಕ್ಕೆ ಮಹತ್ವ ನೀಡಬಯಸಿದರು.
- ಮೋಕ್ಷಕ್ಕಾಗಿ ದುಡಿಯಲು **ಪ್ರಾರ್ಥನೆ, ಯೋಗ, ಸಮಾಜ ಸೇವೆ** ಮುಖ್ಯ ಎಂದರು.

RAMALINGAPPA L

- ✓ ಆಶ್ರಮವು ಶಿಕ್ಷಣ & ಸಮಾಜಸೇವೆಯ ಮೂಲಕ ಸಂಸ್ಕೃತಿಯ ಬೆಳವಣಿಗೆ ಮುಂದುವರಿಸಿದರು.
- ✓ ವಿವೇಕಾನಂದರ ಚಿಂತನೆಗಳಿಂದ **ಗಾಂಧೀಜಿ** ಸೇರಿದಂತೆ ರಾಷ್ಟ್ರೀಯ ನಾಯಕರು ಪ್ರೇರಣೆಗೊಂಡರು.
- ✓ 1893ರಲ್ಲಿ **ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಣುತೆ, ಸಕಲಧರ್ಮಗಳು ಸತ್ಯ** ಎಂದು ಪ್ರತಿಪಾದಿಸಿ ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.
- ✓ ಹಿಂದೂ ಧರ್ಮವು ಹೇಗೆ **ವಿಶ್ವಭ್ರಾತೃತ್ವವನ್ನು** ಸಾರಿದೆ ಎಂದು ವಿವರಿಸಿದರು.
- ✓ ಭಾರತೀಯ ಸಂಸಕ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದರು.
- ✓ ಯುವಕರಿಗೆ ಪ್ರೇರಕಶಕ್ತಿಯಾದರು.

**ಥಿಯಾಸಾಫಿಕಲ್ ಸೊಸೈಟಿ (ಬ್ರಹ್ಮ ವಿದ್ಯಾ ಸಮಾಜ):–**

- ➢ ಇದರ ಮೂಲ ಸ್ಥಾಪಕರು:– **ಮೈಅಡಮ್ ಬ್ಲಾವಟಿಸ್ಕಿ** & **ಜರ್ನಲ್ ಹೆಚ್,ಎಸ್ ಅಲ್ಕಾಟ್**.

**ಉದ್ದೇಶಗಳು:–**

- ❖ ಸಮಾಜವು ಯಾವುದೇ ಬೇಧ–ಭಾವ ಇಲ್ಲದೆ ವಿಶ್ವಭ್ರಾತೃತ್ವದ ನಿರ್ಮಾಣ.
- ❖ ವೈಚಾರಿಕತೆಯ ತುಲನಾತ್ಮಕ ಅಧ್ಯಯನ ನಡೆಸುವುದು.
- ❖ ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವುದು.

**ಅನಿಬೆಸೆಂಟ್**

- ❖ **ಐರ್ಲೆಂಡ್** ದೇಶದ ಮಹಿಳೆ **ಅನಿಬೆಸೆಂಟ್** ಇದರ ಕಾರ್ಯ ಚಟುವಟಿಕೆಗಳನ್ನು ಭಾರತದಲ್ಲಿ ಆರಂಭಿಸಿದರು.
- ❖ ಭಾರತದಲ್ಲಿ ಇದಕ್ಕೆ **ನವಚೈತನ್ಯ** ನೀಡಿದರು.
- ❖ ಉಪನ್ಯಾಸಗಳ ಮೂಲಕ **ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ** ಬಿತ್ತಿದರು.
- ❖ ಸಮಾಜದಲ್ಲಿ **ಸಮಾನತೆ** & **ವಿಶ್ವಸೋದರತೆಯನ್ನು** ವೃದ್ಧಿಸುವುದು & ಸಾಮರಸ್ಯ ಸಾಧಿಸಲು ಪ್ರಯತ್ನ.
- ❖ ಇವರು ಸ್ವಾತಂತ್ರ್ಯ ಚಳುವಳಿಯನ್ನು ವ್ಯಾಪಕವಾಗಿ ಬೆಂಬಲಿಸಿದರು
- ❖ **'ನ್ಯೂ ಇಂಡಿಯಾ'** ಎಂಬ ಪತ್ರಿಕೆಯನ್ನು ಆರಂಭಿಸಿದರು.
- ❖ 1916ರಲ್ಲಿ **ಹೋಂರೂಲ್ ಚಳುವಳಿಯನ್ನು** ಆರಂಭಿಸಿದರು.
- ❖ 1917ರ **ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೆಯಾಗಿದ್ದರು**.
- ❖ ಭಾರತದ ತಾತ್ವಿಕತೆ ಹಾಗೂ ಸ್ವಾತಂತ್ರ್ಯ ಚಳುವಳಿಗೆ ಕೊಡುಗೆ ನೀಡಿದರು.

**ಅಧ್ಯಾಯ–5**

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ–1857

- ➢ ಇದನ್ನು ಭಾರತೀಯ ಇತಿಹಾಸಕಾರರು **"ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ"** ಎಂದು ಹಾಗೂ ಇಂಗ್ಲೀಷ್ ಇತಿಹಾಸಕಾರರು **"ಸಿಪಾಯಿ ದಂಗೆ"** ಎಂದು ಕರೆದರು.

**ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು:–**

- ✓ ರಾಜಕೀಯ ಕಾರಣಗಳು
- ✓ ಆರ್ಥಿಕ ಕಾರಣಗಳು
- ✓ ಆಡಳಿತಾತ್ಮಕ ಕಾರಣಗಳು
- ✓ ಸೈನಿಕ ಕಾರಣಗಳು
- ✓ ತಕ್ಷಣದ ಕಾರಣ

**ರಾಜಕೀಯ ಕಾರಣಗಳು:–**

- ❖ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಹಲವು ದೇಶೀಯ ಸಂಸ್ಥಾನಗಳು ತನ್ನ ಅಸ್ತಿತ್ವ ಕಳೆದುಕೊಂಡವು.
- ❖ ಉದಾ:– ಸತಾರ, ಜೈಪುರ, ಝಾನ್ಸಿ, ಉದಯಪುರ
- ❖ ಡಾಲ್‌ಹೌಸಿಯು ತಂಜಾವೂರು & ಕರ್ನಾಟಿಕ್ ನವಾಬರ ರಾಜ ಪದವಿಗಳನ್ನು ರದ್ದು ಪಡಿಸಿದರು.
- ❖ ಮೊಘಲ್ ಚಕ್ರವರ್ತಿ & ಔದ್‌ನ ನವಾಬರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಿದರು.
- ❖ ಇದರಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**ಆರ್ಥಿಕ ಕಾರಣಗಳು:–**

- ➢ ಇಂಗ್ಲೇಂಡಿನ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಭಾರತದ ಕರಕುಶಲ & ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.
- ➢ ಇಂಗ್ಲೇಂಡ್ ವ್ಯಾಪಾರ ರಾಷ್ಟ್ರವಾಗೀರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು.
- ➢ ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು.
- ➢ ಹಲವಾರು ನೇಕಾರರು ತಮ್ಮ ವೃತ್ತಿಯನ್ನು ಕಳೆದುಕೊಂಡರು.
- ➢ ಗೃಹ ಕೈಗಾರಿಕೆಗಳು ಆರ್ಥಿಕ ನಷ್ಟ ಅನುಭವಿಸಿದವು
- ➢ ಭಾರತದ ವಸ್ತುಗಳಿಗೆ ಇಂಗ್ಲೇಂಡಿನಲ್ಲಿ ದುಬಾರಿ ಸುಂಕ ಹೇರಿದರು.
- ➢ ಜಮೀನ್ದಾರಿ ಪದ್ಧತಿಯಿಂದ ಜಮೀನ್ದಾರರು ಕೃಷಿಕರನ್ನು ಶೋಷಿಸಿದರು.
- ➢ **ಇನಾಂ ಆಯೋಗ** ನೇಮಿಸಿ ಇನಾಂ ಭೂಮಿಯನ್ನು ವಾಪಸ್ಸು ಪಡೆದರು.

- ಇದರಿಂದ ಕೃಷಿಕರಿಗೆ ಅವಮಾನ & ಆರ್ಥಿಕಸಂಕಷ್ಟ ಅನುಭವಿಸಿದರು.
- ಇದು ರೈತರ ಮಹಾನ್ ಪ್ರತಿಭಟನೆಗೆ ಕಾರಣವಾಯಿತು.

**ಆಡಳಿತಾತ್ಮಕ ಕಾರಣಗಳು:–**

- ✓ ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆ ಜಾರಿ
- ✓ ಇದರಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮ ಅನ್ವಯ
- ✓ ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಗಿತ್ತು.
- ✓ ಇಂಗ್ಲೀಷ್ ನ್ಯಾಯಾಧೀಶರು ಇಂಗ್ಲೀಷರ ಪರವಾಗಿ ನ್ಯಾಯ ನೀಡುತ್ತಿದ್ದರು.
- ✓ ಹೊಸ ಕಾನೂನಿನ ನಿಯಮಗಳು ಜನರಿಗೆ ಅರಿವಾಗಲಿಲ್ಲ.

**ಸೈನಿಕ ಕಾರಣಗಳು:–**

- ❖ ಭಾರತೀಯ ಸೈನಿಕರ ಸ್ಥಿತಿಯು ಗಂಭೀರವಾಗಿತ್ತು.
- ❖ ಭಾರತೀಯ ಸೈನಿಕರಿಗೆ ಸ್ಥಾನಮಾನ, ವೇತನ ಬಡ್ತಿ ಅವಕಾಶಗಳು ಇರಲಿಲ್ಲ.
- ❖ ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯ
- ❖ ಇದು ಧಾರ್ಮಿಕವಾಗಿ ಸೈನಿಕವಾಗಿ ಪ್ರಚೋದಿಸಿತು.

**ಹೋರಾಟದ ಸ್ಫೋಟ ಮತ್ತು ಹರಡುವಿಕೆ:–**

- ಭಾರತೀಯ ಸೈನಿಕರು ಪ್ರಮಾಣದಲ್ಲಿ ಹೆಚ್ಚಿದ್ದರಿಂದ ಇಂಗ್ಲೀಷ್ ಸೈನಿಕರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸ.
- ಸೈನಿಕರಿಗೆ **'ರಾಯಲ್ ಎನ್‌ಫೀಲ್ಡ್'** ಎಂಬ ನವೀನ ಬಂದೂಕುಗಳನ್ನು ನೀಡಿದರು.
- ಈ ಬಂದೂಕುಗಳ **ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬು** ಸವರಿದ್ದಾರೆ ಎಂಬ ವದಂತಿ ಹಬ್ಬಿತು.
- **ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಂರಿಗೆ ಹಂದಿ ನಿಷಿದ್ಧ.**
- ಈ ತುಪಾಕಿಗಳನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಇಂಗ್ಲೀಷರು ಆದೇಶಿಸಿದಾಗ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು.
- **ಮಂಗಲಪಾಂಡೆ** ಎಂಬ ಸೈನಿಕ ಬ್ರಿಟಿಷ್ ಸೈನ್ಯ ಅಧಿಕಾರಿಯನ್ನು ಕೊಂದನು.
- ಪರಿಣಾಮವಾಗಿ ಮಂಗಲಪಾಂಡೆಯನ್ನು ಬಂಧಿಸಿ ಗಲ್ಲಿಗೇರಿಸಲಾಯಿತು.
- **ಮೀರತ್**‌ನಲ್ಲಿನ ಸೈನಿಕರು ಕೂಡ ತುಪಾಕಿಗಳನ್ನು ಬಳಸಲು ನಿರಾಕರಿಸಿದರು.
- ಮೀರತ್‌ನಲ್ಲಿ ದಂಗೆ ಉಂಟಾಗಿ ಸೈನಿಕರು ಸೆರೆಮನೆಗೆ ನುಗ್ಗಿ ಬಂಧಿತ ಸೈನಿಕರನ್ನು ಬಿಡಿಸಿದರು.
- ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಂದಿಯಾಯಿತು.
- ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿದರು.
- ಕೆಂಪುಕೋಟೆಗೆ ಮುತ್ತಿಗೆ ಹಾಕಿ ಮೊಘಲ್ **ದೊರೆ 'ಎರಡನೇ ಬಹದ್ದೂರ್ ಷಾ'**ನನ್ನು **"ಭಾರತದ ಚಕ್ರವರ್ತಿ"** ಎಂದು ಘೋಷಿಸಿದರು.
- ಇದು ಮುಂದೆ **ದೆಹಲಿ, ಕಾನ್ಪುರ, ಝಾನ್ಸಿ**ಗಳಿಗೆ ಹರಡಿತು.
- **ಕಾನ್ಪುರ**ದಲ್ಲಿ **'ನಾನಾ ಸಾಹೇಬ'** ನ ನೇತೃತ್ವದಲ್ಲಿ, **ಝಾನ್ಸಿ**ಯಲ್ಲಿ **ರಾಣಿ ಲಕ್ಷ್ಮೀಬಾಯಿಯ** ನೇತೃತ್ವದಲ್ಲಿ ದಂಗೆ ಉಂಟಾಯಿತು.
- ರಾಣಿ ಲಕ್ಷ್ಮೀಬಾಯಿ ಇಂಗ್ಲೀಷರ ವಿರುದ್ಧ ಹೋರಾಡಿ **ಗ್ವಾಲಿಯರ್**‌ನ್ನು ಪಡೆದಳು.
- ಈ ಯುದ್ಧದಲ್ಲಿ ರಾಣಿ ಲಕ್ಷ್ಮೀಬಾಯಿ ಶೌರ್ಯದಿಂದ ಹೋರಾಡುತ್ತಾ ಅಸುನೀಗಿದಳು.
- ರಾಣಿಯು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನ ಪಡೆದಿದ್ದಾಳೆ.

**ದಂಗೆಯ ವಿಫಲತೆಗೆ ಕಾರಣಗಳು:–**

- ✓ ಇದು ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ.
- ✓ ಇದು ಸಿಪಾಯಿಗಳ ಸ್ವಹಿತಾಸಕ್ತಿ ಮತ್ತು ಹಕ್ಕುಗಳಿಗಾಗಿ ನಡೆದಿತ್ತು.
- ✓ ಇದು ಯೋಜಿತ ಹೋರಾಟವಾಗಿರಲಿಲ್ಲ.
- ✓ ಭಾರತೀಯ ಸೈನಿಕರಲ್ಲಿ ಒಗಟ್ಟು ಇರಲಿಲ್ಲ.
- ✓ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ
- ✓ ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ.
- ✓ ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ✓ ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ
- ✓ ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು.

**ದಂಗೆಯ ಪರಿಣಾಮಗಳು:–**

- ❖ ಭಾರತ ಬ್ರಿಟನ್ನಿನ ರಾಣಿಯ ಆಡಳಿತಕ್ಕೆ ವರ್ಗಾವಣೆ.
- ❖ ಭಾರತದ ವ್ಯವಹಾರಗಳನ್ನು ಬ್ರಿಟಿಷ್ ಪಾಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.

RAMALINGAPPA L

- ❖ 1858ರಲ್ಲಿ ಬ್ರಿಟನ್ನಿನ ರಾಣಿ ಹೊರಡಿಸಿದ ಘೋಷಣೆಯನ್ನು **'ಭಾರತೀಯ ಮಹಾಸನ್ನದು'** ಎನ್ನುವರು
- ❖ ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ❖ ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ❖ ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು.
- ❖ ಕಾನೂನಿನ ಮುಂದೆ ಸಮಾನತೆ
- ❖ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.
- ❖ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು.

**ಅಧ್ಯಾಯ-6**

## ಸ್ವಾತಂತ್ರ್ಯ ಹೋರಾಟ

- ➢ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಹಲವು ಬದಲಾವಣೆ ಹಾಗೂ ಸುಧಾರಣೆಗಳಾದವು.
- ➢ **ಸಾರಿಗೆ-ಸಂಪರ್ಕ, ಪತ್ರಿಕೋದ್ಯಮ, ಸಂಘಗಳ ಸ್ಥಾಪನೆ, ಇಂಗ್ಲೀಷ್ ಶಿಕ್ಷಣದ ವಿಸ್ತರಣೆ, ಸಾಂಸ್ಕೃತಿಕ ಘಟನೆಗಳ ಹುಟ್ಟು, ಬರಗಾಲ & ಬ್ರಿಟಿಷ್ ಆರ್ಥಿಕ ನೀತಿಗಳು ಸೃಷ್ಟಿಸಿದ ಬಿಕ್ಕಟ್ಟು ಮತ್ತು ಆಡಳಿತದಲ್ಲಿ ಸುಧಾರಣೆ**ಗಳಾದವು.
- ➢ ಜನರು ಸಂಘಟಿತರಾಗಿ ಸಂಸ್ಥೆಗಳನ್ನು ಹುಟ್ಟುಹಾಕಿದರು.
- ➢ **ಲಾರ್ಡ್ ಲಿಟ್ಟನ್** ಪತ್ರಿಕೋದ್ಯಮದಲ್ಲಿ ಜನರನ್ನು ನಿಯಂತ್ರಿಸಲು 1878ರಲ್ಲಿ **'ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ'** ಜಾರಿ.
- ➢ **ಲಾರ್ಡ್ ರಿಪ್ಪನ್ ಇಲ್ಬರ್ಟ್ ಮಸೂದೆಯ**ನ್ನು ಜಾರಿಗೆ ತಂದು ಏಕರೂಪ ಕಾನೂನು ವ್ಯವಸ್ಥೆಗೆ ದಾರಿ.
- ➢ ಮುಂದೆ ಸಶಸ್ತ್ರ ಹೋರಾಟಗಳು ಉದ್ಭವವಾಗಬಾರದೆಂದು 1858ರ ರಾಣಿ ಮಹಾಸನ್ನದು ಘೋಷಣೆ.
- ➢ ಇದು ಭಾರತೀಯರನ್ನು ಬ್ರಿಟನ್ನಿನ ಪ್ರಜೆಗಳೆಂದು ಪರಿಗಣಿಸಿತು.
- ➢ ಉನ್ನತ ವರ್ಗದ ಇಂಗ್ಲೀಷ್ ವಿದ್ಯಾಭ್ಯಾಸ ಕಲಿತ ಹೊಸ ಪೀಳಿಗೆಯ ಭಾರತೀಯರು ತಮ್ಮ ಹಕ್ಕುಗಳಿಗಾಗಿ ಸಂವಿಧಾನಾತ್ಮಕ ಹೋರಾಟ ಆರಂಭಿಸಿದರು.
- ➢ ಇದರ ಫಲವೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ
- ➢ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೂ ಮುಂಚೆ ಇದ್ದ ಸಂಸ್ಥೆಗಳು
  - ▪ ದಿ ಹಿಂದೂ ಮೇಳ
  - ▪ ದಿ ಈಸ್ಟ್ ಇಂಡಿಯಾ ಅಸೋಸಿಯೇಷನ್
  - ▪ ಪೂನಾ ಸಾರ್ವಜನಿಕ ಸಭಾ
  - ▪ ದ ಇಂಡಿಯನ್ ಅಸೋಸೊಯೇಷನ್

### ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಚನೆ

- ➢ ನಂತರ ಅಖಿಲ ಭಾರತ ಮಟ್ಟದ ಸಂಸ್ಥೆ ಸ್ಥಾಪನೆಯಾಯಿತು.
- ➢ ಸ್ಥಾಪನೆ:- ಡಿಸೆಂಬರ್ 1885
- ➢ ಸ್ಥಳ:- ಬಾಂಬೆ ನಗರ
- ➢ ಸ್ಥಾಪಕ:- ಎ.ಒ.ಹ್ಯೂಮ್
- ➢ ಪ್ರಥಮ ಸಮ್ಮೇಳನ:- ಬಾಂಬೆ ನಗರ
- ➢ ಮೊದಲ ಅಧ್ಯಕ್ಷರು:- ಡಬ್ಲ್ಯೂ.ಸಿ ಬ್ಯಾನರ್ಜಿ
- ➢ ಸ್ಥಾಪನೆಯ ಉದ್ದೇಶ:- ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಮತ್ತು ರಾಷ್ಟ್ರೀಯ ಮನೋಭಾವ ಬೆಳೆಸುವುದು.
- ➢ ಆರಂಭಿಕ ಸಭೆಯ ಉದ್ದೇಶ:- ರಾಷ್ಟ್ರೀಯ ಐಕ್ಯತೆ ಸಾಧಿಸುವುದು.

### ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮುಂದಿನ ನಡೆ:-

- ❖ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಿಗೊಳಿಸಲು ಪ್ರಯತ್ನ
- ❖ ದೇಶೀಯ ಭಾಷೆಗಳ ಪತ್ರಿಕೆಗಳಲ್ಲಿ ರಾಜಕೀಯ ಸಮಸ್ಯೆಗಳ ಚರ್ಚೆ
- ❖ ರಾಜಕೀಯ ಸಮಸ್ಯೆಗಳನ್ನು ಜನರಲ್ಲಿ ಮನದಟ್ಟು ಮಾಡುವುದು.
- ❖ ಕಾಂಗ್ರೆಸ್ ಬಲವರ್ಧನೆಯಿಂದ ಬ್ರಿಟಿಷರು "ಒಡೆದು ಆಳುವ ನೀತಿ" ಜಾರಿ.
- ❖ ಕೊನೆಗೆ ಕಾಂಗ್ರೆಸ್‌ನಲ್ಲಿ ಭಿನ್ನಮತ ಉಂಟಾಗಿ ಎರಡು ಭಾಗಗಳಾದರು.

### ಮಂದಗಾಮಿಗಳ ಯುಗ (1885-1906)

- ✓ ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಆರಂಭಿಕ 20 ವರ್ಷಗಳನ್ನು **"ಮಂದಗಾಮಿ ಯುಗ"** ಎನ್ನುತ್ತಾರೆ.
- ✓ ಈ ಕಾಲವನ್ನು **"ಉದಾರ ರಾಷ್ಟ್ರವಾದದ ಕಾಲ"** ಎನ್ನುವರು.
- ✓ **ಮಂದಗಾಮಿ ನಾಯಕರು:-** ಎಂ.ಜಿ.ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾ ಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ.

**ಮಂದಗಾಮಿಗಳ ಬೇಡಿಕೆಗಳು:-**

- ➢ ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ
- ➢ ಸಂವಿಧಾನಿಕ ಚೌಕಟ್ಟಿನಲ್ಲಿ ಪ್ರಾರ್ಥನೆ & ಮನವಿಗಳ ಮೂಲಕ ಬೇಡಿಕೆ.
- ➢ ಜನರಿಗೆ ರಾಜಕೀಯ ಶಿಕ್ಷಣ ನೀಡುವುದು.
- ➢ ದೇಶದ ಕೈಗಾರಿಕೆಗಳ ಅಭಿವೃದ್ಧಿ



RAMALINGAPPA

- ಸೈನಿಕ ವೆಚ್ಚ ಕಡಿಮೆ ಮಾಡುವುದು.
- ಉತ್ತಮ ಶಿಕ್ಷಣ ನೀಡುವುದು.
- ಬಡತನ ಅಧ್ಯಯನ ಮಾಡುವುದು.
- ಮೊದಲ ಬಾರಿಗೆ ಬ್ರಿಟಿಷ್ ಆಳ್ವಿಕೆಯ ದುಷ್ಪರಿಣಾಮಗಳ ಅವಲೋಕನ.

**ದಾದಾ ಬಾಯಿ ನವರೋಜಿಯ ಸಂಪತ್ತಿನ ಪ್ರವಾಹ ಸಿದ್ಧಾಂತ:–**

- ಭಾರತದ ಸಂಪತ್ತು ಇಂಗ್ಲೇಂಡಿಗೆ ಸೋರಿ ಹೋಗುವುದನ್ನು ಅಂಕಿ–ಅಂಶಗಳ ಮೂಲಕ ತಿಳಿಸಿದರು.
- ಸಂಪತ್ತು ಹರಿದು ಹೋಗುವುದಕ್ಕೆ ಕಾರಣಗಳು:–
  - ✓ ಆಮದು ಹೆಚ್ಚಿಸಿ ರಫ್ತು ಕಡಿಮೆ ಮಾಡಿದ್ದು
  - ✓ ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ
  - ✓ ನಿವೃತ್ತಿ ವೇತನ
  - ✓ ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸುವುದು.

**ತೀವ್ರವಾದಿಗಳ ಯುಗ (1906–1920)**

- ಇವರು ಮಂದಗಾಮಿಗಳನ್ನು **'ರಾಜಕೀಯ ಭಿಕ್ಷುಕರು'** ಎಂದು ಕರೆದರು.
- ಮಂದಗಾಮಿಗಳ ಮೃದುಧೋರಣೆಗಳನ್ನು ಟೀಕಿಸುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾಧಿಸಿದ ಬಣವನ್ನು **'ತೀವ್ರವಾದಿಗಳು'** ಎನ್ನುವರು.
- **ಪ್ರಮುಖ ತೀವ್ರಗಾಮಿ ನಾಯಕರು:–** ಅರಬಿಂದೋ ಘೋಷ್, ಬಿಪಿನ್ ಚಂದ್ರಪಾಲ್, ಲಾಲ ಲಜಪತ್ ರಾಯ್, ಬಾಲಗಂಗಾಧರ್ ತಿಲಕ್.

**ಬಂಗಾಳ ವಿಭಜನೆ:–**

- ಬಂಗಾಳವು ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು.
- **ಲಾರ್ಡ್ ಕರ್ಜನ್** ಆಡಳಿತಾತ್ಮಕ ನೆಪಮಾಡಿಕೊಂಡು ವಿಭಜನೆ ಯೋಜನೆ ರೂಪಿಸಿದ.
- **ಹಿಂದೂಗಳ ಬಹುಸಂಖ್ಯಾತ ಪೂರ್ವ ಬಂಗಾಳ ಮತ್ತು ಮುಸ್ಲಿಂ ಬಹುಸಂಖ್ಯಾತ ಪಶ್ಚಿಮ ಬಂಗಾಳ** ಎಂದು 1905ರಲ್ಲಿ ವಿಭಜಿಸಿದನು.
- ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚು ರೂಪಿಸಿದನು.
- ಇದನ್ನು **ಭಾರತೀಯ ರಾಷ್ಟ್ರೀ ಕಾಂಗ್ರೆಸ್** ವಿರೋಧಿಸಿತು.
- 1906ರಲ್ಲಿ ಸ್ಥಾಪನೆಯಾದ **ಮುಸ್ಲಿಂ ಲೀಗ್** ಇದನ್ನು ಬೆಂಬಲಿಸಿತು.
- ಇದರ ವಿರುದ್ಧ ದೇಶಾದ್ಯಂತ "ಸ್ವರಾಜ್ಯ ಚಳುವಳಿ" ಆರಂಭವಾಯಿತು.
- ಈ ಚಳುವಳಿಯನ್ನು ದೇಶಾದ್ಯಂತ ಕೊಂಡೊಯ್ದರು.
- ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು.
- ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ 1911 ರಲ್ಲಿ ಬಂಗಾಳದ ವಿಭಜನೆಯನ್ನು ಹಿಂಪಡೆಯಿತು.

**ಬಾಲಗಂಗಾಧರ್ ತಿಲಕ್ ಹೋರಾಟ:–**

- ಇವರು **"ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತಿರುವೆ"** ಎಂದು ಘೋಷಿಸಿದರು.
- ಪೂರ್ಣ ಸ್ವರಾಜ್ಯ ತೀವ್ರವಾದಿಗಳ ಗುರಿಯಾಗಿತ್ತು.
- ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.
- ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿದರು (ಶಿವಾಜಿ ಜಯಂತಿ ಮತ್ತು ಗಣೇಶ ಹಬ್ಬ)
- ಇವರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲೀಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳ ಆರಂಭ.
- ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು.
- ಇವರ ಕ್ರಾಂತಿಕಾರಕ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣ
- ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿತು.
- ತಿಲಕರು ಜೈಲಿನಲ್ಲಿ **'ಗೀತಾ ರಹಸ್ಯ'** ಕೃತಿಯನ್ನು ರಚಿಸಿದರು.

**ಕ್ರಾಂತಿಕಾರಿಗಳು:–**

- ✓ ಇವರು ಪೂರ್ಣ ಸ್ವಾತಂತ್ರ್ಯದ ಕನಸು ಕಂಡವರು
- ✓ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಭಾರತದಿಂದ ಓಡಿಸಬಹುದೆಂದು ನಂಬಿದ್ದರು.
- ✓ ರಹಸ್ಯ ಸಂಘಗಳ ಮೂಲಕ ದೇಶ ವಿದೇಶಿಗಳಲ್ಲಿ ಶಾಖೆ ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ತರಬೇತಿ ನೀಡುತ್ತಿದ್ದರು
- ✓ ರಹಸ್ಯ ಸಂಘಗಳು:– **ಅನುಶೀಲನ ಸಮಿತಿ, ಅಭಿನವ ಭಾರತ**
- ✓ ಗುರಿ ಸಾಧನೆಗೆ ಬಾಂಬು ಮತ್ತು ಬಂದೂಕುಗಳ ಪ್ರಯೋಗ
- ✓ ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಜೀವಾವಧಿ ಶಿಕ್ಷೆ ಹಾಗೂ ಗಲ್ಲು ಶಿಕ್ಷೆ ವಿಧಿಸಿದರು.
- ✓ ಪ್ರಮುಖ ಕ್ರಾಂತಿಕಾರಿಗಳು:– **ವಿ.ಡಿ ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಘೋಷ್,**

RAMALINGAPPA L

**ಮೇಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ್ ಬಿಸ್ಮಿಲ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್**

**ಗಾಯಿಡಿನ್ ಲೂ:–**

- ❖ ಆಂಗ್ಲಪ್ರಭುತ್ವ & ಕ್ರೈಸ್ತ ಮಿಶನರಿಗಳ ದುಷ್ಟಕೂಟ ಈಶಾನ್ಯ ಭಾಗವನ್ನು ಬಲಿತೆಗೆದುಕೊಳ್ಳುತ್ತಿರುವ ಸಂಗತಿ ಅರಿತು **'ಜಾದೋನಾಂಗ್'** ಎಂಬ **ನಾಗಾಬುಡಕಟ್ಟು ತರುಣ ಯೋಧಪಡೆ**ಯನ್ನು ಕಟ್ಟಿದರು.
- ❖ ಇವರ ಸೇನೆಯಲ್ಲಿ ಮಹಿಳೆಯರಿಗೆ ಅವಕಾಶವಿರಲಿಲ್ಲ.
- ❖ **ಗಾಯಿಡಿನ್ ಲೂ** ಎಂಬ **ಯುವತಿ ಈಶಾನ್ಯ ಭಾರತದ ಮಹಿಳೆಯರ**ನ್ನು ಸೇರಿಸಿ ಹೊಸ ಪಡೆಯನ್ನು ಕಟ್ಟಿ **'ಜಾದೋನಾಂಗ್'** ಜೊತೆ ಸೇರಿ ಬ್ರಿಟಿಷರ ವಿರುದ್ಧ ಹೋರಾಡಿದಳು.
- ❖ ಧಾರ್ಮಿಕ ಜಾಗೃತಿಗಾಗಿ ಗಾಯಿಡಿನ್ ಲೂ **"ಹರಕ್ಕಾ"** ಎಂಬ ಸಂಸ್ಥೆಯನ್ನು ಕಟ್ಟಿದರು.
- ❖ ಸರ್ಕಾರ **ಜಾದೋನಾಂಗ್**ರನ್ನು ಬಂಧಿಸಿ **'ಸಿಲ್ಚರ್'** ಜೈಲಲ್ಲಿಟ್ಟು ದೇಶದ್ರೋಹ ಆರೋಪ ಹೊರಿಸಿ **1931 ಆಗಸ್ಟ್ 29** ರಂದು ಗಲ್ಲಿಗೇರಿಸಿತು.
- ❖ ನಂತರ ಗಾಯಿಡಿನ್ ಲೂ ಎರಡೂ ಸೇನೆಗಳ ನೇತೃತ್ವ ವಹಿಸಿ **ಶಿವಾಜಿ ರೀತಿಯಲ್ಲಿ ಗೆರಿಲ್ಲಾ ಯುದ್ಧ ತಂತ್ರದಿಂದ** ಹೋರಾಡಿದಳು
- ❖ ಈಕೆಯ ಹೋರಾಟದಿಂದ ಎಂಟೇ ತಿಂಗಳಲ್ಲಿ ಆಂಗ್ಲರು ತತ್ತರಿಸಿದರು.
- ❖ ಇವಳ ಹೋರಾಟಕ್ಕೆ ಹಳ್ಳಿಹಳ್ಳಿಗಳೇ ಸಾಥ್ ನೀಡಿದವು.
- ❖ ಕೆಲವರು ಆಕೆಗೆ ಆಂಗ್ಲಸೈನ್ಯದ ಕುರಿತು ಮಾಹಿತಿ ನೀಡಿದರು
- ❖ ಆಕೆಯ ವಿರುದ್ಧ ಕಮಾಂಡೋ ಕಾರ್ಯಾಚರಣೆಗೆ ಇಳಿದ **'ಮ್ಯಾಕ್ ಡೊನಾಲ್ಡ್'** ನು **"ಡಾ.ಹರಾಲು"** ಎಂಬಾತನ ಸಹಕಾರದಿಂದ ಆಕೆಯನ್ನು ಬಂಧಿಸಿದ.
- ❖ ಇವಳು **1932ರ ಅಕ್ಟೋಬರ್ 12** ರಿಂದ ಸ್ವಾತಂತ್ರ್ಯ ಸಿಗುವವರೆಗೂ ಜೈಲಲ್ಲೇ ಇರಬೇಕಾಯಿತು.
- ❖ ಈಕೆಯ ಸುಳಿವು ನೀಡಿದ ಹರಾಲುಗೆ ಆಂಗ್ಲ ಸರ್ಕಾರವು **"ಕೈಸರ್–ಇ–ಹಿಂದ್"** ಬಿರುದು ನೀಡಿತು.

**ಗಾಂಧಿಯುಗ**

- ➢ ಮಹಾತ್ಮ ಗಾಂಧೀಜಿ ಇಂಗ್ಲೇಂಡಿನಲ್ಲಿ ಬ್ಯಾರಿಸ್ಟರ್ ಪದವಿ ಮುಗಿಸಿ ವಕೀಲ ವೃತ್ತಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿದರು.
- ➢ ಬ್ರಿಟಿಷರು ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದನೀತಿಯಿಂದ ಭಾರತೀಯರು ಹಾಗೂ ಆಫ್ರಿಕರನ್ನು ಕೀಳಾಗಿ ಕಾಣುತ್ತಿದ್ದರು.
- ➢ ಕೂಲಿ ಕೆಲಸ ಮಾಡುತ್ತಿದ್ದ ಅನೇಕರು ಬಿಳಿಯಜನರೊಡನೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.
- ➢ ಸಹ ಭೋಜನ ಮಾಡಬಾರದಾಗಿತ್ತು.
- ➢ ಬಿಳಿಯರು ಕೂಲಿ ಜನರೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳುತ್ತಿದ್ದರು.
- ➢ ಗಾಂಧೀಜಿಯವರು ಅಂತಹವರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಿದರು.
- ➢ ದಕ್ಷಿಣ ಆಫ್ರಿಕಾದಲ್ಲಿ ಮಾಡಿದ ಚಳುವಳಿಯ ಸ್ಫೂರ್ತಿಯಿಂದ ಭಾರತದಲ್ಲಿ ಬ್ರಿಟಿಷರ ವಿಮೋಚನೆಗೆ ಹೋರಾಡಿದರು.
- ➢ ಗಾಂಧೀಜಿಯ ಪ್ರವೇಶದಿಂದ ಸ್ವಾತಂತ್ರ್ಯ ಚಳುವಳಿಗೆ ಹೊಸ ಆಯಾಮ ದೊರೆಯಿತು.
- ➢ ಗಾಂಧೀಜಿಯು ತಮ್ಮ ಹೋರಾಟದಲ್ಲಿ **'ಪರೋಕ್ಷ ಪ್ರತಿರೋಧ' 'ಅಹಿಂಸೆ' ಮತ್ತು 'ಸತ್ಯಾಗ್ರಹ'** ವನ್ನು ಬಳಸಿದರು.
- ➢ ಇವರು ತಮ್ಮ ಸಿದ್ಧಾಂತಗಳನ್ನು **"ಯಂಗ್ ಇಂಡಿಯಾ"** ಪತ್ರಿಕೆಯಲ್ಲಿ ವ್ಯಕ್ತಪಡಿಸಿದರು.
- ➢ ಬ್ರಿಟಿಷರು **ಫೆಬ್ರವರಿ 1919**ರಲ್ಲಿ **ರೌಲತ್ ಕಾಯಿದೆ**ಯನ್ನು ಜಾರಿಗೆ ತಂದರು.
- ➢ ಇದು ಗುಮಾನಿಯ ಮೇಲೆ ಜನರನ್ನು ಬಂಧಿಸಿ ವಿಚಾರಣೆ ನಡೆಸುವ ಅಧಿಕಾರವನ್ನು ನ್ಯಾಯಾಧೀಶರಿಗೆ ನೀಡಿತು.
- ➢ ಗಾಂಧೀಜಿಯವರು ಇದರ ವಿರುದ್ಧ ಹೋರಾಡಲು **'ಸತ್ಯಾಗ್ರಹ'** ಅಸ್ತ್ರವನ್ನು ಬಳಸಿದರು.

**ಜಲಿಯನ್‌ವಾಲಾಬಾಗ್ ಹತ್ಯಾಕಾಂಡ:–**

- ✓ ರೌಲತ್ ಕಾಯಿದೆಯ ವಿರುದ್ಧ **ಪಂಜಾಬಿನಲ್ಲಿ** ವ್ಯಾಪಕ ಪ್ರತಿರೋಧ
- ✓ ಸರ್ಕಾರ **ಅಮೃತಸರ ನಗರವನ್ನು ಜನರಲ್ ಡಯರ್** ಎಂಬ ಸೇನಾಧಿಕಾರಿಗೆ ವಹಿಸಿತು.
- ✓ **ಜನರಲ್ ಡಯರ್**ನು ನಗರವನ್ನು **ಸೇನಾಳ್ವಿಕೆಗೆ** ಒಳಪಡಿಸಿ ಸಭೆಗಳನ್ನು ನಿಷೇಧಿಸಿದನು.
- ✓ ಹೋರಾಟಗಾರರು ಜಲಿಯನ್‌ವಾಲಾಬಾಗ್‌ನಲ್ಲಿ ಸಭೆ ಸೇರಲು ನಿರ್ಧರಿಸಿದ್ದರು.
- ✓ ಇವರಿಗೆ ನಿಷೇಧದ ಬಗ್ಗೆ ತಿಳಿದಿರಲಿಲ್ಲ.
- ✓ 20 ಸಾವಿರ ಜನರಿರುವ ಸಭೆ ಶಾಂತಿಯಿಂದ ನಡೆಯುತ್ತಿತ್ತು.
- ✓ ಸೈನ್ಯದೊಂದಿಗೆ ಬಂದ ಜನರಲ್ ಡಯರ್ ಮುನ್ಸೂಚನೆ ನೀಡದೆ ಗುಂಡಿನ ಮಳೆಗರೆದರು.
- ✓ ಇದರಲ್ಲಿ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು.

- ✓ ಇದರ ವಿಚಾರಣೆಗಾಗಿ ಸರ್ಕಾರವು **"ಹಂಟರ್ ಆಯೋಗ"** ವನ್ನು ನೇಮಿಸಿತು.
- ✓ ಇದರಿಂದ ಯಾವುದೇ ಪ್ರಯೋಜನವಾಗದೇ ಮತ್ತೆ ಭಾರತೀಯರ ಮೇಲೆ ದೌರ್ಜನ್ಯ ಮುಂದುವರೆಯಿತು.

**ಖಿಲಾಫತ್ ಚಳುವಳಿ:-**

- ➢ ಟರ್ಕಿ ಸುಲ್ತಾನರು ಧಾರ್ಮಿಕ ಮುಂಡರನ್ನು ಖಲೀಫರೆಂದು ಕರೆಯುತ್ತಿದ್ದರು.
- ➢ 1ನೇ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ಬ್ರಿಟಿಷರು ನಡೆಸಿದ ದೌರ್ಜನ್ಯವನ್ನು ಖಂಡಿಸಿ ಮುಸ್ಲಿಂರು ಪ್ರತಿಭಟಿಸಿದರು.
- ➢ ಟರ್ಕರ ಪರವಾಗಿ ಭಾರತದಲ್ಲಿ ಮಹಮದ್ ಆಲಿ ಮತ್ತು ಶೌಕತ್ ಆಲಿ ಬ್ರಿಟಿಷರ ವಿರುದ್ಧ ಬಂಡೆದ್ದರು.
- ➢ ಇದರಲ್ಲಿ ಮುಸ್ಲಿಂರು ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಒಟ್ಟಾಗಿ ಹೋರಾಡಿದರೆ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎಂದು ಗಾಂಧೀಜಿ ನಂಬಿದ್ದರು.
- ➢ ಈ ಚಳುವಳಿಯು ಹಿಂದೂ-ಮುಸ್ಲಿಂರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪಿ ಆಂದೋಲನವಾಗಿತ್ತು.

**ಅಸಹಕಾರ ಚಳುವಳಿ:-**

- ❖ ಗಾಂಧೀಜಿಯು 1920ರಲ್ಲಿ ಬ್ರಿಟಿಷರ ವಿರುದ್ಧ **ಅಸಹಕಾರ ಚಳುವಳಿಗೆ** ಕರೆ ನೀಡಿದರು.
- ❖ ಇದಕ್ಕೆ ಶಾಲೆ ಕಾಲೇಜುಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಿದರು.
- ❖ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
- ❖ ಭಾರತೀಯ ಗಣ್ಯರು ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು.
- ❖ ಇದನ್ನು ಬೆಂಬಲಿಸಿ **ಮೋತಿಲಾಲ್ ನೆಹರು, ಸಿ.ಆರ್.ದಾಸ್** ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿದರು.
- ❖ ಈ ಸಮಯದಲ್ಲಿ ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಿ ದೇಶಾದ್ಯಂತ ಹರತಾಳ ನಡೆದವು.
- ❖ ಉತ್ತರ ಪ್ರದೇಶದ **ಚೌರಿಚೌರ** ಎಂಬಲ್ಲಿ ಸಾವಿರಾರು ಹೋರಾಟಗಾರರು ಚಳುವಳಿಗೆ ಧುಮುಕಿದರು.
- ❖ 1922ರಲ್ಲಿ ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು.
- ❖ ಕುಪಿತರಾದ ಚಳುವಳಿಗಾರರು ಪೋಲಿಸ್ ಠಾಣೆಗೆ ಬೆಂಕಿ ಹಚ್ಚಿಸದರು ಇದರಲ್ಲಿ 22 ಜನ ಪೋಲಿಸರು ಸಜೀವ ದಹನವಾದರು
- ❖ ಇದರಿಂದ ಗಾಂಧೀಯವರು ಖಿನ್ನರಾಗಿ ಈ ಚಳುವಳಿಯನ್ನು ಹಿಂತೆಗೆದುಕೊಂಡರು
- ❖ ಗಾಂಧೀಜಿಯವರನ್ನು ಹೊಣೆಗಾರರನ್ನಾಗಿಸಿ ಸರ್ಕಾರವು ಗಾಂಧೀಜಿಗೆ 6ವರ್ಷ ಸೆರೆಮನೆ ವಾಸ ವಿಧಿಸಿತು.
- ❖ 1924ರಲ್ಲಿ ಗಾಂಧೀಜಿಯು ಅನಾರೋಗ್ಯದಿಂದ ಬಿಡುಗಡೆಯಾದರು.
- ❖ 1919ರ ಕಾಯ್ದೆಯು ಚುನಾವಣೆಗಳಲ್ಲಿ ಭಾಗವಹಿಸುವ ಅವಕಾಶ ಭಾರತೀಯರಿಗೆ ನೀಡಿತು.
- ❖ ಕೆಲವು ಕಾಂಗ್ರೇಸಿಗರು ಇದು ಸದುದ್ದೇಶ ಹೊಂದಿಲ್ಲವಾದ್ದರಿಂದ ಇದನ್ನು ಬಹಿಷ್ಕರಿಸಿದರು.
- ❖ 1919ರ ಕಾಯ್ದೆಯಡಿ ನಡೆಯುವ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ **ಸಿ.ಆರ್.ದಾಸ್ ಮತ್ತು ಮೋತಿಲಾಲ್ ನೆಹರು "ಸ್ವರಾಜ್ಯ ಪಕ್ಷ"**ವನ್ನು 1923ರಲ್ಲಿ ಸ್ಥಾಪಿಸಿದರು.
- ❖ ಇವರು ಸ್ವರಾಜ್ಯ ಪಕ್ಷವು ಶಾಸನ ಸಭೆಗಳನ್ನು ಪ್ರವೇಶಿಸಿ ಒಳಗಿನಿಂದಲೇ ಸರ್ಕಾರವನ್ನು ವಿರೋಧಿಸುವುದು.
- ❖ **1924ರ ಬೆಳಗಾವಿ ಅಧಿವೇಶನ**ದಲ್ಲಿ ಶಾಸನ ಸಭೆಯನ್ನು ಪ್ರವೇಶಿಸುವ ಸ್ವರಾಜ್ಯದ ಕಾರ್ಯತಂತ್ರವನ್ನು **ಗಾಂಧೀಜಿ** ಒಪ್ಪಿಕೊಂಡರು.
- ❖ ಸ್ವರಾಜ್ಯ ಪಕ್ಷವು ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನಲ್ಲಿ ಸೇರಿತು.
- ❖ 1919ರ ಭಾರತ ಸರ್ಕಾರದ ಕಾಯ್ದೆಯಂತೆ 10ವರ್ಷಗಳ ನಂತರ 1927ರಲ್ಲಿ **'ಜಾನ್ ಸೈಮನ್'** ನೇತೃತ್ವದಲ್ಲಿ ಆಯೋಗವನ್ನು ನೇಮಿಸಿತು.
- ❖ ಇದು **'ಬ್ರಿಟಿಷ್ ಸರ್ಕಾರದ ಸಂಸದೀಯ ಆಯೋಗ'** ಎಂಬ ನೆಪದಿಂದ ಒಬ್ಬ ಭಾರತೀಯರನ್ನು ಒಳಗೊಂಡಿರಲಿಲ್ಲ.
- ❖ ಇದು ಭಾರತೀಯರಿಗೆ ಮಾಡಿದ ಅವಮಾನ ಎಂದು ತಿಳಿದ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸೈಮನ್ ಆಯೋಗವನ್ನು ಬಹಿಷ್ಕರಿಸಿತು.
- ❖ ಇದರ ವಿರುದ್ಧ **"ಸೈಮನ್ ಹಿಂದಕ್ಕೆ ಹೋಗು"** ಎಂಬ ಪ್ರತಿಭಟನೆಗಳಾದವು
- ❖ ಇದರಲ್ಲಿ ಭಾಗವಹಿಸಿದ್ದ **'ಲಾಲ ಲಜಪತ್ ರಾಯರು'** ಬ್ರಿಟಿಷ್ ಸಿಪಾಯಿಗಳ ಲಾಟಿ ಏಟಿನಿಂದ ಮರಣ ಹೊಂದಿದರು.
- ❖ ಭಾರತೀಯ ಹೋರಾಟಗಾರರ ತೀವ್ರತೆಯನ್ನು ಕಂಡ ಬ್ರಿಟಿಷ್ ಸರ್ಕಾರ ಭಾರತೀಯ ಪ್ರತಿನಿಧಿಗಳನ್ನು ಸೇರಿಸಲು **'ದುಂಡು ಮೇಜಿನ ಸಮ್ಮೇಳನ"** ಕರೆದರು.

RAMALINGAPPA L

- 1929ರಲ್ಲಿ **ಜವಾಹರಲಾಲ್ ನೆಹರು** ಅಧ್ಯಕ್ಷತೆಯಲ್ಲಿ **'ಲಾಹೋರ್ ಕಾಂಗ್ರೆಸ್ ಅಧಿವೇನ'** ನಡೆಯಿತು.
- ಇದರಲ್ಲಿ **"ಸಂಪೂರ್ಣ ಸ್ವರಾಜ್ಯ"** ನಮ್ಮ ಗುರಿ ಎಂದು ಕಾಂಗ್ರೆಸ್ ಘೋಷಿಸಿತು.
- **ಜನವರಿ 26, 1930** ರಂದು ಇಡೀ ದೇಶ **'ಸ್ವಾತಂತ್ರ್ಯ ದಿನ'**ವನ್ನು ಆಚರಿಸಿತು.
- ಈ ಅಧಿವೇಶನವು ಕಾನೂನು ಭಂಗ ಚಳುವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು.

**ಸವಿನಯ ಕಾನೂನು ಭಂಗ ಚಳುವಳಿ:–**

- ✓ ಗಾಂಧೀಜಿಯವರು **ವೈಸರಾಯ್ ಇರ್ವಿನ್** ಮುಂದೆ 11 ಬೇಡಿಕೆಗಳನ್ನು ಸಲ್ಲಿಸಿದರು.
- ✓ ಈ 11 ಬೇಡಿಕೆಗಳು ಈಡೇರದೇ ಹೋದಲ್ಲಿ ಕಾನೂನು ಭಂಗ ಚಳುವಳಿ ಮಾಡುವುದಾಗಿ ಘೋಷಿಸಿದರು.
- ✓ ಈ ಬೇಡಿಕೆಗಳನ್ನು ಇರ್ವಿನ್ ಪರಿಗಣಿಸಲಿಲ್ಲ.
- ✓ ಗಾಂಧೀಜಿಯವರು 1930ರಲ್ಲಿ **ಸಬರಿಮತಿ ಆಶ್ರಮ**ದಿಂದ ಸೂರತ್ ಸಮುದ್ರ ತೀರದ **ದಂಡಿಯವರೆಗೆ** ಕಾಲುನಡಿಗೆಯಲ್ಲಿ ಹೊರಟು ತಾವೇ ಉಪ್ಪನ್ನು ತಯಾರಿಸಿ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು.
- ✓ ಇದರಲ್ಲಿ **ವಿಜಯಲಕ್ಷ್ಮೀ ಪಂಡಿತ್, ಕಮಲಾ ನೆಹರು, ವಲ್ಲಭಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್**ರನ್ನು ಗಾಂಧೀಜಿಯ ಜೊತೆ ಬಂಧಿಸಿದರು.
- ✓ 1930ರಲ್ಲಿ **ಲಂಡನ್ನಿನ**ಲ್ಲಿ ಮೊದಲ **ದುಂಡು ಮೇಜಿನ ಸಮ್ಮೇಳನ**ವನ್ನು ಕರೆದು ಭಾರತೀಯರನ್ನು ಹೊರತುಪಡಿಸಿ ಸರ್ಕಾರ ಏಕಮುಖವಾಗಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಿದರು.
- ✓ ಈ ಸಮಾವೇಶದಲ್ಲಿ **ಮೊದಲ ಬಾರಿಗೆ ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ** ಅವಕಾಶ ಕಲ್ಪಿಸಿತು.
- ✓ ಕಾಂಗ್ರೆಸ್ ಮತ್ತು ಗಾಂಧೀಜಿಯವರು ಭಾಗವಹಿಸಲು ನಿರಾಕರಿಸಿದರು.
- ✓ ಇದರಲ್ಲಿ **ದೇಶೀಯ ಸಂಸ್ಥಾನದ ಪ್ರತಿನಿಧಿಗಳು, ಡಾ.ಬಿ.ಆರ್.ಅಂಬೇಡ್ಕರ್, ಎಂ.ಜಿ.ಜಯಕರ್, ತೇಜಬಹದ್ದೂರ್ ಸಪ್ರು, ಮಹಮದ್ ಆಲಿ ಜಿನ್ನಾ, ಶ್ರೀನಿವಾಸ ಶಾಸ್ತ್ರಿ** ಭಾಗವಹಿಸಿದ್ದರು.
- ✓ ಇದರಲ್ಲಿ **ಡೊಮಿನಿಯನ್ ಸ್ಟೇಟಸ್, ಜವಾಬ್ದಾರಿಯುತ ಸರ್ಕಾರ** & **ಮತೀಯ ಪ್ರಾತಿನಿಧ್ಯಗಳನ್ನು** ಸಮ್ಮತಿಸಲಾಯಿತು.
- ✓ ಆದರೆ **ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸಲಿಲ್ಲ** ಆದ್ದರಿಂದ ಈ ಸಮಾವೇಶ ಪೂರ್ಣಗೊಳ್ಳಲಿಲ್ಲ
- ✓ ದುಂಡು ಮೇಜಿನ ಸಮ್ಮೇಳನ ಯಶಸ್ವಿಗೊಳಿಸಲು ಗಾಂಧಿ & ಇರ್ವಿನ್ ನಡುವೆ 1930ರಲ್ಲಿ ಒಪ್ಪಂದ ನಡೆಯಿತು.
- ✓ ಇದರಿಂದ ಕಾಂಗ್ರೆಸ್ ಕಾನೂನು ಭಂಗ ಚಳುವಳಿಯನ್ನು ನಿಲ್ಲಿಸಿ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲು ನಿರ್ಧರಿಸಿತು.
- ✓ ಇದರಲ್ಲಿ **ಮಹಮದ್ ಆಲಿ ಜಿನ್ನಾ ಮತ್ತು ಡಾ.ಬಿ.ಆರ್ ಅಂಬೇಡ್ಕರ್** ಭಾಗವಹಿಸಿದ್ದರು.
- ✓ ಎರಡನೇ ದುಂಡು ಮೇಜಿನ ಸಮ್ಮೇಳನದಲ್ಲಿ **ಅಂಬೇಡ್ಕರ್ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ** ನೀಡಲು ಪ್ರಸ್ತಾಪಿಸಿದರು.
- ✓ ಇದನ್ನು ಗಾಂಧೀಜಿ ಒಪ್ಪಲಿಲ್ಲ, ಆದ್ದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್ ಮಧ್ಯೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಗಿ ಇದು ಯಾವುದೇ ತಿರ್ಮಾನವಿಲ್ಲ ಮುಕ್ತಾಯವಾಯಿತು.
- ✓ ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು.
- ✓ ಇದನ್ನು ವಿರೋಧಿಸಿ ಗಾಂಧೀಜಿಯವರು **ಅಮರಣಾಂತ ಉಪವಾಸ ಸತ್ಯಾಗ್ರಹ** ಆರಂಭಿಸಿದರು.
- ✓ ಇವರಿಬ್ಬರ ಮಧ್ಯೆ **'ಪೂನಾ ಒಪ್ಪಂದ'**ವಾಗಿ ಪ್ರತ್ಯೇಕ ಮತಕ್ಷೇತ್ರದ ಬದಲಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲಿ ಅಸ್ಪೃಶ್ಯರಿಗೆ ಕೆಲವು ಕ್ಷೇತ್ರಗಳನ್ನು ಮಿಸಲಿಡಲಾಯಿತು.
- ✓ 1932ರ ಮೂರನೆ ದುಂಡು ಮೇಜಿನ ಸಮ್ಮೇಳನದಲ್ಲಿ **ಕೇಂದ್ರದಲ್ಲಿ ಒಕ್ಕೂಟ ಸರ್ಕಾರ, ರಾಜ್ಯಗಳಲ್ಲಿ ಪ್ರಾಂತೀಯ ಸರ್ಕಾರ ರಚಿಸಲು** ಸೂಚಿಸಿತು.
- ✓ ಬ್ರಿಟಿಷ್ ಸರ್ಕಾರವು ಪ್ರಸ್ತಾಪಿಸಿದ ವ್ಯವಸ್ಥೆಯನ್ನು ಧಿಕ್ಕರಿಸಿ ಕಾಂಗ್ರೆಸ್ ಈ ಸಮಾವೇಶದಲ್ಲಿ ಭಾಗವಹಿಸಲಿಲ್ಲ.
- ✓ ದುಂಡು ಮೇಜಿನ ಪರಿಷತ್ತುಗಳ ಪರಿಣಾಮವಾಗಿ **1935ರ ಭಾರತ ಸರ್ಕಾರ ಶಾಸನ**ವನ್ನು ಜಾರಿಗೊಳಿಸಿತು.
- ✓ ಇದು **ಭಾರತ ಒಕ್ಕೂಟ ರಚನೆ ಮತ್ತು ಪ್ರಾಂತೀಯ ಸ್ವಾಯತ್ತತೆಯ** ಅವಕಾಶ ಕಲ್ಪಿಸಿತು.
- ✓ ಭಾರತೀಯರಿಗೆ ರಾಜಕೀಯ ಹಕ್ಕುಗಳು ದೊರೆತವು.
- ✓ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಚುನಾವಣೆಯಲ್ಲಿ ಸ್ಪರ್ಧಿಸಿದವು.
- ✓ ಕಾಂಗ್ರೆಸ್ ಬಹುಮತ ಪಡೆದು ಒಕ್ಕೂಟ ಸರ್ಕಾರವನ್ನು ರಚಿಸಿತು.
- ✓ 2ನೇ ಮಹಾಯುದ್ಧದ ಸಮಯದಲ್ಲಿ ಭಾರತದ ವೈಸ್‌ರಾಯ್ ಏಕಪಕ್ಷೀಯವಾಗಿ ಭಾರತದ ಪರವಾಗಿ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿತು.
- ✓ ಇದನ್ನು ಕಾಂಗ್ರೆಸ್ ಪ್ರತಿಭಟಿಸಿ ಮಂತ್ರಿಮಂಡಲದಿಂದ ಹೊರ ಬಂತು.

RAMALINGAPPA L

- ✓ ವೈಸ್‌ರಾಯ್ ತೀರ್ಮಾನವನ್ನು ವಿರೋಧಿಸಿ ಗಾಂಧೀಜಿ **'ವೈಯಕ್ತಿಕ ಸತ್ಯಾಗ್ರಹ'** ಸಾರಿದರು.
- ✓ ಭಾರತೀಯರನ್ನು ತೃಪ್ತಿಪಡಿಸಲು **ಸ್ಟಾಫರ್ಡ್ ಕ್ರಿಪ್ಸ್** ರನ್ನು ಸಂಧಾನಕ್ಕೆ ಕಳುಹಿಸಿತು.

**ಕ್ವಿಟ್ ಇಂಡಿಯಾ ಚಳುವಳಿ:–**

- ➢ **ಸ್ಟಾಫರ್ಡ್ ಕ್ರಿಪ್ಸ್ ಆಯೋಗವು** 1942ರಲ್ಲಿ ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು.
- ➢ ಇದು **ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ** ನೀಡುವುದು.
- ➢ ಇದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು
- ➢ **ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟ ಸೇರುವು & ಬಿಡುವ ಸ್ವಾತಂತ್ರ್ಯ ರಾಜ್ಯಗಳಿಗೆ ಬಿಡುವಂತಹ ಸಲಹೆ** ನೀಡಿತು.
- ➢ ಈ ಸಲಹೆಗಳನ್ನು ಕಾಂಗ್ರೇಸ್ ಒಪ್ಪದೆ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು.
- ➢ ಇದರ ಆಶಯ: **"ಬ್ರಿಟಿಷರೇ ಭಾರತ ಬಿಟ್ಟು ತೊಲಗಿ"** ಎನ್ನವುದು
- ➢ ಗಾಂಧೀಜಿಯವರು ದೇಶಬಾಂಧವರಿಗೆ **'ಮಾಡು ಇಲ್ಲವೇ ಮಡಿ'** ಎನ್ನುವ ಕರೆ ನೀಡಿದರು.
- ➢ **ಗಾಂಧೀಜಿ, ನೆಹರು, ರಾಜೇಂದ್ರ ಪ್ರಸಾದ್, ಅಬುಲ್ ಕಲಾಂ ಆಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ** ಮುಂತಾದವರನ್ನು ಬ್ರಿಟಿಷ್ ಸರ್ಕಾರ ಬಂಧಿಸಿತು.
- ➢ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಕಾಂಗ್ರೇಸೇತರ ಸಂಘಟನೆಗಳು ಮುಖ್ಯ ಭೂಮಿಕೆಗೆ ಬಂದವು.
- ➢ ಈ ಸಂದರ್ಭದಲ್ಲಿ ಚಳುವಳಿಯ ನೇತೃತ್ವವನ್ನು ವಹಿಸಿದವರು **'ಜಯಪ್ರಕಾಶ್ ನಾರಾಯಣ'**
- ➢ ಇವರು ಕಾಂಗ್ರೇಸ್‌ನ ಸಮಾಜವಾದಿ ಬಣದ ನಾಯಕರು
- ➢ ಸಮಾಜವಾದಿಗಳು **"ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್"** ಎಂಬ ದಾಖಲೆ ಮೂಲಕ ಕಾರ್ಯತಂತ್ರ ಅನುಷ್ಠಾನ
- ➢ ಇವರು ಕಾರ್ಮಿಕರಿಗೆ ತರಬೇತಿ ನೀಡಿದರು.
- ➢ ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆನೀಡಿದರು.
- ➢ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ
- ➢ ಈ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಭಾರತದ ಗಡಿಯ ಹೊರಗೂ ಆರಂಭ.
- ➢ 2ನೇ ಮಹಾಯುದ್ಧ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿದ್ದ ಕಾಂಗ್ರೇಸ್‌ಗರು ಹೊರಬಂದಾಗ ಮುಸ್ಲಿಂ ಲೀಗ್ **'ವಿಮುಕ್ತಿ ದಿವಸ'** ಆಚರಿಸಿತು.
- ➢ ಮುಸ್ಲಿಂ ಲೀಗ್ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಲಿಲ್ಲ.

**ರೈತರ ಪ್ರತಿಭಟನೆ:–**

- ❖ ಇಲ್ಲಿ **ಜಮೀನ್ದಾರರು & ಯರೋಪಿಯನ್ ಪ್ಲಾಂಟರ್‌ಗಳ ವಿರುದ್ಧ** ರೈತರು ದಂಗೆ ನಡೆಸಿದರು.
- ❖ **ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು** ವಿರೋಧಿಸಿದರು.
- ❖ ಗಾಂಧೀಜಿಯವರು ಸತ್ಯಾಗ್ರಹ ನಡೆಸಿ ತೆರಿಗೆ ರದ್ದುಗೊಳಿಸಿದರು.
- ❖ ರೈತರನ್ನು ಸಂಘಟಿಸುವ ಪ್ರಯತ್ನ ಬಾರತೀಯ ರಾಷ್ಟ್ರೀಯ ಕಾಂಗ್ರೇಸ್ ಮಾಡಿತು.
- ❖ ಕಾಂಗ್ರೇಸ್ ಪ್ರಭಾವದಿಂದ **ತೇಭಾಗ, ಮಲಬಾರ್**‌ಗಳಲ್ಲಿ ರೈತರು ಬ್ರಿಟಿಷರ ವಿರುದ್ಧ ಬಂಡೆದ್ದರು.
- ❖ ಅಸಹಕಾರ ಚಳುವಳಿ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು.
- ❖ ರೈತರ ಹೋರಾಟಗಳು ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು.
- ❖ ತೆಲಂಗಾಣದ ರೈತ ಹೋರಾಟವು ಜಮೀನ್ದಾರರು & ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು.
- ❖ ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
- ❖ ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಯಿತು.

**ಕಾರ್ಮಿಕರ ಬಂಡಾಯ:–**

- ➢ ಕಾರ್ಮಿಕರ ಹೋರಾಟವು 1827ರಲ್ಲಿ **ಕಲ್ಕತ್ತದಲ್ಲಿ** ಆರಂಭ
- ➢ **ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು** ತಮ್ಮ ಬೇಡಿಕೆಗಳಿಗೆ ಸಂಘಟಿತರಾದರು.
- ➢ **ಕಲ್ಕತ್ತದಲ್ಲಿ ಪ್ರಿಟರ್ಸ್ ಯೂನಿಯನ್‌ನವರು & ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ** ಉಂಟುಮಾಡಿದರು
- ➢ ಮದ್ರಾಸ್‌ನಲ್ಲಿ **ಲೇಬರ್ ಯೂನಿಯನ್** ಸ್ಥಾಪನೆ

**ಬುಡಕಟ್ಟು ಬಂಡಾಯಗಳು:-**

- ✓ ಕಂಪನಿಯು ಜಾರಿಗೆ ತಂದ **ಕಂದಾಯ & ಅರಣ್ಯ ನೀತಿಗಳು** ಬುಡಕಟ್ಟು ದಂಗೆಗೆ ಕಾರಣವಾದವು.
- ✓ ಉದಾ:- **ಸಂತಾಲರ ದಂಗೆ, ಮುಂಡ ಚಳುವಳಿ ಮತ್ತು ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯ**
- ✓ **ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ** ಎನ್ನುವರು.
- ✓ ಇವರನ್ನು **ಬಂಗಾಳ ಮತ್ತು ಒರಿಸ್ಸಾದ ಗುಡ್ಡಗಾಡು** ಪ್ರದೇಶಗಳಲ್ಲಿ ಗುರುತಿಸಬಹುದು.
- ✓ ಬ್ರಿಟಿಷರು ಜಾರಿಗೆ ತಂದ **ಖಾಯಂ ಜಮೀನ್ದಾರಿ ಪದ್ಧತಿಯಿಂದ** ಇವರು ನಿರ್ಗತಿಕರಾದರು.
- ✓ ಬುಡಕಟ್ಟು ಜನರ ಭೂಮಿಯು ಜಮೀನ್ದಾರರ ಕೈಸೇರಿತು.
- ✓ **ಬಂಗಾಳ ಜಮೀನ್ದಾರರು, ಲೇವಾದೇವಿಗಾರರು & ಕಂಪನಿ ಸರ್ಕಾರವು** ಸಂತಾಲರ ನೇರ ಶೋಷಣೆಗೆ ಕಾರಣರಾದರು.
- ✓ ಸಂತಾಲರ ಶಾಂತಿ ಪ್ರಿಯತೆ & ಸಭ್ಯತೆಯನ್ನು ಕಂಪನಿ ಶೋಷಣೆಗೆ ಉಪಯೋಗಿಸಿಕೊಂಡಿತು.
- ✓ ಆಗ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು & ಮಹಾಜನರನ್ನು ಲೂಟಿ ಮಾಡಿದರು.
- ✓ ದಂಗೆಯು **ಬಾರಹತ್, ಬಾಗತಪುರ್ ಮತ್ತು ರಾಜಮಹಲ್**ಗಳಲ್ಲಿ ತೀವ್ರವಾಯಿತು.
- ✓ ಬುಡಕಟ್ಟು ಜನರು ತಮ್ಮ ಶತೃಗಳನ್ನು ಹತ್ಯೆ ಮಾಡಿದರು. ಇದರಿಂದ ಜಮೀನ್ದಾರರು, ಲೇವಾದೇವಿಗಾರರು ಪಲಾಯನ ಮಾಡಿದರು.
- ✓ ಸೈನ್ಯವನ್ನು ಬಳಸಿ ಕಂಪನಿ ಸಂತಾಲರ ದಂಗೆಯನ್ನು ಹತ್ತಿಕ್ಕಿದರು

**ಸುಭಾಷ್ ಚಂದ್ರ ಬೋಸ್:-**

- ❖ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಪಾತ್ರ ದಿಟ್ಟ ಮೈಲುಗಲ್ಲು.
- ❖ **ಐ.ಸಿ.ಎಸ್ ಪರೀಕ್ಷೆಯಲ್ಲಿ** ನಾಲ್ಕನೇ ರ್‍ಯಾಂಕ್ ಗಳಿಸಿದರು.
- ❖ ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆ ತ್ಯಜಿಸಿ ಹೋರಾಟದಲ್ಲಿ ಧುಮಿಕಿದರು.
- ❖ ಇವರು **'ನೇತಾಜಿ'** ಎಂದು ಜನಪ್ರಿಯವಾಗಿದ್ದರು.
- ❖ ವಿದೇಶದಲ್ಲಿ ನೆಲೆಗೊಂಡಿದ್ದ ಭಾರತೀಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಪ್ರಯತ್ನ.
- ❖ **ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್**ಗಳಲ್ಲಿ ಪ್ರವಾಸ ಮಾಡಿ ಬೆಂಬಲ ಕೋರಿದರು.
- ❖ ಯುರೋಪಿನಲ್ಲಿ ಉದಯಿಸಿದ ಕಮ್ಯೂನಿಸ್ಟ್ & ಸಮಾಜವಾದಿ ಅಲೆಯು ಭಾರತದಲ್ಲಿ ಕಾಂಗ್ರೇಸ್ ಸಂಘಟನೆಯನ್ನು ಬದಲಾವಣೆಗೆ ಒಳಪಡಿಸಿತು.
- ❖ ಕಾಂಗ್ರೇಸ್‌ನ ಒಳಗೂ ಸಮಾಜವಾದಿ ಎಡಪಂಥೀಯತೆ ಗೋಚರಿಸಿತು.
- ❖ ಭಾರತದಲ್ಲಿ 1934ರ ವೇಳೆಗೆ **ನೆಹರು & ಸುಭಾಷ್ ಚಂದ್ರ ಬೋಸರು ಕಾಂಗ್ರೇಸ್ ಸಮಾಜವಾದಿ ಪಕ್ಷ**ವನ್ನು ಸ್ಥಾಪಿಸಿದರು.
- ❖ ಕಾಂಗ್ರೇಸ್‌ನ **ಹರಿಪುರ ಅಧಿವೇಶನದಲ್ಲಿ** ಗಾಂಧೀಜಿಯ ಬೆಂಬಲದೊಂದಿಗೆ ಬೋಸರು ಅಧ್ಯಕ್ಷರಾದರು.
- ❖ ಬ್ರಿಟಿಷರ ವಿರುದ್ಧ ಮೃದು ಧೋರಣೆ ಹೊಂದಿದ್ದ ಗಾಂಧೀಜಿ ಹಾಗೂ ಕಠಿಣ ಧೋರಣೆ ಹೊಂದಿದ್ದ ಸುಭಾಷರ ನಡುವೆ ಭಾಂದವ್ಯದಲ್ಲಿ ಬಿರುಕು ಮೂಡಿತು.
- ❖ 1938ರ ಕಾಂಗ್ರೇಸ್‌ನ **ತ್ರಿಪುರ ಅಧೀವೇಶನ**ದಲ್ಲಿ ಗಾಂಧೀಜಿಯ ವಿರೋಧದ ನಡುವೆ ಬೋಸರು ಅಧ್ಯಕ್ಷರಾದರು.
- ❖ ಬೋಸರು ಕಾಂಗ್ರೇಸ್‌ನಿಂದ ಹೊರ ಬಂದು **"ಫಾರ್ವರ್ಡ್ ಬ್ಲಾಕ್"** ಎಂಬ ಹೊಸ ಪಕ್ಷ ಕಟ್ಟಿದರು.
- ❖ ಇದು ಕಾಂಗ್ರೇಸ್‌ನ ಒಳಗೆ ಇದ್ದು ಪ್ರಗತಿಪರ & ತೀವ್ರತರ ಆಶಯ ಹೊಂದಿತ್ತು.
- ❖ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳುವಿಕೆಯನ್ನು ಸುಭಾಷರು ವಿರೋಧಿಸಿದರು.
- ❖ ಆಗ ಬ್ರಿಟಿಷ್ ಸರ್ಕಾರವು ಸುಭಾಷ್‌ರನ್ನು ಬಂಧಿಸಿತು.
- ❖ ಬೋಸರು ಗೃಹಬಂಧನದಿಂದ ತಪ್ಪಿಸಿಕೊಂಡು **ಜರ್ಮನಿಗೆ** ತೆರಳಿದರು.
- ❖ **ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್** ಸಹಾಯ ಮಾಡುವ ಭರವಸೆ ವ್ಯಕ್ತಪಡಿಸಿದರು.
- ❖ ಬೋಸರು ಜರ್ಮನಿಯಲ್ಲಿ ಭಾರತೀಯ ಯುದ್ಧ ಖೈದಿಗಳನ್ನು ಸಂಘಟಿಸಿದರು.
- ❖ **'ಅಜಾದ್ ಹಿಂದ್ ರೇಡಿಯೋ'** ಮೂಲಕ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು.
- ❖ ಜಪಾನಿನಲ್ಲಿ ಭಾರತೀಯರನ್ನು ಸಂಘಟಿಸಿದ್ದ **ರಾಸ್ ಬಿಹಾರಿ ಬೋಸರ** ಜೊತೆ ಸುಭಾಷರು ಕೈಜೋಡಿಸಿದರು.
- ❖ ರಾಸ್ ಬಿಹಾರಿ ಬೋಸರು **ಕೈರೋ**ದಲ್ಲಿ ಸ್ಥಾಪಿಸಿದ್ದ **"ಇಂಡಿಯನ್ ಇಡಿಪೆಂಡೆನ್ಸ್ ಲೀಗ್"**ನ ಸೇನಾ ವಿಭಾಗವನ್ನು **"ಭಾರತೀಯ ರಾಷ್ಟ್ರೀಯ ಸೇನೆ"** ಎಂದು ಕರೆದರು.
- ❖ ಐ.ಎನ್.ಎ ಮುಖಂಡತ್ವವನ್ನು ಸುಭಾಷ್‌ರು ವಹಿಸಿದರು.
- ❖ ಸುಭಾಷರು **'ದೆಹಲಿ ಚಲೋ'** ಗೆ ಕರೆ ನೀಡಿದರು.

RAMALINGAPPA L

- **'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ'** ಎಂಬ ಕರೆಯನ್ನಿತ್ತರು.
- ಐ.ಎನ್.ಎ ನಲ್ಲಿ **ಝಾನ್ಸಿ ರೆಜಿಮೆಂಟ್** ವಿಭಾಗವಿತ್ತು. **'ಕ್ಯಾಪ್ಟನ್ ಲಕ್ಷ್ಮೀ'** ಈ ರೆಜಿಮೆಂಟ್‌ನ ನೇತೃತ್ವ ವಹಿಸಿದ್ದರು.
- ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿ ಪಡೆಯಲು ತಂತ್ರ ರೂಪಿಸಿದರು.
- ಸುಭಾಷರ ಆದೇಶದಂತೆ ಸೇನೆಯು ಸಶಸ್ತ್ರ ಹೋರಾಟವನ್ನು ಬರ್ಮಾದ ಗಡಿಯಲ್ಲಿ ಆರಂಭಿಸಿದರು.
- ಬ್ರಿಟಿಷರು & ಐ.ಎನ್.ಎ ಸೈನ್ಯ ಮಧ್ಯದ ತೀವ್ರತರ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಸುಭಾಷರು ವಿಮಾನ ಅಪಘಾತದಲ್ಲಿ ಮರಣಿಸಿದರು.
- **ಬರ್ಮಾದ ರಾಜಧಾನಿ ರಂಗೂನ್** ಬ್ರಿಟಿಷರ ವಶವಾದ್ದರಿಂದ ಐ.ಎನ್.ಎ ಸೈನಿಕರನ್ನು ಬ್ರಿಟಿಷರು ಬಂಧಿಸಿದರು.
- ಗಾಂಧೀಜಿ ಸೇರಿದಂತೆ ಎಲ್ಲಾ ನಾಯಕರು ಐ.ಎನ್.ಎ ಸೈನಿಕರನ್ನು ಬಂಧಮುಕ್ತ ಮಾಡಲು ಶ್ರಮಿಸಿದರು.

**ಡಾ.ಬಿ.ಆರ್ ಅಂಬೇಡ್ಕರ್:-**

- **ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ** ಎಂದರು.
- ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಾಮಾಜಿಕ & ಆರ್ಥಿಕ ಸ್ವಾತಂತ್ರ್ಯ ದೊರೆಬೇಕು ಎಂದರು.
- ಇವರು ಭಾರತದ ಭಾವನಾತ್ಮಕ ಮುಖವನ್ನು ಪರಿಚಯಿಸಿದರು.
- ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟ ರೂಪಿಸಿದರು.
- ಇವರು **'ಮಹಾಡ್' ಮತ್ತು 'ಕಾಲಾರಾಂ' ದೇವಾಲಯ ಚಳುವಳಿ** ರೂಪಿಸಿದರು.
- ಇವರು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ಅಮೂಲ್ಯ ಸಲಹೆ ನೀಡಿದರು.
- ಹರಿಜನೋದ್ಧಾರ & ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ & ಅಂಬೇಡ್ಕರ್ ಮಧ್ಯ ಭಿನ್ನಾಭಿಪ್ರಾಯ ಮೂಡಿದವು
- ಇವರು **ಬರೋಡದ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು.**
- **ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ & ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್**‌ನಲ್ಲಿ ಮುತುವರ್ಜಿಯಿಂದ ಕಾರ್ಯಭಾರ ನಿಭಾಯಿಸಿದರು.
- ಇವರು ಕಾಂಗ್ರೆಸ್ ಪಕ್ಷವನ್ನು ಸೇರದೆ **"ಬಹಿಷ್ಕೃತ ಹಿತಕಾರಣಿ"** ಎಂಬ ಸಂಘಟನೆಯನ್ನು ಹಾಗೂ **"ಸ್ವತಂತ್ರ ಕಾರ್ಮಿಕ ಪಕ್ಷ"** ಎಂಬ ಪಕ್ಷವನ್ನು ಸ್ಥಾಪಿಸಿದರು
- **'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ'** ಎಂಬ ಪತ್ರಿಕೆಗಳನ್ನು ಹೊರಡಿಸಿದರು.
- ಕಮ್ಯುನಿಸ್ಟ್ & ಸಮಾಜವಾದಿ ಧೋರಣೆಗಳಿಂದ ದೂರವುಳಿದು ಕೃಷಿ ಕಾರ್ಮಿಕರ ಏಳಿಗೆಗೆ ದುಡಿದರು.
- ಸ್ವತಂತ್ರ ಭಾರತದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಿದರು.
- **ಸಂವಿಧಾನದ ಕರಡು ಸಮಿತಿಯ** ಅಧ್ಯಕ್ಷರಾಗಿ ಅಂಬೇಡ್ಕರ್ ಸಂವಿಧಾನ ಸಮಿತಿಯ ಸರ್ವಾನುಮತಿಯಿಂದ ಆಯ್ಕೆ ಮಾಡಿತು.
- ಸಂವಿಧಾನದಲ್ಲಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆ ನೀಡಿದರು.
- ಸ್ವತಂತ್ರ ಭಾರತದಲ್ಲಿ ಇವರು ಕಾನೂನು ಮಂತ್ರಿಯಾದರು.
- ಇವರು ದೇಶೀಯ ಬೇರುಗಳ ಕಡೆ ಒಲವು ತೋರಿದರು.
- ಇಳಿಯ ವಯಸ್ಸಿನಲ್ಲಿ ಹಿಂದೂ ಧರ್ಮ ಬಿಟ್ಟು ಬೌದ್ಧಧರ್ಮವನ್ನು ಸ್ವೀಕರಿಸಿದರು.
- ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ & ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧಧರ್ಮವು ಶಾಂತಿ & ಅಹಿಂಸಾತ್ಮಕವಾಗಿ ತರಬಲ್ಲದು ಎಂದು ನಂಬಿದ್ದರು.
- ಇವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರ ಮರಣೋತ್ತರವಾಗಿ "ಭಾರತ ರತ್ನ" ಗೌರವ ನೀಡಿತು.

**ಜವಾಹರಲಾಲ್ ನೆಹರು:-**

- ✓ ಇವರು **ಹೋಂರೂಲ್ ಚಳುವಳಿ**ಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು.
- ✓ 1920ರ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು.
- ✓ ಇವರು 1929ರ **ಲಾಹೋರ್** ಅಧಿವೇಶನದ ಅಧ್ಯಕ್ಷರಾಗಿ **'ಸಂಪೂರ್ಣ ಸ್ವರಾಜ್ಯ'ದ** ಗುರಿಯನ್ನು ಘೋಷಿಸಿದರು.
- ✓ ಗಾಂಧೀಜಿ ಅಸಹಕಾರ ಚಳುವಳಿಯನ್ನು ಹಿಂದಕ್ಕೆ ಪಡೆದಾಗ ಇವರು ನಿರಾಶೆ ವ್ಯಕ್ತ ಪಡಿಸಿದರು.
- ✓ ಇವರು **ಕಮ್ಯೂನಿಸ್ಟ್ ಸಿದ್ಧಾಂತ**ಗಳಿಂದ ಪ್ರಭಾವಿತರಾಗಿದ್ದರು.
- ✓ ಇದರಿಂದ ಕಾಂಗ್ರೆಸ್‌ನಲ್ಲಿ ಎಡಪಂಥೀಯ ಆಶಯಗಳು ಪ್ರಬಲವಾದವು.
- ✓ ಇದರ ಫಲವಾಗಿ ನೆಹರು & ಸುಭಾಷ್‌ರು **'ಕಾಂಗ್ರೆಸ್ ಸಮಾಜವಾದಿ ಪಕ್ಷ'** ಸ್ಥಾಪಿಸಿದರು.
- ✓ ಇವರು ಕಾಂಗ್ರೆಸ್‌ನ 49ನೇ ಅಧಿವೇಶನದ ಅಧ್ಯಕ್ಷರಾಗಿದ್ದರು.
- ✓ ಅಂತರಾಷ್ಟ್ರೀಯ ಸಾಮ್ರಾಜ್ಯಶಾಹಿ ಯುದ್ಧದಿಂದ ಕಾಂಗ್ರೆಸ್ ದೂರ ಉಳಿಯಲು ಸಾರಿದರು.

RAMALINGAPPA L

- ✓ **'ಚರಕ' ಮತ್ತು 'ಹರಿಜನ' ಚಳುವಳಿಗಳು** ಅಷ್ಟೇನು ಪರಿಣಾಮಕಾರಿಯಲ್ಲ ಎಂದರು
- ✓ ಈ ಅಧಿವೇಶನದಲ್ಲಿ ನೆಹರು ಗಾಂಧೀಜಿಯವರ ಚಿಂತನೆಗಳಿಂದ ದೂರ ಸರಿದಂತೆ ಕಂಡುಬಂದರು.
- ✓ 50ನೇ ಕಾಂಗ್ರೇಸ್ ಅಧಿವೇಶನದಲ್ಲಿ ನೆಹರು ತಮ್ಮ **ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ವಿಚಾರಗಳ** ಬಗ್ಗೆ ಮೃದು ಧೋರಣೆ ತಳೆದರು.
- ✓ ಕಾಂಗ್ರೇಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೊರೆತು ಸಮಾಜವಾದಕ್ಕಲ್ಲ ಎಂದರು.

**ಭಾರತದ ಪ್ರಧಾನಿಯಾಗಿ ನೆಹರುರವರ ಕೊಡುಗೆಗಳು:–**

- ❖ ಕೈಗಾರೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಕಾಣುತ್ತೇವೆ.
- ❖ ಸರ್ದಾರ್ ಪಟೇಲರ ನೇತೃತ್ವದಲ್ಲಿ ದೇಶೀಯ ಸಂಸ್ಥಾನಗಳ ವಿಲೀನಕರಣ ಸಾಧಿಸಿದರು.
- ❖ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವದ ತಳಹದಿ ಹಾಕಿದರು.
- ❖ ಬಂಡವಾಳ & ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಮೈಲುಗಲ್ಲಾಯಿತು.
- ❖ ಬೃಹತ್ ಕೈಗಾರೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ನಂಬಿದ್ದರು.
- ❖ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸು ಕಂಡರು.
- ❖ ಬಲಿಷ್ಠ ವಿದೇಶಾಂಗ ನೀತಿಗೆ ತಳಪಾಯ ಹಾಕಿದರು.
- ❖ ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು.
- ❖ ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆ ಸೂತ್ರ ಅನುಷ್ಠಾನ
- ❖ 1964ರಲ್ಲಿ ನಿಧನ ಹೊಂದಿದರು.

**ಮಹಮದ್ ಆಲಿ ಜಿನ್ನಾ:–**

- ➢ ಇವರು 1906ರಲ್ಲಿ ರಾಷ್ಟ್ರೀಯ ಕಾಂಗ್ರೇಸ್ ಸೇರಿದರು.
- ➢ ದಾದಾಬಾಯಿ ನವರೋಜಿಯ ಖಾಸಗಿ ಕಾರ್ಯದರ್ಶಿಯಾದರು.
- ➢ ತಿಲಕರ ವಿರುದ್ಧದ ಮೊಕದ್ದಮೆಗಳ ಸಂದರ್ಭದಲ್ಲಿ ಅವರ ಪರವಹಿಸಿದ್ದರಿಂದ ಜಿನ್ನಾರಿಗೆ ಅತೀವ ಪ್ರಶಂಸೆ ತಂದುಕೊಟ್ಟಿತು.
- ➢ ಇವರು ಹೋಂರೂಲ್ ಲೀಗ್ ಸೇರಿದರು.
- ➢ 1916ರ ಸಮಾವೇಶದಲ್ಲಿ ಹಿಂದೂ & ಮಹಮದೀಯರ ನಡುವೆ ಏಕತೆಯ ಅಗತ್ಯ ತಿಳಿಸಿದರು.
- ➢ ಮುಸ್ಲಿಂ ಪರ ರಾಜಕಾರಣಿ ಎಂದು ಬಿಂಬಿತವಾದ್ದರಿಂದ ಬ್ರಿಟಿಷರ ಬಳುವಳಿಯನ್ನು ಜಿನ್ನಾ ವಿರೋಧಿಸಿದರು.
- ➢ ರೌಲತ್ ಕಾಯ್ದೆಯನ್ನು ವಿರೋಧಿಸಿ ತಮ್ಮ ಕೇಂದ್ರೀಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆ ನೀಡಿದರು.
- ➢ ದುಂಡು ಮೇಜಿನ ಸಮ್ಮೇಳನದಲ್ಲಿ ಜಿನ್ನಾ ತಾನೊಬ್ಬ ರಾಷ್ಟ್ರೀಯವಾದಿ ಮುಸಲ್ಮಾನನೆಂದು ಘೋಷಿಸಿಕೊಂಡರು.
- ➢ 1937ರ ಚುನಾವಣೆಯ ನಂತರ ಸಮ್ಮಿಶ್ರ ಸರ್ಕಾರ ರೂಪಿಸಲು ವಿಫಲವಾದಾಗ ಜಿನ್ನ ತನ್ನ ಕಾರ್ಯತಂತ್ರವನ್ನು ಬದಲಿಸಿದರು.
- ➢ ಜಿನ್ನಾ ಪಾಕಿಸ್ತಾನದ ಬೇಡಿಕೆಯನ್ನು ತೀವ್ರಗೊಳಿಸಿದರು.
- ➢ ಬ್ರಿಟಿಷರು ಸ್ವಾತಂತ್ರ ನೀಡಿದಾಗ ದೇಶ ವಿಭಜಿಸಿ ಪಾಕಿಸ್ತಾನವನ್ನು ಪಡೆದರು.

**ಭಾರತದ ವಿಭಜನೆ:–**

- ❖ ಕಾಂಗ್ರೇಸ್ ಅಖಂಡ ರಾಷ್ಟ್ರದ ಕಲ್ಪನೆ ಹೊಂದಿತ್ತು.
- ❖ ಆದರೆ ಜಿನ್ನಾ ಮುಸ್ಲಿಂರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಪ್ರತಿಪಾದನೆ
- ❖ 1940ರ ಮುಸ್ಲಿಂ ಲೀಗ್‌ನ **ಲಾಹೋರ್ ಅಧಿವೇಶನದಲ್ಲಿ** ಜಿನ್ನಾ **ಹಿಂದೂ & ಮುಸ್ಲಿಂರು ಒಂದು ದೇಶವಾಗಲು ಸಾಧ್ಯವಿಲ್ಲ** ಎಂದರು.
- ❖ 2ನೇ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ **ಲೇಬರ್ ಪಕ್ಷ** ಅಧಿಕಾರಕ್ಕೆ ಬಂದಿತು.
- ❖ ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರ ನೀಡುವ ಕುರಿತು ಚರ್ಚಿಸಲು ಕಳುಹಿಸಿತು.
- ❖ ಈ ನಿಯೋಗ ಮುಸ್ಲಿಂ ಲೀಗ್ & ಕಾಂಗ್ರೇಸ್ ಜೊತೆ ಚರ್ಚಿಸಿತು.
- ❖ **ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು** ಸೂಚಿಸಿತು.
- ❖ ಸಂವಿಧಾನ ರಚನಾ ಸಭೆ ಕರೆಯುವುದಾಗಿ & ಮಧ್ಯಂತರ ರಾಷ್ಟ್ರೀಯ ಸರ್ಕಾರ ಸ್ಥಾಪಿಸಲು ಶಿಫಾರಸ್ಸು ಮಾಡಿತು.
- ❖ ಆದರೆ ಮುಸ್ಲಿಂ ಲೀಗ್ ಮತ್ತು ಕಾಂಗ್ರೇಸ್‌ನಲ್ಲಿ ಭಿನ್ನತೆ ಉಂಟಾಯಿತು.



RAMALINGAPPA L

- ಮುಸ್ಲಿಂರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946 ಆಗಸ್ಟ್ 16 ರಂದು **'ನೇರ ಕಾರ್ಯಾಚರಣೆ ದಿನ'**ಕ್ಕೆ ಕರೆ ನೀಡಿತು.
- ದೇಶಾದ್ಯಂತ ಕೋಮುಗಲಭೆಗಳು ನಡೆದವು.
- **ಡಾ.ಬಾಬು ರಾಜೇಂದ್ರ ಪ್ರಸಾದ್** ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ.
- 1946ರ ಮಾರ್ಚ್‌ನಲ್ಲಿ **ಲಾರ್ಡ್ ಮೌಂಟ್ ಬ್ಯಾಟನ್‌ರವರನ್ನು** ಶೀಘ್ರವಾಗಿ ಅಧಿಕಾರ ಹಸ್ತಾಂತರಿಸಲು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು.
- ಬ್ಯಾಟನ್‌ರು ಗಾಂಧೀಜಿ & ಜಿನ್ನಾ ಜೊತೆ ಚರ್ಚಿಸಿ ಭಾರತ ವಿಭಜಿಸುವ ಯೋಜನೆ ರೂಪಿಸಿದರು.
- 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪ ಪಡೆಯಿತು.
- ಇದರ ಅನ್ವಯ **1947ರ ಆಗಸ್ಟ್ 15ರಂದು ಭಾರತ** & **ಪಾಕಿಸ್ತಾನ** ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು.
- **ರ್‍ಯಾಡ್‌ಕ್ಲಿಫ್ ಆಯೋಗವು** ಈ ದೇಶಗಳ ಗಡಿ ಗುರುತಿಸಿತು.
- **ನೆಹರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ.**

## ಅಧ್ಯಾಯ–7
## ಸ್ವಾತಂತ್ರ್ಯೋತ್ತರ ಭಾರತ

ಭಾರತ ಸ್ವಾತಂತ್ರ್ಯ ಜೊತೆಯಲ್ಲಿ ಹಲವಾರು ಸಮಸ್ಯೆಗಳು ರೂಪ ಪಡೆದವು.

### ಸಮಸ್ಯೆಗಳು:–

- ✓ **ನಿರಾಶ್ರಿತರ ಸಮಸ್ಯೆ, ಕೋಮುಗಲಭೆಗಳು, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳ ವಿಲೀನಿಕರಣ, ಆಹಾರದ ಉತ್ಪಾದನೆ, ಕೃಷಿ ಬೆಳವಣಿಗೆ, ಕೈಗಾರಿಕೆಗಳ ಬೆಳವಣಿಗೆ**

### ನಿರಾಶ್ರಿತರ ಸಮಸ್ಯೆ:–

- ಭಾರತದಿಂದ ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಲಕ್ಷಾಂತರ ಜನ ಬಂದರು.
- ಇಲ್ಲಿ ತಮ್ಮ ಊರು, ಬೆಳೆದ ಪರಿಸರ, ಆಸ್ತಿ–ಪಾಸ್ತಿ ಕಳೆದುಕೊಂಡು ವಲಸೆ ಹೋದರು.
- ಈ ನಿರಾಶ್ರಿತರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ & ಸಾಮಾಜಿಕ ವಾತಾವರಣ ನೀಡಬೇಕಾಗಿತ್ತು.

### ಮತೀಯ ಗಲಭೆಗಳು:–

- ಬ್ರಿಟಿಷರು ನೆಟ್ಟ ಮತೀಯ ದ್ವೇಷದ ಬೀಜ ಮರವಾಗಿ ಬೆಳೆದಿತ್ತು.
- ವಿಭಿನ್ನ ಧರ್ಮಗಳ ನಡುವಿನ ಸೌಹಾರ್ದತೆಯ ಕೊಂಡಿ ಸಡಿಲವಾಗಿತ್ತು.
- ವಲಸೆಯ ಸಂದರ್ಭದಲ್ಲಿ ನಡೆದ ಮತೀಯ ಗಲಭೆಗಳ ನಿಯಂತ್ರಣಕ್ಕೆ ಸರ್ಕಾರ ಹರಸಾಹಸ ಪಟ್ಟಿತು.
- ದೇಶದ ಏಕತೆಯನ್ನು ನಾಶ ಮಾಡುವ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರಲು ಮಹಾತ್ಮ ಗಾಂಧೀಜಿ ಶ್ರಮಿಸಿದರು.
- ಎರಡೂ ದೇಶಗಳ ಜನರ ಆಕ್ರೋಶವು ಶಮನವಾಗಲು ಗಾಂಧೀಜಿಯು ಕಲ್ಕತ್ತಾದಲ್ಲಿ ಭಗವದ್ಗೀತೆಯನ್ನು ಪಠಿಸುತ್ತಾ ಉಪವಾಸ ಕೈಗೊಂಡರು.

### ಸರ್ಕಾರದ ರಚನೆ:–

- ✓ ತಾತ್ಕಾಲಿಕ ಸರ್ಕಾರದಲ್ಲಿ **ಮೌಂಟ್ ಬ್ಯಾಟನ್ ಭಾರತದ ಗವರ್ನರ್**
- ✓ **ಜವಾಹರಲಾಲ್ ನೆಹರು** ಭಾರತದ ಪ್ರಧಾನಮಂತ್ರಿಯಾದರು
- ✓ **1950ರ ಜನವರಿ 26ರಂದು ಭಾರತದ ಸಂವಿಧಾನ** ರಚನೆಯಾಯಿತು.
- ✓ **ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಕರಡು ಸಮಿತಿಯ** ಅಧ್ಯಕ್ಷರಾಗಿದ್ದರು.
- ✓ **ಡಾ.ಬಾಬು ರಾಜೇಂದ್ರ ಪ್ರಸಾದ್ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದರು.**
- ✓ ಸಂವಿಧಾನವು ಭಾರತವನ್ನು **ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯ**ವೆಂದು ಘೋಷಿಸಿತು.
- ✓ ಸಂವಿಧಾನಕ್ಕೆ **42ನೇ ತಿದ್ದುಪಡಿ** ತಂದು **'ಜ್ಯಾತ್ಯತೀತ'** ಮತ್ತು **'ಸಮಾಜವಾದಿ'** ಎಂಬ ಎರಡು ಅಂಶಗಳನ್ನು ಸೇರಿಸಲಾಯಿತು.
- ✓ ಇದರ ಆಧಾರದಲ್ಲಿ ಭಾರತ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿತು.
- ✓ ಭಾರತ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದೆ.

### ದೇಶೀಯ ಸಂಸ್ಥಾನಗಳ ವಿಲೀನೀಕರಣ:–

- ಬ್ರಿಟಿಷರು ಭಾರತ ಬಿಟ್ಟಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು.
- ಬ್ರಿಟಿಷರು ಈ ಸಂಸ್ಥಾನಗಳಿಗೆ ಮೂರು ಅವಕಾಶಗಳು ಕೊಟ್ಟರು.
  1. ಭಾರತ ಒಕ್ಕೂಟಕ್ಕೆ ಸೇರುವುದು.
  2. ಪಾಕಿಸ್ತಾನಕ್ಕೆ ಸೇರುವುದು.
  3. ಯಾವ ದೇಶಕ್ಕೂ ಸೇರದೇ ಸ್ವತಂತ್ರವಾಗಿರುವುದು.

RAMALINGAPPA L

- 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತಕ್ಕೆ ಸೇರಲು ಆಹ್ವಾನ ನೀಡಿತು
- ವಿಲೀನಗೊಂಡವರಿಗೆ,
- ರಾಜ್ಯಾದಾಯವನ್ನು ಆಧರಿಸಿ ರಾಜಧನ ನಿಗಧಿಪಡಿಸಿತು.
- ಇನ್ನೂ ಕೇಲವು ಸವಲತ್ತು & ಸ್ಥಾನಮಾನಗಳನ್ನು ನೀಡಲಾಯಿತು.
- 1969ರಲ್ಲಿ ಈ ರಾಜಧನ & ಸ್ಥಾನಮಾನಗಳನ್ನು ರದ್ದುಗೊಳಿಸಿತು.
- ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ **ಜುನಾಗಢ್, ಹೈದರಾಬಾದ್, ಜಮ್ಮು ಮತ್ತು ಕಾಶ್ಮೀರಗಳು** ಪ್ರತಿರೋಧ ತೋರಿದವು.
- **ಭಾರತದ ಉಕ್ಕಿನ ಮನುಷ್ಯ ಸರ್ದಾರ್ ಪಟೇಲ್‌ರು** ಭಾರತದ ದೇಶೀಯ ಸಂಸ್ಥಾನಗಳನ್ನು ಸೇರಿಸುವಲ್ಲಿ ಯಶಸ್ವಿಯಾದರು.

**ಜುನಾಗಢ್:-**

- ನವಾಬ **ಪಾಕಿಸ್ತಾನಕ್ಕೆ ಸೇರುವ ಇಚ್ಛೆ** ಹೊಂದಿದ್ದ
- ಆದರೆ **ಪ್ರಜೆಗಳು ನವಾಬನ ವಿರುದ್ಧ ಬೀದಿಗಿಳಿದರು.**
- **ನವಾಬನು ರಾಜ್ಯ ಬಿಟ್ಟು ಪಲಾಯನ** ಮಾಡಿದ.
- ಅಲ್ಲಿನ ದಿವಾನನ ಮನವಿಯನ್ನು ಆಧರಿಸಿ ಭಾರತ ಸೇನೆ ಶಾಂತಿ ಸ್ಥಾಪನೆ.
- 1949ರಲ್ಲಿ ಜುನಾಗಢ್ ಭಾರತದ ಒಕ್ಕೂಟಕ್ಕೆ ಸೇರಿತು.

**ಹೈದರಾಬಾದ್:-**

- ಇದು ನಿಜಾಮನ ಅಧೀನದಲ್ಲಿತ್ತು.
- ನಿಜಾಮನು **ಸ್ವಾತಂತ್ರವಾಗುಳಿಯುವ ಉದ್ದೇಶ** ಹೊಂದಿದ್ದನು.
- ಕಮ್ಯುನಿಸ್ಟ್‌ರ ನೇತೃತ್ವದಲ್ಲಿ **ತೆಲಂಗಣ ರೈತರ ಸಶಸ್ತ್ರ ಹೋರಾಟ**ವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯಿತು.
- ನಿಜಾಮನ ಕ್ರೂರ ಪಡೆ **ರಜಾಕರ** ವಿರುದ್ಧ ಜನತೆಯಲ್ಲಿ ವ್ಯಾಪಕ ವಿರೋಧ.
- ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್‌ನ್ನು 1948ರಲ್ಲಿ ಭಾರತಕ್ಕೆ ವಿಲೀನಗೊಳಿಸಿದರು.

**ಜಮ್ಮು-ಕಾಶ್ಮೀರ:-**

- ಇಲ್ಲಿನ **ರಾಜ ಹರಿಸಿಂಗ್** ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು.
- ಜಮ್ಮು-ಕಾಶ್ಮೀರ ಭಾರತಕ್ಕೆ ಸೇರುತ್ತದೆ ಎಂಬ ಉದ್ದೇಶದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
- ಕಾಶ್ಮೀರದ ಸ್ವಾತಂತ್ರ್ಯಕ್ಕೆ ಹೋರಾಡಿದ **ಷೇಕ್‌ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು** ಭಾರತಕ್ಕೆ ಸೇರುವುದು ಉತ್ತಮ ಎಂದು ಹೋರಾಟ ನಡೆಸಿತು.
- ಕಾರಣ:- **ಪಾಕಿಸ್ತಾನ ಧಾರ್ಮಿಕ ಸಂವಿಧಾನವನ್ನು ಹೊಂದಿದೆ ಆದರೆ ಭಾರತ ಪ್ರಜಾಪ್ರಭುತ್ವ ಹೊಂದಿದೆ.**
- ಇಂತಹ ಒತ್ತಡದಿಂದ ರಾಜಾ ಹರಿಸಿಂಗ್ ಭಾರತ ಸರ್ಕಾರದ ಸಹಾಯ ಕೋರಿದರು.
- ಕಾಶ್ಮೀರವು ಕೆಲವು ಷರತ್ತುಗಳೊಂದಿಗೆ ಭಾರತಕ್ಕೆ ಸೇರಿತು.
- ಆದರೆ ಕಾಶ್ಮೀರದನ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು.
- ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರ ಸಲ್ಲಿಸಿತು.
- ವಿಶ್ವಸಂಸ್ಥೆ **ಜನವರಿ 1, 1949**ರಲ್ಲಿ ಕದನ ವಿರಾಮ ಘೋಷಿಸಿತು.
- ಪಾಕಿಸ್ತಾನ ಆಕ್ರಮಿಸಿದ ಪ್ರದೇಶವನ್ನು **"ಪಾಕ್ ಆಕ್ರಮಿತ ಪ್ರದೇಶ"** ಎಂದು ಕರೆಯುತ್ತಾರೆ.

**ಪಾಂಡಿಚೇರಿ:-**

- ಇದು ಫ್ರೆಂಚರ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಿಗಳ ಮೇಲೆ ಹಿಡಿತ ಮುಂದುವರಿಸಿದವು.
- ಭಾರತಕ್ಕೆ ಸೇರಬೇಕೆಂದು ಕಾಂಗ್ರೇಸ್, ಕಮ್ಯುನಿಸ್ಟ್ ಮತ್ತು ಇತರೆ ಸಂಗಟನೆಗಳು ಹೋರಾಟವು ನಡೆಸಿದವು.
- ಇದರ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರಿದವು.
- 1962ರಲ್ಲಿ ಪಾಂಡಿಚೇರಿ ಭಾರತದ ಕೇಂದ್ರಾಡಳಿತವಾಯಿತು.

**ಗೋವಾ:-**

- ✓ ಪೋರ್ಚುಗೀಸರ ವಸಾಹತುವಿನಲ್ಲಿ ಮುಂದುವರೆದ ಗೋವಾ ಭಾರತಕ್ಕೆ ಸೇರಬೇಕೆಂದು ಹೋರಾಟ ನಡೆಸಿತು.
- ✓ ಪೋರ್ಚುಗೀಸರು ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯ ತರಿಸಿಕೊಂಡು ಚಳುವಳಿ ದಮನ ಮಾಡಲು ಪ್ರಯತ್ನ
- ✓ 1955ರಲ್ಲಿ ಭಾರತದ ಸತ್ಯಾಗ್ರಹಿಗಳು ವಿಮೋಚನಾ ಹೋರಾಟ ನಡೆಸಿತು.
- ✓ 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.
- ✓ 1987ರಲ್ಲಿ ಗೋವಾ ಭಾರತದ ರಾಜ್ಯವಾಯಿತು.

RAMALINGAPPA L

**ಭಾಷಾವಾರು ರಾಜ್ಯಗಳ ರಚನೆ:–**

- ❖ ಭಾರತ ಸ್ವಾತಂತ್ರಗೊಂಡ ನಂತರ ಕಂಡುಬಂದ ಪ್ರಜಾಸತ್ತಾತ್ಮಕ ಚಳುವಳಿ ಎಂದರೆ, ಭಾಷಾವಾರು ರಾಜ್ಯಗಳ ಹೋರಾಟ, ಜನರಿಗೆ ಉತ್ತಮ ಆಡಳಿತ ನೀಡಲು ಭಾಷೆಯನ್ನು ಆಧರಿಸಿ ಭೌಗೋಳಿಕ ಗುರುತಿಸುವುದು.
- ❖ ಬ್ರಿಟಿಷ್ & ದೇಶೀಯ ಸಂಸ್ಥಾನಗಳಲ್ಲಿ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ.
- ❖ ಆಗ ದೇಶಾದ್ಯಂತ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿಬೇಕು ಎಂಬ ಕೂಗು ಹೆಚ್ಚಿತು.
- ❖ **ವಿಶಾಲಾಂದ್ರ** ರಚಿಸಲು **ಆಂಧ್ರಮಹಾಸಭಾದ** ನೇತೃತ್ವದಲ್ಲಿ 1952ರಲ್ಲಿ **ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಮರಣ** ಹೊಂದಿದರು.
- ❖ 1953ರಲ್ಲಿ ಸರ್ಕಾರವು **'ರಾಜ್ಯ ಪುನರ್ವಿಂಗಡಣಾ ಆಯೋಗ'** ರಚಿಸಿತು.
- ❖ ಇದರ **ಅಧ್ಯಕ್ಷರು ಫಜಲ್ ಆಲಿ, ಸದಸ್ಯರು:– ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್. ಕುಂಜ್ರು**
- ❖ ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ **ಆಂಧ್ರಪ್ರದೇಶ** ರಚನೆಯಾಯಿತು.
- ❖ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿ.
- ❖ ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳಾದವು.
- ❖ ಕನ್ನಡ ಮಾತನಾಡುವ ಪ್ರದೇಶಗಳು **'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು'** ನೇತೃತ್ವದಲ್ಲಿ ಚಳುವಳಿ ನಡೆಯಿತು.
- ❖ 1956 ನವೆಂಬರ್ 1 ರಂದು **"ಮೈಸೂರು ರಾಜ್ಯವು"** ಅಸ್ತಿತ್ವಕ್ಕೆ ಬಂದಿತು.
- ❖ 1973ರಲ್ಲಿ **'ಕರ್ನಾಟಕ'** ಎಂದು ಮರುನಾಮಕರಣ
- ❖ ಇಂದು ಒಟ್ಟು 28 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳಿವೆ.

**ಅಧ್ಯಾಯ–10**

## ಮಹಾಯುದ್ಧಗಳು ಮತ್ತು ಭಾರತದ ಪಾತ್ರ

**ಪಥಮ ಮಹಾಯುದ್ಧ:–**

**ಕಾರಣಗಳು:–**

- ➢ ಯುರೋಪಿನ ಪ್ರಬಲ ರಾಷ್ಟ್ರಗಳು ಆಸ್ಟ್ರೋ–ಹಂಗೇರಿ ಮತ್ತು ರಷ್ಯಾ ವಸಾಹತುಗಳ ಮೇಲೆ ಹಿಡಿತ ಸಾಧಿಸಲು ನಿರಂತರ ಹೋರಾಟ
- ➢ ಕೈಗಾರಿಕಾ ಕ್ರಾಂತಿ & ನೂತನ ಆವಿಷ್ಕಾರಗಳು ಯರೋಪಿನಲ್ಲಿ ತೀವ್ರ ಪೈಪೋಟಿ ಸೃಷ್ಟಿ
- ➢ ವಸಾಹತುಗಳ ಮಾರುಕಟ್ಟೆ ಮತ್ತು ಸಂಪನ್ಮೂಲಗಳನ್ನು ಕಬಳಿಸುವ ದುರಾಲೋಚನೆ
- ➢ ಭೌಗೋಳಿಕ ಗಡಿಗಳ ಸಮಸ್ಯೆಗಳು
- ➢ ಅತಿಯಾದ ಮಿಲಿಟರೀಕರಣ
- ➢ ಅತಿಯಾದ ರಾಷ್ಟ್ರೀಯತೆ
- ➢ ಸಾಮ್ರಾಜ್ಯವಾದದ ನೀತಿಗಳು
- ➢ ಎರಡು ವಿರುದ್ಧ ಬಣಗಳ ರಚನೆ
  1. ಕದನ ಬಾಂಧವ್ಯತ್ರಯ:– **ಬ್ರಿಟನ್, ಫ್ರಾನ್ಸ್, ರಷ್ಯಾ**
  2. ಕದನ ಸೌಹಾರ್ದತಯ:– **ಜರ್ಮನಿ, ಆಸ್ಟ್ರೀಯಾ–ಹಂಗೇರಿ, ಇಟಲಿ**

**ತಕ್ಷಣದ ಕಾರಣ:–**ಜುಲೈ 28, ರಂದು ಆಸ್ಟ್ರೀಯಾದ ರಾಜಕುಮಾರ **'ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್'**ನ ಹತ್ಯೆ. ಇದು ಆಸ್ಟ್ರೀಯಾ ಮತ್ತು ಸರ್ಬಿಯಾ ನಡುವೆ ಬಿಕ್ಕಟ್ಟು ಸೃಷ್ಟಿಸಿತು.

**ಯುದ್ಧದ ಘಟನೆಗಳು:–**

- ✓ ಅಮೇರಿಕಾ ತಟಸ್ಥವಾಗಿತ್ತು.
- ✓ ರಷ್ಯಾ ಜರ್ಮನಿಯ ವಿರುದ್ಧವಾಗಿತ್ತು.
- ✓ ನಂತರ ಅಮೇರಿಕಾ ಬ್ರಿಟನ್ & ಫ್ರಾನ್ಸ್ ಜೊತೆ ಸೇರಿತು.
- ✓ ನವೆಂಬರ್ 1917ರಲ್ಲಿ ರಷ್ಯಾದಲ್ಲಿ **ಸಮಾಜವಾದಿ ಕ್ರಾಂತಿ** ಸಂಭವಿಸಿ ಜರ್ಮನಿಯೊಂದಿಗೆ ಯುದ್ಧ ನಿಲುಗಡೆ ಒಪ್ಪಂದ ಮಾಡಿಕೊಂಡು ಹೊರಬಂದಿತು.
- ✓ ಮೈತ್ರಿಬಣದ ತೀವ್ರ ದಾಳಿಯಿಂದ ಜರ್ಮನಿ ಸೋಲೊಪ್ಪಿಕೊಂಡಿತು
- ✓ 1919ರಲ್ಲಿ **'ವರ್ಸೇಲ್ಸ್ ಒಪ್ಪಂದ'** ನಡೆಯಿತು.

**ಪರಿಣಾಮಗಳು:–**

- ❖ ಆಸ್ಟ್ರೋ–ಹಂಗೇರಿ & ಆಟೋಮನ್ ಸಾಮ್ರಾಜ್ಯಗಳು ಅಸ್ತಿತ್ವ ಕಳೆದುಕೊಂಡವು.
- ❖ ಜರ್ಮನಿ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು.
- ❖ ಯುರೋಪಿನ ಭೂಪಟ ಬದಲಾಯಿತು.
- ❖ ಹಲವು ಸಣ್ಣ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು.



RAMALINGAPPA L

- ❖ ಮುಂದೆ ಯುದ್ಧಗಳನ್ನು ತಡೆಯಲು **'ರಾಷ್ಟ್ರಸಂಘ (ಲೀಗ್ ಆಫ್ ನೇಷನ್ಸ್)'** ಸ್ಥಾಪನೆ
- ❖ ಸೋತ ರಾಷ್ಟ್ರಗಳಲ್ಲಿ ಅವಮಾನಕರ ಭಾವನೆಗಳು ಉಗ್ರ ರಾಷ್ಟ್ರೀಯತೆ ಉದಯ
- ❖ ಜರ್ಮನಿಯಲ್ಲಿ ಬೆಳೆದ ಹಲವು ಸಮಸ್ಯೆಗಳು
- ❖ ಸರ್ವಾಧಿಕಾರಿಗಳ ಉದಯಕ್ಕೆ ಕಾರಣ
- ❖ ಮೈತ್ರಿ ಬಣದ ರಾಷ್ಟ್ರಗಳು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಅಪಾರ ಪ್ರಮಾಣದ ಲಾಭ ಪಡೆದರು.

**ಸರ್ವಾಧಿಕಾರಿಗಳ ಉದಯ:–**

**ಹಿಟ್ಲರ್:–**

- ➢ ಜರ್ಮನಿಯಲ್ಲಿ ಹಿಟ್ಲರ್ ಸರ್ವಾಧಿಕಾರಿಯಾಗಿ ಉದಯ
- ➢ ಹಿಟ್ಲರ್ ಜರ್ಮನಿಯ ಛಾನ್ಸಲರ್ ಆಗಿ, ಅಧ್ಯಕ್ಷ **ಹಿಂಡೆನ್ ಬರ್ಗ್** ನಿಧನದ ನಂತರ ಸರ್ವಾಧಿಕಾರಿಯಾದ.
- ➢ ಹಿಟ್ಲರ್ **ಫ್ಯೂರರ್** ಆದನು.
- ➢ ಹಿಟ್ಲರ್ ಪ್ರಾಬಲ್ಯದ ಜೊತೆ ಜರ್ಮನಿಯಲ್ಲಿ ಕಮ್ಯುನಿಸ್ಟರು & ಸೋಷಿಯಲಿಸ್ಟರು ಬಲಿಷ್ಠರಾದರು.
- ➢ ಹಿಟ್ಲರ್ ಜರ್ಮನಿಯ ಉದ್ಯಮಿಗಳ ಸಹಾಯ ಪಡೆದು ಇವರನ್ನು ದಮನ ಮಾಡಿದ.
- ➢ **ಕಾರ್ಮಿಕ ಸಂಘ**ಗಳನ್ನು ರದ್ದುಗೊಳಿಸಿದನು.
- ➢ **ರಾಜಕೀಯ ಪಕ್ಷ**ಗಳನ್ನು ನಿಷೇಧಿಸಿದನು.
- ➢ **ನಾಜಿ ಪಕ್ಷ** ಏಕೈಕ ರಾಜಕೀಯ ಪಕ್ಷವೆಂದು ಘೋಷಿಸಿದನು.
- ➢ ಯೆಹೂದಿಗಳು ಜಗತ್ತನ್ನು ನಿಯಂತ್ರಿಸುತ್ತಾರೆಂದು ಜನರನ್ನು ಭೀತಿಗೊಳಿಸಿದ.
- ➢ ಜಗತ್ತಿನಲ್ಲಿ **ಆರ್ಯ ಜನಾಂಗವೇ** ಶ್ರೇಷ್ಠವೆಂಬ ಜನಾಂಗವಾದವನ್ನು ಮುಂದಿಟ್ಟನು.

**ನಾಜಿವಾದದ ಸಾರಾಂಶ:–**

- ✓ ಜಗತ್ತಿನಲ್ಲಿ ಶ್ರೇಷ್ಠ ಜನಾಂಗ ಆರ್ಯ ಜನಾಂಗ
- ✓ ಜಗತ್ತನ್ನು ಆಳಲು ಜರ್ಮನಿಯನ್ನರು ಮಾತ್ರ ಯೋಗ್ಯರು.
- ✓ ಉಳಿದ ಜನಾಂಗಗಳು ಆಲಿಸಿಕೊಳ್ಳಲು ಯೋಗ್ಯ.
- ✓ ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯಹುದಿಗಳೇ ಕಾರಣ.
- ✓ ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕ್‌ರು, ಸೋಷಿಯಲಿಸ್ಟರು ಕಾರಣ.
- ✓ ಇವರು ಬದುಕಲು ಯೋಗ್ಯರಲ್ಲ.
- ✓ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು **'ಗೊಬೆಲ್ಸ್'** ಎಂಬ ವಿಶೇಷ ಮಂತ್ರಿ ನೇಮಕ.
- ✓ ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿ ಹುಟ್ಟಿಸಲು **'ಬೂದಿ ಅಂಗಿದಳ'** ರಚನೆ.
- ✓ 60 ಲಕ್ಷ ಯಹೂದಿಗಳು ಹಾಗೂ ಇತರೆ ಕೋಟಿಗೂ ಹೆಚ್ಚು ಜನರನ್ನು ಕೊಲ್ಲಿಸಿದನು.
- ✓ ಇವನ ಸಾಮೂಹಿಕ ಕಗ್ಗೊಲೆಗಳನ್ನು **'ಹೊಲೊಕಾಸ್ಟ್'** ಎನ್ನುವರು.
- ✓ 1935ರಲ್ಲಿ **ನ್ಯೂರೆಂಬರ್ಗ್ ಕಾನೂನು**ಗಳನ್ನು ಹಿಟ್ಲರ್ ಜಾರಿ.
- ✓ ಊಟ, ನೀರು ನೀಡದೇ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವ **'ಕಾನ್ಸೆಂಟ್ರೇಷನ್ ಕ್ಯಾಂಪ್ಸ್'**ಗಳು
- ✓ ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಜನರನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು.
- ✓ ಸಾಮೂಹಿಕವಾಗಿ ಗುಂಡಿಟ್ಟು ಕೊಲ್ಲುವುದು ಈ ರೀತಿ ಹಲವು ರೀತಿಯಲ್ಲಿ ನರಮೇಧ ನಡೆಸಿದನು.
- ✓ ಇಡೀ ಪ್ರಭುತ್ವಯಂತ್ರವನ್ನು ನರಮೇಧ ನಡೆಸಲು ಬಳಸಿದ.

**ಮುಸೋಲಿನಿ:–**

**ಮುಸೋಲಿನಿಯ ಫ್ಯಾಸಿಸ್ಟ್‌ವಾದ ಬೆಳೆಯಲು ಕಾರಣ:–**

- ❖ ಯುರೋಪಿನ ಸಾಮಾಜಿಕ ಚಳುವಳಿ,
- ❖ ಮೊದಲ ಮಹಾಯುದ್ಧದ ದುಷ್ಪರಿಣಾಮಗಳು
- ❖ ರಷ್ಯನ್ ಕ್ರಾಂತಿಯ ಹಿನ್ನೆಲೆ

**ಫ್ಯಾಸಿಸ್ಟ್‌ವಾದದ ಲಕ್ಷಣಗಳು:–**

- ➢ ಉಗ್ರ ರಾಷ್ಟ್ರೀಯವಾದ
- ➢ ಪರಕೀಯ ಶಕ್ತಿಗಳ ನಾಶ
- ➢ ಹಿಂಸೆಯ ವೈಭವೀಕರಣ
- ➢ ಜನಾಂಗೀಯ ಶ್ರೇಷ್ಠತೆ
- ➢ ಸಾಮ್ರಾಜ್ಯವಾದದ ವಿಸ್ತರಣೆ
- ➢ ನರಮೇಧಗಳಿಗೆ ಬೆಂಬಲ

- ✓ 1922–1943ರವರೆಗೆ ಇಟಲಿಯ ಪ್ರಧಾನಿ
- ✓ **ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷದ** ಸ್ಥಾಪನೆ
- ✓ 1925ರಲ್ಲಿ ಇಟಲಿಯಲ್ಲಿ **ಪ್ರಜಾಪ್ರಭುತ್ವ ವಿಸರ್ಜನೆ** ಮಾಡಿ ಸರ್ವಾಧಿಕಾರಿಯಾದನು.
- ✓ ತನ್ನ ಗುಪ್ತ ಪೋಲಿಸ್‌ರ ಮುಖಾಂತರ ರಾಜಕೀಯ ವಿರೋಧಿಗಳ ನಾಶ
- ✓ ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿದನು.
- ✓ ಏಕಪಕ್ಷ ಸರ್ವಾಧಿಕಾರ ಸ್ಥಾಪನೆ
- ✓ 1945ರಲ್ಲಿ ಇವನನ್ನು ಹತ್ಯೆ ಮಾಡಲಾಯಿತು.

RAMALINGAPPA L

**ಎರಡನೆಯ ಮಹಾಯುದ್ಧ:–**

❖ 1939ರ ಸೆಪ್ಟಂಬರ್ 1 ರಂದು ನಾಜಿ ಜರ್ಮನಿಯು ಪೋಲೆಂಡಿನ ಮೇಲೆ ದಾಳಿಯೊಂದಿಗೆ ಆರಂಭ

❖ ಇದು ಮಾನವ ಚರಿತ್ರೆಯಲ್ಲಿ ಯುದ್ಧಗಳಲ್ಲೇ ಅತ್ಯಂತ ಬೃಹತ್ತಾದ & ಬರ್ಬರವಾದುದು.

❖ ಇದರಲ್ಲಿ 30ಕ್ಕೂ ಹೆಚ್ಚು ದೇಶಗಳು ಭಾಗವಹಿಸಿದ್ದವು.

❖ ಇದು 1939 ರಿಂದ 1945ರವರೆಗೆ ನಡೆಯಿತು.

❖ 1ನೇ ಮಹಾಯುದ್ಧದ ಹಣ ವ್ಯಯದ ಪರಿಣಾಮವಾಗಿ 1930ರ ದಶಕದಲ್ಲಿ ಮಹಾ ಆರ್ಥಿಕ ಕುಸಿತ ಉಂಟಾಯಿತು.

❖ ಯುರೋಪ್ & ಅಮೇರಿಕಾದಲ್ಲಿ ಸಂಕಷ್ಟದ ಪರಿಸ್ಥಿತಿ ಉಂಟಾಗಲು

- ➢ ಜನರ ಜೀವನಮಟ್ಟ ಕುಸಿಯಿತು.
- ➢ ಕೈಗಾರಿಕೆ & ಕೃಷಿ ಬೆಳವಣಿಗೆ ಸ್ಥಗಿತ
- ➢ ನಿರುದ್ಯೋಗ ವಿಪರೀತವಾಯಿತು.
- ➢ ಉಗ್ರ ರಾಷ್ಟ್ರೀಯವಾದದ ಬೆಳವಣಿಗೆ
- ➢ ಇಟಲಿ, ಜರ್ಮನಿ & ಜಪಾನ್‌ಗಳಲ್ಲಿ ಸರ್ವಾಧಿಕಾರತ್ವ ಉದಯ

**ಎರಡು ಬಣಗಳ ರಚನೆ:–**

- ✓ ಶತ್ರುಬಣ(ಆಕ್ಸೀಸ್ ಬಣ):– **ಜರ್ಮನಿ, ಇಟಲಿ, ಜಪಾನ್**
- ✓ ಮಿತ್ರಬಣ(ಆಲೈಸ್ ಬಣ):– **ಬ್ರಿಟನ್, ಫ್ರಾನ್ಸ್, ರಷ್ಯಾ**

**ಯುದ್ಧದ ಘಟನೆಗಳು:–**

❖ **ಪೋಲೆಂಡಿನ ಮೇಲೆ ಜರ್ಮನಿ ಯುದ್ಧ** ಮಾಡಿತು.

❖ ಬ್ರಿಟನ್ ಪೋಲೆಂಡಿನ ಮಿತ್ರ ರಾಷ್ಟ್ರವಾದ್ದರಿಂದ ಜರ್ಮನಿಯ ಮೇಲೆ ಬ್ರಿಟನ್ ಯುದ್ಧ ಸಾರಿತು.

❖ **ಪೋಲೆಂಡ್** ಜರ್ಮನಿಯ ವಶವಾಯಿತು.

❖ ರಷ್ಯಾ ಕಮ್ಯುನಿಸ್ಟ್ ರಾಷ್ಟ್ರವಾದ್ದರಿಂದ ಮಿತ್ರರಾಷ್ಟ್ರಗಳು ಜರ್ಮನಿ ರಷ್ಯಾದ ಮೇಲೆ ಯುದ್ಧ ಬಯಸಿದ್ದವು.

❖ ಇದರಿಂದ ರಷ್ಯಾ **1939 ಆಗಸ್ಟ್ 24** ರಂದು ಜರ್ಮನಿ ಜೊತೆ **ಯುದ್ಧರಹಿತ ಒಪ್ಪಂದ** ಮಾಡಿಕೊಂಡಿತು.

❖ ಹಿಟ್ಲರ್ ಮೊದಲು ಪಶ್ಚಿಮದ ಕಡೆ ದಾಳಿ ಮಾಡಿದ

❖ ಇಟಲಿ ಜೊತೆ ಒಪ್ಪಂದ ಮಾಡಿಕೊಂಡ **ಹಿಟ್ಲರ್ ಡೆನ್ಮಾರ್ಕ್, ನಾರ್ವೆ, ಹಾಲೆಂಡ್** ಒಳಗೊಂಡ ಪಶ್ಚಿಮ ಯುರೋಪ್‌ನ್ನು ಪಡೆದನು.

❖ 1941ರಲ್ಲಿ ಹಟ್ಲರ್‌ನ ದೃಷ್ಟಿ ರಷ್ಯಾದ ಮೇಲೆ ಬಿತ್ತು. ಇದೇ ಸಂದರ್ಭದಲ್ಲಿ ಜಪಾನ್ ಹಿಟ್ಲರ್‌ನ ಬಣ ಸೇರಿತು.

❖ ಪೆಸಿಫಿಕ್ ಸಮುದ್ರದ ಪಶ್ಚಿಮ ಭಾಗದ ಅಮೇರಿಕಾ & ಯುರೋಪಿನ ಪ್ರದೇಶಗಳ ಜಪಾನ್ ದಾಳಿ ಮಾಡಿ ಆಕ್ರಮಿಸಿತು.

❖ 1942ರಲ್ಲಿ **ಸ್ಟಾಲಿನ್‌ಗ್ರಾಡ್ ಯುದ್ದದಲ್ಲಿ** ಜರ್ಮನಿಯನ್ನು ರಷ್ಯಾ ಸೋಲಿಸಿತು.

❖ ಮಿತ್ರಪಡೆಗಳು ಇಟಲಿಯನ್ನು ಆಕ್ರಮಿಸಿತು.

❖ ರಷ್ಯಾದ ಕೆಂಪು ಸೈನಿಕರ **ಮಹಾನ್ ಮುನ್ನಡೆ ಮತ್ತು ಪಶ್ಚಿಮ ರಾಷ್ಟ್ರಗಳ ದಾಳಿಯಿಂದ** ಜರ್ಮನಿ ಶರಣಾಯಿತು & ಬರ್ಲಿನ್ ಪತನವಾಯಿತು.

❖ 1945ರಲ್ಲಿ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು.

❖ 1945ರಲ್ಲಿ **ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಅಮೇರಿಕಾ ಜಗತ್ತಿನ ಮೊಟ್ಟಮೊದಲ ಅಣುಬಾಂಬನ್ನು** ಹಾಕಿತು.

❖ 1945 ಆಗಸ್ಟ್ 15ರಂದು ಜಪಾನ್ ಸಂಪೂರ್ಣವಾಗಿ ಶರಣಾಯಿತು

**ಪರಿಣಾಮಗಳು:–**

- ➢ ಮಾನವ ಚರಿತ್ರೆಯಲ್ಲಿ ಅಪಾರ ಸಾವು–ನೋವು ಉಂಟಾಯಿತು.
- ➢ ಜಗತ್ತಿನ ರಾಜಕೀಯ & ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು.
- ➢ ವಿಶ್ವಸಂಸ್ಥೆ ರಚನೆಯಾಯಿತು.
- ➢ ಅಮೇರಿಕಾ, ರಷ್ಯಾ, ಚೀನಾ, ಬ್ರಿಟನ್ & ಫ್ರಾನ್ಸ್ ಗಳು ವಿಶ್ವಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳಾದವು.
- ➢ ರಷ್ಯಾ & ಅಮೇರಿಕಾ ಪರಸ್ಪರ ವಿರೋಧಿ ಬಣಗಳಾಗಿ ಉದಯ
- ➢ ಇದು ಶೀತಲ ಸಮರಕ್ಕೆ ನಾಂದಿಯಾಯಿತು.
- ➢ ಏಷ್ಯಾ & ಆಫ್ರಿಕಾದ ವಸಾಹತುಗಳು ಸ್ವಾತಂತ್ರವಾದವು.

**ವಿಶ್ವ ಸಮರಗಳು & ಭಾರತದ ಪಾತ್ರ:–**

- ✓ ವಿಶ್ವದ ಎರಡು ಮಹಾಯುದ್ದಗಳಲ್ಲಿ ಬ್ರಿಟನ್ ಭಾರತ ಸೇನೆಯ ಸಹಕಾರವಿಲ್ಲದೆ ಜಯಗಳಿಸುತ್ತಿರಲಿಲ್ಲ.
- ✓ ಇದನ್ನು ಸೈನಿಕ ದಾಖಲೆಗಳು & ರಣಭೂಮಿಯ ಯುದ್ಧ ವರದಿಗಳು ಸಾಬೀತು ಪಡಿಸಿವೆ.
- ✓ ಇಂಗ್ಲೇಂಡಿನ ದೊರೆ & ಭಾರತದ ಚಕ್ರವರ್ತಿ 5ನೇ ಜಾರ್ಜ್ ಇಂಗ್ಲೇಂಡಿಗೆ ಯುದ್ದದಲ್ಲಿ ಸಹಾಯ ಮಾಡುವಂತೆ ವಿನಂತಿಸಿಕೊಂಡವು
- ✓ ಮೊದಲನೆ ಜಾಗತಿಕ ಯುದ್ಧದಲ್ಲಿ ಬ್ರಿಟನ್ ನಿರ್ಣಾಯಕ ಪಾತ್ರವಹಿಸಿತು.

RAMALINGAPPA L

**ಭಾರತದಿಂದ ಸಹಾಯ:–**

- 15 ಲಕ್ಷ ಸಿಪಾಯಿಗಳು
- 1,72,815 ಪ್ರಾಣಿಗಳು **(85,953 ಕುದುರೆ, 10,781 ಒಂಟೆ, 5061 ಗಾಡಿಗಳು, 65,398 ಕತ್ತೆಗಳು)**
- 7 ಕೋಟಿ ಯುದ್ಧ ಸಾಮಾಗ್ರಿಗಳು
- 6 ಲಕ್ಷ ರೈಫಲ್‌ಗಳು ಸರಬುರಾದವು.
- 4,19,20,223 ಬಟ್ಟೆಗಳು ಸರಬರಾದವು.
- ಅಲ್ಲದೆ ಕಚ್ಚಾವಸ್ತು, ಮ್ಯಾಂಗನೀಸ್, ಅಭ್ರಕ, ಚಹಾ, ರಬ್ಬರ್ ಸರಬರಾಜಾಯಿತು.
- 1914ರಲ್ಲಿ **ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್** ಭಾರತದ ವೈಸ್‌ರಾಯ್‌ಗೆ ಬರೆದ ಪತ್ರದಲ್ಲಿ ಆಪತ್ಕಾಲದಲ್ಲಿ ನಾವು ನಿಮ್ಮ ರಕ್ಷಣೆಗೆ ನಿಲ್ಲಬೇಕು ಎಂದು ಬರೆದರು.
- ಸಂಸ್ಥಾನದ ವತಿಯಿಂದ 50 ಲಕ್ಷ ರೂಪಾಯಿಗಳು ಭಾರತದ ಯುದ್ಧ ನಿಧಿಗೆ ಒಪ್ಪಿಸಿತು.
- ಸೆಪ್ಟಂಬರ್ 1914ರಲ್ಲಿ **'ಮೈಸೂರು ಲ್ಯಾನ್ಸರ್ಸ್ ರೆಜಿಮೆಂಟ್'** ನ್ನು ಯುದ್ದಕ್ಕಾಗಿ **ಈಜಿಪ್ಟ್‌ಗೆ** ಹೊರಡಲು ಹುಕುಂ ಮಾಡಿತು.
- **ಸೇನಾಧಿಕಾರಿ ಬಿ.ಚಾಮರಾಜ ಅರಸುರವರ** ನೇತೃತ್ವದಲ್ಲಿ ಮೈಸೂರು ಸೇನೆಯನ್ನು ರಣಭೂಮಿಗೆ ಕಳುಹಿಸಿತು.
- **ಕರ್ನಲ್ ಜೆ.ದೇಸಿರಾಜ ಅರಸುರವರನ್ನು** ದರ್ಬಾರಿನ ಪ್ರತಿನಿಧಿಯಾಗಿ ಯುದ್ಧ ಬೂಮಿಗೆ ಕಳುಹಿಸಿದರು.
- ಜೊತೆಗೆ 23 ಆಫೀಸರರು, 444 ಸಿಪಾಯಿಗಳು, 526 ಕುದುರೆ, 49 ಹೇಸರಕತ್ತೆ, 132 ಪರಿವಾರದವರುಳ್ಳ ರೆಜಿಮೆಂಟ್‌ನ್ನು ಬೆಂಗಳೂರಿನಿಂದ 1914 ಅಕ್ಟೋಬರ್ 13 ರಲ್ಲಿ ಹೊರಟಿತು.
- **ಮೇಜರ್ ಎಂ.ಹೆಚ್ ಹೆಂಡರ್‌ಸನ್** ಕೂಡ ಇದರೊಡನೆ ಇದ್ದರು.
- 1915 ನವಂಬರ್‌ನಲ್ಲಿ **ಸೂಯಜ್ ಕಾಲುವೆ ಪ್ರಾಂತ್ಯ** & 1917 ನವೆಂಬರ್‌ನಲ್ಲಿ **ಪ್ಯಾಲಿಸ್ಟೈನ್‌ನ ಗಾಜಾಪಟ್ಟಣದ ಮುತ್ತಿಗೆಯಲ್ಲಿ** ಮುಂದಾಳಾಗಿದ್ದರು.
- **ಗಾಜಾ ಕದನದಲ್ಲಿ** ಇವರು ಶತೃಗಳನ್ನು ಓಡಿಸಿದರೆಂದು ಈಜಿಪ್ಟ್‌ನ ಕಮಾಂಡರ್ ಚೀಫ್‌ನಿಂದ ವೈಸ್‌ರಾಯ್‌ಗೆ ವರದಿ ಬಂತು.
- ಟರ್ಕಿ ಸೈನ್ಯವನ್ನು ನಾಶಪಡಿಸಿ, **ಪ್ಯಾಲಿಸ್ಟೈನ್, ಸಿರಿಯಾ, ಡಮಾಸ್ಕಸ್ ಮತ್ತು ಅಲೆಪ್ಪೊ ಪಟ್ಟಣ**ಗಳನ್ನು ವಶ **ಹಾಗೂ ಹೈಫಾ ಪಟ್ಟಣ**ವನ್ನು ಹಿಡಿಯುವಲ್ಲಿ **ಮೈಸೂರು ಸೈನಿಕರು ಹಾಗೂ ಜೋಧ್‌ಪುರದ ಸೈನಿಕರ** ಪಾತ್ರ ಹಿರಿದಾಗಿತ್ತು.
- **ಜೋಧ್ ಪುರ ಲ್ಯಾನ್ಸರ್‌ಗಳ** ಹೋರಾಟ ಅಪ್ರತಿಮೆದಾಗಿತ್ತು ಟರ್ಕಿ ಜನರನ್ನು ಭಲ್ಲೆಯಿಂದ ಕೊಂದರೆಂದು ತಿಳಿದು ಬರುತ್ತದೆ.

**ಮೈಸೂರಿನ ಮುಖ್ಯ ಲ್ಯಾನ್ಸರ್‌ಗಳು:–**

- **ಕಮಾಂಡೆಂಡ್ ತ್ಯಾಗರಾಜ್, ರಿಸಾಲ್ದಾರ್‌ಗಳಾದ ಎ.ಲಿಂಗರಾಜ ಅರಸ್, ಸುಬ್ಬರಾಜ ಅರಸ್, ಬಿ.ಪಿ.ಕೃಷ್ಣೇ ಅರಸ್, ವಿರ್ ತುರಾಕ್ ಅಲಿ, ಸರ್ದಾರ್ ಬಹಾದೂರ್, ಬಿ.ಚಾಮರಾಜ ಅರಸ್, ರೆಜಿಮೆಂಟ್‌ದಾರ್ ಬಿ.ಚಾಮರಾಜ ಅರಸ್ ಹಾಗೂ ಕರ್ನಲ್ ಜೆ. ದೇಸಿರಾಜ ಅರಸ್**
- **ಜೋಧಪುರ ಹಾಗೂ ಹೈದರಾಬಾದ್ ಲ್ಯಾನ್ಸರ್ಸ್** ಕೂಡ ಯುದ್ಧದಲ್ಲಿ ಭಾಗಿಯಾಗಿದ್ದರು ಇವರ ಹೆಸರು ಬ್ರಿಟಿಷರು **ದೆಹಲಿಯಲ್ಲಿ** ಪ್ರಸಿದ್ಧ **ತೀನ್‌ಮೂರ್ತಿ ಭವನವನ್ನು** ನಿರ್ಮಿಸಿದರು (ಅಂದರೆ ಮೂರು ಶಿಲ್ಪಿಗಳು:– **ಮೈಸೂರು, ಜೋಧಪುರ ಹಾಗೂ ಹೈದರಾಬಾದಿನ ಸೈನಿಕರುಗಳು** ಎಂದರ್ಥ)
- ಇದು ಈಗಿನ ತೀನ್‌ಮೂರ್ತಿ ನಗರದಲ್ಲಿದೆ.
- ಇಸ್ರೇಲ್ ಜೊತೆ ಸ್ನೇಹಸೌಹಾರ್ದದ ನೆನಪಿಗೆ ಭಾರತ ಇದನ್ನು ಪ್ರಧಾನಿಮಂತ್ರಿ **'ಬೆಂಜಮಿನ್ ನೇತನ್ಯಾಹೂ'** ಜನವರಿ 14, 2018ರಲ್ಲಿ ಭೇಟಿ ನೀಡಿದಾಗ ತೀನ್‌ಮೂರ್ತಿ ಚೌಕ ಯುದ್ಧದ ನೆನಪಿಗೆ **'ತೀನ್‌ಮೂರ್ತಿ ಹೈಫಾ ಚೌಕ'** ಎಂದು ಆ ರಸ್ತೆಗೆ **"ತೀನ್‌ಮೂರ್ತಿ ಹೈಫಾ ಮಾರ್ಗ"** ಎಂದು ಮರುನಾಮಕರಣ ಮಾಡಿತು.
- ಇಷ್ಟು ಸಹಾಯ ಮಾಡಿದ ಭಾರತಕ್ಕೆ 1919ರಲ್ಲಿ ರೌಲತ್ ಕಾಯಿದೆಯನ್ನು ಜಾರಿ ಮಾಡಿ **ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ** ನಾಂದಿಯಾಯಿತು.

**ಭಾರತ ಮತ್ತು ಎರಡನೇ ವಿಶ್ವ ಸಮರ:–**

- ✓ ಇದು ಆಧುನಿಕ ಜಗತ್ತಿನ ಸಾಮಾಜಿಕ & ರಾಜಕೀಯ ನಕ್ಷೆಯನ್ನು ಬದಲಾಯಿಸಿತು.
- ✓ ಇದು ಯುರೋಪ್ ಕೇಂದ್ರಿತವಾಗಿತ್ತು.
- ✓ ಇದರಲ್ಲಿ ಭಾರತವು ಭಾಗವಹಿಸಿತು.
- ✓ **ಪಶ್ಚಿಮ ಏಷಿಯಾ, ಮಲಯ, ಬರ್ಮ, ಇರಾಕ್, ಇರಾನ್, ಸಿರಿಯಾ, ಉತ್ತರ ಮತ್ತು ಪೂರ್ವ ಆಫ್ರಿಕ, ಸಿಸಿಲಿ, ಇಟಲಿ, ಗ್ರೀಸ್, ಕ್ರೀಟ್, ಸೈಪ್ರಸ್, ಇಥಿಯೋಪಿಯ ಮತ್ತು ಸೋಮಾಲಿಲ್ಯಾಂಡ್** ಗಳಲ್ಲಿ ಹೋರಾಡಿತು.
- ✓ ಭಾರತವು ಪಶ್ಚಿಮದಲ್ಲಿ ಜರ್ಮನಿ ಹಾಗೂ ಪೂರ್ವದಲ್ಲಿ ಜಪಾನ್ ವಿಭಜನಾ ರೇಖೆಯಾಯಿತು.
- ✓ ಭಾರತವು **ಸ್ವಾತಂತ್ರ್ಯ ಹೋರಾಟ, ಭಾರತೀಯ ರಾಷ್ಟ್ರೀಯ ಕಾಂಗ್ರೇಸ್, ಮುಸ್ಲಿಂ ಲೀಗ್ ಮತ್ತು ಸುಭಾಷ್ ಚಂದ್ರ ಬೋಸ್‌ರ ಆಜಾದ್ ಹಿಂದ್ ಫೌಜ್‌**ನ ಹಿನ್ನೆಲೆಯನ್ನು ಹೋರಾಟನಡೆಸಿತು.
- ✓ ಇದರಲ್ಲಿ ಭಾಗವಹಿಸಿದ್ದರಿಂದ ಭಾರತದ ಸ್ವಾತಂತ್ರ ಹೋರಾಟಕ್ಕೆ ಸ್ಫೂರ್ತಿ ದೊರೆಯಿತು.

RAMALINGAPPA L

- ✓ ಇದರಲ್ಲಿ ಬ್ರಿಟನ್ ಭಾರತೀಯ ಕೃಷಿ ವಸ್ತುಗಳು, ಕೈಗಾರಿಕಾ ಪದಾರ್ಥಗಳು ಉಪಯೋಗ
- ✓ ಯುದ್ಧ ಸಾಮಾಗ್ರಿಗಳ ತಯಾರಿಕಾ **ಆರ್ಡಿನೆನ್ಸ್ ಕಾರ್ಖಾನೆ**ಗಳನ್ನು ಮೇಲ್ದರ್ಜೆಗೆರಿಸಿ ಹೊಸ ತಂತ್ರಜ್ಞಾನ ಅಳವಡಿಕೆ.
- ✓ ಭಾರತ ಸೇನೆಯು ಕಲಿತ ಯುದ್ಧ ತಾಂತ್ರಿಕತೆಯು ಪೂರ್ವ ಆಫ್ರಿಕದ ಇಟಲಿಯನ್ನರ ಜೊತೆ ಸೆಣಸಲು ಸಹಾಯ.
- ✓ **ಎರ್ವಿನ್ ರೋವರ್ ಆಫ್ರಿಕ ಕಾರ್ಪ್ಸ್**‌ನ್ನು ಹಿಮ್ಮೆಟ್ಟಿಸಲು ತರಬೇತಿ ಪಡೆದ ಭಾರತೀಯ ಸಐನ್ಯಕ್ಕೆ ಸಾಧ್ಯವಾಯಿತು.
- ✓ ಭಾರತೀಯ ಸೇನೆಯು 2ನೇ ಮಹಾಯುದ್ಧದಲ್ಲಿ ಜರ್ಮನಿಯ ಸೈನ್ಯವನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು.
- ✓ 1942ರಲ್ಲಿ ಭಾರತೀಯ ಸೇನ್ಯವು ಜಪಾನ್‌ನಿಂದ ಸೋತಿತು.
- ✓ 1942-45ರ ಬರ್ಮಾ ಯುದ್ಧವು ಭಾರತೀಯ ಸೇನೆಗೆ ಮುಖ್ಯವಾಗಿತ್ತು ಕಾರಣ, ಪ್ರಮುಖ ದಂಡನಾಯಕ & ಆಗ್ನೇಯಾ ಏಷ್ಯಾ ದಂಡನಾಯಕರಿಂದ ತೀವ್ರ ಮಿಲಿಟರಿ ತರಬೇತಿ ದೊರೆಯಿತು.
- ✓ ಇದರಿಂದ 1944-45ರಲ್ಲಿ ಭಾರತೀಯ ಸೈನಿಕರಿಗೆ ಬರ್ಮಾದಲ್ಲಿ ವಿಜಯ ಪಡೆದರು.
- ✓ ಬ್ರಿಟನ್ ಹಿಡಿತದಲ್ಲಿದ್ದ ಈ ಕೆಳಗಿನ ರಾಷ್ಟ್ರಗಳು ಸ್ವಾತಂತ್ರವಾದವು.
  - ❖ ಲಿಬಿಯಾ-1951,
  - ❖ ಸುಡಾನ್-1956,
  - ❖ ಘಾನಾ-1957,
  - ❖ ನೈಜೀರಿಯಾ-1961,
  - ❖ ಅಲ್ಜೀರಿಯಾ-1962,
  - ❖ ಕೀನ್ಯಾ-1963,
  - ❖ ಝಾಂಬಿಯಾ-1964ರಲ್ಲಿ ಸ್ವಾತಂತ್ರ ಪಡೆದವು.

## ರಾಜ್ಯಶಾಸ್ತ್ರ
## ಅಧ್ಯಾಯ-1
## ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು

**ಭಾರತಕ್ಕಿರುವ ಸಮಸ್ಯೆಗಳು:-**

- ➢ ಕೋಮುವಾದ
- ➢ ಪ್ರಾದೇಶಿಕವಾದ
- ➢ ಅನಕ್ಷರತೆ
- ➢ ಭ್ರಷ್ಟಾಚಾರ
- ➢ ಮಹಿಳೆಯರ ಸ್ಥಾನಮಾನಾರ್ಥಿಕ ಅಸಮಾನತೆ
- ➢ ಜನಸಂಖ್ಯಾ ಹೆಚ್ಚಳ
- ➢ ಬಡತನ
- ➢ ಲಾಭಕೋರಿತನ
- ➢ ಕಳ್ಳಸಾಗಾಣಿಕೆ

**ಸಮಸ್ಯೆಗಳನ್ನು ನಿಗ್ರಹಿಸವ ಪ್ರಯತ್ನಗಳು:-**

- ✓ ಉತ್ತಮವಾದ ಶಾಸನಾತ್ಮಕ
- ✓ ಸಾಮಾಜಿಕ ಸುಧಾರಣೆಗಳು
- ✓ ದಕ್ಷ ಆಡಳಿತ
- ✓ ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ
- ✓ ಜನತೆಯ ಸಹಕಾರ

**ಕೋಮುವಾದ:-**

- ❖ ಇದು ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ.
- ❖ ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳಿಸಿಕೊಳ್ಳುವುದನ್ನು **"ಕೋಮುವಾದ ಅಥವಾ ಮತೀಯವಾದ"** ಎನ್ನುವರು.
- ❖ ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಭಿಕೆ, ಭಯದ ವಾತಾವರಣ ಸೃಷ್ಟಿ.
- ❖ ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ & ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ.
- ❖ ಇದು ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ, ಅಪಾಯ ತಂದೊಡ್ಡುವ ಶಕ್ತಿಯಾಗಿದೆ.
- ❖ ಇದು ಸಮಾಜದ ನೆಮ್ಮದಿಯನ್ನು ಕೆಡಿಸಿ ವ್ಯಕ್ತಿಗಳ ಜೀವ & ಸೊತ್ತುಗಳ ನಾಶಕ್ಕೆ ಕಾರಣ.
- ❖ ಇದು ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆಗೆ ಕಾರಣವಾಗುತ್ತದೆ.
- ❖ ಸ್ವಾತಂತ್ರ ಪೂರ್ವದಲ್ಲಿ ಬ್ರಿಟಿಷರ ಒಡೆದು ಆಳುವ ನೀತಿಯಿಂದ ಪ್ರೋತ್ಸಾಹ.
- ❖ ತಮ್ಮ ತಮ್ಮ ಧರ್ಮಗಳನ್ನು ಪ್ರಚಾರ ಪಡಿಸುವ, ಪರಧರ್ಮಗಳನ್ನು ನೋಯಿಸುವ ಸಂದರ್ಭ.

**ನಿಯಂತ್ರಣ;-**

- ➢ ಏಕರೂಪ ನಾಗರಿಕ ಸಂಹಿತೆ
- ➢ ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವುದು.

RAMALINGAPPA

- ಜಾತ್ಯತೀತ ಮನೋಭಾವಕ್ಕೆ ಪ್ರಾಶಸ್ತ್ಯ
- ಸಂಕುಚಿತ ವಿಭಾಗೀಯ ಚಿಂತನೆಗಳಿಗಿಂತ ರಾಷ್ಟ್ರೀಯ ಚಿಂತನೆಗೆ ಒತ್ತು ನೀಡುವುದು.
- ಮತ–ಬ್ಯಾಂಕ್ ಧೋರಣೆಗಳು, ಓಲೈಕೆಯ ವಿಧಾನಗಳನ್ನು ನಿವಾರಿಸಬೇಕು.
- ಮತೀಯ ಮೂಲಭೂತವಾದ ರಾಷ್ಟ್ರೀಯ ಹಿತಾಸಕ್ತಿಗೆ & ರಾಷ್ಟ್ರಾಭಿಮಾನಕ್ಕೆ ಧಕ್ಕೆ ಆಗದಂತೆ ತಡೆಗಟ್ಟಬೇಕು.
- ಶಿಕ್ಷಣದಲ್ಲಿ ಜಾತ್ಯತೀತ ತತ್ವವನ್ನು ಅಳವಡಿಸಿ ಅರಿವು ಮೂಡಿಸಬೇಕು.
- ಸಾರ್ವಜನಿಕ ಎಚ್ಚರ, ರಾಜಕೀಯ ಅಚಲ ನಿರ್ಧಾರ
- ಆಡಳಿತಾತ್ಮಕ ಸಮತೋಲನ
- ಕ್ರಮಬದ್ಧ ಕಾನೂನು ವ್ಯವಸ್ಥೆ
- ಸದೃಢ ರಾಷ್ಟರೀಯ ಮನೋಭಾವ
- ಆರೋಗ್ಯಕರ ಪೂರಕ ಸುದ್ದಿಮಾಧ್ಯಮ

**ಪ್ರಾದೇಶಿಕವಾದ:–**

- ✓ ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ ಕೇವಲ ಆ ಭಾಗದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು **'ಪ್ರಾದೇಶಿಕವಾದ'** ಎನ್ನುವರು.
- ✓ ಭಾರತ ಒಂದು ವಿಶಾಲ ರಾಷ್ಟ್ರ ಆದ್ದರಿಂದ ಪ್ರಾದೇಶಿಕ ಭಿನ್ನತೆ.
- ✓ ತಮ್ಮದೇ ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸಲು ಇದು ಪ್ರೇರಣೆ ನೀಡುತ್ತದೆ.
- ✓ ಇದು ತೀರಾ ಹೆಚ್ಚು ಎನಿಸಿದರೆ ರಾಷ್ಟ್ರದ ಏಕತೆ & ಹಿತಾಸಕ್ತಿಗೆ ಧಕ್ಕೆ.

**ಪ್ರಾದೇಶಿಕವಾದ ಬೆಳೆಯಲು ಕಾರಣಗಳು:–**

- ❖ ಪ್ರದೇಶಗಳ ಚಾರಿತ್ರಿಕ ಹಿನ್ನೆಲೆ
- ❖ ಸಾಮಾಜಿಕ ಕಟ್ಟುಪಾಡುಗಳು
- ❖ ಆರ್ಥಿಕ ವಿಚಾರಗಳು
- ❖ ಸಾಂಸ್ಕೃತಿಕ ವಿಭಿನ್ನತೆಗಳು
- ❖ ಭೌಗೋಳಿಕ ಪರಿಸರ
- ❖ ಅತಿಯಾದ ಭಾಷಾಭಿಮಾನ
- ❖ ಪ್ರಾದೇಶಿಕವಾದವನ್ನು ವೈಭವೀಕರಿಸುವುದು.

**ನಿಯಂತ್ರಣ ಕ್ರಮಗಳು:–**

- ನಿಯಂತ್ರಿಸಲು ಭಾರತದ ಸಂವಿಧಾನ ಹಲವು ಮಾರ್ಗಗಳನ್ನು ಸೂಚಿಸಿದೆ.
- ಏಕ ಪೌರತ್ವದ ಮೂಲಕ ರಾಷ್ಟ್ರದ ಸಮಗ್ರತೆ & ಏಕತೆಯನ್ನು ಎತ್ತಿ ಹಿಡಿಯತ್ತದೆ.
- ಪ್ರಸ್ತಾವನೆಯಲ್ಲಿ 'ಭಾರತದ ಪ್ರಜೆಗಳಾದ ನಾವು......' ಎಂಬುವುದು ರಾಷ್ಟ್ರೀಯತೆಯನ್ನು ಬಿಂಬಿಸುತ್ತದೆ.
- 1956ರ ಭಾಷಾವಾರು ಪ್ರಾಂತ್ಯಗಳ ರಚನೆ ಪ್ರಗತಿಗೆ ಪೂರಕವಾಗಿರಬೇಕು.
- ಕೇಂದ್ರ ಸರ್ಕಾರವು ರಾಜ್ಯಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುತ್ತದೆ.
- ಪ್ರಾಂತೀಯವಾದ ನಿವಾರಣೆಗೆ ಡಾ. ಡಿ.ಎಂ ನಂಜುಂಡಪ್ಪ ಸಮಿತಿ, ಮಲೆನಾಡು ಅಭಿವೃದ್ಧಿ ಸಮಿತಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿ ರಚನೆ.
- ಭಾರತ ಸರ್ಕಾರ ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ ಕಾರ್ಯಕ್ರಮಗಳು ರೂಪಿಸಿದೆ.

**ಅನಕ್ಷರತೆ:–**

ಇದು ಭಾರತದಲ್ಲಿ ದೊಡ್ಡ ಸಮಸ್ಯೆಯಾಗಿದೆ.

**ಅನಕ್ಷರತೆಗೆ ಕಾರಣಗಳು:–**

- ❖ ಬಡತನ
- ❖ ವಲಸೆ ಹೋಗುವಿಕೆ
- ❖ ಮಕ್ಕಳ ದುಡಿಮೆ
- ❖ ಬಾಲ್ಯವಿವಾಹ
- ❖ ಚಿಕ್ಕ ಮಕ್ಕಳ ಲಾಲನೆ–ಪಾಲನೆಗೆ ಹಿರಿಯ ಮಕ್ಕಳನ್ನು ಬಳಸಿಕೊಳ್ಳುವುದು.
- ❖ ಶಿಕ್ಷಣ ಕೊಡಿಸಬೇಕೆಂಬ ಆಸಕ್ತಿಯ ಕೊರತೆ.

**ಸಾಕ್ಷರತೆಯ ಪ್ರಮುಖ ಅಂಶಗಳು:–**

- ✓ ಸ್ವಾತಂತ್ರ್ಯ ನಂತರ ಶೇ.12 ರಷ್ಟು ಸುಶಿಕ್ಷಿತರು ಇದ್ದರು.
- ✓ 2001ರಲ್ಲಿ ಶೇ.66% ಕ್ಕೆ ಏರಿತು.
- ✓ 2011ರಲ್ಲಿ ಸಾಕ್ಷರತೆಯ ಪ್ರಮಾಣವು ಶೇ. 74 ಆಗಿರುತ್ತದೆ.

**ಅನಕ್ಷರತೆಯನ್ನು ಹೋಗಲಾಡಿಸಲು ಕ್ರಮಗಳು:–**

- 2001ರಲ್ಲಿ 6–14 ವರ್ಷದ ಮಕ್ಕಳಿಗೆ ಶಿಕ್ಷಣ ನೀಡಲು ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿ.
- ವಿಕಲ ಚೇತನರ ಶಿಕ್ಷಣಕ್ಕೆ ಆದ್ಯತೆ



RAMALINGAPPA L

- ಮಹಿಳಾ ಶಿಕ್ಷಣ ಹಾಗೂ ಮಹಿಳಾ ಜಾಗೃತಿಗೆ ಆದ್ಯತೆ.
- 1988ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪನೆ.
- ಅನಕ್ಷರತೆ ಹೋಗಲಾಡಿಸಲು 'ಸಾಕ್ಷರ ಭಾರತ್' ಕಾರ್ಯಕ್ರಮ ಜಾರಿ.
- ಸಂವಿಧಾನದ 21ಎ ವಿಧಿಯನ್ವಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಣಮಿಸಿದೆ.
- 2009ರಲ್ಲಿ ದೇಶದಾದ್ಯಂತ ಶಿಕ್ಷಣ ಹಕ್ಕ ಕಾಯ್ದೆಯನ್ನು ಜಾರಿ.
- ಇದರಿಂದ 6–14 ವಯೋಮಾನದವರಿಗೆ ಕಡ್ಡಾಯ ಶಿಕ್ಷಣ ನೀಡುವುದು.

**ಭ್ರಷ್ಟಾಚಾರ:–**

- ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಮುಖ್ಯ ಪಿಡುಗು.
- ಇದು ಸಾರ್ವತ್ರಿಕವಾಗಿ & ಸಮಾಜದ ಎಲ್ಲಾ ಸ್ತರಗಳಲ್ಲಿ ವ್ಯಾಪಕವಾಗಿ ಹಬ್ಬಿದೆ.
- ಭ್ರಷ್ಟಾಚಾರ ಎಂದರೆ, **ಲಂಚ ಅಥವಾ ಇನ್ನಾವುದೇ ಕ್ರಮದಿಮದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವಿಕೆ** ಎಂದರ್ಥ
- ಎಲ್ಲಾ ವಿಧಿವಿಧಾನಗಳನ್ನು ಬದಿಗೆ ಸರಿಸಿ ಸ್ವಾರ್ಥದ ದೃಷ್ಟಿಯಿಂದ ಸ್ವಂತ ಲಾಭಕ್ಕಾಗಿ ಅಧಿಕಾರ ದುರುಪಯೋಗವನ್ನೇ ಭ್ರಷ್ಟಾಚಾರ.
- ಇದು ಸಾಂಕ್ರಾಮಿಕ ರೋಗದಂತೆ ಸಾರ್ವಜನಿಕ ಜೀವನದಲ್ಲಿ ವ್ಯಾಪಿಸಿದೆ.

**ಪರಿಣಾಮಗಳು:–**

- ಇದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದುಷ್ಪರಿಣಾಮಗಳು ಬೀರುತ್ತವೆ.
- ಇದು ಸಮಾಜವಿರೋಧಿ.
- ಆರ್ಥಿಕ ಸುವ್ಯವಸ್ಥೆಯ ವಿರೋಧಿ
- ರಾಜಕೀಯವಾಗಿ ಅಸಮರ್ಪಕ ಹಾಗೂ ನೈತಿಕವಾಗಿ ತಪ್ಪು.
- ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ಎಡೆಮಾಡಿಕೊಡುತ್ತದೆ.
- ಅಧಿಕಾರಶಾಹಿಯ ಲೋಪದೋಷಗಳಿಗೆ & ವಂಚನೆಗಳಿಗೆ ಅನುವು ಮಾಡಿಕೊಡುತ್ತದೆ.

**ಭ್ರಷ್ಟಾಚಾರದ ಪರಿಧಿಯೊಳಗೆ ಬರುವ ಸಂಗತಿಗಳು:–**

- ✓ ಮೌಲ್ಯಗಳ ಬಗೆಗಿನ ವ್ಯಕ್ತಿಗತ ಚಿಂತನೆ
- ✓ ಸಮಾಜ ಒಪ್ಪುವ ಅಥವಾ ಪರಿಗ್ರಹಿಸುವ ಮೌಲ್ಯಗಳು
- ✓ ಆಡಳಿತ ವ್ಯವಸ್ಥೆಯಲ್ಲಿ ಲಂಚಗುಳಿತನ
- ✓ ಸ್ವಜನ ಪಕ್ಷಪಾತ
- ✓ ಜಾತೀಯತೆ
- ✓ ಉದ್ದೇಶಪೂರ್ವ ಮುಂದೂಡಿಕೆ
- ✓ ತೆರಿಗೆಕಳ್ಳತನ
- ✓ ಅಕ್ರಮ ದಾಸ್ತಾನು
- ✓ ಕಳ್ಳಸಾಗಾಣಿಕೆ
- ✓ ಆರ್ಥಿಕ ವಂಚನೆ
- ✓ ಮೋಸಗಾರಿಕೆ
- ✓ ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ
- ✓ ಔದ್ಯೋಗಿಕ ವಂಚನೆ.

**ನಿಯಂತ್ರಣ ಕ್ರಮಗಳು:–**

- ವೈಯಕ್ತಿಕ ಹಾಗೂ ಸಾಮಾಜಿಕ ಭದ್ರ ನೈತಿಕ ತಳಹದಿಯ ಮೂಲಕ
- ಕಟ್ಟುನಿಟ್ಟಾದ ಮೇಲ್ವಿಚಾರಣೆ ಆಗತ್ಯ.
- ಪ್ರಬಲ ರಾಜಕೀಯ ಇಚ್ಛಾಶಕ್ತಿ & ಸಾರ್ವಜನಿಕ ಸಹಕಾರ ಅಗತ್ಯ
- ಒಳ್ಳೆಯ ರಾಜಕೀಯ ನಾಯಕತ್ವ
- ಉತ್ತಮ ಅಧಿಕಾರ ವರ್ಗ
- ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು
- ಲೋಕಪಾಲ & ಲೋಕಾಯುಕ್ತ ಸಂಸ್ಥೆಗಳು
- ಶಿಕ್ಷಣ ಸಂಸ್ಥೆಗಳು & ಸಾಮಾಜಿಕ ನಾಯಕರು ಬಳಕೆ
- ಅತ್ಯಂತ ಕಠಿಣ ಶಿಕ್ಷಾ ವಿಧಾನ.

**ಮಹಿಳೆಯರ ಸ್ಥಾನಮಾನ:–**

- ಇಂದು ಮಹಿಳೆಯರು ವೈದ್ಯಕೀಯ, ಅಧ್ಯಾಪಕ, ಇಂಜಿನಿಯರ್, ಪೈಲಟ್, ಗಗನಯಾತ್ರಿ, ಪೋಲಿಸ್, ರಾಜಕೀಯ, ರಕ್ಷಣಾಪಡೆಯಲ್ಲಿ ಸೇವೆ.

**ಸ್ತ್ರೀಯರ ಸ್ಥಾನಮಾನ ಹಿಂದಿರುವುದಕ್ಕೆ ಕಾರಣ:–**

- ಸಾಮಾಜಿಕ ಪದ್ಧತಿಗಳು
- ಬಡತನ
- ಅನಕ್ಷರತೆ

**ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡ ಕ್ರಮಗಳು:–**

- ಸರ್ಕಾರವು 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ' ಆರಂಭ.


RAMALINGAPPA L

- ಇದರ ಮೂಲಕ ಆರೋಗ್ಯ, ಶಿಕ್ಷಣ & ಸಾಮಾಜಿಕ ಕ್ಷೇತ್ರದಲ್ಲಿ ಸ್ಥಾನ ಉತ್ತಮ ಪಡಿಸುವುದು.
- ಮಹಿಳೆಯರ ಸಬಲೀಕರಣಕ್ಕಾಗಿ **ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ** ಜಾರಿ.
- ಕರ್ನಾಟಕ ಸರ್ಕಾರ **'ಸ್ತ್ರೀ ಶಕ್ತಿ' ಸಂಘ**ಗಳನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿದೆ.
- ಇದರ ಮೂಲಕ ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನ.
- ಇವು ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ & ಸಬ್ಸಿಡಿ ನೀಡುವ ಕಾರ್ಯಕ್ರಮ.
- **ಮಹಿಳಾ ಮಂಡಲಗಳು, ಯುವತಿ ಮಂಡಲಗಳು, ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು, ಮಹಿಳಾ ಸಹಕಾರಿ ಸಂಘಗಳು** ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿ ಪೂರಕ ಕಾರ್ಯನಿರ್ವಹಣೆ.
- ರಾಜ್ಯ & ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳ ರಚನೆ.
- ಶಾಸನಕಾಂಗ & ಸಂಸತ್ತಿನಲ್ಲಿ ರಾಜಕೀಯದಲ್ಲಿ ಮೀಸಲಾತಿ ನೀಡಿಕೆ
- ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಶೇ.33% ರಷ್ಟು ಮಹಿಳಾ ಮೀಸಲಾತಿ ನೀಡಿಕೆ.
- ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ನಿಗಧಿತ ಮೀಸಲಾತಿ ನೀಡಿಕೆ.

**ಆರ್ಥಿಕ ಅಸಮಾನತೆ:–**

- ಇದು ಸಮಾಜದ ಶ್ರೀಮಂತರ ಹಾಗೂ ಮಧ್ಯೆ ಅಂತರದ ಹೆಚ್ಚಳ ಗುರುತಿಸುತ್ತದೆ.
- ಈ ಅಂತರವನ್ನು ನಗರ–ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದು.
- ರಾಷ್ಟ್ರದ ಆರ್ಥಿಕ ಪ್ರಗತಿಯ ಉಪಯೋಗವನ್ನು ನಗರವಾಸಿ ಶ್ರೀಮಂತ ವರ್ಗ ಆಕ್ರಮಿಸಿದೆ.
- ಆದರೆ ಇದರ ಫಲ ಬಡಜನತೆಗೆ ದೊರಕುವುದು ಅಸಾಧ್ಯ.

**ಅಂತರ ಹೆಚ್ಚುವುದಕ್ಕೆ ಕಾರಣಗಳು:–**

- ಹೆಚ್ಚಿನ ಮೊತ್ತದ ವೇತನ ಶ್ರೇಣಿ
- ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಕ್ಷೇತ್ರ
- ಶ್ವೇತಧಾರಿ ಅರ್ಥಾತ್ ಮೇಲುಸ್ತರದ ನೌಕರಿಗಳು
- ಲಾಭ ಬಡುಕತನ
- ಭ್ರಷ್ಟಾಚಾರ

**ಈ ಅಂತರವನ್ನು ಕಡಿಮೆಗೊಳಿಸಲು ಸರ್ಕಾರದ ಕ್ರಮಗಳು:–**

- ಉತ್ತಮ ಆರ್ಥಿಕ ಯೋಜನೆಗಳು
- ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ
- ಒಳ್ಳೆಯ ತೆರಿಗೆ ವಿಧಾನ ಆರ್ಥಿಕ ಸಮಾನತೆಗೆ ಅಗತ್ಯ.
- ಸಣ್ಣ & ಗುಡಿಕೈಗಾರಿಕೆಗಳ ಅಭಿವೃದ್ಧಿ
- ಬೃಹತ್ ಉದ್ಯಮ & ಏಕಸ್ವಾಮ್ಯ ವಲಯಗಳನ್ನು ಸರಿಯಾಗಿ ನಿಯಂತ್ರಿಸಬೇಕು.
- ರಾಷ್ಟ್ರೀಯ ಆದಾಯದ ಅಸಮಾನ ಹಂಚಿಕೆ ತಡೆಗಟ್ಟುವುದು.
- ಬಂಡವಾಳಶಾಹಿತ್ವ ಹೋಗಲಾಡಿಸುವುದು.
- ಭೂಸುಧಾರಣೆ, ಕಾರ್ಮಿಕಪರ ಧೋರಣೆ, ಸಾಮಾಜಿಕ ಭದ್ರತೆ

**ಜನಸಂಖ್ಯಾ ಹೆಚ್ಚಳ:–**

- ಜನಸಂಖ್ಯೆ ಹೆಚ್ಚಳದಲ್ಲಿ ಪ್ರಪಂಚದಲ್ಲಿ 2ನೇ ಸ್ಥಾನ ಭಾರತ.
- ಜಗತ್ತಿನಲ್ಲಿ ಒಟ್ಟು ಶೇ. 2.4 ಭೂಭಾಗ ಹೊಂದಿದೆ.
- 1991–2001 ದಶಕದಲ್ಲಿ 84 ದಶ ಲಕ್ಷ ಕೋಟಿಯಿಂದ 102.7 ದಶಲಕ್ಷ ಕೋಟಿಗೆ ಹೆಚ್ಚಳ.
- 2011ರ ಜನಗಣಿತ ಪ್ರಕಾರ 121 ಕೋಟಿ ದಾಟಿದೆ.
- ದಶಮಾನದ ಏರಿಕೆ 19 ಪ್ರತಿಶತ ಹೊಂದಿದೆ.

**ಜನಸಂಖ್ಯೆ ಏರಿಕೆಗೆ ಕಾರಣಗಳು:–**

- ✓ ಜನನ ಪ್ರಮಾಣದಲ್ಲಿ ಹೆಚ್ಚಳ
- ✓ ಮರಣ ಪ್ರಮಾಣದಲ್ಲಿ ಇಳಿಕೆ
- ✓ ಜೀವಿತಕಾಲಮಾನದಲ್ಲಿ ಗಣನೀಯ ಪ್ರಮಾಣದ ಏರಿಕೆ
- ✓ ಶಿಶು ಮರಣದ ನಿಷ್ಪತ್ತಿ ಕಡಿಮೆ

**ಜನಸಂಖ್ಯಾ ಸ್ಫೋಟದಿಂದುಂಟಾದ ಸಮಸ್ಯೆಗಳು:–**

- ನಿರುದ್ಯೋಗ
- ಅನಕ್ಷರತೆ
- ಬಡತನ
- ವಸತಿ ಸೌಲಭ್ಯದ ಕೊರತೆ
- ಆರೋಗ್ಯ ಸಮಸ್ಯೆ
- ನೀರಿನ ಪೂರೈಕೆಯ ಸಮಸ್ಯೆ

**ಜನಸಂಖ್ಯಾ ನಿಯಂತ್ರಣ ಕ್ರಮಗಳು:–**

- ಕುಟುಂಬ ಕಲ್ಯಾಣ ಇಲಾಖೆ ಸ್ಥಾಪನೆ
- ಸಣ್ಣ ಕುಟುಂಬದ ಸೂತ್ರಗಳನ್ನು ಜಾರಿಗೆ ತರುವುದು.
- ಭಾರತ ಅಪಾರ ಜನಸ್ತೋಮವನ್ನು ಪ್ರಗತಿ ಸಂಪನ್ಮೂಲವನ್ನಾಗಿ ಪರಿವರ್ತಿಸುವುದು.
- ಪ್ರಕೃತಿಕ ಸಂಪತ್ತು & ಮಾನವ ಸಂಪತ್ತನ್ನು ಹೊಂದಾಣಿಕೆಯಿಂದ ಉಪಯೋಗಿಸಬೇಕು.
- ಕೇಂದ್ರ ಶಿಕ್ಷಣ ಇಲಾಖೆಯನ್ನು 'ಮಾನವ ಸಂಪನ್ಮೂಲ ಇಲಾಖೆ' ಎಂದು ನಾಮಕರಣ
- ಇದು ಅಕ್ಷರ ಪ್ರಸರಣ, ತಾಂತ್ರಿಕ ಶಿಕ್ಷಣ, ಕೃಷಿ ಅಭಿವೃದ್ಧಿ, ಕೈಗಾರಿಕಾ ಪ್ರಗತಿ, ರಫ್ತು ಹೆಚ್ಚಳ, ಹೆಚ್ಚಿನ ಉದ್ಯೋಗಾವಕಾಶಗಳು
- ಮಾನವ ಸಂಪನ್ಮೂಲವನ್ನು ಹೊರೆಯಾಗಿಸದೇ, ಉತ್ತಮ, ಪೂರಕ ಆಸ್ತಿಯಾಗಿಸಬೇಕು.
- ದೇಶದ ಪ್ರಗತಿಯಲ್ಲಿ ಹೆಚ್ಚೆಚ್ಚು ಜನರು ಪಾಲ್ಗೊಳ್ಳುವಂತೆ ಮಾಡಬೇಕು.

**ಬಡತನ:–**

- ❖ ಇದು ಭಾರತದ ದೊಡ್ಡ ಆರ್ಥಿಕ & ಸಾಮಾಜಿಕ ಸಮಸ್ಯೆಯಾಗಿದೆ.
- ❖ ಜನರು ಸರಿಯಾದ ಆಹಾರ, ಬಟ್ಟೆ, ವಸತಿ ಹಾಗು ಮೂಲಭೂತ ಸೌಕರ್ಯಗಳನ್ನು ಹೊಂದೆ ಪಡುವ ಕಷ್ಟವನ್ನು 'ಬಡತನ' ಎನ್ನುವರು.

**ಬಡತನ ನಿವಾರಣೆಯ ಯೋಜನೆಗಳು:–**

- ✓ ಬಡಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳ ವಿತರಣೆ
- ✓ ಪಂಚವಾರ್ಷಿಕ ಯೋಜನೆಗಳ ಮೂಲಕ ಬಡತನ ನಿರ್ಮೂಲನೆ & ತಲಾ ಆದಾಯ ಹೆಚ್ಚಿಸುವ ಕ್ರಮ ಕೈಗೊಂಡಿದೆ.
- ✓ ಜವಾಹರ ರೋಜ್‌ಗಾರ್ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಅನುಷ್ಠಾನ
- ✓ ಅಪಾರ ಜನಸಂಪತ್ತು & ನೈಸರ್ಗಿಕ ಸಂಪತ್ತನ್ನು ಸರಿಯಾದ ಬಳಕೆ
- ✓ ಇವುಗಳನ್ನು ಉತ್ಪಾದನೆಯಲ್ಲಿ ತೊಡಗಿಸುವುದು.
- ✓ ಉತ್ಪಾದನಾ ಹೆಚ್ಚಳ ಹಾಗೂ ಸಮರ್ಪಕ ವಿತರಣಾ ವ್ಯವಸ್ಥೆ.

**ಲಾಭಕೋರತನ:–**

- ಜನಸಾಮಾನ್ಯರ ಅಥವಾ ಬಳಕೆದಾರರಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಧೋರಣೆಯನ್ನು 'ಲಾಭಕೋರಿತನ' ಎನ್ನುವರು.
- ವ್ಯಾಪಾರ ವಹಿವಾಟಿನಲ್ಲಿ ಸುಲಭ ರೀತಿಯಲ್ಲಿ ಹೆಚ್ಚು ಹಣ ದೋಚುವಿಕೆ ಒಂದು ಕೆಡುಕು.
- ಸುಲಭಗಳಿಕೆ ಸಮಾಜಕ್ಕೆ ಅಹಿತವನ್ನು ಉಂಟುಮಾಡುತ್ತದೆ.

**ಲಾಭಕೋರತನಕ್ಕೆ ಕಾರಣಗಳು:–**

- ❖ ಇದರಿಂದ ಆರ್ಥಿಕ ಅಸಮಾನತೆ ಹೆಚ್ಚು & ಬಡತನ ಹೆಚ್ಚುತ್ತದೆ.
- ❖ ಇದರಿಂದ ಸಮಾಜದಲ್ಲಿ ಅಪರಾಧಗಳು ಏರಿಕೆಯಾಗುತ್ತವೆ.
- ❖ ಆರ್ಥಿಕ ರಂಗದಲ್ಲಿ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ.
- ❖ ಇದರಿಂದ ಬೆಲೆ ಏರಿಕೆಯಾಗಿ ಹಣದುಬ್ಬರಕ್ಕೆ ಕಾರಣವಾಗುತ್ತದೆ.
- ❖ ಜನರ ಆದಾಯ ಸೀಮಿತ ಶ್ರೀಮಂತ ವ್ಯಾಪಾರಿ ವರ್ಗದ ಕೈ ಸೇರುತ್ತದೆ.
- ❖ ಬೆಲೆಗಳ ಮೇಲೆ ಹತೋಟಿ ಇಲ್ಲದೇ ಇರುವುದು.
- ❖ ಏಕಸ್ವಾಮ್ಯ ವ್ಯವಸ್ಥೆ
- ❖ ಬಹುರಾಷ್ಟ್ರೀಯ ಕಂಪನಿಗಳ ವಯಾಪಕತೆ
- ❖ ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು
- ❖ ಅಕ್ರಮ ದಾಸ್ತಾನು
- ❖ ಕಳ್ಳ ವ್ಯಾಪಾರ
- ❖ ಬೆಲೆಯ ಬಗ್ಗೆ ಸರಿಯಾದ ನಿಯಂತ್ರಣ ಇಲ್ಲದಿರುವುದು.

**ನಿಯಂತ್ರಣ:–**

- ✓ ಸರ್ಕಾರ ಸಮರ್ಪಕವಾದ ಕಾನೂನು ಮಾಡಬೇಕು.
- ✓ ಬೆಲೆಗಳನ್ನು ಹತೋಟಿಗೆ ತರಲು ಯತ್ನಿಸಬೇಕು
- ✓ ಕಟ್ಟುನಿಟ್ಟಿನ ಸರ್ಕಾರೀ ನಿಯಂತ್ರಣ
- ✓ ಬೆಲೆ ಸೂಚ್ಯಾಂಕಗಳ ಪರಿಶೀಲನೆ
- ✓ ಸಹಕಾರಿ ಮಾರುಕಟ್ಟೆಗಳ ವಿಸ್ತರಣೆ
- ✓ ಸರಿಯಾದ ತೆರಿಗೆ ಧೋರಣೆ

**ಕಳ್ಳ ಸಾಗಾಣಿಕೆ:–**

- ಯಾವುದೇ ಆಮದು ಸುಂಕವನ್ನು ಸರ್ಕಾರಕ್ಕೆ ನೀಡದೆ ಗುಪ್ತವಾಗಿ ವಿದೇಶಿಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು **'ಕಳ್ಳಸಾಗಾಣಿಕೆ'** ಎನ್ನುವರು.

**ಪರಿಣಾಮಗಳು:–**

- ❖ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ
- ❖ ಅನಪೇಕ್ಷಿತ ಆರ್ಥಿಕ ಚಟುವಟಿಕೆಗಳಿಗೆ ಪ್ರೇರಣೆ
- ❖ ದೇಶದ ಆರ್ಥಿಕತೆಗೆ ಹಾನಿ



RAMALINGAPPA L

- ❖ ದೇಶದ ಕೈಗಾರಿಕೆ & ಮಾರುಕಟೆಗೆ ಹಾನಿ.

**ನಿಯಂತ್ರಣ ಕ್ರಮಗಳು:–**

- ➢ ದೇಶದೊಳಕ್ಕೆ ಪರ್ಯಾಯ ವಸ್ತುಗಳ ಪೂರೈಕೆ
- ➢ ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವಿಕೆ
- ➢ ಸುಯೋಗ್ಯ ಆಮದು–ರಫ್ತು ಧೋರಣೆ
- ➢ ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ
- ➢ ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷ
- ➢ ಅಂತರಾಷ್ಟ್ರೀಯ & ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದಗಳು
- ➢ ಕಳ್ಳಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸಬೇಕು

## ಅಧ್ಯಾಯ–2
## ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

- ❖ ಪ್ರಚಲಿತ ಪ್ರಪಂಚವನ್ನು 'ವಿಶ್ವ ಕುಟುಂಬ' ಎನ್ನುವರು.
- ❖ ವಿಶ್ವದ ಏಳು ಖಂಡಗಳಲ್ಲಿ 198 ಸಾರ್ವಭೌಮ ರಾಷ್ಟ್ರಗಳಿವೆ.
- ❖ ಸಾರ್ವಭೌಮ ರಾಷ್ಟ್ರ:– ಆಂತರಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಸ್ವಯಂ ನಿರ್ಧಾರದ ಹಕ್ಕು ಹೊಂದದ ದೇಶ.
- ❖ ಭಾರತ ತನ್ನ ನೆರೆಯ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರಬೇಕು.
- ❖ ಉತ್ತಮ ವಿದೇಶಾಂಗ ನೀತಿಯನ್ನು ಹೊಂದಿರಬೇಕು.

**ಭಾರತ ಮತ್ತು ಪಾಕಿಸ್ತಾನ:–**

- ➢ 1947ರ ಭಾರತದ ವಿಭಜನೆ ಪಾಕಿಸ್ತಾನ ಉದಯಕ್ಕೆ ಕಾರಣ.
- ➢ ಪಾಕಿಸ್ತಾನದೊಂದಿಗೆ ಭಾರತ ಉತ್ತಮ ಬಾಂಧವ್ಯ ಹೊಂದಲು ಪ್ರಯತ್ನಿಸುತ್ತಿದೆ.
- ➢ ಭಾರತ & ಪಾಕಿಸ್ತಾನ ಉತ್ತಮ ಸಂಬಂಧ ಹೊಂದಿಲ್ಲ ಕಾರಣ:–
  - ▪ ಪಾಕಿಸ್ತಾನದ ಮಿಲಿಟರಿಶಾಹಿತ್ವ
  - ▪ ರಾಜಕೀಯ ಅಸ್ಥಿರತೆ
  - ▪ ಭಾರತ & ಪಾಕಿಸ್ತಾನಗಳ ಮಧ್ಯೆ ಯುದ್ಧಗಳು
  - ▪ ಕಾಶ್ಮೀರ ಸಮಸ್ಯೆ
  - ▪ ಭಯೋತ್ಪಾದನೆ
  - ▪ ಗಡಿ ಸಮಸ್ಯೆ
- ➢ ಭಾರತ–ಪಾಕಿಸ್ತಾನ ಸಂಬಂಧ ಸುಧಾರಣೆ ಅಗತ್ಯ:–
  - ✓ ಕಾಶ್ಮೀರದ ಭೂಭಾಗ ಪಾಕಿಸ್ತಾನದ ಸ್ವಾಧೀನದಲ್ಲಿದೆ.
  - ✓ ಪಾಕಿಸ್ತಾನ ಭಯೋತ್ಪಾದಕತೆಯನ್ನು ಪ್ರಚೋದಿಸಬಾರದು
  - ✓ ಭಾರತದ ಹಿತಾಸಕ್ತಿಗೆ ತೊಂದರೆಯಾಗದಂತೆ ವ್ಯವಹರಿಸಬೇಕು
  - ✓ ಭಾರತವನ್ನು ಶತೃ ರಾಷ್ಟ್ರವನ್ನಾಗಿ ಕಾಣಬಾರದು.

**ಭಾರತ ಮತ್ತು ಚೀನಾ:–**

- ❖ ನಮ್ಮ ಉತ್ತರ ಭಾಗದ ಬೃಹತ್ ನೆರೆಯ ರಾಷ್ಟ್ರ.
- ❖ 1949ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಮಾನ್ಯತೆ ಮಾಡಿದ ಮೊದಲ ರಾಷ್ಟ್ರ ಭಾರತ.
- ❖ ಪಂಚಶೀಲ ಹಾಗೂ ಹಿಂದಿ–ಚೀನೀ ಭಾಯಿಭಾಯಿ ತತ್ವ ಆದಾರದಲ್ಲಿ ಸಂಬಂಧ ಬೆಳೆಸಿಕೊಳ್ಳಲು ಯತ್ನ.
- ❖ ಭಾರತದ ವಿರುದ್ಧ ಧೋರಣೆಗೆ ಕಾರಣ:
  - ▪ ಚೈನಾ ಟಿಬೇಟ್‌ನ್ನು ವಶಪಡಿಸಿಕೊಂಡಿತು.
  - ▪ 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು
  - ▪ ಅರುಣಾಚಾಲ ಪ್ರದೇಶವನ್ನು ತನ್ನದೆಂದು ಚೀನಾ ವಾದಿಸುತ್ತಿದೆ.
  - ▪ ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುತ್ತಿದೆ.
  - ▪ ಎರಡು ದೇಶಗಳ ಮಧ್ಯೆ ಗಡಿಸಮಸ್ಯೆ ನಿರ್ಣಯವಾಗಿಲ್ಲ.
  - ▪ ಅಣ್ವಸ್ತ್ರಗಳ ತಯಾರಿ
  - ▪ ವಿದೇಶಿ ವ್ಯಾಪಾರ ಸವಾಲುಗಳು
  - ▪ ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ

**ಭಾರತ ಮತ್ತು ಅಮೇರಿಕಾ:–**

- ❖ ಭಾರತ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನ ಎರಡು ಬೃಹತ್ ರಾಷ್ಟ್ರಗಳು & ಪ್ರಜಾತಂತ್ರ ವ್ಯವಸ್ಥೆ ಹೊಂದಿವೆ.
- ❖ ಶೀತಲ ಸಮರದ ಸಮಯದಲ್ಲಿ ಭಾರತ ಅಲಿಪ್ತ ನೀತಿಯನ್ನು ಅನುಸರಿಸಿತು
- ❖ ಎರಡು ಬಣಗಳ ನಡುವೆ ದೂರವಿರುವ ನೀತಿಯನ್ನು ಅನುಸರಿಸಿತು.
- ❖ ಭಾರತದ ಪಂಚವಾರ್ಷಿಕ ಯೋಜನೆಗಳಿಗೆ ಅಮೇರಿಕಾ ತುಂಬಾ ಸಹಾಯ ನೀಡಿತು.
- ❖ 1962ರ ಚೀನಾ ಅಕ್ರಮಣದ ಸಮಯದಲ್ಲಿ ಅಮೇರಿಕಾ ತುಂಬಾ ಶಕ್ತಿ ನೀಡಿತು.
- ❖ ಆದರೆ ಭಾರತ–ಪಾಕಿಸ್ತಾನ ಯುದ್ಧಗಳ ಸಮಯದಲ್ಲಿ ಪಾಕಿಸ್ತಾನಕ್ಕೆ ಸಹಾಯ ನೀಡಿದರು.
- ❖ ಅಮೇರಿಕಾದ ವಿದೇಶಾಂಗ ನೀತಿ ಭಾರತದ ವಿರುದ್ಧವಿದ್ದು ಪಾಕಿಸ್ತಾನದ ಪರವಾಗಿತ್ತು.

RAMALINGAPPA L

- ❖ ಭಯೋತ್ಪಾದನೆ ಹತ್ತಿಕ್ಕುವಲ್ಲಿ ಎರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಸಕ್ತಿಯಿದೆ.
- ❖ ಭಾರತ ವಿದೇಶಿ ವ್ಯಾಪಾರ, ವಿಜ್ಞಾನ & ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ ಹೊಂದಿದೆ.
- ❖ ವಿಶ್ವಸಂಸ್ಥೆಯನ್ನು ಬಲಪಡಿಸುವಲ್ಲಿ & ಜಾಗತಿಕ ಶಾಂತಿ ಉಳಿಸುವಲ್ಲಿ ಸಮಾನ ಧೋರಣೆ ಹೊಂದಿವೆ.
- ❖ ಭಾರತ ತನ್ನ ವಿದೇಶಾಂಗ ನೀತಿಯನ್ನು ಉತ್ತಮವಾಗಿ ಸಿದ್ಧಪಡಿಸಿದೆ.

**ಭಾರತ ಮತ್ತು ರಷ್ಯಾ:-**

- ➢ ಭಾರತ ರಷ್ಯಾದೊಂದಿಗೆ ಉತ್ತಮ ಸಂಬಂಧ ಹೊಂದಿದೆ.
- ➢ ಭಾರತ ಅಲಿಪ್ತನೀತಿ ಹೊಂದಿದ್ದರೂ ರಷ್ಯಾದೊಂದಿಗೆ ರಾಜಕೀಯ, ಆರ್ಥಿಕವಾಗಿ ಉತ್ತಮ ಪಗ್ರತಿ ಹೊಂದಿದೆ.
- ➢ 1962ರ ಚೀನಾ ದಾಳಿಯನ್ನು ರಷ್ಯಾ ಖಂಡಿಸಿತು.
- ➢ 1961ರ ಗೋವಾ ವಿಮೋಚನಾ ಸಂದರ್ಭದಲ್ಲಿ ರಷ್ಯಾ ಸಹಾಯ.
- ➢ 1966ರ ತಾಷ್ಕೆಂಟ್‌ನಲ್ಲಿ ಭಾರತ-ಪಾಕಿಸ್ತಾನ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಕರಿಸಿತು.
- ➢ 1971ರಲ್ಲಿ ಭಾರತ & ರಷ್ಯಾ 20 ವರ್ಷಗಳ ಶಾಂತಿ ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿವೆ.
- ➢ ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ರಷ್ಯಾ ಸಹಕರಿಸಿತು.
- ➢ ನಮ್ಮ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾ ಹೆಚ್ಚಿನ ನೆರವು ನೀಡಿದೆ.
- ➢ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**ಅಧ್ಯಾಯ-3**

## ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ

- ❖ ದ್ವಿತೀಯ ಮಹಾಯುದ್ಧ ನಂತರ ವಸಾಹತುಶಾಹಿತ್ವ & ಸಾಮ್ರಾಜ್ಯಶಾಹಿತ್ವ ಪತನವಾಯಿತು.
- ❖ 1945ರಲ್ಲಿ ವಿಶ್ವ ಸಂಸ್ಥೆ ಆರಂಭ
- ❖ ಜಾಗತಿಕ ಸಮಸ್ಯೆಗಳು:-
  - ✓ ಮಾನವ ಹಕ್ಕುಗಳ ನಿರಾಕರಣೆ
  - ✓ ಶಸ್ತ್ರಾಸ್ತ್ರಗಳ ಪೈಪೋಟಿ
  - ✓ ಆರ್ಥಿಕ ಅಸಮಾನತೆ
  - ✓ ವರ್ಣಭೇದ ನೀತಿ
  - ✓ ಭಯೋತ್ಪಾದನೆ

**ಮಾನವ ಹಕ್ಕುಗಳ ನಿರಾಕರಣೆ:-**

- ➢ ಮಾನವತಾವಾದಿಗಳು ಜನ್ಮತಃ ಅಥವಾ ಹಿಟ್ಟಿನಿಂದಲೇ ಬರುವ ಹಕ್ಕುಗಳ ಬಗ್ಗೆ ಪ್ರತಿಪಾದನೆ.
- ➢ ಆದರೆ ಪ್ರಪಂಚದ ಬಹುತೇಕ ಮಂದಿ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ.
- ➢ ಕಾರಣ:- ಧರ್ಮ, ಜನಾಂಗ, ಲಿಂಗ, ಜಾತಿ,ವರ್ಣ, ರಾಷ್ಟ್ರೀಯತೆಗಳನ್ನು ಕಾರಣವಾಗಿಸಿವೆ.
- ➢ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ನೀಡಿದ ಅಂಶಗಳು:-
  - ❖ 1776ರ ಅಮೇರಿಕಾ ಸ್ವಾತಂತ್ರ್ಯ ಯುದ್ಧ
  - ❖ 1789ರ ಫ್ರಾನ್ಸಿನ ಮಹಾಕ್ರಾಂತಿ
  - ❖ 1917ರ ರಷ್ಯಾಕ್ರಾಂತಿ
  - ❖ 20ನೇ ಶತಮಾನದ ಪ್ರಥಮಾರ್ಧದ ಭಾರತ & ಇತರೆ ರಾಷ್ಟ್ರಗಳ ಸ್ವಾತಂತ್ರ ಹೋರಾಟ
- ➢ 1948ಎ ಡಿಸೆಂಬರ್ 10ರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉದ್ಘೋಷಣೆ ಒಂದು ಮೈಲುಗಲ್ಲು

**ಮಾನವ ಹಕ್ಕುಗಳ ರಕ್ಷಣೆಯಲ್ಲಿ ಭಾರತ:-**

- ✓ ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾಧಿಸುತ್ತಾ ಬಂದಿದೆ.
- ✓ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ
- ✓ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ರಕ್ಷಣೆಯನ್ನು ಪ್ರತಿಪಾಧಿಸಿದೆ.
- ✓ ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಗಳನ್ನು ನಿಷೇಧಿಸಿದೆ.
- ✓ ಬದುಕುವ ಹಾಗೂ ಸ್ವಾತಂತ್ರ್ಯದ ಹಕ್ಕು, ಸ್ವರಕ್ಷಣೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು ಪ್ರಜಾಪ್ರಭುತ್ವ ರಾಷ್ಟ್ರಗಳ ಸಂವಿಧಾನಿಕ ಹಕ್ಕುಗಳೆನಿಸಿವೆ.
- ✓ ಆದರೆ ನಿರಂಕುಶ ಪ್ರಭುತ್ವ ರಾಷ್ಟ್ರಗಳಲ್ಲಿ ಮೂಲಭೂತ ಹಕ್ಕುಗಳ ನಿರಾಕರಣೆ ಕಾಣಬಹುದು.
- ✓ ಜನಾಂಗ ಹತ್ಯೆ, ವಿವಿಧ ಶೋಷಣೆ ಹಾಗೂ ದಬ್ಬಾಳಿಕೆಯನ್ನು ಭಾರತ ವಿರೋಧಿಸಿದೆ.

RAMALINGAPPA L

- ✓ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸಿದೆ.

**ಶಸ್ತ್ರಾಸ್ತ್ರಗಳ ಪೈಪೋಟಿ:–**

- ❖ 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತಿದೆ' ಎಂಬ ಮಾತಿದೆ.
- ❖ ಆದ್ದರಿಂದ ನಿಶಾಸ್ತ್ರೀಕರಣ ಇಂದಿನ ಹಾಗೂ ಮುಂದಿನ ಉಳುವಿಗೆ ಅಗತ್ಯ.
- ❖ ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಯಸ್ತ್ರೀಕರಣ ಒಂದೇ ಉಪಾಯ
- ❖ ನಿಶ್ಯಸ್ತ್ರೀಕರಣ ಎಂದರೆ:– ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆ.
- ❖ ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಲ್ಲಿ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧ ಸಂಭವ ತಲೆದೊರುತ್ತದೆ ಆದ್ದರಿಂದ ನಿಶ್ಯಸ್ತ್ರೀಕರಣ ಪ್ರಚಲಿತ ಜಗತ್ತಿಗೆ ಅವಶ್ಯಕ.
- ❖ ಶಸ್ತ್ರಾಸ್ತ್ರಗಳು & ಮದ್ದುಗುಂಡುಗಳು ಆರ್ಥಿಕವಾಗಿ ನಷ್ಟದಾಯಕ.
- ❖ ಅಮೇರಿಕಾದ ಅಧ್ಯಕ್ಷ ಐಸನ್ ಹೋವರ್:– **"ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ; ಬದಲಿಗೆ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ"** ಎಂದರು.

**ಭಾರತದ ಪಾತ್ರ:–**

- ✓ ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದ್ದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ.
- ✓ ಜಾಗತಿಕ ಸುರಕ್ಷಯೆ ದೃಷ್ಟಿಯಿಂದ ಯುದ್ಧಗಳ ನಿವಾರಣೆ ಅಗತ್ಯ.
- ✓ 1963ರ ಬಳಿಕೆ ಅಮೇರಿಕಾ & ರಷ್ಯಾ ಬಣಗಳು ದ್ವಿಪಕ್ಷೀಯ ಒಪ್ಪಂದಗಳು ಮಾಡಿಕೊಂಡಿವೆ.
  - ❖ ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್)
  - ❖ ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ
  - ❖ ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ)
  - ❖ ಫಲಿಕೆ ನಿಷೇಧ ಒಪ್ಪಂದ
  - ❖ ಹೀಗೆ "ಪರಸ್ಪರ ನಿಶ್ಚಿತ ನಾಶ"ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನ ಅವಶ್ಯಕ.

**ಆರ್ಥಿಕ ಅಸಮಾನತೆ:–**

- ▪ ಅರ್ಥಿಕ ಅಸಮಾನತೆ ವಸಾಹತುಶಾಹಿತ್ವ & ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ಬಳುವಳಿ.
- ▪ ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಸವಾಹತು ಸ್ಥಾಪಿಸಿ ಆರ್ಥಿಕವಾಗಿ ತೀರ ಹಿಂದುಳಿದವು.
- ▪ 20ನೇ ಶತಮಾನದ ಪೂರ್ವಭಾಗದವರೆಗೂ ಅವುಗಳ ಪ್ರಗತಿ ಕುಂಠಿತವಾಗಿತ್ತು.
- ▪ ಆದರೆ ಇವು ಕೃಷಿ, ಕೈಗಾರಿಕೆ, ಸಾರಿಗೆ & ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು.
- ▪ ಇವುಗಳಿಗೆ ವಿದೇಶೀ ಆರ್ಥಿಕ ಸಹಕಾರ ತೀರ ಅವಶ್ಯಕವಾಗಿತ್ತು.
- ▪ ಈ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕ ರಾಜಕೀಯ ಧ್ರುವೀಕರಣ ಆಧರಿಸಿ ಅಮೇರಿಕಾ & ರಷ್ಯಾದ ಗುಂಪುಗಳು ಸಹಾಯ ಆರಂಭಿಸಿದವು.
- ▪ ಆದರೆ ಈ ರಾಷ್ಟ್ರಗಳ ಬಡತನ & ಮುಂದುವರೆದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಯಿತು.

**ಭಾರತದ ಪಾತ್ರ:–**

- ➢ ಭಾರತ ಅಲಿಪ್ತ ನೀತಿಯನ್ನು ಮುಂದುವರಿಸಿತು.
- ➢ ಯಾವುದೇ ಷರತ್ತುಗಳಿಲ್ಲದೇ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೇರವು ನೀಡಬೇಕೆಂದು ಪ್ರತಿಪಾದಿಸಿತು.
- ➢ ಹೀಗೆ ಭಾರತ ಹಿಂದುಳೀದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಪಯತ್ನಿಸಿತು.
- ➢ ಇದರಿಂದ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ➢ ತೃತೀಯ ಜಗತ್ತು ಎಂಬ ವಿಚಾರ 'ಬಡರಾಷ್ಟ್ರಗಳು' ಎಂಬುದನ್ನು ಎತ್ತಿ ತೋರಿಸುತ್ತದೆ.
- ➢ ಇದರಿಂದ ಬಡರಾಷ್ಟ್ರಗಳು, ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗ ಅವಕಾಶಗಳ ಕೊರತೆಯಿಂದ ಹೊರಬರಲು ಪ್ರಯತ್ನಿಸಿದವು.
- ➢ ಮುಂದುವರೆದ ರಾಷ್ಟ್ರಗಳು ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣಗಳಿಂದ ಬಡರಾಷ್ಟ್ರಗಳಲ್ಲಿ ದುಷ್ಪರಿಣಾಗಳು ಬೀರಿದವು.
- ➢ ಭಾರತ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯಾ & ಸಮಾನತೆಯನ್ನು ಪ್ರತಿಪಾದಿಸುತ್ತಿದೆ.



RAMALINGAPPA L

**ಭಯೋತ್ಪಾದಕತೆ:–**

- ಇದನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದು ಕರೆಯಬಹುದು.
- ಇದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ.
- ಇದು ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ವ್ಯಕ್ತಿಗಳಿಗೆ & ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ.
- ಉಗ್ರಗಾಮಿತ್ವ ಮಾನಸಿಕ ವೇದನೆ ನೀಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ & ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯೇ 'ಭಯೋತ್ಪಾದಕೆ' ಎನ್ನುವರು.
- ಈ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ & ಸಮಾಜದ್ರೋಹಿ ಎನಿಸಿವೆ.
- 2001ರಲ್ಲಿ ಅಮೇರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ & ವಿವಿಧ ದೇಶಗಳಲ್ಲಿ ಸರಣಿಬಾಂಬು ಸ್ಫೋಟಗಳು ಜಗತ್ತಿನಲ್ಲಿ ಕಳವಳಕಾರಿ ಸಂಗತಿಗಳು.

**ಭಯೋತ್ಪಾದನೆಯನ್ನು ಪ್ರೇರೆಪಿತ ಅಂಶಗಳು:–**

- ಧಾರ್ಮಿಕ ಮೂಲಭೂತ ಚಿಂತನೆ
- ಪ್ರತ್ಯೇಕವಾದ
- ತೀವ್ರ ಎಡಪಂಥೀಯ ವಿಚಾರ
- ನಾಡ ಬಿಡುಗಡೆಯ ಛಲ
- ವರ್ಣದ್ವೇಷ ನೀತಿ

**ಈ ಉಗ್ರಗಾಮಿತ್ವವು,**

- ✓ ರಾಷ್ಟ್ರದ ನಾಗರಿಕರ ಮೇಲೆ
- ✓ ಮಿಲಿಟರಿ ಪಡೆಗಳ ಮೇಲೆ
- ✓ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟುಮಾಡುತ್ತವೆ.
- ✓ ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ & ಪ್ರಚಾರವನ್ನು ಪಡೆಯುವ ಉದ್ದೇಶ ಹೊಂದಿದೆ.
- ✓ ಅಧಿಕ ಸ್ಫೋಟಕ ವಸ್ತು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ.
- ✓ ಉಗ್ರಗಾಮಿಗಳು ಗುಪ್ತಚರರನ್ನು ಹಾಗೂ ತರಬೇತು ಜಾಲವನ್ನು ಹೊಂದಿರುತ್ತದೆ ಹಾಗೂ ಅವರ ಸಹಾಯದಿಂದ ಹಣವನ್ನು ಸಂಗ್ರಹಿಸುತ್ತಾರೆ.
- ✓ ಇವರು ಅತ್ಯಾಧುನಿಕ ಸಾರಿಗೆ–ಸಂಪರ್ಕ ಸಾಧನ ಬಳಸುತ್ತಾರೆ.
- ✓ ಇವರು ನಿರ್ದಿಷ್ಟ ಗುರಿ & ಸಂಘಟನೆಗೆ ಪ್ರಚಾರವನ್ನು ಪಡೆಯುತ್ತಾರೆ.

**ಭಯೋತ್ಪಾದನೆಗೆ ಸಿಗುವ ಸಾಮಾನ್ಯ ತಾಣಗಳು:–**

- ರಸ್ತೆಸಾರಿಗೆ
- ರೈಲ್ವೆ ನಿಲ್ದಾಣ
- ವಿಮಾನ ನಿಲ್ದಾನ
- ಸರ್ಕಾರಿ ಕಛೇರಿಗಳು
- ಕಿಕ್ಕಿರಿದ ಜನಜಂಗುಳಿ
- ಮಾರುಕಟ್ಟೆ ಪ್ರದೇಶ
- ಇದು ಅಸಾಂಪ್ರದಾಯಿಕ ಯುದ್ಧ ಎನ್ನಬಹುದು.

**ಉಗ್ರಗಾಮಿಗಳ ಹೀನ ಕೃತ್ಯಗಳು:–**

- ಆತ್ಮಾಹುತಿ ದಾಳಿ
- ವಿಮಾನಕಳ್ಳತನ
- ಗುಂಡಿನಕಾಳಗ
- ಬಾಂಬುದಾಳಿ
- ಮುಗ್ಧ ಜನರನ್ನು ಒತ್ತೆ ಇರಿಸುವಿಕೆ

**ಭಾರತದ ಪಾತ್ರ:–**

- ಭಾರತ ಉಗ್ರಗಾಮಿತ್ವಕ್ಕೆ ಬಹಳ ತುತ್ತಾಗಿದೆ.
- ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಮ್, ಅಸ್ಸಾಂಗಳಲ್ಲಿ ಇದು ತಲೆ ಎತ್ತಿದೆ.
- 2007 ನವೆಂಬರ್ 26 ಮುಂಬೈ ತಾಜ್‌ಹೋಟಲ್ ದಾಳಿ
- ರೈಲ್ವೆ ನಿಲ್ದಾನ ದಾಳಿ
- ದೆಹಲಿಯ ಸಂಸತ್ ಭವನದ ಮೇಲೆ ದಾಳಿ
- ಹೈದರಾಬಾದ್, ಚೈನ್ನೈ, ಬೆಂಗಳೂರು, ಬುದ್ಧಗಯಾಗಳಲ್ಲಿ ಕೃತ್ಯ
- ನಕ್ಸಲವಾದಿಗಳು ಭೀಕರವಾದ ಭಯೋತ್ಪಾದಕತೆ ನಡೆಸುತ್ತಿವೆ.
- ಪಾಕಿಸ್ತಾನ ಮತ್ತು ಚೈನಾಗಳು ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತವೆ.
- ಆದ್ದರಿಂದ ಭಾರತ ಅನ್ಯರಾಷ್ಟ್ರಗಳ ಮೇಲಿನ ಭಯೋತ್ಪಾದನೆಗೆ ವಿರೋಧ ವ್ಯಕ್ತಪಡಿಸುತ್ತದೆ.



RAMALINGAPPA L

- ❖ ನಮ್ಮ ಕೇಂದ್ರ & ರಾಜ್ಯ ಸರ್ಕಾರಗಳು ಇದರ ನಿಗ್ರಹಕ್ಕೆ ಪ್ರಯತ್ನ.
- ❖ ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಯನ್ನು ರಚಿಸಿದೆ.
- ❖ ಶಾಂತಿ ಪ್ರಿಯ ರಾಷ್ಟ್ರವಾದ ಭಾರತ ಭಯೋತ್ಪಾದಕತೆಯನ್ನು ವಿರೋಧಿಸುತ್ತಿದೆ.
- ❖ ಮನುಕುಲದ ಇತಿಹಾಸದಲ್ಲಿ ಹಿಂಸೆ, ಭಯೋತ್ಪಾದನೆಯಿಂದ ಸಾಧಿಸಿದ್ದು ಕ್ಷುಲಕ ಹಾಗೂ ಅಹಿಂಸೆ, ಸತ್ಯ, ಪ್ರೇಮ, ತ್ಯಾಗಗಳಿಂದ ಸಾಧಿಸಿದ್ದು ಅಪಾರ.

## ಅಧ್ಯಾಯ-4
## ಜಾಗತಿಕ ಸಂಸ್ಥೆಗಳು

**ವಿಶ್ವ ಸಂಸ್ಥೆ(ಯು.ಎನ್.ಓ)**

- ✓ ಒಂದನೇ ವಿಶ್ವಯುದ್ಧದ ನಂತರ ಜಾಗತಿಕ ಶಾಂತಿಗಾಗಿ "ಲೀಗ್ ಆಫ್ ನೇಷನ್ಸ್" ಸ್ಥಾಪನೆಯಾಯಿತು.
- ✓ ಆದರೆ 1939ರಲ್ಲಿ ಎರಡನೇ ಮಹಾಯುದ್ಧ ಆರಂಭದೊಂದಿಗೆ ಇದು ನಾಶವಾಯಿತು.
- ✓ ಆಗ ವಿಶ್ವಶಾಂತಿಗಾಗಿ ಪ್ರಯತ್ನ

**ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರು:-**

- ➢ ಇಂಗ್ಲೇಂಡಿನ ವಿನ್‌ಚರ್ಚಿಲ್
- ➢ ರಷ್ಯಾದ ಜೋಸೆಫ್ ಸ್ಟಾಲಿನ್
- ➢ ಅಮೇರಿಕಾದ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್
- ✓ ವಿಶ್ವಸಂಸ್ಥೆ ಎಂಬ ಪದ ಮೊದಲ ಬಾರಿಗೆ 'ಅಮೇರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಚಾಲ್ತಿಗೆ ತಂದರು.
- ✓ 1942 ಜನವರಿ 1 ರಂದು 26 ದೇಶಗಳು ಸಹಿಹಾಕುವುದರ ಮೂಲಕ ಈ ಪದವನ್ನು ಉಪಯೋಗಿಸಿದರು.
- ✓ ಈಗ ಇದನ್ನು "ವಿಶ್ವ ರಾಷ್ಟ್ರಗಳು" ಎಂದು ಕರೆಯುತ್ತಾರೆ.
- ✓ 1945 ಜೂನ್ 26ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಕಛೇರಿಯಲ್ಲಿ ಶಾಂತಿ ಸನ್ನದಿಗೆ 51 ದೇಶಗಳು ಹಸ್ತಾಕ್ಷರ ನೀಡಿದರು.
- ✓ 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆಯ ಉದಯ
- ✓ 193 ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯತ್ವ ಪಡೆದಿವೆ.
- ✓ ಇದರ ಕೇಂದ್ರ ಕಛೇರಿ ಅಮೇರಿಕಾದ ನ್ಯೂಯಾರ್ಕ್ ನಗರದಲ್ಲಿದೆ.

**ಉದ್ದೇಶಗಳು:-** ಇದು ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ.

- ➢ 19 ಅಧ್ಯಾಯಗಳಿವೆ
- ➢ 111 ವಿಧಿಗಳನ್ನು ಹೊಂದಿದೆ.
- ➢ "ವಿಶ್ವದ ಜನಸಮುದಾಯವೆನಿಸಿದ ನಾವು ----" ಎಂಬ ವಾಕ್ಯದಿಂದ ಆರಂಭವಾಗುತ್ತದೆ.

**ಉದ್ದೇಶಗಳು:-**

- ❖ ಅಂತರಾಷ್ಟ್ರೀಯ ಶಾಂತಿ & ಸುಭದ್ರತೆಯನ್ನು ಕಾಪಾಡುವುದು.
- ❖ ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ❖ ಮಾನವನ ಮೂಲಭೂತ ಹಕ್ಕುಗಳ ನಂಬಿಕೆ ಹೆಚ್ಚಿಸುವುದು.
- ❖ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಅಂತರಾಷ್ಟ್ರೀಯ ಸಹಕಾರದಿಂದ ಪರಿಹಾರ
- ❖ ಅಂತರಾಷ್ಟ್ರೀಯ ನ್ಯಾಯ & ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು.
- ❖ ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಣೆ

**ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು:-**

**ಸಾಮಾನ್ಯ ಸಭೆ:-**

**ರಚನೆ:-**

- ✓ ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಹೊಂದಿದ ಸಂಸ್ಥೆ
- ✓ ಪ್ರತಿ ರಾಷ್ಟ್ರ 5 ಜನ ಪ್ರತಿನಿಧಿಗಳನ್ನು ಕಳುಹಿಸಬೇಕು
- ✓ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತ ಚಲಾಯಿಸುವ ಹಕ್ಕು
- ✓ ಸಾಮಾನ್ಯ ಸಭೆಯ ಪ್ರಥಮ ಸಭೆಯಲ್ಲಿ ಒಂದು ವರ್ಷಕ್ಕೆ ಅಧ್ಯಕ್ಷ, 17 ಉಪಾಧ್ಯಕ್ಷರು, 7 ಸ್ಥಾಯಿ ಸಮಿತಿಗೆ ಏಳು ಮಂದಿ ಅಧ್ಯಕ್ಷರನ್ನು ಆರಿಸಲಾಗುತ್ತದೆ.
- ✓ ಅಧಿವೇಶನ ಸೆಪ್ಟಂಬರ್‌ನಲ್ಲಿ ಆರಂಭಗೊಂಡು ಡಿಸೆಂಬರ್‌ನಲ್ಲಿ ಕೊನೆಯಾಗುತ್ತದೆ.
- ✓ ನಿರ್ಧಾರಗಳು ಮೂರನೇ ಎರಡಂಶದಷ್ಟು ಸದಸ್ಯರಿಂದ ಅನುಮೋದನೆ

**ಕಾರ್ಯಗಳು:-**

- ▪ ವಾರ್ಷಿಕ ಆಯ್ಯವಯ ಪಟ್ಟಿಗೆ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕು
- ▪ ತುರ್ತು ವಿಷಯಗಳನ್ನು ಚರ್ಚೆ ಮಾಡಬೇಕ್ಕಿದ್ದರೆ ವಿಶೇಷ ಅಧಿವೇಶನ ಕರೆಯುತ್ತಾರೆ.
- ▪ ಜಾಗತಿಕ ಸಂಸತ್ತಿನ ರೀತಿ ಕಾರ್ಯ ನಿರ್ವಹಣೆ
- ▪ ವಿಶ್ವದ ಪ್ರಮುಖ ವಿದ್ಯಮಾನಗಳನ್ನು ಚರ್ಚಿಸುತ್ತಾರೆ.



RAMALINGAPPA L

**ಭದ್ರತಾ ಸಮಿತಿ:–**

**ರಚನೆ:–**

- ❖ ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವರು
- ❖ ಇದು 15 ಮಂದಿ ಸದಸ್ಯರನ್ನು ಹೊಂದಿದೆ.
- ❖ ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ & ಚೀನಾ ಖಾಯಂ ಸದಸ್ಯ ರಾಷ್ಟ್ರಗಳು
- ❖ 10 ಮಂದಿ ಹಂಗಾಮಿ ಸದಸ್ಯರು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತಿದೆ.
- ❖ ಪ್ರತಿ ರಾಷ್ಟ್ರಕ್ಕೂ ಒಂದು ಮತ ಚಲಾಯಿಸುವ ಹಕ್ಕಿದೆ.
- ❖ ಪ್ರತಿಯೊಂದು ಪ್ರಮುಖ ನಿಧಾರಕ್ಕೂ ಖಾಯಂ ಸದಸ್ಯ ರಾಷ್ಟ್ರದ ಸಮ್ಮತಿ ಬೇಕು.
- ❖ ಭಾರತ ಕೂಡ ಖಾಯಂ ಸದಸ್ಯತ್ವಕ್ಕೆ ಪ್ರಯತ್ನಿಸುತ್ತಿದೆ.

**ಕಾರ್ಯಗಳು:–**

- ✓ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕೆ ಯತ್ನ
- ✓ ವಿಶ್ವಸಂಸ್ಥೆಯ ಶಾಂತಿಪಾಲನೆ ಪಡೆಯನ್ನು ನಿಯೋಜಿಸುತ್ತದೆ.
- ✓ ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶತನ್ನು ನೇಮಕ ಮಾಡುತ್ತದೆ.
- ✓ ವಿಶ್ವಸಂಸ್ಥೆಗೆ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹಸರು ಸೂಚಿಸುತ್ತದೆ.

**ಆರ್ಥಿಕ ಹಾಗೂ ಸಾಮಾಜಿಕ ಸಮಿತಿ:–**

- ➢ ಇದರಲ್ಲಿ 54 ಮಂದಿ ಸದಸ್ಯರಿರುತ್ತಾರೆ.
- ➢ 18 ಮಂದಿಯನ್ನು ಪ್ರತಿ 3 ವರ್ಷಕ್ಕೊಮ್ಮೆ ಆರಿಸಲ್ಪಡುತ್ತಾರೆ.
- ➢ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುತ್ತಾರೆ.

**ಕಾರ್ಯಗಳು:–**

- ❖ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿ, ಶೈಕ್ಷಣಿಕ, ಆರೋಗ್ಯ ವಿಷಯಗಳ ಅಧ್ಯಯನ & ವರದಿ ಮಾಡುವಿಕೆ.
- ❖ ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ವಿಚಾರಗಳ ಬಗ್ಗೆ ಚರ್ಚೆ.
- ❖ ಮಾನವ ಹಕ್ಕುಗಳ ಬಗ್ಗೆ & ಮೂಲಭೂತ ಸ್ವಾತಂತ್ರ್ಯಗಳ ಬಗ್ಗೆ ಶಿಫಾರಸ್ಸು ಮಾಡುತ್ತದೆ.
- ❖ ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ವಿಷಯಗಳ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.
- ❖ ಅಂತರಾಷ್ಟ್ರೀಯ ಕಾರ್ಮಿಕ ಸಂಘ, ಆಹಾರ & ಕೃಷಿ ಸಂಸ್ಥೆ, ಜಾಗತಿಕ ಆರೋಗ್ಯ ಸಂಸ್ಥೆಗಳ ಕಾರ್ಯಗಳನ್ನು ಸಮನ್ವಯ ಮಾಡುವುದು.

**ದತ್ತಿ ಸಮಿತಿ(ಟ್ರಸ್ಟಿಶಿಪ್ ಕೌನ್ಸಿಲ್):–**

- ✓ ಇದು ಸಾಮಾನ್ಯ ಸಭೆಯ ಉಪಸಂಸ್ಥೆ ಅಥವಾ ಸಹಾಯಕ ಸಂಸ್ಥೆ
- ✓ ಟ್ರಸ್ಟ್ ಆಶ್ರಿತ ಪ್ರದೇಶ ಸಂಖ್ಯೆ ಕಡಿಮೆಯಾದ್ದರಿಂದ ಈ ಸಮಿತಿಯ ಕಾರ್ಯಕ್ಷೇತ್ರ ಕಡಿಮೆಯಾಗಿದೆ.
- ✓ ಸ್ವತಂತ್ರ ರಾಜ್ಯದ ಮಟ್ಟಕ್ಕೇರದ ಪ್ರದೇಶಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ.
- ✓ ಈಗ ಇದು ಅಸ್ತಿತ್ವದಲ್ಲಿ ಇಲ್ಲ ಕಾರಣ ಯಾವುದೇ ದತ್ತಿ ಉಳಿದಿಲ್ಲ.

**ಅಂತರಾಷ್ಟ್ರೀಯ ನ್ಯಾಯಾಲಯ:–**

- ▪ ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆ
- ▪ 15 ಮಂದಿ ನ್ಯಾಯಾಧೀಶರಿದ್ದರು.
- ▪ ಅಧಿಕಾರದ ಅವಧಿ 9 ವರ್ಷಗಳು
- ▪ ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ.
- ▪ ಇದರ ಕಛೇರಿ ನೆದರ್‌ಲ್ಯಾಂಡ್‌ನ ಹೇಗ್‌ನಲ್ಲಿದೆ.
- ▪ 3 ವರ್ಷಗಳ ಅವಧಿಗೆ ಒಬ್ಬ ಅಧ್ಯಕ್ಷ & ಉಪಾಧ್ಯಕ್ಷರನ್ನು ಮುಖ್ಯನ್ಯಾಯಾಧೀಶರು ಆರಿಸುತ್ತಾರೆ.ಬಹುಮತದ
- ▪ ಆಧಾರದಲ್ಲಿ ಇದರ ನಿರ್ಣಯಗಳು ಕೈಗೊಳ್ಳಲ್ಪಡುತ್ತದೆ.
- ▪ ನ್ಯಾಯಾ ತೀರ್ಪುಗಳ ಜೊತೆಗೆ ಕಾನೂನು ವಿಚಾರದಲ್ಲಿ ಯೋಗ್ಯ ಸಲಹೆಗಳನ್ನು ನೀಡುತ್ತದೆ.
- ▪ ನೈತಿಕ & ವೈಚಾರಿಕ ನೆಲೆಗಟ್ಟಿನ ಮೇಲೆ ಈ ನ್ಯಾಯಲಯ ನಿರ್ಣಗಳ ಮಹತ್ವ
- ▪ ನ್ಯಾಯಾಲಯದ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಿಸುವಂತಿಲ್ಲ
- ▪ ಅಂತರಾಷ್ಟ್ರೀಯ ಶಾಂತಿ & ಸುಭದ್ರತೆಗೆ ಈ ನ್ಯಾಯಾಲಯ ಕೊಡುಗೆ ನೀಡಿದೆ.

**ಸಚಿವಾಲಯ:–**

- ✓ ಮಹಾಕಾರ್ಯದರ್ಶಿ ಹಾಗೂ ವಿಶ್ವಸಂಸ್ಥೆಯ ಸಿಬ್ಬಂದಿವರ್ಗ ಈ ಅಂಗ ಸಂಸ್ಥೆಗೆ ಸೇರಿದ್ದಾರೆ.
- ✓ ಮಹಾಕಾರ್ಯದರ್ಶಿಯವರು ಈ ಕಾರ್ಯಾಂಗದ ಮುಖ್ಯಸ್ಥರು.
- ✓ ಇವರನ್ನು ಭದ್ರತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯು 5 ವರ್ಷಗಳ ಅವಧಿಗೆ ಆರಿಸುತ್ತದೆ.
- ✓ ಪ್ರಧಾನ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದೆ.
- ✓ ಜಿನೇವಾ, ವಿಯೆನ್ನಾ, ನೈರೋಬಿಗಳಲ್ಲಿ ಶಾಕೆಗಳಿವೆ



RAMALINGAPPA L

- ✓ ದಿನನಿತ್ಯ ಆಡಳಿತಾತ್ಮಕ ಕಾರ್ಯ ಯೋಜನೆ & ಸಾಂಸ್ಥಿಕ ಕಾರ್ಯಗಳು ಸಚಿವಾಲಯದ ವ್ಯಾಪ್ತಿಗೆ ಬರುತ್ತವೆ.

**ವಿಶ್ವಸಂಸ್ಥೆಯ ಸಾಧನೆಗಳು:–**

**ಶಾಂತಿಸ್ಥಾಪನೆಯ ಕಾರ್ಯಗಳು:–**

- ❖ ಹಲವು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ❖ ಖಾಯಂ ಸದಸ್ಯರ ಒಮ್ಮತದ ಕೊರತೆ & ಜಾಗತಿಕ ವಿದ್ಯಮಾನಗಳ ಸಂಕೀರ್ಣತೆಯಿಂದ ಸಾಧನೆಯು ಮಿಶ್ರರೂಪದಿಂದ ಕೂಡಿದೆ.
- ❖ ಕಾರ್ಯಾಚರಣೆ ಯುದ್ಧ ಸ್ತಂಭನರೇಖೆಯ ವೀಕ್ಷಕರ ಅಥವಾ ಶಾಂತಿ ಪಡೆಗಳ ಮೂಲಕ ನಡೆಯುತ್ತದೆ.
- ❖ ಸುಯೆಜ್ ಕಾಲುವೆ ಬಿಕ್ಕಟ್ಟು
- ❖ ಇರಾನ್ ಸಂಘರ್ಷ
- ❖ ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲಿಸ್ತೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರಸ್, ಅರಬ್–ಇಸ್ರೇಲ್, ನಮೀಬಿಯಾ, ಅಫಘಾನಿಸ್ತಾನ ವಿವಾದಗಳ ಪರಿಹಾರಕ್ಕೆ ಶ್ರಮಿಸಿದೆ.
- ❖ ಅಣ್ವಸ್ತ್ರ ಹಾಗೂ ನಿಶ್ಯಸ್ತ್ರೀಕರಣ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತದೆ.
- ❖ ಶೀತಲ ಸಮರದ ಸಮಯದಲ್ಲಿ ಶ್ರಮಿಸಿದೆ.
- ❖ ಈಗ ವಿಶ್ವಶಾಂತಿ ನೆಲೆಯಲ್ಲಿ ಉತ್ತಮ ವಲಯ ನಿರ್ಮಾಣವಾಗಿದೆ.

**ಆರ್ಥಿಕ ಹಾಗೂ ಹಣಕಾಸಿನ ಸಾಧನೆ:–**

- ▪ ಪ್ರಸ್ತಾವನೆಯಲ್ಲಿ "ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು" ಎಂದು ಘೋಷಿಸಿದೆ.
- ▪ ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ ಆಗಿದೆ.
- ▪ ವಿಶ್ವ ಸಂಸ್ಥೆಯ ಪ್ರಗತಿ ಯೋಜನೆಯು ಉಲ್ಲೇಖನಾರ್ಹ ಸಾಧನೆ
- ▪ ವಿಶ್ವಬ್ಯಾಂಕ್, ಐ.ಎಂ.ಎಫ್ ನಂತಹ ವಿತ್ತೀಯ ಸಂಸ್ಥೆಗಳ ಸಹಯೋಗದೊಂದಿಗೆ ಉತ್ತಮ ಸಾಧನೆ ಮಾಡಿದೆ.

**ಸಾಮಾಜಿಕ ಸಾಧನೆಗಳು:–**

- ✓ ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್, ವಿಶ್ವ ನಿರಾಶ್ರಿತರ ಆಯೋಗ ಸಾಮಾಜಿಕ ಕಳಕಳಿಯ ಸೇವಾ ಸಂಸ್ಥೆಗಳು
- ✓ 1948ರ ಸಾರ್ವತ್ರಿ ಮಾನವ ಹಕ್ಕುಗಳ ಘೋಷಣೆ ಒಂದು ಸಾಧನೆ
- ✓ ವರ್ಣಭೇದ ನೀತಿಯನ್ನು ಅಳಿಸಿ ಹಾಕಿದೆ.
- ✓ ಸಾಮ್ರಾಜ್ಯಶಾಹಿತ್ವ & ವಸಾಹತುಶಾಹಿತ್ವ ಇಲ್ಲವಾಗಿಸುವಲ್ಲಿ ಸಂಸ್ಥೆಯ ಪಾತ್ರ ಗಮನಾರ್ಹ

**ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು:–**

**ಆಹಾರ & ಕೃಷಿ ಸಂಸ್ಥೆ:–**

- ❖ ಉದ್ದೇಶ:– ಜಗತ್ತಿನಾದ್ಯಂತ ಬಡತನ, ಹಸಿವು & ಅಪೌಷ್ಠಿಕತೆಯ ವಿರುದ್ಧ ಹೋರಾಡಲು
- ❖ ಉದಯ:– 1945
- ❖ ಕೇಂದ್ರ ಕಛೇರಿ:– ರೋಮ್

**3 ವಿಭಾಗಗಳು:–**

- ➢ ಸಮ್ಮೇಳನ
- ➢ ಸಮಿತಿ
- ➢ ಮಹಾನಿರ್ದೇಶಕರು

**ಉದ್ದೇಶಗಳು:–**

- ▪ ಕೃಷಿ ಕ್ಷೇತ್ರದ ಅಭಿವೃದ್ಧಿ
- ▪ ಪೌಷ್ಠಿಕ ಆಹಾರ ಒದಗಿಸುವುದು
- ▪ ಹಸಿವಿನಿಂದ ಜಾಗತಿಕ ಜನಸಮುದಾಯದ ವಿಮುಕ್ತಿ
- ▪ ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ

**ವಿಶ್ವ ಆರೋಗ್ಯ ಸಂಸ್ಥೆ:–**

- ✓ ಪ್ರಪಂಚದ ಮಾನವ ಆರೋಗ್ಯ ಸುಧಾರಿಸಲು
- ✓ 1948ರಲ್ಲಿ ಸ್ಥಾಪನೆ
- ✓ ಕೇಂದ್ರ ಕಚೇರಿ:– ಸ್ವಿಟ್ಜರ್‌ಲ್ಯಾಂಡಿನ ಜಿನೇವಾ
- ✓ ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ರೋಗಗಳನ್ನು ಸಂಪೂರ್ಣವಾಗಿ ತಡೆಯಲು ಪ್ರಯತ್ನ
- ✓ ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚ ವಿಮುಕ್ತಿ
- ✓ ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸಲು ಯಶಸ್ಸು.
- ✓ ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಠಿಕತೆಯ ಕೊರತೆ ನಿವಾರಣೆ

**ಯುನೆಸ್ಕೋ:–**

- ❖ ಸ್ಥಾಪನೆ:– 1946
- ❖ ಕೇಂದ್ರ ಕಛೇರಿ:– ಪ್ಯಾರಿಸ್
- ❖ ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತದೆ.

RAMALINGAPPA L

- ❖ ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರ & ಪರಿಸರ ವಿಜ್ಞಾನದ ಬಗ್ಗೆ ಕಾರ್ಯ
- ❖ ಪ್ರಪಂಚದಲ್ಲಿ ಶಿಕ್ಷಣ & ಜ್ಞಾನ ಪ್ರಸಾರದಲ್ಲಿ ಸರ್ಕಾರ & ಸರ್ಕಾರೇತರ ಸ್ವಯಂ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.

**ಯುನಿಸೆಫ್:-**

- ✓ ಸ್ಥಾಪನೆ:- 1946
- ✓ ಉದ್ದೇಶ:- ಮಕ್ಕಳ ಕ್ಷೇಮಾಭಿವೃದ್ಧಿಗೆ
- ✓ 1953ರಲ್ಲಿ ಇದು ಶಾಶ್ವತ ಸಂಸ್ಥೆಯಾಗಿದೆ.
- ✓ ಇದರಲ್ಲಿ 30 ಮಂದಿ ಸದಸ್ಯರಿದ್ದಾರೆ.
- ✓ ಮಹಿಳೆಯರು & ಮಕ್ಕಳ ಅಭಿವೃದ್ಧಿಗೆ ಪೂರಕ ಪರಿಸರ ಒದಗಿಸುವ ಉದ್ದೇಶ
- ✓ 1965ರಲ್ಲಿ ಇದು ನೋಬೆಲ್ ಬಹುಮಾನ ಪಡೆದಿದೆ.
- ✓ ಶುಭಾಶಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆ ಬಳಕೆ
- ✓ ಇದು ಮಾನವೀಯ ದೃಷ್ಠಿಕೋನ ಹೊಂದಿದೆ.

**ಐ.ಎಂ.ಎಫ್:-**

- ▪ 1945ರಲ್ಲಿ ಆರಂಬಗೊಂಡು 1947ರಲ್ಲಿ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ
- ▪ ಕೇಂದ್ರ ಕಛೇರಿ:- ಅಮೇರಿಕಾದ ವಾಷಿಂಗ್
- ▪ ಟನ್ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತಿದೆ.
- ▪ ವಿಶ್ವವಾಣಿಜ್ಯ ವ್ಯವಹಾರದ ಬೆಳವಣಿಗೆ, ಆರ್ಥಿಕ ಸ್ಥಿರತೆ, ಉತ್ತಮ ವಿದೇಶಿ ಪಾವತಿ ಸಮತೋಲನ ಕಾಯ್ದುಕೊಳ್ಳಲು ಸಹಾಯ
- ▪ ಇದು ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ, ಆಡಳಿತ ನಿರ್ದೇಶಕರು ಕಾರ್ಯನಿರ್ವಹಿಸುತ್ತಾರೆ.
- ▪ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರಬ್ಯಾಂಕು ಆಗಿ ಕಾರ್ಯನಿರ್ವಹಣೆ
- ▪ ಮುಂದುವರೆದ & ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧ ಬೆಸೆಯುತ್ತದೆ.

**ಐ.ಬಿ.ಆರ್.ಡಿ:-**

- ❖ ಇದನ್ನು 'ವಿಶ್ವ ಬ್ಯಾಂಕ್' ಎನ್ನುವರು.
- ❖ ಇದು 1947ರಲ್ಲಿ ಆರಂಭ
- ❖ ಮುಖ್ಯ ಕಛೇರಿ:- ವಾಷಿಂಗ್‌ಟನ್
- ❖ ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಸ್ಥಾಪನೆ.
- ❖ ಕೃಷಿ, ಕೈಗಾರಿಕೆ, ಸಾರಿಗೆ-ಸಂಪರ್ಕ ಅಭಿವೃದ್ಧಿಗಾಗಿ ಸಾಲ ನೀಡುತ್ತದೆ.
- ❖ ವಿಶ್ವ ವ್ಯಾಪಾರ & ವಿದೇಶಿ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ.
- ❖ ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಸಹಾಯ
- ❖ ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ, ಅಧ್ಯಕ್ಷರು ಕಾರ್ಯನಿರ್ವಹಣೆ
- ❖ ಎರಡು ಸಹಕಾರಿ ಅಂಗಗಳಿವೆ:-
  - ✓ ಅಂತರಾಷ್ಟ್ರೀಯ ಪ್ರಗತಿ ಕೂಟ
  - ✓ ಅಂತರಾಷ್ಟ್ರೀಯ ಹಣಕಾಸು ನಿಗಮ

**ಅಂತರಾಷ್ಟ್ರೀಯ ಕಾರ್ಮಿಕ ಸಂಘ:-**

- ▪ ಇದು ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಆರಂಭ
- ▪ ಮುಖ್ಯ ಕಾರ್ಯಾಲಯ:- ಸ್ವಿಟ್ಜರ್‌ಲ್ಯಾಂಡ್‌ನ ಜಿನೇವಾದಲ್ಲಿ
- ▪ ಪ್ರತಿ ಸದಸ್ಯ ರಾಷ್ಟ್ರ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕು.
- ▪ ಇದರಲ್ಲಿ ಒಬ್ಬರು ಕಾರ್ಮಿಕ ಪ್ರತಿನಿಧಿ & ಇನ್ನೊಬ್ಬರು ಆಡಳಿತ ನಡೆಸುವ ಪ್ರತಿನಿಧಿ
- ▪ ಇದರ ವ್ಯಾಪ್ತಿಗೆ:- ಕಾರ್ಮಿಕರ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ, ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ
- ▪ ಸಾಮಾನ್ಯ ಸಮ್ಮೇಳನ ಕಾರ್ಮಿಕ ವರ್ಗದ ಜಾಗತಿಕ ಸಂಸತ್ತಿನಂತೆಯೇ ಇದ್ದು ರಕ್ಷಿಸುತ್ತದೆ.

**ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ:-**

- ❖ ಜಾಗತಿಕ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯ ಸಂಗತಿಗಳ ಪ್ರಗತಿಗೆ ಯತ್ನ
- ❖ ಅಂತರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಬೇಕಾದ ತಾಂತ್ರಿಕ ಸಹಕಾರ
- ❖ ಜಾಗತಿಕ ಮಟ್ಟದಲ್ಲಿ ತೊಂದರೆಗಳನ್ನು ನಿವಾರಿಸುತ್ತದೆ.
- ❖ ಅಂತರಾಷ್ಟ್ರೀಯ ವ್ಯಾಪಾರ & ವಾಣಿಜ್ಯದ ಬೆಳವಣಿಗೆಗ ಸಹಕರಿಸುತ್ತದೆ.
- ❖ ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

RAMALINGAPPA L

**ವಿಶ್ವ ವ್ಯಾಪಾರ ಸಂಘ:–**

- ✓ ಇದು 1995 ಜನವರಿ 1 ರಂದು ಹುಟ್ಟಿತು.
- ✓ ಸದಸ್ಯ ರಾಷ್ಟ್ರಗಳು ಸಾಮಾನ್ಯ ವ್ಯಾಪಾರ ಮತ್ತು ಸುಂಕ ಒಪ್ಪಂದ(ಗ್ಯಾಟ್) ಕ್ಕೆ ಒಪ್ಪಿವೆ.
- ✓ ಜಾಗತಿಕ ಮಟ್ಟದ ವ್ಯಾಣಿಜ್ಯ & ವ್ಯಾಪಾರದ ತೋಡಕುಗಳ ನಿವಾರಣೆಗೆ ಯತ್ನ
- ✓ ಅಂತರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ದೋರಣೆಗಳನ್ನು ರೂಪಿಸುವಲ್ಲಿ ಸಹಾಯ
- ✓ ಐ.ಎಂ.ಎಫ್ & ಐ.ಬಿ.ಆರ್.ಡಿ ಸಂಸ್ಥೆಯೊಂದಿಗೆ ತೃತೀಯ ಆರ್ಥಿಕ ಆಧಾರ ಸ್ತಂಭ ಎನ್ನುವರು.

**ಪ್ರಾದೇಶಿಕ ಸಹಕಾರ ಸಂಸ್ಥೆಗಳು:–**

**ಕಾಮನ್‌ವೆಲ್ತ್ ರಾಷ್ಟ್ರ ಸಂಘ:–**

- ಇದನ್ನು 'ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್' ಎಂದು ಕರೆಯುತ್ತಿದ್ದರು.
- ನಂತರ 'ಬ್ರಿಟಿಷ್' ಎಂಬ ಶಬ್ದವನ್ನು ತೆಗೆಯಲಾಯಿತು.
- 1926ರಲ್ಲಿ ಸ್ಥಾಪನೆ
- ಭಾರತವೂ ಸೇರಿದಂತೆ ಸ್ವಾತಂತ್ರ್ಯಗಳಿಸಿದ ರಾಷ್ಟ್ರಗಳು ಸದಸ್ಯತ್ವ ಪಡೆದಿವೆ.
- ಇದಕ್ಕೆ ಬ್ರಿಟನ್ ದೊರೆಯ ಹಿರಿತವಿದೆ.
- ಒಟ್ಟು 54 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ಇದರ ಕೇಂದ್ರ ಕಛೇರಿ ಬ್ರಿಟನ್‌ನಿ ಲಂಡನ್‌ನಲ್ಲಿದೆ.
- ಇದರ ಕಾರ್ಯಕಲಾಪಗಳಲ್ಲಿ ಪ್ರಧಾನಮಂತ್ರಿ, ಅರ್ಥ ಸಚಿವರು, ವಿದೇಶಾಂಗ ಮಂತ್ರಿಗಳು ಭಾಗವಹಿಸುತ್ತಾರೆ.

**ಇದರ ಉದ್ದೇಶಗಳು:–**

- ➢ ಪ್ರಜಾತಂತ್ರವನ್ನು ಎತ್ತಿಹಿಡಿಯುವುದು.
- ➢ ಸ್ವಾತಂತ್ರ್ಯದ ಸಂರಕ್ಷಣೆ
- ➢ ಬಡತನ ನಿರ್ಮೂಲನೆ
- ➢ ವಿಶ್ವಶಾಂತಿ ನೆಲೆಗೊಳಿಸುವಿಕೆ
- ➢ ಕ್ರೀಡೆ, ವಿಜ್ಞಾನ, ಕಲೆಯ ಬೆಳವಣಿಗೆ & ಸಂಬಂಧಗಳ ವೃದ್ಧಿ

**ಸಾರ್ಕ್:–**

- ❖ ಇದು 1985ರಲ್ಲಿ ಸ್ಥಾಪನೆಯಾಯಿತು.
- ❖ ಇದು 8 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ❖ ಸದಸ್ಯ ರಾಷ್ಟ್ರಗಳು:– ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್ಡೀವ್ಸ್, ಭೂತಾನ್ & ಆಪ್ಘಾನಿಸ್ತಾನ
- ❖ ಮೂಲ ಉದ್ದೇಶ:– ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ & ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವುದು.
- ❖ ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ, ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ.
- ❖ ಎಲ್ಲಾ ನಿಯಮಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲಿ ಇರಬೇಕು ಎಂಬುದು ಸೂತ್ರವು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿದೆ.
- ❖ ಸದಸ್ಯ ರಾಷ್ಟ್ರಗಳ ಮಧ್ಯೆ ಸಾಕಷ್ಟು ವಿವಾದಗಳಿವೆ.
- ❖ ಆದರೂ, ನಿಯತಕಾಲಿಕ ಸಮಾವೇಶಗಳು ಪರಸ್ಪರ ಶಾಂತಿಯುತ ಪರಿಹಾರಕ್ಕೆ ಅನುವು ಮಾಡಿವೆ
- ❖ ವಿಜ್ಞಾನ, ತಾಂತ್ರಿಕತೆ, ಕೃಷಿ ಬಗ್ಗೆ ಸದಸ್ಯ ರಾಷ್ಟ್ರಗಳು ಕಮ್ಮಟಗಳು & ತರಬೇತಿ ಕಾರ್ಯಗಾರಗಳು ಜಂಟಿಯಾಗಿ ನಡೆಸುತ್ತವೆ.
- ❖ ಭಾರತವು ಸಾರ್ಕ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ.
- ❖ ಮುಖ್ಯ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.

**ಯುರೋಪಿಯನ್ ಯೂನಿಯನ್:–**

- ✓ ಇದು 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ✓ ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಫಿಯನ್ ಯೂನಿಯನ್ ಒಪ್ಪಂದಕ್ಕೆ ಅನುಗುಣವಾಗಿ 1992ರಲ್ಲಿ ಉದಯ
- ✓ ಇದು ಸದಸ್ಯ ರಾಷ್ಟ್ರಗಳ ಮಧ್ಯ ಸಮಾನ ಏಕ ಮಾರುಕಟ್ಟೆ, ಒಂದೇ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆಗೆ ಅವಕಾಶ

**ಇದರ ಮುಖ್ಯ ಅಂಗ ಸಂಸ್ಥೆಗಳು:–**

- ❖ ಸಮಿತಿ
- ❖ ಆಯೋಗ
- ❖ ಯುರೋಪಿನ ಸಂಸತ್ತು
- ❖ ಯುರೋಪಿನ ನ್ಯಾಯಾಲಯ

- ➢ ಇದು ಒಂದು ಸಂಯುಕ್ತ ರಾಜ್ಯವನ್ನು ಹೋಲುತ್ತಿದೆ.
- ➢ ಇದು ಶಾಂತಿ & ಪ್ರಜಾತಂತ್ರಕ್ಕಾಗಿ ಕಾರ್ಯನಿರ್ವಹಿಸುತ್ತದೆ

RAMALINGAPPA L

- ಇದು ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀಯ ವಾರಸುದಾರ ಸಂಸ್ಥೆಯಾಗಿದೆ.
- ಇದು ಸದಸ್ಯ ರಾಷ್ಟ್ರಗಳಿಗೆ ಸಾರ್ವಭೌಮ ಅಧಿಕಾರ ನೀಡುತ್ತದೆ.

**ಆಸಿಯಾನ್:–**

- ಇದು 1967ರಲ್ಲಿ ಉದಯ
- ಸ್ಥಾಪಕ ರಾಷ್ಟ್ರಗಳು:– ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಫೈನ್ಸ್ & ಥೈಲ್ಯಾಂಡ್
- ಈಗ 10 ರಾಷ್ಟ್ರಗಳು ಸದಸ್ಯತ್ವ ಹೊಂದಿವೆ

**ಮುಖ್ಯ ಉದ್ದೇಶಗಳು:–**

- ✓ ಆರ್ಥಿಕ ಅಭಿವೃದ್ಧಿ
- ✓ ಸಾಮಾಜಿಕ ಬೆಳವಣಿಗೆಗೆ ಯತ್ನ
- ✓ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ
- ✓ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಪರಸ್ಪರ ನೆರವು & ಸಹಭಾಗಿತ್ವ ಹೊಂದಿವೆ.
- ✓ ಇದು ಮಿಲಿಟರಿ ಒಕ್ಕೂಟವಲ್ಲ
- ✓ ಇದರ ಬಗ್ಗೆ ಭಾರತ ಉದಾರ ನೀತಿ ಹೊಂದದೆ.
- ✓ ಆದರೆ ಭಾರತ ಇದರ ಸದಸ್ಯತ್ವ ಹೊಂದಿಲ್ಲ, ವೀಕ್ಷಕರ ಸ್ಥಾನ ಹೊಂದಿದೆ.

**ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯೂನಿಟಿ:–**

- ❖ ಇದು 1963ರಲ್ಲಿ ಸ್ಥಾಪನೆ
- ❖ ಸ್ವಾತಂತ್ರ್ಯ ಗಳಿಸಿದ ಆಫ್ರಿಕನ್ ರಾಷ್ಟ್ರಗಳು ತಮ್ಮ ತಮ್ಮೊಳಗೆ ಹಲವು ಪ್ರಾದೇಶಿಕ ಸಂಸ್ಥೆಗಳನ್ನು ರಚಿಸಿಕೊಂಡವು
- ❖ ಒಟ್ಟಾಗಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ ಎಂಬ ಹೊಸ ಸಂಸ್ಥೆ ಸ್ಥಾಪನೆ
- ❖ ಎಲ್ಲಾ ಸ್ವತಂತ್ರ ಆಫ್ರಿಕನ್ ರಾಷ್ಟ್ರಗಳ ಸ್ವಯಂ ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತಿದೆ.
- ❖ ಸ್ವಾತಂತ್ರ್ಯ, ಸಮಾನತೆ, ನ್ಯಾಯ & ಒಗ್ಗಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲಸಲು ಶ್ರಮಿಸುತ್ತವೆ.
- ❖ ನೂತನ ವಸಾಹತುಶಾಹಿತ್ವದ ವಿರುದ್ಧ ಧ್ವನಿ ಎತ್ತಲು ಬದ್ಧರಾಗಿದ್ದಾರೆ.
- ❖ ವಸಾಹತುಶಾಹಿತ್ವ, ವರ್ಣಭೇದ ನೀತಿ & ಸಾಮ್ರಾಜ್ಯಶಾಹಿತ್ವ ವಿರೋಧಿ

**ಈ ಸಂಸ್ಥೆಯಲ್ಲಿ:–**

- ಸದಸ್ಯ ರಾಷ್ಟ್ರಗಳ ಮುಖ್ಯಸ್ಥರ ಹಾಗೂ ಅಲ್ಲಿನ ಸರ್ಕಾರದ ಮುಖ್ಯಸ್ಥರ ಸಭೆ
- ಸಚಿವ ಸಂಪುಟ
- ಮಧ್ಯಸ್ಥಿಕೆ ಒಪ್ಪಂದ ಹಾಗೂ ರಾಜಿಪಂಚಾಯಿತಿ ಸಮಿತಿಯಿದೆ.

## ಸಮಾಜಶಾಸ್ತ್ರ

### ಅಧ್ಯಾಯ–1

### ಸಾಮಾಜಿಕ ಸ್ತರವಿನ್ಯಾಸ

- ಸಾಮಾಜಿಕ ಸ್ತರವಿನ್ಯಾಸ ಎಂದರೆ, ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದು.
- ಸ್ತರವಿನ್ಯಾಸವು ಸಮಾಜದಿಂದ ನಿರ್ಮಿಸಲ್ಪಟ್ಟಿದೆ.
- ಶ್ರೀಮಂತ ಮಕ್ಕಳಿಗೆ ಉತ್ತಮ ಅವಕಾಶಗಳು ಬಡಮಕ್ಕಳಿಗೆ ಕಡಿಮೆ ಹಕ್ಕುಗಳು ದೊರೆಯುತ್ತವೆ.

**ಸ್ತರವಿನ್ಯಾಸದ ಸ್ವರೂಪ:–**

- ✓ ಇದು ಕಾಲದಿಂದ ಕಾಲಕ್ಕೆ ಹಾಗೂ ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಉದಾ:– ಭಾರತದಲ್ಲಿನ ಜಾತಿ ವ್ಯವಸ್ಥೆ.
- ✓ ಇದು ಎಲ್ಲಾ ಸಮಾಜಗಳಲ್ಲಿ ಕಂಡುಬರುತ್ತದೆ. ಉದಾ:– ವರ್ಣಭೇದ ನೀತಿ
- ✓ ಇದು ಅಸಮಾನತೆಯನ್ನು & ಭಿನ್ನತೆಯನ್ನು ಉಂಟುಮಾಡುತ್ತದೆ.

**ತಾರತಮ್ಯದಿಂದ ಉಂಟಾದ ಪೂರ್ವಾಗ್ರಹ:–**

- ❖ ಆದಿ ಕವಿ ಪಂಪ 'ಮಾನವಕುಲ ತಾನೊಂದೇ ವಲಂ' ಎಂದು ವ್ಯಕ್ತಪಡಿಸಿದ್ದಾನೆ.
- ❖ ಇದು ಮಾನವರೆಲ್ಲರೂ ಕೂಡಾ ಒಂದೇ ಎಂದು ಸೂಚಿಸುತ್ತದೆ.
- ❖ ಆದರೆ ಮನುಷ್ಯರು ಸೃಷ್ಟಿಸಿರುವ ಜಾತಿ ತಾರತಮ್ಯ, ಲಿಂಗತಾರತಮ್ಯ, ಪ್ರಾದೇಶಿಕ ತಾರತಮ್ಯ, ಬಡಲ–ಬಲ್ಲಿದ ಮೊದಲದವು ತಾರತಮ್ಯ ಪೂರ್ವಗ್ರಹಕ್ಕೆ ಕಾರಣ.
- ❖ ಒಬ್ಬ ವ್ಯಕ್ತಿ ಅಥವಾ ಸಮೂಗದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆಯೇ 'ಪೂರ್ವಾಗ್ರಹ' ಎನಿಸಿದೆ.
- ❖ ತಾರತಮ್ಯದಿಂದ ಉಂಟಾದ ಪೂರ್ವಾಗ್ರಹ ಅಸಹನೆ, ತಿರಸ್ಕಾರ, ಅಗೌರವ, ದ್ವೇಷ ಭಾವನೆಗಳನ್ನು ಬೆಳೆಸುತ್ತದೆ.
- ❖ ಸಾಮಾಜಿಕ ಅಂತರ ಹೆಚ್ಚಿ ಸಾಮಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ.

RAMALINGAPPA L

**ಅಸ್ಪೃಶ್ಯತೆ–ಸಮಾಜಿಕ ಪಿಡುಗು:–**

- ✓ ಭಾರತದಲ್ಲಿ ಸ್ತರವಿನ್ಯಾಸವನ್ನು ಜಾತಿ ಪದ್ಧತಿಯಲ್ಲಿ ಗುರುತಿಸಬಹುದು.
- ✓ ಭಾರತದಲ್ಲಿ ಮೇಲು ಜಾತಿಯವರು & ಕೆಳಜಾತಿಯವರು ಇದ್ದಾರೆ
- ✓ ಜಾತಿಯ ಸ್ತರವಿನ್ಯಾದಲ್ಲಿ ಅಸ್ಪೃಶ್ಯರನ್ನು ಸಮಾಜದ ಕಡೆಯ ಹಂತದಲ್ಲಿ ನಿಲ್ಲಿಸಿದೆ.
- ✓ ಅಸ್ಪೃಶ್ಯತೆ ನಮ್ಮ ಸಮಾಜದ ಅಮಾನುಷವಾದ ಆಚರಣೆ.
- ✓ ಮಹಾತ್ಮ ಗಾಂಧೀಜಿ:– 'ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದಿದ್ದಾರೆ.
- ✓ ಕೆಳಜಾತಿಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ & ರಾಜಕೀಯ ಅನುಕೂಲ & ಅವಕಾಶಗಳಿಂದ ವಂಚಿತರಾಗಿದ್ದಾರೆ.
- ✓ ಆದರೆ ಇಂದು ಎಲ್ಲಾ ವರ್ಗದವರಿಗೂ ಸಂವಿಧಾನಾತ್ಮಕ ಸೌಲಭ್ಯಗಳು ದೊರಕುತ್ತಿವೆ.
- ✓ ಹಿಂದುಳಿದ ಜಾತಿ–ವರ್ಗದವರಿಗೆ ವಿಶೇಷ ಸೌಲಭ್ಯ ನೀಡಲಾಗುತ್ತದೆ
- ✓ ಸಾಕ್ಷರತೆ ಹೆಚ್ಚಿ ಸಾಮಾಜಿಕ ಜಾಗೃತಿ ಮೂಡಿ ಅಸ್ಪೃಶ್ಯತೆ ಆಚರಣೆ ಕಡಿಮೆ.

**ಅಸ್ಪೃಶ್ಯತಾ ನಿವಾರಣೆ ಕ್ರಮಗಳು:–**

- ಇದರ ಕಳಂಕ ತೊಡೆಯಲು ಜ್ಯೋತಿಭಾ ಫುಲೆ, ಸ್ವಾಮಿ ವಿವೇಕಾನಂದ, ಡಾ.ಬಿ.ಆರ್ ಅಂಬೇಡ್ಕರ್ ತೀವ್ರ ಪ್ರಯತ್ನ.
- ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲಿ ಜಾರಿಗೊಳಿಸಿದೆ.
- ಇದರಲ್ಲಿ ಕೆಲವು ಬದಲಾವಣೆ ಮಾಡಿ "ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ" ಎಂದು 1976ರಲ್ಲಿ ಮಾರ್ಪಾಡು.
- ಈ ಕಾಯ್ದೆ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧ ಎಂದಿದೆ.
- ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನ & ಸಮಾನತೆಯ ಹಕ್ಕನ್ನು ಎಲ್ಲಾ ನಾಗರಿಕರಿಗೆ ನೀಡಿದೆ.
- ಪರಿಶಿಷ್ಟರಿಗೆ, ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ, ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ನೀಡಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ವಿಶೇಷ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ ವಹಿಸಿದೆ.
- ಭಾರತವು ಎಲ್ಲಾ ನಾಗರಿಕರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದೆ.

## ಅಧ್ಯಾಯ–2
## ದುಡಿಮೆ ಮತ್ತು ಆರ್ಥಿಕ ಜೀವನ

- ❖ ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತುರೂಪದ ಪ್ರತಿಫಲ ಸಿಗುವುದ್ದಿದ್ದರೆ ಅದನ್ನು 'ದುಡಿಮೆ' ಎನ್ನುವರು.
- ❖ ದುಡಿಮೆಯು ಜೀವನದ ಮುಖ್ಯ ಅಂಗ.
- ❖ ಜೀವನ ನಿಭಾಯಿಸಲು ಅಗತ್ಯ.
- ❖ ದುಡಿಮೆಯಿಂದ ಜೀವನದ ಅಗತ್ಯಗಳನ್ನು ಪೂರೈಸಬಹುದು.

**ಶ್ರಮವಿಭಜನೆ ಮತ್ತು ವರ್ಗಗಳು:–**

- ✓ ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣಿತಿ, ಕೌಶಲ್ಯ & ಲಿಂಗಬೇದಗಳ ಆದಾರದ ಮೇಲೆ ಹಂಚಿಕೆ ಮಾಡುವುದನ್ನು 'ಶ್ರಮ ವಿಭಜನೆ' ಎನ್ನುವರು.
- ✓ ಉದಾ:– ತೊಡುವ ಬಟ್ಟೆಗಳನ್ನು ಸಿದ್ಧಪಡಿಸಲು ಕೃಷಿಕರು, ನೇಕಾರರು, ಬಣ್ಣಹಕುವವರು, ವರ್ತಕರು, ದರ್ಜಿಗಳು ದುಡಿಯುವರು.
- ✓ ಇದು ವಿಶೇಷ ಪರಿಣಿತಿಗೆ ಕಾರಣವಾಗುತ್ತದೆ.
- ✓ ವಿಶೇಷ ಪರಿಣಿತಿ ಎಂದರೆ, ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು.
- ✓ ಇದು ಆರ್ಥಿಕ ಲಾಭ ಪಡೆಯಲು ಸಹಾಯಕ
- ✓ ಆರ್ಥಿಕ ಹಿತಾಸಕ್ತಿ & ಶ್ರಮವಿಭಜನೆಯಿಂದ ವರ್ಗವ್ಯವಸ್ಥೆ ಸೃಷ್ಟಿ.
- ✓ ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆಯು ಕೈಗಾರೀಕರಣದಿಂದ ಉಂಟಾಗಿದೆ.
- ✓ ಕೈಗಾರಿಕೋದ್ಯಮಗಳು ಹೆಚ್ಚು ಹೆಚ್ಚು ಬೆಳೆದವು
- ✓ ವ್ಯಾಪಾರ ವಾಣಿಜ್ಯೋದ್ಯಮಗಳು ವಿಸ್ತರಗೊಂಡವು.

**ಕೂಲಿ ಸಹಿತ ಮತ್ತು ಕೂಲಿ ರಹಿತ ದುಡಿಮೆ:–**

- ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆ ಕೂಲಿಸಹಿತ ದುಡಿಮೆ ಎನ್ನುವರು.
- ಉದಾ:–
- ಹೊಲದಲ್ಲಿ ಉಳುವುದು.

- ಕಾರ್ಖಾನೆಯಲ್ಲಿ ದುಡಿಯುವುದು.
- ಶಾಲೆಯಲ್ಲಿ ಉಪನ್ಯಾಸ ನೀಡುವುದು.
- ಕಟ್ಟಡ ಕಟ್ಟುವುದು
- ವಾಹನಗಳ ರಿಪೇರಿ ಮಾಡುವುದು.
- ದುಡಿಮೆಯು ಕೆಲವೊಮ್ಮೆ ಆರ್ಥಿಕ ಲಾಭ ಅಥವಾ ಪ್ರತಿಫಲವಿಲ್ಲದ ಕ್ರಿಯೆಯಾಗಿದ್ದು, ಮನಃಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳೇ 'ಕೂಲಿರಹಿತ ದುಡಿಮೆ' ಎನ್ನುವರು.
- ಉದಾ:– ಕಲಾಕಾರನು ಆತ್ಮ ಸಂತೋಷಕ್ಕೆ ಚಿತ್ರ ಬಿಡಿಸುವುದು

**ದುಡಿಮೆಯಲ್ಲಿ ಭೇದ–ಭಾವ:–**

- ❖ ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿ ಕಾಣಬರುವ ಈ ಅಸಮಾನತೆಯನ್ನು ದುಡಿಮೆಯ ತಾರತಮ್ಯ ಅಥವಾ ದುಡಿಮೆಯಲ್ಲಿ ಭೇದ–ಭಾವ ಎನ್ನುವರು.
- ❖ ಇದು ಹೆಚ್ಚು ಅಸಂಘಟಿತ ವಲಯದಲ್ಲಿ ಕಾಣಬಹುದು.
- ❖ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗ & ಉತ್ತಮ ಸಂಬಳ
- ❖ ಸ್ತ್ರೀಯರಿಗೆ ಕಡಿಮೆ ಮಟ್ಟದ ಉದ್ಯೋಗ & ಕಡಿಮೆ ಸಂಬಳ.
- ❖ ಸ್ತ್ರೀಯರು ಹೆಚ್ಚಿನ ಉದ್ಯೋಗಗಳಲ್ಲಿ ತೊಡಗಿದ್ದರೂ ಸಂಬಳದಲ್ಲಿ ತಾರತಮ್ಯವಿದೆ.
- ❖ ಸ್ತ್ರೀಯರು ಪುರುಷರಿಗೆ ಸರಿಸಮಾನವಾಗಿ ದುಡಿಯುತ್ತಿದ್ದರು ಕಡಿಮೆ ವೇತನ ನೀಡಲಾಗುತ್ತದೆ.
- ❖ ಇದು ಒಂದು ಬಗೆಯ ಶೋಷಣೆ.
- ❖ ಇದನ್ನು ತೊಡೆದು ಹಾಕಲು ಕೇಂದ್ರ ಸರ್ಕಾರ "ಸಮಾನ ವೇತನ ಕಾಯ್ದೆ" ಯನ್ನು 1976ರಲ್ಲಿ ಜಾರಿ ಮಾಡಿದೆ.
- ❖ ಕೃಷಿಕ ಸಮಾಜದಲ್ಲೂ ಲಿಂಗ, ವಯಸ್ಸು, ಸಾಮರ್ಥ್ಯ ಆಧಾರದಲ್ಲಿ ಕಡಿಮೆ ಕೂಲಿ ನೀಡಲಾಗುತ್ತದೆ.
- ❖ ಅನಕ್ಷರತೆಯು ಕಡಿಮೆಯಾದಂತೆ ಭೇದ–ಭಾವ ಕಡಿಮೆಯಾಗುತ್ತದೆ

**ನಿರುದ್ಯೋಗ:–**

- ✓ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಈ ಸಮಸ್ಯೆ ಗಂಭೀರವಾಗಿದೆ.
- ✓ ನಿರುದ್ಯೋಗ ಎಂದರೆ, ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದದ್ರೂ ಉದ್ಯೋಗ ಸಿಗದ ಪರಿಸ್ಥಿತಿ ಎಂದರ್ಥ.
- ✓ ಕೆಲಸ ಮಾಡಲು ಇಷ್ಟವಿದ್ದು, ದುಡಿಯುವ ವಯಸ್ಸಿನಲ್ಲಿರುವ ಪುರುಷ ಹಾಗೂ ಸ್ತ್ರೀಯರು ಉದ್ಯೋಗ ಪಡೆಯುವಲ್ಲಿ ವಂಚಿತರಾದರೆ ಅವರನ್ನು 'ನಿರುದ್ಯೋಗಿಗಳು' ಎನ್ನುವರು.

**ನಿರುದ್ಯೋಗಕ್ಕೆ ಕಾರಣಗಳು:–**

- ಅತಿಯಾದ ಜನಸಂಖ್ಯೆ
- ಯಾಂತ್ರೀಕರಣ
- ಅತಿಯಾದ ಶ್ರಮವಿಭಜನೆ
- ಸಾಮಾಜಿಕ ಅಸಮಾನತೆ
- ಬಂಡವಾಳ ಕೊರತೆ
- ಅನಕ್ಷರತೆ

**ಪರಿಣಾಮಗಳು:–**

- ➢ ಬಡತನ
- ➢ ಅನಾರೋಗ್ಯ
- ➢ ಭ್ರಷ್ಟಾಚಾರ
- ➢ ಕೌಟುಂಬಿಕ ವಿಘಟನೆ
- ➢ ಮೋಸ
- ➢ ವಂಚನೆ
- ➢ ಕಳ್ಳತನ
- ➢ ವ್ಯಭಿಚಾರ

**ಪರಿಹಾರೋಪಾಯಗಳು:–**

- ✓ ಜನಸಂಖ್ಯಾ ನಿಯಂತ್ರಣ ಕ್ರಮಗಳು
- ✓ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
- ✓ ಕೃಷಿ ಕ್ಷೇತ್ರದ ಅಭಿವೃದ್ಧಿ
- ✓ ಶೈಕ್ಷಣಿಕ ಸುಧಾರಣಾ ಯೋಜನೆಗಳು
- ✓ ಪಂಚವಾರ್ಷಿಕ ಯೋಜನೆಗಳು
- ✓ ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
- ✓ ಗ್ರಾಮೀಣಾಭಿವೃದ್ಧಿ ಯೋಜನೆಗಳು
- ✓ ಉದ್ಯೋಗ ಖಾತರಿ ಯೋಜನೆ
- ✓ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಪ್ರಗತಿ

**ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರು:–**

**ಸಂಘಟಿತ ಕೆಲಸಗಾರರು:–**



RAMALINGAPPAL

- ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ನಿಗಧಿತ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು 'ಸಂಘಟಿತ ಕೆಲಸಗಾರರು' ಎನ್ನುವರು.
- ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮ
- ಇಲ್ಲಿ ಕಾರ್ಯಕ್ಷೇತ್ರದಲ್ಲಿ ಅಧಿಕಾರ ಏಣಿ ಶ್ರೇಣಿ ವ್ಯವಸ್ಥೆ
- ಇವರಿಗೆ ವಿಶೇಷ ಪರಿಣಿತಿ, ತರಬೇತಿ, ಪ್ರತಿಭೆ, ಅನುಭವ & ಶೈಕ್ಷಣಿಕ ಅರ್ಹತೆಗೆ ಅವಕಾಶ.
- ಎಲ್ಲಾ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ.
- ಇವರಿಗೆ ನಿಗಧಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತ ವೇನತ ಸೌಲಭ್ಯ ಇರುತ್ತವೆ.
- ಇವರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತದೆ.
- ನಿಗಧಿತ ಸಮಯವಿರುತ್ತದೆ.
- ಉದಾ:- ಖಾಸಗಿ ಕಂಪನಿಗಳು, ಕಾರ್ಖಾನೆ, ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳು, ಶಾಲಾ-ಕಾಲೇಜುಗಳು, ವಾಣಿಜ್ಯ ಬ್ಯಾಂಕುಗಳು, ವಿಮಾ ಕಂಪನಿಗಳು,ಸೈನ್ಯ

**ಅಸಂಘಟಿತ ಕೆಲಸಗಾರರು:-**

- ಯಾವುದೇ ನಿರ್ದಿಷ್ಟ ಕಾಯ್ದೆ-ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮಪಾಡಿಗೆ ವಿವಿಧ ಕಸುಬುಗಳಲ್ಲಿ ತೊಡಗಿಕೊಂಡು ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಿಫಲ ಪಡೆಯುವ ಶ್ರಮಿಕರನ್ನು 'ಅಸಂಘಟಿತ ಕೆಲಸಗಾರರು' ಎನ್ನುವರು.
- ಇದರ ಕಾರ್ಯಕ್ಷೇತ್ರವು ವಿಶಲವಾಗಿದೆ
- ಇದು ಸರ್ಕಾರದ ನಿಯಂತ್ರಣಕ್ಕೆ ಒಳಪಡುವುದಿಲ್ಲ.
- ನಿಗಧಿತ ವೇತನವಿರುವುದಿಲ್ಲ
- ವೈದ್ಯಕೀಯ ಸೌಲಭ್ಯಗಳು ಇರುವುದಿಲ್ಲ
- ನಿಗಧಿತ ಸಮಯವಿರುವುದಿಲ್ಲ.
- ಇವರಿಗೆ ನಿವೃತ್ತ ವೇತನ ಇರುವುದಿಲ್ಲ.
- ಉದಾ:- ಮನೆ ಕೆಲಸಗಾರರು, ಗೃಹ ನಿರ್ಮಾಣದ ಕೂಲಿಕಾರರು, ಕೃಷಿ ಕಾರ್ಮಿಕರು, ಬೀದಿ ವ್ಯಾಪಾರಿಗಳು, ವಾಹನಗಳ ರಿಪೇರಿ ಮಾಡುವವರು, ತಳ್ಳುವ ಗಾಡಿ ವ್ಯಾಪಾರಿಗಳು, ತಲೆಹೊರೆ ವ್ಯಾಪಾರಿಗಳು.

**ಅಸಂಘಟಿತ ಕೆಲಸಗಾರರ ಸಮಸ್ಯೆಗಳು:-**

- ಇವರ ದುಡಿಮೆಗೆ ಯಾವುದೇ ನಿಗಧಿತ ನಿಯಮ, ಕಾಯ್ದೆಗಳಿರುವುದಿಲ್ಲ.
- ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆ.
- ಇವರಿಗೆ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ
- ಕೆಲಸಕ್ಕೆ ಭದ್ರತೆ & ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ, ಭತ್ಯಗಳು ಇರುವುದಿಲ್ಲ.
- ಉದ್ಯೋಗಪತಿಗಳಿಂದ ಹಲವು ಶೋಷಣೆಗೆ ಒಳಪಡುವ ಸಾಧ್ಯತೆ.

## ಭೂಗೋಳಶಾಸ್ತ್ರ

### ಅಧ್ಯಾಯ-1

### ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

- ✓ ಇಲ್ಲಿಯ ವಿವಿಧ ರೀತಿಯ ಮೇಲ್ಮೈಲಕ್ಷಣಗಳು, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ ಹಾಗೂ ಜನರಲ್ಲಿನ ವೈವಿಧ್ಯತೆಯನ್ನು ಗಮನಿಸಿದಾಗ ಇದನ್ನು "ಉಪಖಂಡ" ಎನ್ನುವರು.

**ಪ್ರಪಂಚದಲ್ಲಿ ಭಾರತದ ಸ್ಥಾನ:**

- ಏಷ್ಯಾ ಖಂಡದ ದಕ್ಷಿಣದ ಪರ್ಯಾಯ ದ್ವೀಪವಾಗಿದೆ.
- ಇದನ್ನು ಇಂಡಿಯಾ, ಹಿಂದೂಸ್ಥಾನ ಎನ್ನುವರು
- ಇಂಡಿಯಾ ಎಂಬ ಹೆಸರು ಸಿಂಧೂ ನದಿಯಿಂದ ಬಂದಿದೆ.
- ಭಾರತ ಎಂಬ ಹೆಸರು ಭರತ ಚಕ್ರವರ್ತಿಯಿಂದ ಬಂದಿದೆ.
- ಸಂಪೂರ್ಣ ಉತ್ತರಾರ್ಧಗೋಳದಲ್ಲಿದೆ.
- ಹಿಂದೂಮಹಾಸಾಗರದಲ್ಲಿ ತ್ರಿಕೋನಾಕೃತಿಯಲ್ಲಿದೆ.

**ಗಾತ್ರ:-**

- ಭಾರತದ ಒಟ್ಟು ವಿಸ್ತೀರ್ಣ:- 32,87,263(32,87 ಲಕ್ಷ) ಚ.ಕಿ.ಮೀ
- ಪ್ರಪಂಚದಲ್ಲಿ 7ನೇ ದೊಡ್ಡ ದೇಶ
- ಪ್ರಪಂಚದ ಭೂಕ್ಷೇತ್ರವು ಶೇ.2.4%
- 29 ರಾಜ್ಯಗಳು, 6 ಕೇಂದ್ರಾಡಳಿತ ಪ್ರದೇಶಗಳಿವೆ.
- ದೆಹಲಿಯನ್ನು ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್.ಸಿ.ಟಿ) ಎನ್ನುವರು
- 2011ರ ಜನಗಣತಿ ಪ್ರಕಾರ 121 ಕೋಟಿ (ಪ್ರಪಂಚದ 17.5%)
- ಪ್ರಪಂಚದಲ್ಲಿ 2ನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ದೇಶ.

**ಸ್ಥಾನ:-**

- ✓ ಭೌಗೋಳಿಕವಾಗಿ ಉತ್ತರಗೋಳಾರ್ಧ ಹಾಗೂ ಪೂರ್ವಗೋಳಾರ್ಧದಲ್ಲಿದೆ.
- ✓ ಆಗ್ನೇಯ ಏಷ್ಯಾದ ಪರ್ಯಾಯ ದ್ವೀಪ

RAMALINGAPPA L

- ✓ ಭೂಭಾಗವು 80.4' ದಿಂದ 370.6' ಉತ್ತರ ಅಕ್ಷಾಂಶ & 680.7' ರಿಂದ 970.25' ಪೂರ್ವರೇಖಾಂಶಗಳ ನಡುವೆ ವಿಸ್ತರಿಸದೆ.
- ✓ ದಕ್ಷಿಣದ ತುದಿ– ನಿಕೋಬಾರ್ ದ್ವೀಪದ 60.45' ದಕ್ಷಿಣ ಅಕ್ಷಾಂಶದ 'ಇಂದಿರಾ ಪಾಯಿಂಟ್'
- ✓ ಉತ್ತರದ ತುದಿ– ಜಮ್ಮು–ಕಾಶ್ಮೀರದ ಇಂದಿರಾಕೋಲ್
- ✓ ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿವೃತ್ತ ($23^1/_2{}^0$) ಉತ್ತರ ಅಕ್ಷಾಂಶ.
- ✓ $82^1/_2{}^0$ ಪೂರ್ವರೇಖಾಂಶ ಪ್ರಯಾಗ/ಅಲಹಾಬಾದ್ ದೇಶದ ಮಧ್ಯದಲ್ಲಿ ಆಯ್ದೆಉ ಹೋಗುತ್ತದೆ.
- ✓ ಇದು ಭಾರತದ ಮಧ್ಯ ರೇಖಾಂಶವಾಗಿದೆ.
- ✓ ಇದು ಭಾರತೀಯ ಆದರ್ಶಕಾಲಮಾನವನ್ನು ಆಧರಿಸಿದೆ (ಐ.ಎಸ್.ಟಿ)

**ಭೂ ಮೇರೆಗಳು:–**

- ❖ ಭಾರತದ ಭೂಗಡಿಯ ಉದ್ದ – 15200 ಕಿ.ಮೀ
- ❖ ಭಾರತದ ಕರಾವಳು ಉದ್ದ – 6100 ಕಿ.ಮೀ
- ❖ 7 ರಾಷ್ಟ್ರಗಳೊಂದಿಗೆ ಗಡಿ ಹೊಂದಿದೆ.
- ❖ ವಾಯುವ್ಯದಲ್ಲಿ – ಪಾಕಿಸ್ತಾನ & ಅಫ್ಘಾನಿಸ್ಥಾನ
- ❖ ಉತ್ತರದಲ್ಲಿ – ಚೀನಾ, ನೇಪಾಳ, ಭೂತಾನ್
- ❖ ಪೂರ್ವದಲ್ಲಿ – ಮಯನ್ಮಾರ್(ಬರ್ಮಾ) & ಬಾಂಗ್ಲಾದೇಶ
- ❖ ದಕ್ಷಿಣದಲ್ಲಿ – ಶ್ರೀಲಂಕ
- ❖ ನೈಋತ್ಯದಲ್ಲಿ – ಮಾಲ್ದೀವ್ಸ್ ದ್ವೀಪ

**ಪ್ರಾಕೃತಿಕ ವಿಭಾಗಗಳು:–**

- ➢ ಭಾರತದಲ್ಲಿ ನಾಲ್ಕು ಪ್ರಾಕೃತಿಕ ವಿಭಾಗಗಳಿವೆ.

**ಉತ್ತರದ ಪರ್ವತಗಳು:–**

- ❖ ಹಿಮಾಲಯ ಪರ್ವತ ಜಗತ್ತಿನ ಎತ್ತರದ ಶಿಖರಗಳನ್ನು & ಆಳವಾದ ಕಣಿವೆ & ಹಿಮನದಿಗಳನ್ನು ಹೊಂದಿದೆ.
- ❖ ಇದು ಪಾಮೀರ್ ಗ್ರಂಥಿಯಿಂದ ಪೂರ್ವದ ಅರುಣಾಚಲ ಪ್ರದೇಶದವರೆಗೆ 2500 ಕಿ.ಮೀ ಉದ್ದ
- ❖ ಇವು ಮಡಿಕೆ ಪರ್ವತಗಳಾಗಿವೆ.
- ❖ ಇವು ಮೂರು ಸಮನಾಂತರ ಶ್ರೇಣಿಗಳನ್ನು ಹೊಂದಿದೆ
  - ✓ ಶಿವಾಲಿಕ್ ಶ್ರೇಣಿ (ಪಾದಬೆಟ್ಟಗಳು)
  - ✓ ಹಿಮಾಚಲ (ಮಧ್ಯಹಿಮಾಲಯ)
  - ✓ ಹಿಮಾದ್ರಿ (ಮಹಾಹಿಮಾಲಯ)

**ಶಿವಾಲಿಕ್ ಶ್ರೇಣಿ:–**

- ➢ ಇವು ಇತ್ತೀಚಿಗೆ ನಿರ್ಮಿತವಾಗಿವೆ.
- ➢ ಇವು ಅತಿ ಕಡಿಮೆ ಎತ್ತರವನ್ನು ಹೊಂದಿದೆ.
- ➢ ಇವನ್ನು ಪಾದಬೆಟ್ಟಗಳು ಎನ್ನುವರು.
- ➢ ಇಲ್ಲಿ ಸಮತಟ್ಟಾದ ಕಿರಿದಾದ ಮೈದಾನಗಳಿವೆ
- ➢ ಇವುಗಳನ್ನು ಡೂನ್‌ಗಳು ಎನ್ನುವರು.
- ➢ ಉದಾ:– ಡೆಹರಾಡೂನ್, ಕೋಟಾ, ಪಾಟ್ಲ, ಚೌಕಾಂಬಾ, ಉದಾಂಪುರ, ಕೋಟ್ಲಾ
- ➢ ಸಮುದ್ರಿಂದ 600–1500 ಮೀ ಎತ್ತರ ಹೊಂದಿವೆ.

**ಹಿಮಾಚಲ(ಮಧ್ಯ ಹಿಮಾಲಯ):–**

- ❖ ಇವಿಗಳ ಸರಾಸರಿ ಎತ್ತರ 3600–4500 ಮೀಟರ್
- ❖ ಅಗಲ 60–80 ಕಿ.ಮೀ
- ❖ ಸಮನಾಂತರ ಶ್ರೇಣಿಗಳು:– ಪೀರ್‌ಪಂಜಾಲ್, ಮಹಾಭಾರತ ಶ್ರೇಣಿ, ನಾಗತಿಬ್ಬ, ಮಸ್ಸೂರಿ
- ❖ ಕಣಿವೆ ಪ್ರದೇಶಗಳು:– ಕಂಗ್ರಾ, ಕುಲು
- ❖ ಗಿರಿಧಾಮಗಳು:– ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇತ್, ಚಕ್ರಾತ, ಡಾರ್ಜಲಿಂಗ್

**ಮಹಾಹಿಮಾಲಯ (ಹಿಮಾದ್ರಿ):–**

- ✓ ಅತಿ ಎತ್ತರ & ಮೊದಲ ನಿರ್ಮಾಣ
- ✓ ಸಂಪೂರ್ಣ ಹಿಮದಿಂದ ಆವರಿಸಿವೆ ಆದ್ದರಿಂದ ಇದನ್ನು 'ಹಿಮಾದ್ರಿ' ಎನ್ನುವರು.
- ✓ ಸಮುದ್ರ ಮಟ್ಟದಿಂದ 6000–8000 ಮೀಟರ್ ಎತ್ತರ.
- ✓ ಇದರ ಅತ್ಯುನ್ನತ ಶಿಖರ:– ಮೌಂಟ್‌ಎವರೆಸ್ಟ್(8848ಮೀ)
- ✓ ಇದು ಟಿಬೇಟ್ & ನೇಪಾಳ ಮಧ್ಯದಲ್ಲಿದೆ.
- ✓ ಸರಣಿಗಳು:– ಕಾಂಚನಗಂಗಾ, ಧವಳಗಿರಿ, ನಂದಾದೇವಿ, ಗೌರಿಶಂಕರ
- ✓ ಹಿಮನದಿಗಳು:– ಗಂಗೋತ್ರಿ
- ✓ ಕಣಿವೆ ಮಾರ್ಗಗಳು:– ಕಾಶ್ಮೀರದ ಬುರ್ಜಿಲ್, ಜೋಜಿಲಾ, ಹಿಮಾಚಲ ಪ್ರದೇಶದ ಬಾರಾಲಾಫ್‌ಚಾ
- ✓ ಇದರ ಉತ್ತರಕ್ಕಿರುವ ಮಡಿಕೆ ಪರ್ವತಗಳನ್ನು ಹೊರಹಿಮಾಲಯ ಎನ್ನುವರು.
- ✓ ಇದರಲ್ಲಿ ಕಾರಾಕೋರಮ್ ಶ್ರೇಣಿ & ಕೈಲಾಸ ಪರ್ವತಗಳಿವೆ.
- ✓ ಭಾರತದ ಎತ್ತರದ ಶಿಖರ:– ಕೆ2 ಅಥವಾ ಮೌಂಟ್‌ಗಾಡ್ವಿನ್ ಆಸ್ಟಿನ್
- ✓ ಇದು ಲಡಾಕ್ ಪ್ರಸ್ಥಭೂಮಿಯಲ್ಲಿದೆ.

RAMALINGAPPA L

**ಹಿಮಾಲಯದ ಮಹತ್ವ:-**

- ✓ ಇದು ಭಾರರತದ ಜನಜೀವನದ ಮೇಲೆ ಪ್ರಭಾವ ಬೀರಿದೆ.
- ✓ ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತಿದೆ.
- ✓ ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿ ತಡೆಯುತ್ತದೆ.
- ✓ ನದಿಗಳ ಉಗಮ ಸ್ಥಾನ
- ✓ ಜಲವಿದ್ಯುತ್ ಶಕ್ತಿ ಉತ್ಪಾದನೆಗೆ ಅನುಕೂಲ
- ✓ ವಿಶಾಲವಾದ ಮೈದಾನಗಳನ್ನು ನಿರ್ಮಿಸಿದೆ.
- ✓ ವೈವಿಧ್ಯಮಯ ಸಸ್ಯವರ್ಗ & ಪ್ರಾಣಿಸಂಕುಲಕ್ಕೆ ಆಶ್ರಯ
- ✓ ಅಪಾರ ಖನಿಜ ಸಂಪನ್ಮೂಲಗಳನ್ನು ಹೊಂದಿದೆ.
- ✓ ಪ್ರವಾಸೋದ್ಯಮ & ಧಾರ್ಮಿಕ ಕೇಂದ್ರಗಳಿಗೆ ಮಹತ್ವ.

**ಉತ್ತರದ ಮಹಾ ಮೈದಾನ:-**

- ➢ ಇದನ್ನು ಸಟ್ಲೇಜ್-ಗಂಗಾ ಮೈದಾನ ಎನ್ನುವರು
- ➢ ಉತ್ತರದ ಹಿಮಾಲಯ & ದಕ್ಷಿಣದ ಪರ್ಯಾಯ ಪ್ರಸ್ಥಭೂಮಿ ನಡುವೆ ಇದೆ.
- ➢ ಪಶ್ಚಿಮ ಸಿಂಧೂನದಿ ಮೈದಾನದಿಂದ ಪೂರ್ವದ ಬ್ರಹ್ಮಪುತ್ರ ಕಣಿವೆವರೆಗೆ ವಿಸ್ತರಿಸಿದೆ.
- ➢ ಪಶ್ಚಿಮದಿಂದ ಪೂರ್ವಕ್ಕೆ 2400 ಕಿ.ಮೀ, ಅಗಲ 70-500 ಕಿ.ಮೀ
- ➢ ಇದು ಸಮತಟ್ಟಾಗಿದೆ.
- ➢ ಇದು ನದಿಗಳು ಹೊತ್ತು ತಂದ ಮೆಕ್ಕಲು ಮಣ್ಣಿನಿಂದ ಸಂಚಯನದಿಂದ ನಿರ್ಮಿತ ಮೈದಾನ

**ಪರ್ಯಾಯ ಪ್ರಸ್ಥಭೂಮಿ:-**

- ❖ ಇದು ಭಾರತದ ಭೂಸ್ವರೂಪಗಳಲ್ಲಿ ಅತಿ ದೊಡ್ಡದು.
- ❖ ಇತಿಹಾಸದ ಪ್ರಕಾರ ಅತಿ ಪುರಾತನವಾದುದು.
- ❖ ಇದನ್ನು ಭೂಖಂಡಗಳ ಆರಂಭದಲ್ಲಿ ಗೊಂಡ್ವಾನ ಭೂರಾಶಿಯ ಒಂದು ಭಾಗ ಎಂದು ಭೂವಿಜ್ಞಾನಿಗಳ ಅಭಿಪ್ರಾಯ.
- ❖ ಸಟ್ಲಜ್ ಗಂಗಾ ಮೈದಾನದಿಂದ ಹಿಂದೂ ಮಹಾಸಾಗರದವರೆಗೆ ವಿಸ್ತರಿಸಿದೆ.
- ❖ ಒಟ್ಟು 16 ಲಕ್ಷ ಚ.ಕಿ.ಮೀ ಕ್ಷೇತ್ರ
- ❖ ಉತ್ತರದ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ.
- ❖ ಪಶ್ಚಿಮ ಘಟ್ಟಗಳಿಂದ ಪೂರ್ವದ ಜಾರ್ಖಂಡನ ರಾಜಮಹಲ್ ಬೆಟ್ಟಗಳವರೆ 1400 ಕಿ.ಮೀ
- ❖ ಇದು ತ್ರಿಕೋನಾಕರದಲ್ಲಿದೆ ಉತ್ತರದಲ್ಲಿ ಅಗಲ ದಕ್ಷಿಣದಲ್ಲಿ ಕಿರಿದಾಗಿದೆ.
- ❖ ಇದನ್ನು ಮೂರು ಸಮುದ್ರಗಳು ಸುತ್ತುವರೆದಿದೆ.
- ❖ ಉತ್ತರಭಾಗದಲ್ಲಿ:- ವಿಂದ್ಯಾ ಪರ್ವತ, ಸಾತ್ಪುರಾ ಬೆಟ್ಟ, ಅರಾವಳಿ ಬೆಟ್ಟಗಳು, ಮಾಳ್ವ ಪ್ರಸ್ಥಭೂಮಿ, ಛೋಟಾನಾಗಪುರ ಪ್ರಸ್ಥಭೂಮಿಗಳಿವೆ.
- ❖ ನರ್ಮಾದ, ತಪತಿ, ದಾಮೋದರ ನದಿಗಳು ಹರಿಯುತ್ತಿವೆ.
- ❖ ದಖನ್ ಪ್ರಸ್ಥಭೂಮಿ:- ಮಹಾದೇವ, ಮೈಕಲ್ ಶ್ರೇಣಿ, ಅಮರಕಂಟಕ ಬೆಟ್ಟ, ರಾಜಮಹಲ್ ಬೆಟ್ಟಗಳಿವೆ.
- ❖ ಇದರ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ ಇವುಗಳನ್ನು ಮಹಾರಾಷ್ಟ್ರ & ಕರ್ನಾಟಕದಲ್ಲಿ 'ಸಹ್ಯಾದ್ರಿ' ಎನ್ನುವರು.
- ❖ ಅಣ್ಣಾಮಲೈ ಸರಣಿಯ 'ಅನೈಮುಡಿ (1665ಮೀ) ದಕ್ಷಿಣ ಭಾರತದಲ್ಲಿ ಎತ್ತರವಾದ ಶಿಖರ
- ❖ ಪೂರ್ವಕ್ಕೆ ಪೂರ್ವಘಟ್ಟಗಳಿವೆ.
- ❖ ಇವು ನೀಲಗಿರಿ ಬೆಟ್ಟಗಳಲ್ಲಿ ಎರಡು ಸಂಧಿಸುತ್ತವೆ.
- ❖ ಪೂರ್ವಘಟ್ಟಗಳು ಎತ್ತರವಾಗಿಲ್ಲ & ನಿರಂತರವಾಗಿಲ್ಲ
- ❖ ಇಲ್ಲಿ ಆರ್ಮಕೊಂಡ & ಮಹೇಂದ್ರಗಿರಿ ಎತ್ತರವಾದ ಶಿಖರಗಳು
- ❖ ನದಿಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

**ಪ್ರಾಮುಖ್ಯತೆ:-**

- ➢ ಆರ್ಥಿಕವಾಗಿ ಪ್ರಾಮುಖ್ಯತೆ ಹೊಂದಿದೆ.
- ➢ ಅಪಾರ ಖನಿಜ ಸಂಪತ್ತು ಹೊಂದಿದೆ.
- ➢ ನದಿ ಜಲಪಾತಗಳಿಂದ ಕೂಡಿದ್ದು ಜಲವಿದ್ಯುತ್ ಶಕ್ತಿ ಉತ್ಪಾದನೆಗೆ ಅನುಕೂಲ

**ಕರಾವಳಿ ಮೈದಾನಗಳು:-**

ದ್ವೀಪಗಳನ್ನು ಹೊರೆತುಪಡಿಸಿ 6100 ಕಿ.ಮೀ ಉದ್ದದ ಕರಾವಳಿ ಹೊಂದಿದೆ.

- ಪಶ್ಚಿಮದ ಗುಜರಾತ್‌ನ ಕಛ್ ಪ್ರದೇಶದಿಂದ ಪೂರ್ವದ ಗಂಗಾನದಿ ಮುಖಜ ಭೂಮಿಯವರೆಗೆ ವಿಸ್ತರಿಸಿದೆ.
- ಇದರ ತೀರದ ಉದ್ದಕ್ಕೂ ಕಿರಿದಾದ ಕರಾವಳಿ ಮೈದಾನಗಳಿವೆ.
- ಎರಡು ಭಾಗಗಳಾಗಿ ವಿಂಗಡಣೆ:-
- ಪಶ್ಚಿಮ ಕರಾವಳಿ:-
- ಇದು ಪಶ್ಚಿಮಘಟ್ಟ & ಅರಬ್ಬಿಸಮುದ್ರ ಮಧ್ಯೆ ಕಂಡುಬರುತ್ತದೆ.
- ಕಛ್‌ನಿಂದ ಕನ್ಯಾಕುಮಾರಿವರೆಗೆ 1500 ಕಿ.ಮೀ ಉದ್ದ
- ಕೇರಳದಲ್ಲಿ ಮಲಬಾರ್, ಕರ್ನಾಟಕದಲ್ಲಿ ಕರ್ನಾಟಕ/ಕೆನಬೇರ, ಗೋವಾ & ಮಹಾರಾಷ್ಟ್ರದಲ್ಲಿ ಕೊಂಕಣತೀರ, ಗುಜರಾತನಲ್ಲಿ ಗುಜರಾತ್ ತೀರಗಳಿವೆ.

- ಮುಂಬೈ, ಮರ್ಮಗೋವಾ, ಕೊಚ್ಚಿನ್, ಕಾಂಡ್ಲಾ, ಕರಾವಾರ, ನವಮಂಗಳೂರು ಬಂದರುಗಳಿವೆ.
- ಪೂರ್ವ ಕರಾವಳಿ:–
- ಗಂಗನದಿ ಮುಖಜ ಭೂಮಿಯಿಂದ ಕನ್ಯಾಕುಮಾರಿವರೆಗೆ ಹಬ್ಬಿದೆ
- ಪೂರ್ವಘಟ್ಟಗಳು & ಬಂಗಾಳಕೊಲ್ಲಿ ಮಧ್ಯೆ ಹಬ್ಬಿದೆ.
- ಇದು ಹೆಚ್ಚು ಅಗಲ & ಸಮತಟ್ಟಾಗಿದೆ.
- ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ನದಿಗಳ ಮುಖಜ ಭೂಮಿ ಹೊಂದಿದೆ.
- ಇಲ್ಲಿ ಉಪ್ಪು ನೀರಿನ ಸರೋವರ/ಲಗೂನ್‌ಗಳಿವೆ.
- ಉದಾ:– ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ ಪುಲಿಕಾಟ್
- ಇಲ್ಲಿ ಉತ್ಕಲತೀರ & ಕೋರಮಂಡಲ ತೀರಗಳಿವೆ.
- ದ್ವೀಪಗಳು:–
- ಒಟ್ಟು 247 ದ್ವೀಪಗಳಿವೆ
- 204 ದ್ವೀಪಗಳು ಬಂಗಾಳಕೊಲ್ಲಿಯಲ್ಲಿ, 43 ದ್ವೀಪಗಳು ಅರಬ್ಬಿಸಮುದ್ರದಲ್ಲಿ.
- ಮನ್ನಾರ್ ಖಾರಿಯಲ್ಲಿ ಹವಳದದ್ವೀಪಗಳಿವೆ.
- ಅಂಡಮಾನ್–ನಿಕೋಬಾರ್ ದ್ವೀಪಗಳು ಗಟ್ಟಿಯಾದ ಜ್ವಾಲಾಮುಖಿ ನಿರ್ಮಿತ ಶಿಲೆಗಳಿಮದ ಕೂಡಿವೆ.
- ಲಕ್ಷದ್ವೀಪಗಳು ಹವಳದ ದ್ವೀಪಗಳಾಗಿವೆ.
- ಭಾರತದ ದಕ್ಷಿಣದ ತುದಿ ಇಂದಿರಾ ಪಾಯಿಂಟ್ ನಿಕೋಬರ್ ದ್ವೀಪದಲ್ಲಿದೆ.
- ಭಾರತದ ಋತುಗಳು:–
- ಭಾರತವು ಉಷ್ಣವಲಯದ ಮಾನ್ಸೂನ ಮಾದರಿ ವಾಯುಗುಣ ಹೊಂದಿದೆ.
- ಇದರಲ್ಲಿ ಮಾರುತಗಳು ವರ್ಷದ ವಿವಿಧ ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕನಲ್ಲಿ ಬೀಸುತ್ತವೆ.
- ನೈರುತ್ಯ ಹಾಗೂ ಈಶಾನ್ಯ ದಿಕ್ಕಿನಿಂದ ಬೀಸುತ್ತವೆ.
- ಭಾರತವು ಉಷ್ಣವಲಯ ಮತ್ತು ಸಮಶೀತೋಷ್ಣವಲಯ ಎರಡರಲ್ಲಿ ಕಂಡುಬರುತ್ತವೆ.
- ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳು:–
- ಅಕ್ಷಾಂಶ
- ಸಮುದ್ರ ಮಟ್ಟದಿಂದ ಇರುವ ಎತ್ತರ
- ಸಾಗರಗಳಿಂದ ಇರವು ದೂರ
- ಮಾರುತಗಳ ದಿಕ್ಕು
- ಪರ್ವತ ಸರಣಿಗಳ ಹಬ್ಬಿರುವ ರೀತಿ
- ಸಾಗರ ಪ್ರವಾಹಗಳು
- ವಾಯುಗುಣದ ನಾಲ್ಕು ಋತುಮಾನಗಳು:–
- ಬೇಸಿಗೆ ಕಾಲ (ಮಾರ್ಚ್–ಮೇ)
- ನೈರುತ್ಯ ಮಾನ್ಸೂನ್ ಕಾಲ/ಮುಂಗಾರು ಮಳೆಗಾಳ(ಜೂನ್–ಸೆಪ್ಟಂಬರ್)
- ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ/ಹಿಂಗಾರು (ಅಕ್ಟೋಬರ್–ನವೆಂಬರ್)
- ಚಳಿಗಾಳ (ಡಿಸೆಂಬರ್–ಫೆಬ್ರವರಿ)
- ಬೇಸಿಗೆಕಾಲ:–
- ಸೂರ್ಯನ ಲಂಬಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ ಉಷ್ಣಾಂಶ ಅಧಿಕ
- ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತದಲ್ಲಿ ಹೆಚ್ಚು ಉಷ್ಣಾಂಶ
- ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ:– ರಾಜಸ್ತಾನದ ಗಂಗಾನಗರ (520 ಸೆ.) ದಾಖಲಾಗಿದೆ.
- ದಕ್ಷಿಣ ಭಾರತದ ಉಷ್ಣಾಂಶ ಇಳಿಕೆ ಕಂಡಿದೆ ಕಾರಣ:– ಮೂರು ಕಡೆಗಳಲ್ಲಿ ಸಾಗರಗಳಿಂದ ಆವರಿಸಿದೆ.(320 ಸೆ. ರಿಂದ 350 ಸೆ.)
- ಉತ್ತರ ಭಾರತದ ಪರ್ವತ ಪ್ರದೇಶ & ಪರ್ಯಾಯ ಪ್ರಸ್ಥಭೂಮಿ ತಂಪಾಗಿರುತ್ತದೆ.
- ಸ್ಥಳೀಯ ಉಷ್ಣಾಂಶ & ಪ್ರಚಲನ ಪ್ರವಾಹಗಳಿಂದ ಎಪ್ರೀಲ್/ಮೇ ತಿಂಗಳಲ್ಲಿ ಮಳೆಯಾಗುತ್ತದೆ.
- ಇದನ್ನು:–
- ಪಶ್ಚಿಮ ಬಂಗಾಳದಲ್ಲಿ – ಕಾಲ ಬೈಸಾಕಿ
- ಉತ್ತರ ಪ್ರದೇಶದಲ್ಲಿ – ಆಂಡೀಸ್
- ಕರ್ನಾಟಕದಲ್ಲಿ – ಕಾಫಿ ತುಂತುರು
- ಕೇರಳದಲ್ಲಿ – ಮಾವಿನ ಹೂಯ್ಲು
- ಈ ಕಾಲದಲ್ಲಿ ಶೇ. 10 ರಷ್ಟು ಮಳೆಯಾಗುತ್ತದೆ.
- ಮಳೆಗಾಲ:–
- ಮುಂಗಾರು ಮಳೆಗಾಲದ ಮಾರುತಗಳು ಎನ್ನುವರು
- ಇವು ಜಲಾಂಶ ಪೂರಿತ ಮಾರುತಗಳಾಗಿದ್ದು ಭಾರತದಲ್ಲಿ ಹೆಚ್ಚು ಮಳೆ ಸುರಿಸುತ್ತದೆ.
- ಒಟ್ಟು ಶೇ.75 ರಷ್ಟು ಮಳೆಯಾಗುತ್ತದೆ.
- ಈ ಮಾರುತಗಳು ಭಾರತವನ್ನು 2 ಭಾಗ ಮಾಡಿದೆ.

- ಅರಬ್ಬಿಸಮುದ್ರ ಶಾಖೆ:–
- ಇದು ಪಶ್ಚಿಮ ಘಟ್ಟಗಳಿಂದ ತಡೆದು ಪಶ್ಚಿಮ ಘಟ್ಟಗಳ ಪಶ್ಚಿಮ ಬಾಗಕ್ಕೆ ಅಧಿಕ ಮಳೆ
- ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆ
- ಪಶ್ಚಿಮ ಘಟ್ಟಗಳ ಪೂರ್ವಭಾಗವು ಮಳೆಯ ನೆರಳಿನ ಪ್ರದೇಶ
- ಬಂಗಾಳಕೊಲ್ಲಿ ಶಾಖೆ:–
- ಇವು ಮಯನ್ಮಾರು, ಬಾಂಗ್ಲಾ, ಈಶಾನ್ಯ ಭಾಗ, ಹಿಮಾಯಲ ತಪ್ಪಲು & ಉತ್ತರ ಮೈದಾನಕ್ಕೆ ಮಳೆ
- ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೊದಂತೆ ಮಳೆ ಕಡಿಮೆ
- ತಮಿಳುನಾಡಿನಲ್ಲಿ ಇವು ಮಳೆ ಸುರಿಸುವುದಿಲ್ಲ.
- ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ:–
- ಅಕ್ಟೋಬರ್ ಕೊನೆಯ ಭಾಗದಲ್ಲಿ ಭಾರತದಲ್ಲಿ ಮಳೆ ಸುರಿದ ಪರಿಣಾಮ ಉಷ್ಣಾಂಶ ಕಡಿಮೆ
- ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದಲ್ಲಿ ಲಂಬವಾಗಿ ಬೀಳುತ್ತವೆ.
- ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶ ಕಡಿಮೆ
- ಇದರ ಪರಿಣಾಮವಾಗಿ ಇದು ಹೆಚ್ಚು ಒತ್ತಡ ಪ್ರದೇಶವಾಗಿ ಪರಿರ್ವತನೆ
- ಅದಕ್ಕಾಗಿ ನೈರುತ್ಯ ಮಾರುತಗಳು ಹಿಂದೆ ಸರಿಯಲು ಪ್ರಾರಂಭಿಸುತ್ತವೆ.
- ನವೆಂಬರ್ ಅಂತ್ಯಕ್ಕೆ ಬೀಸುವುದನ್ನು ನಿಲ್ಲಿಸುತ್ತವೆ.
- ಇದನ್ನು ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಎನ್ನುವರು
- ಈ ಅವಧಿಯಲ್ಲಿ ಶೇ. 13 ರಷ್ಟು ಮಳೆಯಾಗುತ್ತದೆ.
- ಈ ಅವಧಿಯಲ್ಲಿ ಉಷ್ಣವಲಯದ ಆವರ್ತ(ಚಂಡಮಾರುತ) ಗಾಳಿಗಳು ಬಂಗಾಳಕೊಲ್ಲಿ & ಅರಬ್ಬಿಸಮುದ್ರಗಳಲ್ಲಿ ನಿರ್ಮಿತಗೊಳ್ಳುತ್ತವೆ.
- ಇವು ಅಧಿಕ ವೇಗ & ಮಳೆಯಿಂದ ಕೂಡಿರುತ್ತವೆ.
- ಇವು ಅಪಾರ ಹಾನಿಯನ್ನು ಉಂಟುಮಾಡುತ್ತವೆ.
- ಚಳಿಗಾಲ:–
- ಇಲ್ಲಿ ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರದ ಮೈದಾನವು ಅತಿ ಕಡಿಮೆ ಉಷ್ಣಾಂಶ.
- ಕೆಲವು ಕಡೆ ಉಷ್ಣಾಂಶ ನೀರು ಹೆಪ್ಪುಗಟ್ಟುವ ಬಿಂದುವಿಗಿಂತ ಕಡಿಮೆ
- ದಕ್ಷಿಣ ಭಾರತದಲ್ಲಿ ಉಷ್ಣಾಂಶ ಸಾಧರಣ ಹವಾಗುಣ ಹಿತಕರವಾಗಿರುತ್ತದೆ.
- ಇಲ್ಲಿ ಶೇ. 2 ರಷ್ಟು ಮಳೆ ಸುರಿಸುತ್ತವೆ.
- ಇದು ಭಾರತದ ಅತಿ ಕಡಿಮೆ ಮಳೆಬೀಳುವ ಅವಧಿ
- ಮಳೆಯ ಹಂಚಿಕೆ:–
- ಭಾರತದ ಸರಾಸರಿ ಮಳೆ ಪ್ರಮಾಣ:– 118 ಸೆ.ಮೀ
- ಕಡಿಮೆ ಮಳೆಯ ಪ್ರದೇಶ:–
- 50 ಸೆ.ಮೀ ಗಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳು
- ರಾಜಸ್ಥಾನದ ಥಾರ್ ಮರುಭೂಮಿ, ಪಂಜಾಬ್, ಹರಿಯಾಣ, ಗುಜರಾತ್‌ನ ಕಛ್ ಪ್ರದೇಶ, ಜಮ್ಮು–ಕಾಶ್ಮೀರ, ಮಹಾರಾಷ್ಟ್ರದ ಪೂರ್ವಭಾಗ, ಕರ್ನಾಟಕದ ಒಳನಾಡಿನ ಭಾಗ
- ರಾಜಸ್ಥನದ ಜೈಸಲ್ಮೇರ್ ಜಿಲ್ಲೆಯ 'ರೂಯ್ಲಿ' ಕಡಿಮೆ ಮಳೆ ಬೀಳುವ ಪ್ರದೇಶ (8.3 ಸೆ.ಮೀ)
- ಸಾಧಾರಣ ಮಳೆ ಪಡೆಯುವ ಪ್ರದೇಶ:–
- 50 ರಿಂದ 250 ಸೆ.ಮೀ ಗಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳು
- ಇಲ್ಲಿ ಅತಿ ಕಡಿಮೆ ಮಳೆ ಬೀಳುವ ಹಾಗೂ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳನ್ನು ಹೊರತು ಪಡಿಸಿ ಉಳಿದ ಪ್ರದೇಶಗಳನ್ನು ಒಳಗೊಂಡಿವೆ.
- ಅಧಿಕ ಮಳೆಯ ಪ್ರದೇಶ:–
- ವಾರ್ಷಿಕ 250 ಸೆ.ಮೀ ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳು
- ಪಶ್ಚಿಮಘಟ್ಟಗಳ ಪಶ್ಚಿಮಭಾಗ, ಅಸ್ಸಾಂ, ಪೂರ್ವರಾಜ್ಯಗಳು, ಪಶ್ಚಿಮ ಬಂಗಾಳ.
- ಮೇಘಾಲಯದ 'ಮಾಸಿನ್‌ರಾಮ್' ಅತಿ ಹೆಚ್ಚು ಮಳೆ ಬೀಳುವ ಪ್ರದೇಶ.
- ಇದು ಪ್ರಪಂಚದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ.
- ಭಾರತದ ಮಣ್ಣುಗಳು:–
- ಮಣ್ಣು ಒಂದು ನೈಸರ್ಗಿಕ ಸಂಪನ್ಮೂಲ
- ಭಾರತ ವಿವಿಧ ಮಣ್ಣುಗಳನ್ನು ಹೊಂದಿದೆ ಕಾರಣ
- ಅವುಗಳ ಉತ್ಪತ್ತಿಯಾಗಿರುವ ಮೂಲಶಿಲೆಗಳು & ವಾಯುಗುಣಗಳ ವ್ಯತ್ಯಾಸ
- ಮಣ್ಣು ಸಸ್ಯ & ಪ್ರಾಣಿಗಳ ಕೊಳೆತ ಜೈವಿಕಾಂಶವನ್ನು ಒಳಗೊಂಡಿವೆ.
- ಭಾರತ ಆ ರೀತಿಯ ಮಣ್ಣುಗಳನ್ನು ಹೊಂದಿದೆ.

RAMALINGAPPA L

- ಮೆಕ್ಕಲು ಮಣ್ಣು:–
- ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣು
- ಭಾರತದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಮಣ್ಣು
- ಸುಮಾರು 7.7 ದಶ ಲಕ್ಷ ಚ.ಕಿ.ಮೀ
- ಉತ್ತರಪ್ರದೇಶ, ಬಿಹಾರ, ಪಶ್ಚಿಮಬಂಗಾಳ, ಒಡಿಶಾ, ಪಂಜಾಬ್, ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರ ಕಣಿವೆ ಭಾಗ
- ನರ್ಮದಾ ತಪತಿ ನದಿ ಕಣಿವೆ, ಪರ್ಯಾಯ ಪ್ರಸ್ಥಭೂಮಿಗಳಲ್ಲಿ ಕಂಡುಬರುತ್ತದೆ.
- ಬೆಳೆಗಳು:–ಗೋಧಿ, ಭತ್ತ, ಕಬ್ಬು, ಹತ್ತಿ, ಸೆಣಬು
- ಕಪ್ಪುಮಣ್ಣು:–
- ಇದನ್ನು ರೇಗೂರ್ ಮಣ್ಣು ಎನ್ನುವರು.
- ಇದು ಹತ್ತಿ ಬೆಳೆಗೆ ಸೂಕ್ತವಾಗಿರುವುದರಿಂದ 'ಕಪ್ಪು ಹತ್ತಿ ಮಣ್ಣು' ಎನ್ನುವರು.
- ಸುಮಾರು 5.46 ಲಕ್ಷ ಚ.ಕಿ.ಮೀ
- ಕಪ್ಪು ಮಣ್ಣಿನ ಪ್ರದೇಶವನ್ನು 'ಡೆಕ್ಕನ್ ಟ್ರಾಪ್' ಎನ್ನುವರು.
- ಇದು ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿ.
- ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡುಬರುತ್ತದೆ.
- ಇದು ಫಲವತ್ತಾಗಿದ್ದು ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ.
- ಮಹಾರಾಷ್ಟ್ರ, ಗುಜರಾತ್, ಮದ್ಯಪ್ರದೇಶ, ಆಂಧ್ರಪ್ರದೇಶ, ಪಶ್ಚಿಮ ಭಾಗ & ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ.
- ಇದು ಕಬ್ಬಿಣ, ಸುಣ್ಣ, ಮೆಗ್ನೇಶಿಯಂ ಕಾರ್ಬೀನೇಟ್‌ಗಳು ಅಧಿಕ ಪ್ರಮಾಣದಲ್ಲಿವೆ.
- ಇದು ಒಣ ಬೇಸಾಯಕ್ಕೆ ಸೂಕ್ತವಾಗಿದೆ.
- ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹಿಗೆಸೊಪ್ಪು, ಎಣ್ಣೆಕಾಳು, ನಿಂಬೆ, ದ್ರಾಕ್ಷಿ
- ಕೆಂಪು ಮಣ್ಣು:–
- ಇದು ಹೆಚ್ಚಾಗಿ ಪರ್ಯಾಯ ಪ್ರಸ್ಥಭೂಮಿಯಲ್ಲಿ ಕಂಡುಬರುತ್ತದೆ.
- ಸು. 5.18 ಲಕ್ಷ ಚ.ಕಿ.ಮೀ ಕಂಡುಬರುತ್ತದೆ.
- ಇದು ಕನ್ಯಾಕುಮಾರಿಯಿಂದ ಮಧ್ಯಪ್ರದೇಶದ ಝಾನ್ಸಿವರೆಗೆ ಹಬ್ಬಿದೆ.
- ಗುಜರಾತಿನ ಕಛ್ ಪ್ರದೇಶದಿಂದ ಪೂರ್ವದ ಜಾರ್ಖಂಡ್ ರಾಜಮಹಲ್ ಬೆಟ್ಟಗಳವರೆಗೆ ವ್ಯಾಪಿಸಿದೆ.
- ಬೆಳೆಗಳು:– ರಾಗಿ, ಹೊಗೆಸೊಪ್ಪು, ಎಣ್ಣೆಕಾಳಗಳು, ಭತ್ತ, ಕಬ್ಬು, ಹತ್ತಿ
- ಜಂಬಿಟ್ಟಿಗೆ(ಲ್ಯಾಟರೈಟ್) ಮಣ್ಣು:–
- ಇದು 200 ಸೆ.ಮೀ ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ನಿರ್ಮಿತ.
- ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ & ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರಿನಲ್ಲಿ ಉಳಿದಿರುವುದು ಇದರಿಂದ ಮಣ್ಣು ಕೆಂಪು ಬಣ್ಣದಲ್ಲಿ ಇರುತ್ತದೆ.
- ಮಳೆಯ ನೀರು ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ಭೂಮಿಯ ಆಳಕ್ಕೆ ಸಾಗಿಸಿರುವುದು.
- ಮೇಲ್ಪದರ ಮಣ್ಣಿನಲ್ಲಿ ನೀರಿನಲ್ಲಿ ಕರಗದ ಕಬ್ಬಿಣ ಆಕ್ಸೈಡ್ & ಅಲ್ಯುಮಿನಿಯಂಗಳು ಮಾತ್ರ ಕಂಡುಬರುತ್ತದೆ.
- ಇದರಲ್ಲಿ ಮಣ್ಣಿನಲ್ಲಿ ಫಲವತ್ತತೆ ಅತಿ ಕಡಿಮೆ ಹಾಗೂ ಸಾರಜನಕ & ಲವಣಗಳ ಕೊರತೆ.
- ಭಾರತದಲ್ಲಿ 2.84 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ.
- ಇದು ಪಶ್ಚಿಮಘಟ್ಟಗಳು, ವಿಂಧ್ಯಾ, ಸಾತ್ಪುರ & ರಾಜಮಹಲ್ ಬೆಟ್ಟಗಳು & ಪೂರ್ವಾಚಲ ಪ್ರದೇಶಗಳಲ್ಲಿ ಹರಡಿದೆ.
- ಇದು ಕಾಫಿ, ಟೀ ತೋಟಗಾರಿಕೆ ಬೆಳೆಗಳಿಗೆ ಸೂಕ್ತ.
- ಮರುಭೂಮಿ ಮಣ್ಣು:–
- ಅತಿ ಕಡಿಮೆ ಮಳೆ & ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ನಿರ್ಮಾಣ.
- ಇದು ಕೆಂಪು & ಕಂದು ಬಣ್ಣವನ್ನು ಹೊಂದಿದೆ.
- ಕಣಗಳ ನಡುವೆ ಅಧಿಕ ರಂಧ್ರತೆ ಇರುವುದರಿಂದ ನೀರು ನಿಲ್ಲದೆ ತೀವ್ರವಾಗಿ ಬಸಿದು ಹೋಗುತ್ತದೆ.
- ಬೇಗ ಆರ್ದ್ರತೆ ಕಡಿಮೆ ಆಗುತ್ತದೆ.
- ಭಾರತದಲ್ಲಿ ಇದು 1.4 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹರಡಿದೆ.
- ಇದು ಭಾರತದ ವಾಯುವ್ಯ ಭಾಗ, ರಾಜಸ್ತಾನ, ಪಂಜಾಬ್, ಹರಿಯಾಣ ರಾಜ್ಯಗಳು & ಪಶ್ಚಿಮ ಗುಜರಾತಿನ ಕಛ್ ಪ್ರದೇಶ, ಅರಾವಳಿ ಶ್ರೇಣಿಯ ಪಶ್ಚಿಮ ಭಾಗದಲ್ಲಿ ಹಂಚಿಕೆ.
- ಪರ್ವತ ಮಣ್ಣು:–
- ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿದೆ.
- ಪರ್ವತಗಳಲ್ಲಿ ನಿರ್ಮಾಣಗೊಂಡು ಇಳಿಝಾರಿನ ಮೈದಾನಕ್ಕೆ ಇಳಿದು ಬರುತ್ತದೆ.

- ಇದು ಸಾರಜನಕ & ಸಾವಯವ ಅವಶೇಷಗಳನ್ನು ಹೆಚ್ಚು ಹೊಂದಿದೆ.
- ಕಾಫಿ, ಚಹಾ, ಸಾಂಬಾರು ಪದಾರ್ಥಗಳು & ಹಣ್ಣುಗಳಿಗೆ ಸೂಕ್ತ.
- ಇದು ಹಿಮಾಲಯದ ಪಾದ ಬೆಟ್ಟಗಳು, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ, ಪರ್ವತ ಪ್ರದೇಶಗಳಲ್ಲಿ ಹಂಚಿಕೆ.
- ಮಣ್ಣಿನ ಸವೆತ:-
- ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನೇ 'ಮಣ್ಣಿನ ಸವೆತ' ಅಥವಾ ಭೂ ಸವೆತ' ಎನ್ನುವರು.
- ಭೂಸವೆತದ ಮುಖ್ಯ ಕರ್ತೃಗಳು:- ಹರಿಯುವ ನೀರು, ಗಾಳಿ, ಸಮುದ್ರ ಅಲೆ
- ಮಣ್ಣಿನ ಸವೆತಕ್ಕೆ ಕಾರಣಗಳು:-
- ಅರಣ್ಯಗಳ ನಾಶ
- ಹೆಚ್ಚು ಮೇಯಿಸುವುದು
- ಅವೈಜ್ಞಾನಿಕ ಬೇಸಾಯ
- ಅಧಿಕ ನೀರಾವರಿ ಬಳಕೆ
- ಮಣ್ಣಿನ ಸವೆತದ ಪರಿಣಾಮಗಳು:-
- ನದಿಗಳಲ್ಲಿ ಹೂಳತುಂಬಿ ಪ್ರವಾಹ ಉಂಟಾಗುತ್ತದೆ.
- ಇದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
- ಜಲಾಶಯ & ಕೆರೆಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆ
- ಭೂಮಿಯಲ್ಲಿ ಇಂದುವ ನೀರಿನ ಪ್ರಮಾಣ ಕಡಿಮೆ.
- ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.
- ವ್ಯವಸಾಯದ ಉತ್ಪಾದನೆ ಕಡಿಮೆಯಾಗುತ್ತದೆ.
- ಮಣ್ಣಿನ ಸಂರಕ್ಷಣೆ & ನಿರ್ವಹಣೆ:-
- ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದೇ "ಮಣ್ಣಿನ ಸಂರಕ್ಷಣೆ" ಎನ್ನುವರು.
- ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳು:-
- ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
- ಅಡ್ಡ ಬದುಗಳನ್ನು ನಿರ್ಮಿಸುವುದು.
- ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ
- ಅರಣ್ಯ ನಾಶವನ್ನು ತಡೆಗಟ್ಟುವುದು.
- ಅರಣ್ಯಗಳ ಬೆಳವಣಿಗೆ ಪ್ರೋತ್ಸಾಹಿಸುವುದು.
- ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು
- ನೀರಿನ ಯೋಜಿತ ಬಳಕೆ
- ಚೆಕ್ ಡ್ಯಾಮ್‌ಗಳ ನಿರ್ಮಾಣ
- ಭಾರತದ ಅರಣ್ಯಗಳು:-
- ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲಾ ಬಗೆಯ ಸಸ್ಯ ಸಮೂಹವನ್ನು ಅರಣ್ಯಗಳು ಅಥವಾ ಸ್ವಾಭಾವಿಕ ಸಸ್ಯವರ್ಗ ಎನ್ನುವರು.
- ಇವು ಉಷ್ಣಾಂಶ, ಮಳೆ, ಭೂಸ್ವರೂಪ, ಮಣ್ಣುಗಳಿಂದ ಪ್ರಭಾವಿತ.
- ಭಾರತವು 2009 ರ ಅಂದಾಜಿನಂತೆ 6.9 ಲಕ್ಷ ಚ.ಕಿ.ಮೀ ಅರಣ್ಯ
- ಭೌಗೋಳಿಕ ಕ್ಷೇತ್ರದ ಶೇ 21.02 ರಷ್ಟು ಭೂಬಾಗವು ಅರಣ್ಯದಿಂದ ಕೂಡಿದೆ.
- ಅರಣ್ಯಗಳ ಪ್ರಕಾರಗಳು:-
- ನಿತ್ಯ ಹರಿದ್ವರ್ಣದ ಅರಣ್ಯಗಳು
- ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳು
- ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು
- ಮ್ಯಾಂಗ್ರೋವ್ ಅರಣ್ಯಗಳು
- ಮರುಭೂಮಿ ಅರಣ್ಯಗಳು
- ಹಿಮಾಲಯದ ಅಲ್ಪೈನ್ಸ್ ಅರಣ್ಯಗಳು
- ನಿತ್ಯ ಹರಿದ್ವರ್ಣದ ಅರಣ್ಯಗಳು:-
- ಇವು 250 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ
- 900 ಮೀ.ಗಳಿಗಿಂತ ಕಡಿಮೆ ಎತ್ತರವನ್ನು ಹೊಂದಿರುವ ಪ್ರದೇಶಗಳಲ್ಲಿ ಕಾಣಬಹುದು.
- ಇವು ಪಶ್ಚಿಮಘಟ್ಟಗಳು, ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ತ್ರಿಪುರಾ, ಮಣಿಪುರ, ನಾಗಾಲ್ಯಾಂಡ್ & ಅಂಡಮಾನ್ ನಿಕೋಬಾರ್ & ಲಕ್ಷದ್ವೀಪಗಳಲ್ಲಿ ಹಂಚಿಕೆ.
- ಇವು ಭಾರತದಲ್ಲಿ 2.6 ಲಕ್ಷ ಹೇಕ್ಟರ್ ಪ್ರದೇಶದಲ್ಲಿ
- ಈ ಸಸ್ಯವರ್ಗವು ವರ್ಷವೆಲ್ಲಾ ಹಚ್ಚಾಹಸಿರಾಗಿರುವುದರಿಂದ ಇವುಗಳನ್ನು 'ನಿತ್ಯ ಹರಿದ್ವರ್ಣ ಅಥವಾ ಸದಾ ಹಸಿರಾಗಿರುವ ಅರಣ್ಯ' ಎನ್ನುವರು.
- ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳು:-
- ಇವು ಭಾರತದಲ್ಲಿ ಅತಿ ಹೆಚ್ಚು ಹರಡಿಕೊಂಡಿವೆ.
- ಇವು 75 ರಿಂದ 250 ಸೆಂ.ಮೀ ಮಳೆ ಪಡೆಯುವ ಪ್ರದೇಶಗಳಲ್ಲಿ ವಿಸ್ತರಿಸಿದೆ.
- ಭಾರತದ ಶೇ 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿದೆ.

RAMALINGAPPA L

- ಭಾರತವು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಇವು ವ್ಯಾಪಕವಾಗಿ ಹರಡಿವೆ.
- ಇವು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಯುದುರಿಸುವುದನ್ನು ರೂಡಿಸಿಕೊಂಡಿವೆ.
- ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು:–
- ಭಾರತದಲ್ಲಿ 60 ರಿಂದ 75 ಸೆಂ.ಮೀ ಮಳೆ ಬೀಳುವ ಪ್ರದೇಶಗಳಲ್ಲಿ ಕಂಡುಬರುತ್ತವೆ.
- ಇಲ್ಲಿ ಎತ್ತರವಾದ ಹುಲ್ಲು & ವಿರಳವಾಗಿ ಅಲ್ಲಲ್ಲಿ ಕುರುಚಲ ಜಾತಿಯ ಸಸ್ಯವರ್ಗಗಳನ್ನು ಕಾಣಬಹುದು.
- ಇವು ದಖನ್ ಪ್ರಸ್ಥಭೂಮಿಯ ಕೇಂದ್ರಭಾಗ, ಅರಾವಳಿ ಪರ್ವತಗಳ ಪಶ್ಚಿಮದ ಥಾರ್ ಮರುಭೂಮಿಯಲ್ಲಿ ಹಂಚಿಕೆ
- ಇಲ್ಲಿ ಬಬೂಲ್, ಶಿಷಮ್, ಸಭಾಯ್ ಹುಲ್ಲು ಬೆಳೆಯುತ್ತದೆ.
- ಮ್ಯಾಂಗ್ರೋವ್ ಅರಣ್ಯಗಳು:–
- ತೀರ ಪ್ರದೇಶಗಳ ತಗ್ಗುವಲಯದಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಿವೆ.
- ಇವು ನದಿ ಮುಖಜ ಭೂಮಿಗಳು & ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡುಬರುತ್ತವೆ.
- ಇವು ಗಂಗಾ, ಮಹಾನದಿ, ಗೋದಾವರಿ, ಕೃಷ್ಣಾನದಿ ಮುಖಜಭೂಮಿಯಲ್ಲಿ ಕಂಡುಬರುತ್ತವೆ.
- ಗಂಗಾನದಿಯ ಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೆಚ್ಚಾಗಿ ಇರುವುದರಿಂದ ಇದನ್ನು "ಸುಂದರಬನ್" ಎನ್ನುವರು.
- ಇವು ದೇಶದಲ್ಲಿ 4.4 ಸಾವಿರ ಚ.ಕಿ.ಮೀ ರಷ್ಟಿದೆ.
- ಮರುಭೂಮಿ ಅರಣ್ಯಗಳು:–
- ಇವು ವಾರ್ಷಿಕ 50 ಸೆ.ಮೀ ಗಿಂತಲೂ ಕಡಿಮೆ ಮಳೆ ಭೀಳುವ ಪ್ರದೇಶಗಳಲ್ಲಿ ಕಂಡುಬರುತ್ತವೆ.
- ಇವು ರಾಜಸ್ತಾನದ ಥಾರ್ ಮರುಭೂಮಿ, ಪಂಜಾಬ್, ಹರಿಯಾಣ, ಗುಜರಾತ್ ರಾಜ್ಯಗಳ ಭಾಗಗಳಲ್ಲಿ ಕಂಡುಬರುತ್ತವೆ.
- ಇವು ಆಳವಾಗಿ ಬೇರುಗಳನ್ನು ಹೊಂದಿದ್ದು ಕುರುಚಲ ಜಾತಿಯ ಸಸ್ಯವರ್ಗಗಳು ಮುಳ್ಳು ಕಂಟಿಗಳಿಂದ ಕೂಡಿವೆ.
- ಹಿಮಾಲಯದ ಅಲ್ಪೈನ್ ಅರಣ್ಯಗಳು:–
- ಹಿಮಾಲಯ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡುಬರುತ್ತವೆ.
- ಎತ್ತರವು ಹೆಚ್ಚಿದಂತೆ ಉಷ್ಣವಲಯದ ಧ್ರುವ ಪ್ರದೇಶಗಳವರೆಗಿನ ವಾಯುಗುಣವನ್ನು ಈ ಪರ್ವತಗಳಲ್ಲಿ ಕಾಣಬಹುದು
- ಇಲ್ಲಿ ಬೆಳೆಯುವ ಮರಗಳು:– ಸಾಲ್, ಬೈರಾ, ಟೂನ್, ಸಿಲ್ವರ್, ಸ್ಪ್ರೂಸ್, ಲಾರೆಲ್
- ಇಲ್ಲಿ ಎಲೆ ಮೊನಚಾದ ಅರಣ್ಯಗಳು ಪ್ರಧಾನವಾಗಿ ಬೆಳೆದಿವೆ.
- ಅರಣ್ಯಗಳ ಹಂಚಿಕೆ:–
- ಒಂದು ಪ್ರದೇಶ ಅನುಕೂಲಕರ ಪರಿಸರ ಹೊಂದಲು ಶೇ. 33 ರಷ್ಟು ಅರಣ್ಯ ಕ್ಷೇತ್ರ ಹೊಂದಿರಬೇಕು
- ಭಾರತವು ಕಡಿಮೆ ವಿಸ್ತೀರ್ಣದ ಅರಣ್ಯ ಹೊಂದಿದೆ.
- ಮಧ್ಯಪ್ರದೇಶವು ಅತಿ ಹೆಚ್ಚು ಅರಣ್ಯ ಹೊಂದಿದೆ ರಾಜ್ಯ.
- ಹರಿಯಾಣ ರಾಜು ಕಡಿಮೆ ಅರಣ್ಯ ಹೊಂದಿರುವ ರಾಜ್ಯ
- ಕರ್ನಾಟಕವು 13ನೇ ಸ್ಥಾನವನ್ನು ಹೊಂದಿದೆ.
- ಅರಣ್ಯಗಳ ಸಂರಕ್ಷಣೆ:–
- ಅರಣ್ಯಗಳನ್ನು ಮಾನವ, ಪ್ರಾಣಿಗಳಿಂದ ಹಾಗೂ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವುದನ್ನೇ 'ಸಂರಕ್ಷಣೆ' ಎನ್ನುವರು.
- ಅರಣ್ಯನಾಶಕ್ಕೆ ಕಾರಣಗಳು:–
- ವ್ಯವಸಾಯದ ವಿಸ್ತರಣೆ
- ಹೈನುಗಾರಿಕೆ
- ರಸ್ತೆಗಳು
- ರೈಲಮಾರ್ಗಗಳ ನಿರ್ಮಾಣ
- ನೀರಾವರಿ ಯೋಜನೆಗಳ ನಿರ್ಮಾಣ
- ಕಾಡ್ಗಿಚ್ಚು
- ಗಣಿಗಾರಿಕೆ
- ಅರಣ್ಯ ಸಂರಕ್ಷಣಾ ವಿಧಾನಗಳು:–
- ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
- ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು
- ಸಸಿಗಳನ್ನು ನೆಡುವುದು.
- ಬೀಜಗಳನ್ನು ಹರಡುವುದು.
- ಕಾನೂನು ಬಾಹಿರವಾಗಿ ಮರ ಕಡಿಯುವದನ್ನು ನಿಯಂತ್ರಿಸುವುದು
- ಸಾಕು ಪ್ರಾಣಿಗಳ ಮೇಯಿಸುವುದನ್ನು ನಿಯಂತ್ರಿಸುವುದು.
- ಸಾರ್ವಜನಿಕರಲ್ಲಿ ಮರ ನೆಡಲು ಪ್ರೋತ್ಸಾಹಿಸುವುದು.
- ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡುವುದ.
- ಸಾಮಾಜಿಕ ಅರಣ್ಯ ಯೋಜನೆಯನ್ನು ಕಾರ್ಯಗತಗೊಳಿಸುವುದು.
- ವನ್ಯ ಜೀವಿ ಧಾಮಗಳು:–

RAMALINGAPPA L

- ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳದಲ್ಲಿಯೇ ಸಂರಕ್ಷಿಸಲು ವನ್ಯಜೀವಿ ಧಾಮಗಳನ್ನು ನಿರ್ಮಿಸಿವೆ.
- ಭಾರತದಲ್ಲಿ ಒಟ್ಟು 523 ವನ್ಯಜೀವಿ ಧಾಮಗಳೀವೆ
- ಅವು
- ತಮಿಳುನಾಡು:– ಅಣ್ಣಾಮಲೈ ವನ್ಯ ಜೀವಿಧಾಮ, ಕೊಯಿಮತ್ತೂರು, ನೀಲಗಿರಿ
- ಪಶ್ಚಿಮ ಬಂಗಾಳ:– ಮದಾರಿಹಾತ್, ಜಾಲ್ದಾಪಾರ
- ರಾಜಸ್ತಾನ:– ಭರತಪುರ, ಕಿವೋಲ ಡಿವೊ ಪಕ್ಷಿಧಾಮ
- ಹರಿಯಾಣ:– ಸುಲ್ತಾನಪೂರ, ಗುರೆಗಾಂವ
- ಪಂಜಾಬ್:– ಬೀರ್‌ಮೊತಿಬಾಗ್, ಪಟಿಯಾಲ
- ಆಂಧ್ರಪ್ರದೇಶ:– ಗುಂಟೂರು, ನಾಗಾರ್ಜುನ ಸಾಗರ
- ರಾಷ್ಟ್ರೀಯ ಉದ್ಯಾನವನಗಳು:–
- ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟರೀಯ ಉದ್ಯಾನವನ:– ಉತ್ತರಾಂಚಲದ ಜಿಮ್ ಕಾರ್ಬೆಟ್
- ಕಾಜಿರಂಗ ನ್ಯಾಷನಲ್ ಪಾರ್ಕ್, ಸಿಬ್‌ಸಾಗರ್ (ಅಸ್ಸಾಂ)
- ಸುಂದರಬನ, 24 ಪರಗಣ ಜಿಲ್ಲೆ (ಪ.ಬಂಗಾಳ)
- ಹಜಾರಿಭಾಗ ನ್ಯಾಷನಲ್ ಪಾರ್ಕ್ (ಬಿಹಾರ್)
- ಗಿರ್ ನ್ಯಾಷನಲ್ ಪಾರ್ಕ್ ಜಗನ್ನಾಥ (ಗುಜರಾತ್)
- ಕನ್ಹಾ ರಾಷ್ಟರೀಯ ಉದ್ಯಾನವನ, ಮಾಂಡ್ಯ & ಬಾಲಘಾಟ್ (ಮಧ್ಯಪ್ರದೇಶ)
- ತಾಂಡೋವಾ ರಾಷ್ಟ್ರೀಯ ಉದ್ಯಾನವನ, ಚಂದ್ರಾಪೂರ (ಮಹಾರಾಷ್ಟ್ರ)
- ಜೈವಿಕ ಸಂರಕ್ಷಣಾ ವಲಯಗಳು:–
- ಭಾರತದಲ್ಲಿ 18 ಜೈವಿಕ ವಲಯಗಳನ್ನು ಸಂರಕ್ಷಿಸಿದೆ.
- ಪ್ರಮುಖವಾಗಿ:–
- ನೀಲಗಿರಿ, ನಂದಾದೇವಿ, ನೀಕ್‌ಕ್, ಗ್ರೇಟ್‌ನಿಕೊಬಾರ್, ಮನ್ನಾರ್ ಅಖಾತ, ಮಣಾಸ್ ಸುಂದರಬನ, ಸಿಮಿಲಿಪಾಲ್, ಕಾಂಚನಗಂಗಾ, ಅಮರಕಂಟಕ, ಶೀತ ಮರುಭೂಮಿ(ಹಿಮಾಚಲ ಪ್ರದೇಶ) ಪನ್ನಾ, ಶೇಷಾಚಲಂ ನೀಲಗಿರಿ ಸಂರಕ್ಷಣಾ ವಲಯವು ದೇಶದಲ್ಲಿ ಪ್ರಥಮವಾಗಿದೆ.
- ಭಾರತದ ಜಲ ಸಂಪನ್ಮೂಲಗಳು:–
- ನೀರು ಒಂದು ನೈಸರ್ಗಿಕ ಸಂಪನ್ಮೂಲ
- ಮಾನವನ ಮೂಲ ಬೇಡಿಕೆ ಹಾಗೂ ರಾಷ್ಟ್ರದ ಸಂಪತ್ತು.
- ಬಳಕೆಯ ಉದ್ದೇಶ:–
- ನೀರಾವರಿ
- ಜಲವಿದ್ಯುತ್ ಶಕ್ತಿ ಉತ್ಪದನೆ
- ಕೈಗಾರಿಕೆ
- ಗೃಹ ಬಳಕೆ
- ಜಲಸಾರಿಗೆ
- ಮೀನುಗಾರಿಕೆ
- ಮನರಂಜನಾ ಉದ್ದೇಶ
- ಭೂಮಿಯ ಮೇಲಿನ ನೀರಿನ ಮೂಲಗಳು:–
- ನದಿಗಳು
- ಸರೋವರಗಳು
- ಅಂತರ್ಜಲದ ನೀರಿನ ಮೂಲ:–
- ಬಾವಿ
- ಒಲುಮೆಗಳು
- ನೀರಿನ ಲಭ್ಯತೆ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.
- ಭಾರತದಲ್ಲಿ ಮಳೆಯು ಅನಿಶ್ಚಿತ, ಅಸಮಾನ ಹಾಗೂ ನಿಯತಕಾಲಿಕ ಆದ್ದರಿಂದ ವ್ಯವಸಾಯ ಮಾಡಲು ಕಾಲುವೆ, ಕೆರೆ, ನೀರಾವರಿ ಅವಲಂಬಿಸಿದೆ.
- ನೀರಾವರಿ ಎಂದರೆ, "ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ & ಕೆರೆಗಳಿಂದ ನೀರು ಸರಬುರಾಜು ಮಾಡುವುದು"
- ವ್ಯವಸಾಯ ಪ್ರಧಾನವಾಗಿರುವ ಪ್ರದೇಶಗಳಿಗೆ
- ಕಡಿಮೆ ಮಳೆ ಬೀಳುವ ಪ್ರದೇಶಗಳಿಗೆ ಅಗತ್ಯ.
- ನೀರಾವರಿ ವ್ಯವಸಾಯ ಪದ್ಧತಿ ಕೃಷಿಯ ಇತಿಹಾಸದಲ್ಲಿ ಮಹತ್ವ ಸಾಧನೆ.
- 140 ದಶಲಕ್ಷ ಹೇಕ್ಟರ್ ಪ್ರದೇಶಕ್ಕೆ ನೀರಾವರಿ ಒದಗಿಸಬಹುದು.
- ಆದರೆ ಅಭಿವೃದ್ಧಿ ಪಡಿಸಿರುವ ನಿವ್ವಳ ನೀರಾವರಿ ಕ್ಷೇತ್ರ 62.2 ದಶಲಕ್ಷ ಹೇಕ್ಟರ್‌ಗೆ ಮಾತ್ರ.
- ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ನೀರಾವರಿ ಕ್ಷೇತ್ರವನ್ನು ಹೊಂದಿದೆ.
- ನೀರಾವರಿಯ ವಿಧಗಳು:–
- ವಿವಿಧ ನೀರಾವರಿ ಪದ್ಧತಿಗಳಿರಲು ಕಾರಣ:–
- ನೀರಾವರಿಯ ಪ್ರಮಾಣ
- ಮಳೆಯ ಹಂಚಿಕೆ

RAMALINGAPPA L

- ಮೇಲ್ಮೈಲಕ್ಷಣ
- ಬೆಳೆಯುವ ಬೆಳೆಗಳು
- ರೂಢಿಯಲ್ಲಿರುವ ವ್ಯವಸಾಯ ಪದ್ಧತಿಗಳು
- ನೀರಾವರಿಯ ವಿಧಗಳು:–
- ಬಾವಿ ನೀರಾವರಿ
- ಕಾಲುವೆ ನೀರಾವರಿ
- ಕೆರೆ ನೀರಾವರಿ
- ಬಾವಿ ನೀರಾವರಿ:–
- ಇದು ಭಾರತದ ಪ್ರಮುಖ ನೀರಾವರಿಯ ಮೂಲ
- ಅತಿ ಹೆಚ್ಚು ಕೃಷಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ ವಿಧಾನ
- ಬಾವಿಗಳನ್ನು ತೋಡಿ ತನ್ಮೂಲಕ ಭೂ ಅಂತರ್ಜಲವನ್ನು ಹೊರತೆಗೆದು ಕೃಷಿಗೆ ಬಳಸುವುದೇ 'ಬಾವಿ ನೀರಾವರಿ'
- ಇದು ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಉಪಯುಕ್ತ.
- ಇದರ ನಿರ್ಮಾಣ & ನಿರ್ವಹಣೆ ಸುಲಭ
- ಕೆರೆ & ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಅವಶ್ಯಕ
- ಬಾವಿಗಳಲ್ಲಿ ಎರಡು ಪ್ರಕಾರಗಳು:–
- ತೆರೆದ ಬಾವಿ
- ಕೊಳವೆ ಬಾವಿ
- ತೆರದ ಬಾವಿ:–
- ಇದನ್ನು ಕೃಷಿ ಭೂಂಇಯ ಸೂಕ್ತ ಸ್ಥಳದಲ್ಲಿ ತೋಡಲಾಗುವುದು.
- ಇಲ್ಲಿ ನೀರನ್ನು ಮಾನವನ ದೈಹಿಕ ಬಲ, ಪ್ರಾಣಿಗಳಿಂದ ಅಥವಾ ಯಂತ್ರಗಳ ಸಹಾಯದಿಂದ ಮೇಲೆತ್ತಿ ಬಳಕೆ.
- ಇತ್ತೀಚಿಗೆ ಡೀಸೆಲ್ & ವಿದ್ಯುತ್ ಚಾಲಿತ ಯಂತ್ರ ಬಳಕೆ
- ಕೊಳವೆ ಬಾವಿ:–
- ಇಂದು ಇದರ ಪಾತ್ರ ಅತಿ ಪ್ರಧಾನ
- ಒಟ್ಟು ಬಾವಿ ನೀರಾವರಿ ಕ್ಷೇತ್ರದ ಶೇ 59.7 ರಷ್ಟು
- ದೇಶದ ಒಟ್ಟು ನೀರಾವರಿ ಕ್ಷೇತ್ರ ಶೇ. 33.7 ರಷ್ಟು ಕೊಳವೆ ಬಾವಿ ನೀರಾವರಿಗೆ ಒಳಪಟ್ಟಿದೆ.
- ಕಾಲುವೆ ನೀರಾವರಿ:–
- ಇದು ಪ್ರಮುಖವಾದುದು.
- ಕಾಲುವೆ ನೀರಾವರಿ ಹೊಂದಿದ ದೇಶಗಳಲ್ಲಿ ಭಾರತವು ಒಂದು.
- ವಿಸ್ತಾರವಾದ ಸಾಗುವಳಿ ಭೂಮಿಗೆ ಇದನ್ನು ಒದಗಿಸಲಾಗುತ್ತದೆ.
- ಸು 16.5 ದಶಲಕ್ಷ ಹೆಕ್ಟೇರ್ ಪ್ರದೇಶವು ಕಾಲುವೆ ನೀರಾವರಿ ಕ್ಷೇತ್ರ ಹೊಂದಿದೆ.
- ಇದು ಬಾವಿಯ ನಂತರ ಎರಡನೆ ನೀರಾವರಿಯ ಮೂಲ
- ಎರಡು ಪ್ರಕಾರಗಳು:–
- ಪ್ರವಾಹ ಕಾಲುವೆ
- ಸರ್ವಕಾಲಿಕ ಕಾಲುವೆ
- ಪ್ರವಾಹ ಕಾಲುವೆಗಳು:–
- ಯಾವುದೇ ರೀತಿಯ ಅಣೆಕಟ್ಟುಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು.
- ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳು ಮೂಲಕ ನೀರು ಹರಿಯುವುದು
- ಸಾರ್ವಕಾಲಿಕ ಕಾಲುವೆಗಳು:–
- ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ, ನೀರನ್ನು ಸಂಗ್ರಹಿಸಿ, ಕೃಷಿ ಭೂಂಇಗೆ ನೀರನ್ನೊದಗಿಸಲು ತೋಡುವ ಕಾಲುವೆಗಳಿಗೆ 'ಸಾರ್ವಕಾಲಿಕ ಕಾಲುವೆಗಳು' ಎನ್ನುವರು.
- ಇವು ಉತ್ತರಪ್ರದೇಶ, ಆಂಧ್ರಪ್ರದೇಶ, ಮಧ್ಯಪ್ರದೇಶ, ಪಂಜಾಬ್, ರಾಜಸ್ತಾನ, ಹರಿಯಾಣ, ಬಿಹಾರ ರಾಜ್ಯಗಳಲ್ಲಿ ಹರಡಿದೆ.
- ಕೆರೆ ನೀರಾವರಿ:–
- ಭಾರತದಲ್ಲಿ ಪುರಾತನ ಕಾಲದಿಂದ ರೂಢಿಯಲ್ಲಿದೆ.
- ಝರಿ, ತೊರೆ & ಹಳ್ಳಗಳು ಹರಿಯುವ ಇಳಿಜಾರಿಗೆ ಅಡ್ಡಲಾಗಿ ಒಡ್ಡುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವುದೇ "ಕೆರೆಗಳು" ಎನ್ನವುರು.
- ಇವನ್ನು ತೂಬಗಳು & ಚಿಕ್ಕ ಕಾಲುವೆಗಳ ಮೂಲಕ ಸರಬರಾಜು
- ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಕರ್ನಾಟಕಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- ಅಲ್ಲದೆ ಮಧ್ಯಪ್ರದೇಶ, ರಾಜಸ್ತಾನ, ಜಾರ್ಖಂಡ್, ಉತ್ತರಪ್ರದೇಶಗಳಲ್ಲಿ ಕಾಣಬಹುದು.
- ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು:–
- ನದಿ ಕಣೀವೆ ಯೋಜನೆ, ನದಿ–ಉಪನದಿಗಳಿಗೆ ಅಣೆಕಟ್ಟು ಕಟ್ಟಿ, ವ್ಯವಸಾಯದ ಜೊತೆಗೆ ಇನ್ನಿತರ ಉದ್ದೇಶಗಳಿಗೆ ಬಳಕೆ ಮಾಡುವುದು.
- ಉದ್ದೇಶಗಳು:–
- ನೀರಾವರಿ ಸೌಲಭ್ಯ
- ಜಲವಿದ್ಯುಚ್ಛಕ್ತಿ ಉತ್ಪಾದನೆ



RAMALINGAPPA L

- ನದಿಗಳ ಪ್ರವಾಹ ನಿಯಂತ್ರಣ
- ನೌಕಾಯಾನದ ಸೌಲಭ್ಯ ಒದಗಿಸುವುದು
- ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು
- ಮಣ್ಣಿನ ಸವಕಳಿಯನ್ನು ನಿಯಂತ್ರಿಸಲು
- ಮೀನುಗಾರಿಕೆ ಅಭಿವೃದ್ಧಿ
- ಅರಣ್ಯ ಸಂಪತ್ತನ್ನು ವೃದ್ಧಿಸುವುದು.
- ಪ್ರಮುಖ ವಿವಿದೋದ್ದೇಶ ಕಣಿವೆ ಯೋಜನೆಗಳು:–
- ದಾಮೋದರ ನದಿ ಕಣೀವೆ ಯೋಜನೆ:–
- ಇದು ಸ್ವಾತಂತ್ರ್ಯ ಭಾರತದ ಮೊದಲ ಯೋಜನೆ.
- ಇದು ಬಿಹಾರ & ಪಶ್ಚಿಮ ಬಂಗಾಳ ರಾಜ್ಯಗಳ ಜಂಟಿ ಯೋಜನೆ
- ಈ ನದಿಯು ಪಶ್ಚಿಮ ಬಂಗಾಳದಲ್ಲಿ ಪ್ರವಾಹಗಳಿಂದ ಅಪಾರ ಹಾನಿಯನ್ನುಂಟು ಮಾಡುತ್ತಿದ್ದು ಇದನ್ನು ಪಶ್ಚಿಮ ಬಂಗಾಳದ 'ಕಣ್ಣೀರಿನ ನದಿ' ಎನ್ನುವರು.
- ಇದು 2495 ಕಿ.ಮೀ ಉದ್ದದ ಕಾಲುವೆಗಳ ಜಾಲವನ್ನು ಹೊಂದಿದೆ
- 4.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ.
- ತಿಲೈಯಾ, ಮೈಥಾನ್, ಕೊನಾರ್ & ಪಂಚೆಟ್ ಹಿಲ್‌ಗಳಲ್ಲಿ ನಿರ್ಮಿಸಲಾಗಿದೆ.
- ಬೊಕಾರೋ, ಚಂದ್ರಾಪುರ & ದುರ್ಗಾಪುರಗಳಲ್ಲಿ ಶಾಖೋತ್ಪನ್ನ ವಿದ್ಯುದಾಗಾರಗಳನ್ನು ನಿರ್ಮಿಸಿದೆ.
- ಇದು ಜಾರ್ಖಂಡ್ & ಪಶ್ಚಿಮ ಬಂಗಾಳ ರಾಜ್ಯಗಳು ಉಪಯೋಗ ಪಡೆದಿವೆ.
- ಭಾಕ್ರಾ ನಂಗಲ್ ಯೋಜನೆ:–
- ಇದು ಭಾರತಲ್ಲಿಯೇ ಅತ್ಯಂತ ಎತ್ತರವಾದ & ಪ್ರಮು ಖ ಯೋಜನೆ
- ಇದು ಪಂಜಾಬ್, ಹರಿಯಾಣ, ರಾಜಸ್ತಾನಗಳ ಸಂಯುಕ್ತ ಯೋಜನೆ
- ಹಿಮಾಚಲ ಪ್ರದೇಶದ ಭಾಕ್ರಾ & ನಂಗಲ್ ಎಂಬಲ್ಲಿ 'ಸಟ್ಲೆಜ್ ನದಿ' ಗೆ ಅಣೆಕಟ್ಟು ಕಟ್ಟಲಾಗಿದೆ.
- ಭಾಕ್ರಾ ಅಣೆಕಟ್ಟು ಏಷ್ಯಾದಲ್ಲಿಯೇ ಅತ್ಯಂತ ಎತ್ತರವಾದ (226 ಮೀ) ಅಣೆಕಟ್ಟು.
- ಇದು 3402 ಕಿ.ಮೀ ಉದ್ದದ ಕಾಲುವೆಗಳ ಜಾಲವನ್ನು ಹೊಂದಿದೆ
- 14.6 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಹೊಂದಿದೆ.
- ದೆಹಲಿ, ಹಿಮಾಚಲ ಪ್ರದೇಶಗಳು ನೀರಾವರಿ & ಜಲ ವಿದ್ಯುತ್ ಸೌಲಭ್ಯ.
- ಇದರ ಜಲಾಶಯವನ್ನು "ಗೋವಿಂದ ಸಾಗರ" ಎನ್ನುವರು.
- ಕೋಸಿ ಯೋಜನೆ:–
- ಇದರ ಮುಖ್ಯ ಉದ್ದೇಶ:– ಪ್ರವಾಹ ನಿಯಂತ್ರಣ
- ಕೋಸಿ ನದಿಯನ್ನು 'ಬಿಹಾರಿನ ಕಣ್ಣೀರಿನ ನದಿ' ಎನ್ನುವರು.
- ಇದು ಭಾರತ & ನೇಪಾಳಗಳ ಜಂಟಿ ಯೋಜನೆ
- ಭಾರತ & ನೇಪಾಳ ಗಡಿಯಲ್ಲಿ ಬರುವ 'ಹನುಮಾನ ನಗರ' ಎಂಬಲ್ಲಿ ಕೋಸಿನದಿಗೆ ಅಣೆಕಟ್ಟು ನಿರ್ಮಾಣ.
- ಇದು 8.75 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ
- ಇಲ್ಲಿ ಉತ್ಪಾದಿಸುವ ಶೇ 50 ರಷ್ಟು ಜಲ ವಿದ್ಯುತ್ ಶಕ್ತಿಯನ್ನು ನೇಪಾಳಕ್ಕೆ ಒದಗಿಸಲಾಗುತ್ತದೆ.
- ಹಿರಾಕುಡ್ ಯೋಜನೆ:–
- ಒರಿಸ್ಸಾದ ಸಾಂಬಾಲಪುರ ಜಿಲ್ಲೆಯಿಂದ 10 ಕಿ.ಮೀ ದೂರದ ಮಹಾನದಿಗೆ ಅಣೆಕಟ್ಟು ಕಟ್ಟಿದೆ.
- ಈ ನದಿಯನ್ನು 'ಒರಿಸ್ಸಾದ ಕಣ್ಣೀರಿನ ನದಿ' ಎನ್ನುವರು.
- ಇದು 4801 ಮೀ ಉದ್ದವಾಗಿದ್ದು, ಭಾರತದಲ್ಲಿಯೇ ಅತ್ಯಂತ ಉದ್ದವಾದ ಅಣೆಕಟ್ಟು.
- ಇದು 2.54 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ.
- ಇದರಿಂದ ಒರಿಸ್ಸಾ, ಬಿಹಾರ, ಛತ್ತಿಸಘಡ ರಾಜ್ಯಗಳು ನೀರಾವರಿ & ಜಲವಿದ್ಯುಚ್ಛಕ್ತಿ ಸೌಲಭ್ಯ ಪಡೆದಿವೆ.
- ತುಂಗಭದ್ರಾ ಯೋಜನೆ:–
- ಇದರ ಮುಖ್ಯ ಉದ್ದೇಶ:– ನೀರಾವರಿ & ಜಲವಿದ್ಯುಚ್ಛಕ್ತಿ ಉತ್ಪಾದನೆ
- ಇದು ಕರ್ನಾಟಕ & ಆಂಧ್ರಪ್ರದೇಶಗಳ ಜಂಟಿ ಯೋಜನೆ.
- ಇದನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿ ಮಲ್ಲಾಪುರ ಎಂಬಲ್ಲಿ ತುಂಗಭದ್ರಾ ನದಿಗೆ ನಿರ್ಮಿಸಲಾಗಿದೆ.
- ಇದನ್ನು ಪಂಪಸಾಗರ ಎಂದು ಕರೆಯುತ್ತಾರೆ.
- 5.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಒದಗಿಸಿದೆ.
- ನಾಗಾರ್ಜುನ ಸಾಗರ ಯೋಜನೆ:–
- ಆಂಧ್ರಪ್ರದೇಶದ ನಂದಿಕೊಂಡ ಗ್ರಾಮದ ಬಳಿ ಕೃಷ್ಣಾನದಿಗೆ ಅಣೆಕಟ್ಟು ನಿರ್ಮಿಸಲಾಗಿದೆ.
- ಉದ್ದೇಶ:– ನೀರಾವರಿ & ಜಲವಿದ್ಯುಚ್ಛಕ್ತಿ
- 8.30 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ.
- ಕೃಷ್ಣಾ ಮೇಲ್ದಂಡೆ ಯೋಜನೆ:–

RAMALINGAPPA L

- ಇದು ಕರ್ನಾಟಕದ ಅತಿ ದೊಡ್ಡ ಯೋಜನೆ.
- ವಿಜಾಪುರ, ಬಾಗಲಕೋಟೆ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಯೋಜನೆ
- ಇದನ್ನು ಬಿಜಾಪುರ ಜಿಲ್ಲೆಯ ಆಲಮಟ್ಟಿ ಬಳಿ ಕೃಷ್ಣಾ ನದಿಗೆ ಅಣೆಕಟ್ಟು ನಿರ್ಮಾಣ.
- ಇದನ್ನು ಲಾಲ್‌ಬಹದ್ದೂರ್ ಶಾಸ್ತ್ರಿ ಜಲಾಶಯ ನಿರ್ಮಿಸಿದೆ.
- ನಾರಾಯಣಪುರ ಬಳಿ ಮತ್ತೊಂದು ಅಣೆಕಟ್ಟು ನಿರ್ಮಾಣ.
- ಇದರ ಹೆಸರು 'ಬಸವಸಾಗರ'
- ಒಟ್ಟು 6.47 ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಸೌಲಭ್ಯ ಹಾಗೂ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ.
- ನರ್ಮಾದಾ ಕಣಿವೆ ಯೋಜನೆ:–
- ಇದು ಆರಂಭದಿಂದ ವಿವಾದಗಳನ್ನು ಎದುರಿಸುತ್ತದೆ.
- ನರ್ಮಾದ ನದಿ ನೀರಿನ ವಿವಾದದ ಪ್ರಾಧಿಖಾರ ನೇಮಿಸಿದೆ.
- ಇದನ್ನು ಮಧ್ಯಪ್ರದೇಶ & ಗುಜರಾತ್ ರಾಜ್ಯಗಳ ನಡುವೆ.
- ಒಟ್ಟು 23 ಅಣೆಕಟ್ಟುಗಳನ್ನು ನಿರ್ಮಿಸಿದೆ.
- ಇದರಲ್ಲಿ ಸರದಾರ ಸರೋವರ, ನರ್ಮದಾ ಸಾಗರ & ನರ್ಮದಾ ಮೇಲ್ದಂಡೆ ಯೋಜನೆಗಳು ಪ್ರಮುಖವಾಗಿವೆ.
- ಇದರಿಂದ ಉತ್ತರ ಗುಜರಾತ್, ರಾಜಸ್ತಾನ & ಮಹಾರಾಷ್ಟ್ರಗಳಿಗೆ ನೀರಾವರಿ & ವಿದ್ಯುಚ್ಛಕ್ತಿ ಸೌಲಭ್ಯ.
- ಭಾರತದ ಪ್ರಮುಖ ಜಲವಿದ್ಯುಚ್ಛಕ್ತಿ ಯೋಜನೆಗಳು:–
- ವಿದ್ಯುತ್ತಿನ ಮೂಲಗಳಲ್ಲಿ ಎರಡನೆ ಸ್ಥಾನವನ್ನು ಹೊಂದಿದೆ.
- 2011ರ ಪ್ರಕಾರ ಒಟ್ಟು ವಿದ್ಯುತ್ತಿನ ಶೇ 13.9 ರಷ್ಟು ಹೊಂದಿದೆ.
- ಭಾರತವು 410 ಬಿಲಿಯನ್ ಕಿಲೋವ್ಯಾಟ್ ಜಲವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೊಂದಿದೆ.
- ಪ್ರಸ್ತುತ ಜಲವಿದ್ಯುತ್ತಿ ಉತ್ಪಾದನೆ 106.68 ಬಿಲಿಯನ್ ಕಿಲೋವ್ಯಾಟ್‌ಗಳಷ್ಟಿದೆ.
- ಜಲವಿದ್ಯುತ್ ಉತ್ಪಾದನಾ ಕೇಂದ್ರಗಳು:–
- ಕರ್ನಾಟಕ:– ಶಿವನಸಮುದ್ರ, ತುಂಗಭದ್ರಾ, ಜೋಗ, ಭದ್ರಾ, ಆಲಮಟ್ಟಿ, ಕಾಳಿ (ಸೂಪಾ)
- ಆಂಧ್ರಪ್ರದೇಶ:– ನಾಗಾರ್ಜುನ ಸಾಗರ, ಶ್ರೀಶೈಲಂ ಯೋಜನೆ, ರಾಮಪಾದ ಸಾಗರ ಯೋಜನೆ, ಸೀಲೇರು ಯೋಜನೆ.
- ತಮಿಳುನಾಡು:– ಮೆಟ್ಟೂರು ಯೋಜನೆ, ಪೈಕಾರ ವಿದ್ಯುತ್ ಯೋಜನೆ, ಪೆರಿಯಾರ್ ಯೋಜನೆ, ಕುಂದ್ಹಾ ಯೋಜನೆ, ಮೋಯಾರ ಯೋಜನೆ, ಕೋಡಯಾರ ಯೋಜನೆ.
- ಮಧ್ಯಪ್ರದೇಶ:– ಬನ್‌ಸಾಗರ, ಗಾಂಧೀ ಸಾಗರ, ಪಂಚಯೋಜನೆ.
- ಮಹಾರಾಷ್ಟ್ರ:– ಟಾಟಾ ಜಲವಿದ್ಯುತ್ ಯೋಜನೆ, ಬೀರಾ ಯೋಜನೆ, ವೈತರಣಾ ಯೋಜನೆ, ಕೊಯ್ನಾ ಯೋಜನೆ.
- ಒರಿಸ್ಸಾ:– ಹಿರಾಕುಡ್ ಯೋಜನೆ, ಕೋಲಾಜ ಯೋಜನೆ, ರಂಗಾಲಿ ಯೋಜನೆ, ನಾರಾಜ ಯೋಜನೆ
- ಬಿಹಾರ:– ಕೋಸಿ ಯೋಜನೆ, ಸುವರ್ಣ ರೇಖಾ ಯೋಜನೆ, ತಾವಾ ಯೋಜನೆ.
- ಗುಜರಾತ್:– ಕಕ್ರಪಾರ ಯೋಜನೆ, ಕಾಡನ ಯೋಜನೆ, ಉಕೈಯೋಜನೆ.
- ರಾಷ್ಟ್ರೀಯ ವಿದ್ಯುತ್ ಜಾಲ:–
- ಎಲ್ಲಾ ರಾಜ್ಯಗಳು ವರ್ಷದ ಎಲ್ಲಾ ಅವಧಿಯಲ್ಲಿ ಸಾಕಷ್ಟು ವಿದ್ಯುತ್ತಿನ ಪೂರೈಕೆ ಹೊಂದಿರುವುದಿಲ್ಲ.
- ಹೆಚ್ಚುವರಿ ವಿದ್ಯುತ್ತನ್ನು ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲು 'ರಾಷ್ಟ್ರೀಯ ವಿದ್ಯುತ್ ಜಾಲ'ವನ್ನು ನಿರ್ಮಿಸಿದೆ.
- ಮಳೆಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ:–
- ಭಾರತವು ಅಪಾರ ಜಲಸಂಪತ್ತನ್ನು ಹೊಂದಿದ್ದರೂ ಹಂಚಿಕೆಯಲ್ಲಿ ತಾರತಮ್ಯಗಳಿಂದ ಕೂಡಿದೆ.
- ಮಳೆಯ ಅವಧಿಯು ಕಡಿಮೆಯಿದೆ.
- ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತದೆ.
- ದೇಶದಲ್ಲಿ ಕಂಡು ಬರುತ್ತಿರುವ ಜಲಕ್ಷಾಮದ ಪರಿಹಾರಕ್ಕೆ ಸರಳ ಮಾರ್ಗವೆಂದರೆ ಮಳೆಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆ
- ಮಳೆಯ ನೀರನ್ನು ಸಂಗ್ರಹಿಸಿ ಬಳಕೆ ಮಾಡುವುದನ್ನೇ 'ಮಳೆಕೊಯ್ಲು' ಎನ್ನುವರು.
- ಇದರಲ್ಲಿ ಎರಡು ವಿಧಗಳು:–
- ಮಳೆಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು.
- ಉದಾ:– ಮನೆಯ ಮೇಲ್ಛಾವಣೆಯಿಂದ
- ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು
- ಉದಾ:– ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸುವುದು.
- ಮನೆಯ ಮೇಲೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸಿ ದಿನನಿತ್ಯ ಬಳಕೆಗೆ ಬಳಸುವುದು.
- ಇದರಿಂದ ಸಾರ್ವಜನಿಕ ನೀರು ಪೂರೈಕೆಯ ಮೇಲಿನ ಅವಲಂಬನೆ ಕಡಿಮೆ
- ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು.

RAMALINGAPPA L

- ಮಳೆ ನೀರು ಹರಿದು ಹೋಗದಂತೆ ತಡೆದು ಭೂಮಿಯಲ್ಲಿ ಇಂಗುವಂತೆ ಮಾಡುವುದು, ಇದರಿಂದ ಅಂತರ್ಜಲ ಮಟ್ಟವು ಮರುಪೂರಣಗೊಳ್ಳುವುದು.
- ವೈಯಕ್ತಿಕ ಮಟ್ಟದಲ್ಲಿ, ಸಮುದಾಯಗಳು ಸಹ ಹರಿಯುವ ನೀರಿಗೆ ಅಡ್ಡಗಟ್ಟೆಗಳನ್ನು ನಿರ್ಮಿಸಿ ಸಣ್ಣ ಹೊಂಡ, ಕೆರೆಗಳ ರೂಪದಲ್ಲಿ ನೀರನ್ನು ಸಂಗ್ರಹಿಸುವುದು.
- ಕರ್ನಾಟಕದಲ್ಲಿ ಮಳೆಕೊಯ್ಲು ಪುರಾತನ ಕಾಲದಿಂದ ರೂಢಿ.
- ಕೆರೆ, ಕಟ್ಟೆ, ಹೊಂಡಗಳು ಮಳೆ ನೀರಿನ ಸಂಗ್ರಹಣೆ ವಿಧಾನಗಳು
- ಇವುಗಳನ್ನು ನಿರ್ಲಕ್ಷಿಸಿದರೆ ಜಲಕ್ಷಾಮ ಕಾಣುತ್ತದೆ.
- ಅರ್ಥವ್ಯವಸ್ಥೆ ಮತ್ತು ಸರ್ಕಾರ:-
- ಮಾನವನ ಎಲ್ಲಾ ಆರ್ಥಿಕ ಚಟುವಟಿಕೆಗಳ ಒಂದು ಸಂಘಟಿತ ವ್ಯವಸ್ಥೆಯೇ 'ಅರ್ಥವ್ಯವಸ್ಥೆ'.
- ಇದರ ಮೂಲ ಗುರಿ:- ಮಾನವನ ಕ್ಷೇಮಾಭಿವೃದ್ಧಿ
- 19ನೇ ಶತಮಾನದ ಅಂತ್ಯದವರೆಗೆ ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಇರಬಾರದು ಎಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ.
- ಆಗ ಸರ್ಕಾರ ಕೇವಲ ರಾಷ್ಟ್ರರಕ್ಷಣೆ, ನ್ಯಾಯನಿರ್ಣಯ & ಶಾಂತಿ-ಸುವ್ಯವಸ್ಥೆ ಪಾಲನೆಗಳನ್ನು ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.
- 20ನೇ ಶತಮಾನದಲ್ಲಿ ಕಲ್ಯಾಣ ರಾಷ್ಟ್ರಗಳ ಉದಯದೊಂದಿಗೆ ಸರ್ಕಾರಗಳ ಕಾರ್ಯಕ್ಷೇತ್ರಗಳ ವಿಸ್ತರಣೆಯಾಯಿತು.
- ಸರ್ಕಾರ ಎಲ್ಲಾ ಪ್ರಜೆಗಳಿಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಸೌಲಭ್ಯಗಳನ್ನು ಒದಗಿಸಲು ಮುಂದಾದವು.
- ನಿರುದ್ಯೋಗ, ಬಡತನ, ಕೃಷಿಯ ಹಿಂದುಳಿಯುವಿಕೆ, ಆದಾಯ & ಸಂಪತ್ತಿನ ಅಸಮಾನ ಹಂಚಿಕೆ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಮಧ್ಯಪ್ರವೇಶ ಅಗತ್ಯ.
- ಸಾರಿಗೆ, ಸಂಪರ್ಕ, ವಿದ್ಯುತ್, ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸಮಸ್ಯೆಗಳ ನಿವಾರಣೆಯಲ್ಲಿ ಸರ್ಕಾರದ ಮಧ್ಯಪ್ರವೇಶ ಅಗತ್ಯ.
- ಅರ್ಥವ್ಯವಸ್ಥೆಯಲ್ಲಿ ರಾಷ್ಟ್ರೀಯ ಆದಾಯ, ಉತ್ಪಾದನೆ, ಉದ್ಯೋಗ, ಹೂಡಿಕೆ, ಬೆಲೆಗಳಲ್ಲಿ ನಿರಂತರ ಏರಿಳಿತಗಳಿಂದ ಕುಡಿದೆ ಇವುಗಳನ್ನು ಆರ್ಥಿಕ ಏರಿಳಿತಗಳು ಎನ್ನುವರು.
- ಅರ್ಥವ್ಯವಸ್ಥೆಯು ಹೆಚ್ಚಿನ ಏರಿಳಿತಗಳಿಲ್ಲದೆ ಪ್ರಗತಿಯತ್ತ ಸಾಗುವುದನ್ನು 'ಆರ್ಥಿಕ ಸ್ಥಿರತೆ' ಎನ್ನುವರು.
- ದೇಶದಲ್ಲಿ ಉತ್ಪಾದನೆಯಾಗು ಆದಾಯ & ಸಂಪತ್ತು ಬಡವ-ಬಲ್ಲಿದ, ನಗರ-ಗ್ರಾಮೀಣ ಎಂಬ ತಾರತಮ್ಯವಿಲ್ಲ ಸಮಾಜದ ಎಲ್ಲಾ ಜನರಲ್ಲಿ ಸಮಾನವಾಗಿ ಹಂಚಿಕೆಯಾದರೆ ಇದನ್ನು 'ಸಾಮಾಜಿಕ ನ್ಯಾಯ' ಎನ್ನುವರು.
- 20ನೇ ಶತಮಾನದಲ್ಲಿ ಶೀಘ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಮುಖ ತಂತ್ರವಾಗಿ ಆರ್ಥಿಕ ಯೋಜನೆಗಳನ್ನು ಬಳಕೆಗೆ ತಂದಿವೆ.
- 1929ರಲ್ಲಿ ಸೋವಿಯತ್ ರಷ್ಯಾ ಮೊಟ್ಟಮೊದಲು ಆರ್ಥಿಕ ಯೋಜನೆಗಳನ್ನು ಜಾರಿ.
- ಭಾರತದಲ್ಲಿ ಯೋಜನೆ:-
- ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಯೋಜನೆ ಬಹುಮುಖ್ಯ.
- ಸರ್ಕಾರವು ಕೆಲವು ನಿರ್ದಿಷ್ಟ ಧ್ಯೆಯೋದ್ದೇಶಗಳೊಂದಿಗೆ, ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾಪೂರ್ವಕವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು 'ಯೋಜನೆ' ಎನ್ನುವರು.
- ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿದವರು ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ
- ಇವರು 1934ರಲ್ಲಿ 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಪುಸ್ತಕ ಪ್ರಕಟಿಸಿ, ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯ ಎಂದು ಒತ್ತಿ ಹೇಳಿದರು.
- ಅದಕ್ಕೆ ಇವರನ್ನು "ಭಾರತದ ಆರ್ಥಿಕ ಯೋಜನೆಯ ಪಿತಾಮಹ" ಎನ್ನುವರು.
- ಸ್ವಾತಂತ್ರ್ಯ ನಂತರದಲ್ಲಿ ಭಾರತ ಸರ್ಕಾರವು 1950 ರಲ್ಲಿ "ರಾಷ್ಟ್ರೀಯ ಯೋಜನಾ ಆಯೋಗ" ವನ್ನು ರಚಿಸಿದರು
- ಇದರ ಅಧ್ಯಕ್ಷರು ಪ್ರಧಾನಮಂತ್ರಿ
- ಮುಖ್ಯ ಉದ್ದೇಶ:- ದೇಶದಲ್ಲಿರುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲ ಮತ್ತು ಬಂಡವಾಳವನ್ನು ನಿಖರವಾಗಿ ಅಂದಾಜು ಮಾಡಿ, ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ಯೋಜನೆ ತಯಾರಿಸುವುದು.
- ಭಾರತದಲ್ಲಿ ಯೋಜನೆಯ ಅವಧಿ 5 ವರ್ಷಗಳು ಆದ್ದರಿಂದ ಇವುಗಳನ್ನು 'ಪಂಚವಾರ್ಷಿಕ ಯೋಜನೆ" ಎಂಬ ಹೆಸರು.
- 1952 ರಲ್ಲಿ "ರಾಷ್ಟ್ರೀಯ ಅಭಿವೃದ್ಧಿ ಮಂಡಳಿ" ಸ್ಥಾಪನೆ
- ಇದರಲ್ಲಿ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಸದಸ್ಯರಾಗಿರುತ್ತಾರೆ
- ಇದು ಪಂಚವಾರ್ಷಿಕ ಯೋಜನೆಗೆ ಅನುಮೋದನೆ ನೀಡುತ್ತದೆ.
- ಎಲ್ಲಾ ರಾಜ್ಯಗಳ ಸಮತೋಲನವಾಗಿ ಅಭಿವೃದ್ಧಿಗೊಳ್ಳುವಂತೆ ಗಮನಹರಿಸುತ್ತದೆ.
- ಪಂಚವಾರ್ಷಿಕ ಯೋಜನೆಗಳು:-

RAMALINGAPPA L

- ಭಾರತದಲ್ಲಿ ಮೊಟ್ಟಮೊದಲ ಪಂಚವಾರ್ಷಿಕ ಯೋಜನೆ ಏಪ್ರಿಲ್ 1, 1951 ರಲ್ಲಿ ಜಾರಿ.
- ಇಲ್ಲಿಗೆ 11 ಪಂಚವಾರ್ಷಿಕ ಯೋಜನೆಗಳು ಮುಕ್ತಾಯಗೊಂಡಿವೆ.
- ಅದ್ಯ ಏಪ್ರಿಲ್ 1, 2012 ರಿಂದ 12ನೇ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿದೆ ಇದು 2017ರ ಮಾರ್ಚ್ 31 ಕ್ಕೆ ಮುಕ್ತಾಯ.
- ಭಾರತದ ಅಭ್ಯ್ವರ್ಸತೆಯ ಮೂಲ ಸಮಸ್ಯೆ ಬಡತನ.
- ಭಾರತದಲ್ಲಿ ಆರ್ಥಿಕ ಯೋಜನೆಗಳ ಮೂಲ ಉದ್ದೇಶ ಬಡತನ ನಿರ್ಮೂಲನೆ & ಜನರ ಜೀವನ ಮಟ್ಟವನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸುವುದು.
- ಉದ್ದೇಶಗಳು:–
- ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು
- ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು
- ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
- ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು.
- ಪಂಚವಾರ್ಷಿಕ ಯೋಜನೆಗಳ ಸಾಧನೆ:–
- 20 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಆದಾಯ ವಾರ್ಷಿಕ 3.5 ದರದಲ್ಲಿ ಹೆಚ್ಚಳ.
- ನಂತರ 20 ವರ್ಷಗಳ ಅವಧಿಯಲ್ಲಿ ಶೇ 5 ರ ದರದಲ್ಲಿ ಹೆಚ್ಚಳ.
- 1991–2000 ರ ಅವಧಿಯಲ್ಲಿ ಔಆರ್ಷಿಕ ಶೇ 5.6 ರ ದರದಲ್ಲಿ ಹೆಚ್ಚಳ
- 2001–10ರ ಅವಧಿಯಲ್ಲಿ ಶೇ 7.3 ರ ದರದಲ್ಲಿ ಹೆಚ್ಚಳ
- 2001–10 ರ ಅವಧಿಯಲ್ಲಿ ತಲಾ ಆದಾಯವು ವಾರ್ಷಿಕ ಶೇ 5.6 ರ ದರದಲ್ಲಿ ಹೆಚ್ಚಿದೆ.
- ಕೃಷಿವಲಯದಿಂದ ಶೇ 50 ಕ್ಕಿಂತ ಹೆಚ್ಚಿನ ಆದಾಯ ಬರುತ್ತಿತ್ತು, ಆದರೆ ಈಗ ಶೇ. 12 ಆಗದೆ.
- ಈಗ ರಾಷ್ಟ್ರೀಯ ಆದಾಯಕ್ಕೆ ಸೇವಾವಲಯದಿಂದ ಅತಿಹೆಚ್ಚು ಶೇ. 59 ರಷ್ಟು ಆದಾಯ ಬರುತ್ತದೆ.
- ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಳಾಗಿದೆ.
- 2011–12ರಲ್ಲಿ 257.4 ದಶಲಕ್ಷ ಟನ್ನುವಗಳಿಗೆ ಹೆಚ್ಚಿದೆ.
- ಕೈಗಾರಿಕೆ & ಸೇವಾ ವಲಯಗಳ ವಿಸ್ತರಣೆಯಿಮದ ಉದ್ಯೋಗಾವಕಾಶಗಳು ಹೆಚ್ಚಿವೆ.
- ಗ್ರಾಮೀಣ ಬಡಜನರಿಗೆ ಉದ್ಯೋಗಾಕಾಶಗಳನ್ನು ಒದಗಿಸಲಾಗಿದೆ.
- ವಿಜ್ಞಾನ & ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಕಂಡಿದೆ.
- ಕೃಷಿ, ಕೈಗಾರಿಕೆ, ಸೇವಾವಲಯಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಹೆಚ್ಚುತ್ತಿದೆ.
- ತಂತ್ರಜ್ಞರ ಸೇವೆಯನ್ನು ಹೊರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ
- ಭಾರತದ ರಫ್ತು ಕ್ಷೇತ್ರದಲ್ಲಿ ತಯಾರಿಕೆ & ಎಂಜಿನಿಯರಿಂಗ್ ಸರಕುಗಳ ರಫ್ತು ಹೆಚ್ಚಿದೆ.
- ಅರ್ಥವ್ಯವಸ್ಥೆಯ ಅಸಮಾನತೆ ಕಡಿಮೆ ಮಾಡಲು ಪ್ರಯತ್ನ.
- 11ನೇ ಪಂಚವಾರ್ಷಿಕ ಯೋಜನೆಯಲ್ಲಿ "ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ" ಪ್ರಾಮುಖ್ಯತೆ ನೀಡಲಾಯಿತು.
- ಜನರ ನಿರೀಕ್ಷಿತ ಜೀವಿತಾವಧಿ & ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ.
- ಶಿಶು ಮರಣ & ತಾಯಂದಿರ ಮರಣದರಗಳು ಕಡಿಮೆಯಾಗುತ್ತಿವೆ.
- ಜನನ ಮತ್ತು ಮರಣಗಳಲ್ಲೂ ಕಡಿಮೆಯಾಗುತ್ತಿದ್ದು, ಜನಸಂಖ್ಯಾ ಬೆಳವಣೀಗೆ ದರ ಇಳಕೆ.
- ಸಮಸ್ಯೆಗಳ ಮುಂದುವರೆಕೆ:–
- ಎಲ್ಲಾ ಜನರಿಗೆ ಉದ್ಯೋಗವನ್ನು ಒದಗಿಸಲು ವಿಫಲ.
- ಬಡತನವನ್ನು ಸಂಪೂರ್ಣವಾಗಿ ಹೋಗಲಾಡಿಸಿಲ್ಲ.
- ಬಡವ & ಶ್ರೀಮಂತರ ನಡುವಿನ ಅಸಮಾನತೆ ಹೆಚ್ಚುತ್ತಿದೆ.
- ಸಾಮಾಜಿಕ ನ್ಯಾಯ ಕನಸಿನ ಮಾತಾಗಿದೆ.
- ಮೂಲ ಸೌಕರ್ಯಗಳ ಕೊರತೆ ಹೆಚ್ಚಾಗಿದೆ.
- ಹಸಿರು ಕ್ರಾಂತಿ:–
- ಪಂಚವಾರ್ಷಿಕ ಯೋಜನೆಗಳ ಅತಿ ದೊಡ್ಡ ಸಾಧನೆ:– ಹಸಿರು ಕ್ರಾಂತಿ.
- ಕ್ರಾಂತಿ ಎಂದರೆ, ಶೀಘ್ರ ಬದಲಾವಣೆ ಅಥವಾ ಪ್ರಗತಿ' ಎಂದರ್ಥ.
- 1967–70 ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎನ್ನುವರು.
- 1967ರಲ್ಲಿ 74 ದಶಲಕ್ಷ ಟನ್ನುವಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108 ದಶಲಕ್ಷ ಟನ್ನುಗಳಿಗೆ ಹೆಚ್ಚಳವಾಯಿತು.
- ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ 'ಹಸಿರು ಕ್ರಾಂತಿ' ಎನ್ನುವರು.
- ಹಸಿರು ಕ್ರಾಂತಿಯು 'ಹೆಚ್ಚು ಇಳುವರಿ ಬೀಜಗಳ' ಬಳಕೆಯ ಪರಿಣಾಮವಾಗಿದೆ.

- 1960ರ ಪ್ರಾರಂಭದಲ್ಲಿ "ಡಾ. ನಾರ್ಮನ್ ಬೋರ್ಲಾಂಗ್" ಎಂಬ ಜರ್ಮನ್ ಕೃಷಿ ವಿಜ್ಞಾನಿ ಮೆಕ್ಸಿಕೋ ದೇಶದಲ್ಲಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು.
- ಈ ಬೀಜಗಳನ್ನು ಬಳಕೆಗೆ ತಂದ ಮೆಕ್ಸಿಕೋ & ತೈವಾನ್ ದೇಶಗಳು ಗೋಧಿಯ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಿದೆ.
- 1965–66 ಅವಧಿಯಲ್ಲಿ ಭಾರತದಲ್ಲಿ ಸಂಭವಿಸಿದ ಭೀಕರ ಬರಗಾಲದ ಪರಿಣಾಮ ಕೃಷಿ ಉತ್ಪಾದನೆ ಕಡಿಮೆ.
- ಆಹಾರ ಧಾನ್ಯಗಳ ಕೊರತೆ ಹೆಚ್ಚಾಯಿತು.
- ಇದರ ಪರಿಹಾರಕ್ಕೆ ಭಾರತ ಸರ್ಕಾರವು 1966 ರಲ್ಲಿ ಗೋಧಿಯ ಹೆಚ್ಚು ಇಳುವರಿಯ ಬೀಜಗಳನ್ನು ಪಂಜಾಬ್, ಹರಿಯಾಣ, ದೆಹಲಿ, ರಾಜಸ್ತಾನ, ಉತ್ತರಪ್ರದೇಶದಲ್ಲಿ ಬಳಕೆಗೆ ತಂದಿತು.
- ಹೆಚ್ಚು ಇಳುವರಿ ಬೀಜಗಳ ಬಳಕೆಯ ಜೊತೆಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ ತರಲಾಯಿತು.
- ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲಾಯಿತು, ಗೋಧಿಯ ಉತ್ಪಾದನೆ ಹೆಚ್ಚಿತು.
- ಕೃಷಿ ಉತ್ಪಾದನೆಯಲ್ಲಿ ಬಳಸಲಾದ ಈ ಸುಧಾರಿತ ತಂತ್ರಜ್ಞಾನವನ್ನು "ಸುಗ್ಗಿ ಪೂರ್ವ ತಂತ್ರಜ್ಞಾನ" ಎನ್ನುವರು.
- ಭಾರತದ ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಬಳಕೆಗೆ ತರಲು ಕೃಷಿ ವಿಜ್ಞಾನಿ "ಡಾ. ಎಂ.ಎಸ್. ಸ್ವಾಮಿನಾಥನ್" ಪಾತ್ರ ಮುಖ್ಯ.
- ಆದ್ದರಿಂದ ಇವರನ್ನು "ಭಾರತದ ಹಸಿರು ಕ್ರಾಂತಿಯ ಪಿತಾಮಹ" ಎನ್ನುವರು.
- ಸುಧಾರಿತ ತಂತ್ರಜ್ಞಾನವನ್ನು ಗೋಧಿಯ ಜೊತೆಗೆ ಭತ್ತ, ಜೋಲ, ರಾಗಿ, ಕಬ್ಬು ಬೆಳೆಗಳಲ್ಲಿ ಬಳಸಲು ಪ್ರೇರಣೆ.
- ಇದನ್ನು ದೇಶಾದ್ಯಂತ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಯಿತು.
- ಇದರಿಂದ 80 ರ ದಶಕದಲ್ಲಿ ಭಾರತವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು.
- ಹಸಿರುಕ್ರಾಂತಿಯ ಲಾಭ ಕೇವಲ ಶ್ರೀಮಂತ ರೈತರಿಗೆ ತಲುಪಿ, ಬಡ ರೈತರಿಗೆ ತಲುಪಲಿಲ್ಲ.
- ಕಾರಣ, ಸುಧಾರಿತ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಕೊಳ್ಳುವ ಶಕ್ತಿ ಬಡವರಿಗೆಯಿರಲಿಲ್ಲ.
- ಸರ್ಕಾರ ಸಣ್ಣ & ಬಡ ರೈತರಿಗೂ ಇದರ ಲಾಭ ದೊರೆಯುವಂತೆ ಮಾಡಲು "ಸಹಾಯ ಧನ" ವ್ಯವಸ್ಥೆ ಜಾರಿ.
- ಸರ್ಕಾರವು ಕಡಿಮೆ ಬೆಲೆಯಲ್ಲಿ ಬೀಜ, ಗೊಬ್ಬರ, ಕ್ರಿಮಿನಾಶಕ, ಯಂತ್ರೋಪರಕಣಗಳನ್ನು ವಿತರಿಸಲಾಯಿತು.
- ರೈತರಿಗೆ ಬ್ಯಾಂಕು & ಸಹಕಾರಿ ಸಂಘಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸಲು ಮುಂದಾಯಿತು.
- ಇದು ಎಲ್ಲಾವರ್ಗದ ರೈತರು ಬಳಸಲು ಸಾಧ್ಯವಾಯಿತು, ಕೃಷಿ ಉತ್ಪಾದನೆ ಹೆಚ್ಚಿತು.
- ಕೃಷಿ ಉತ್ಪಾದನೆ ಹೆಚ್ಚಳದಿಂದ ಬೆಲೆಗಳ ಇಳಿಕೆ ಹಾಗೂ ರೈತರಿಗೆ ನಷ್ಟ.
- ರೈತರಿಗೆ ನ್ಯಾಯೋಚಿತ ಬೆಲೆ ದೊರಕಿಸುವುದು ಸರ್ಕಾರದ ಕರ್ತವ್ಯ.
- ಇದಕ್ಕೆ ಸರ್ಕಾರ ಮಾರುಕಟ್ಟೆಗಳನ್ನು ಸುಧಾರಿಸಬೇಕಾಯಿತು.
- ಹೆಚ್ಚುವರಿ ಉತ್ಪನ್ನಗಳನ್ನು ಸಂಸ್ಕರಿಸಲು ಉಗ್ರಾಣ & ಶೈತ್ಯಾಗಾರಗಳನ್ನು ನಿರ್ಮಿಸಿತು.
- ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ & ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನವನ್ನು "ಸುಗ್ಗಿ ನಂತರದ ತಂತ್ರಜ್ಞಾನ" ಎನ್ನುವರು.
- ಕೃಷಿ ವಲಯ ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳು:–
- ರೈತರಿಗೆ ಸಾವಯವ ಕೃಷಿ ವಿಧಾನ ಬಳಕೆಗೆ ಪ್ರೋತ್ಸಾಹ.
- ರಾಸಾಯನಿಕ ಗೊಬ್ಬರಗಳ ಬಳಕೆಗೆ ಬದಲಾಗಿ, ಜೈವಿಕ ಗೊಬ್ಬರ ಬಳಕೆ.
- ರಾಸಾಯನಿಕ ಕ್ರಿಮಿನಾಶಕಗಳ ಬಳಕೆಗೆ ಬದಲಾಗಿ ಜೈವಿಕ ಕ್ರಿಮಿನಾಶಗಳ ಬಳಕೆ.
- ಇದನ್ನು ಎರಡನೇ ಹಸಿರು ಕ್ರಾಂತಿ ಅಥವಾ ಸದಾ ಹಸಿರು ಕ್ರಾಂತಿ ಎಂದು ಗುರುತಿಸಲಾಗಿದೆ.
- ಉತ್ಸಾಹಿ ರೈತರು ಸಾವಯವ ಕೃಷಿ & ಶೂನ್ಯ ಬಂಡವಾಳ ಕೃಷಿಯಿಂದ ಪರಿಸರ ಸ್ನೇಹಿ & ಸುಸ್ಥಿರ ಕೃಷಿ ವಿಧಾನ ಅಳವಡಿಕೆ
- ನೀತಿ ಆಯೋಗ:–
- ಇದನ್ನು ಭಾರತದ ಯೋಜನಾ ಆಯೋಗದ ಬದಲಿಗೆ ಜನವರಿ 1, 2015ರಲ್ಲಿ ಸ್ಥಾಪನೆ.
- ಇದು ತಳಮಟ್ಟದ ಮಾರ್ಗವನ್ನು ಉಪಯೋಗಿಸುತ್ತದೆ.
- ಇದರ ಧ್ಯೇಯಗಳು:– 15 ವರ್ಷಗಳ ಮಾರ್ಗ ನಕ್ಷೆ, 7 ವರ್ಷಗಳ ದೂರದರ್ಶಿತ್ವ ಯೋಜನೆ & ಕಾರ್ಯಯೋಜನೆ ಒಳಗೊಂಡಿದೆ.
- ದೇಶದ ಪ್ರಧಾನಿ ಇದರ ನೇತೃತ್ವ ವಹಿಸಿರುತ್ತಾರೆ.
- ಇದರ ದಿನವಹಿ ಆಡಳಿತವನ್ನು ಉಪಾಧ್ಯಕ್ಷರು ನೆರವೇರಿಸುತ್ತಾರೆ.
- ಧ್ಯೇಯೋದ್ದೇಶಗಳು:–
- ಸರ್ಕಾರದ ಅತ್ಯುನ್ನತ ಸಾರ್ವಜನಿಕ ನೀತಿ ಚಿಂತಕರ ಛಾಡಿಯಾಗಿ ಕಾರ್ಯನಿರ್ವಹಣೆ.
- ಆರ್ಥಿಕ ಅಭಿಋದ್ಧಿಯನ್ನು ವೇಗಗೊಳಿಸುವ ಕಾರ್ಯವನ್ನು ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಣೆ.

RAMALINGAPPA L

- ಕೆಳಮಟ್ಟದಿಂದ ಸಂಪನ್ಮೂಲಗಳನ್ನು ಬಳಸಿ ಆರ್ಥಿಕ ನೀತಿ ನಿರ್ಮಾಣ.
- ಭಾರತದ ರಾಜ್ಯ ಸರ್ಕಾರಗಳ ಒಳಗೊಳ್ಳುವಿಕೆ ಮೂಲಕ ಅಹಕಾರಿ ಫೆಡರಿಲಿಸಂನ್ನು ಉತ್ತೇಜಿಸುತ್ತದೆ.
- ಲಕ್ಷಣಗಳು:–
- ಸಂಶೋಧನೆ & ನಾವಿನ್ಯ ಉತ್ತೇಜಿಸಲು ಸರ್ಕಾರಕ್ಕೆ ವ್ಯೂಹಾತ್ಮಕ ದೃಷ್ಟಿಕೋನವನ್ನು ಒದಗಿಸುತ್ತದೆ.
- ಅನಿಯಂತ್ರಿತ ಸಮಸ್ಯೆಗಳನ್ನು ನಿಭಾಯಿಸಲು ಅನುವು ಮಾಡಿಕೊಡುವ ಜ್ಞಾನ & ಕೌಶಲ್ಯಗಳ ಅಭಿವೃದ್ಧಿ.
- ಕಲಾ ಸಂಪನ್ಮೂಲ ಕೇಂದ್ರವಾಗಿ ತನ್ನನ್ನು ತಾನು ಅಬೀವೃದ್ಧಿ ಪಡಿಸುತ್ತದೆ.
- ಅಟಲ್ ನಾವಿನ್ಯ ಮಿಷನ್ & ಅಭಿವೃದ್ಧಿ ಮೇಲ್ವಿಚಾರಣೆ & ಮೌಲ್ಯಮಾಪನ ಸಂಸ್ಥೆ & ಸ್ವಾಯತ್ತ ಸಂಸ್ಥೆ
- ಕಾರ್ಮಿಕ ಅರ್ಥಶಾಸ್ತ್ರ ಸಂಶೋಧನೆ ಮತ್ತು ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆ
- ಇವು ಇದನ್ನು ಬೆಂಬಲಿಸುತ್ತವೆ.
- ನೀತಿ ಆಯೋಗದ ನಾಲ್ಕು ವಿಭಾಗಗಳು:–
- ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು
- ಸಹಕಾರಿ ಒಕ್ಕೂಟ ವ್ಯವಸ್ಥೆ
- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
- ಚಿಂತಕರ ಕೂಟ & ಜ್ಞಾನ & ನಾವಿನ್ಯ ಸಮೂಹ
- ಬ್ಯಾಂಕ್ ವ್ಯವಹಾರಗಳು:–
- ಇವು ಸು. ಎರಡು ನೂರು ವರ್ಷಗಳ ಹಿಂದೆ ಅಭಿವೃದ್ಧಿ.
- ಬ್ಯಾಂಕ್ ಪದವು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದೆ.
- ಗ್ರಾಹಕರ ಉಳಿತಾಯವನ್ನು ತಮ್ಮ ಬಳಿ ಇಟ್ಟುಕೊಂಡು ಬೇಕಾದಾಗ ನೀಡುವುದು.
- ಗ್ರಾಹಕರಿಗೆ ಸಾಲ ನೀಡಿ ಬಡ್ಡಿ ವಸೂಲಿ ಮಾಡುತ್ತವೆ.
- ಇವು ವಿವಿಧ ದೇಶಗಳ ವಿವಿಧ ಹಣ ವಿನಿಮಯ ಮಾಡುತ್ತವೆ.
- ದೇಶದ ಅಭಿವೃದ್ಧಿಯ ಮೇಲೆ ಪ್ರಭಾವ.
- ಬ್ಯಾಂಕ್ ಎಂದರೇನು?
- ಬ್ಯಾಂಕ್ ಪದವು ಇಟಾಲಿಯನ್‌ನ "ಬ್ಯಾಂಕೊ" ಅಥವಾ ಫ್ರೆಂಚ್‌ನ "ಬ್ಯಾಂಕ್" ಶಬ್ದಗಳಿಂದ ಬಂದಿದೆ.
- ಇವುಗಳ ಅರ್ಥ "ಬೆಂಚು ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್"
- ಇದು ಗ್ರಾಹಕರಿಂದ ಠೇವಣಿಗಳನ್ನು ಸ್ವೀಕರಿಸಿ, ಸಾಲದ ರೂಪದಲ್ಲಿ ನೀಡುತ್ತದೆ. ಈ ರೀತಿಯ ಬ್ಯಾಂಕಿನ ವ್ಯವಹಾರಗಳನ್ನು 'ಬ್ಯಾಂಕಿಂಗ್' ಎನ್ನುವರು.
- ಬ್ಯಾಂಕುಗಳ ಗುಣ ಲಕ್ಷಣಗಳು:–
- ಹಣದ ವಹಿವಾಟು
- ವ್ಯಕ್ತಿ/ಸಂಸ್ಥೆ/ಕಂಪನಿ
- ಠೇವಣೀಗಳನ್ನು ಅಂಗೀಕರಿಸುತ್ತದೆ.
- ಸಾಲಗಳನ್ನು ಕೊಡುವುದು.
- ಪಾವತಿ & ಹಿಂದಕ್ಕೆ ಪಡೆಯುವುದು
- ಏಜೆಂಟ್ ಅಥವಾ ಏಜೆಂಟ್ ನಿಯೋಜನೆ & ಉಪಯುಕ್ತ ಸೇವೆ
- ಲಾಭ ಮತ್ತು ಸೇವಾ ಭಾವನೆ
- ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು
- ಸಂಬಂಧ ಕಲ್ಪಿಸುವ ಕೊಂಡಿ
- ಬ್ಯಾಂಕಿಂಗ್ ವ್ಯವಹಾರ
- ಹೆಸರಿನ ಗುರುತು.
- ಬ್ಯಾಂಕಿನ ಕಾರ್ಯಗಳು:–
- ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
- ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
- ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲಿ ಮಾಡುವುದು
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗ ಕೊಡುವುದು.
- ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
- ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ದಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
- ಸಾಲಪತ್ರಗಳನ್ನು & ಜವಾಬ್ದಾರಿ ಪತ್ರಗಳನ್ನು ಕೊಡುವುದು
- ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.
- ಬ್ಯಾಂಕರನಿಗೂ & ಗ್ರಾಹಕರಿಗೂ ಇರುವ ಸಂಬಂಧ:–
- ಎರಡು ರೀತಿಯ ಸಂಬಂಧಗಳು:–
- ಸಾಮಾನ್ಯ ಸಂಬಂಧ:–
- ಪ್ರಾಥಮಿಕ ಸಂಬಂಧ (ಸಾಲಿಗ & ಸಾಲಗಾರನ ಸಂಬಂಧ)



RAMALINGAPPA L

- ಸಹಾಯಕ ಅಥವಾ ಉಪಕಾರ ಸಂಬಂಧ (ಧರ್ಮದರ್ಶಿ ಅಥವಾ ನಿಕ್ಷೇಪಧಾರಿ & ಪ್ರಯೋಜನಕಾರಿಯ ನಡುವಿನ ಸಂಬಂಧ)
- ಕಾರಬಾರಿ ಅಥವಾ ನಿಯೋಗಿ & ಮುಖ್ಯಸ್ಥನ ಸಂಬಂಧ
- ವಿಶೇಷ ಸಂಬಂಧ:–
- ಚೆಕ್ಕುಗಳನ್ನು ಮನ್ನಣೆ ಮಾಡುವುದು.
- ಗ್ರಾಹಕನ ಲೆಕ್ಕಗಳ ಗೋಪ್ಯತೆ ಕಾಪಾಡುವುದು.
- ಬ್ಯಾಂಕುಗಳು ಸಲ್ಲಿಸುವ ಸೇವೆಗಳು:–
- ಆಮಾ ಕಾರ್ಡುಗಳನ್ನು ಕೊಡುವುದು.
- ಖಾಸಗಿ ಸಾಲಗಳು
- ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು
- ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
- ವ್ಯಾಪಾರಕ್ಕೆ ಬೇಕಾದ ಸಾಲಗಳು
- ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು
- ಡೆಬಿಟ್ ಕಾರ್ಡ್
- ಭರವಸೆ ಸೇವೆಗಳು
- ಸಹಿಗಳಿಗೆ ಜವಾಬ್ದಾರಿ ಹಾಕುವುದು.
- ಬ್ಯಾಂಕಿಂಗ್ ವ್ಯವಹಾರ:–
- ಬ್ಯಾಂಕುಗಳು ಮತ್ತು ಅಂಚೆ ಕಛೇರಿಗಳು:–
- ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು 'ಬ್ಯಾಂಕು ವ್ಯವಹಾರ' ಎನ್ನುವರು.
- ಬ್ಯಾಂಕುಗಳು ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಂಡು, ಠೇವಣಿ ಸಂಗ್ರಹ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತದೆ ಈ ಸಾಲಗಳನ್ನು "ಬ್ಯಾಂಕ್ ಸಾಲ" ಎನ್ನುವರು.
- ಭಾರತದ ಎಲ್ಲಾ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿ ಇರುತ್ತವೆ.
- ರಿಜರ್ವ್ ಬ್ಯಾಂಕನ್ನು 'ಬ್ಯಾಂಕುಗಳ ಬ್ಯಾಂಕ್' & ಬ್ಯಾಂಕುಗಳ ತಾಯಿ' ಎನ್ನುವರು.
- ಇದು ದೇಶದ ಕೇಂದ್ರ ಬ್ಯಾಂಕಾಗಿದೆ.
- ಇದು ಹಣಕಾಸಿನ ನೀತಿಯನ್ನು ರೂಪಿಸುತ್ತದೆ.
- ಭಾರತದಲ್ಲಿನ ಬ್ಯಾಂಕುಗಳ ಜಾಲ:–
- ಸ್ಟೇಟ್ ಬ್ಯಾಂಕ್ ಸಮೂಹಗಳು
- 21 ರಾಷ್ಟ್ರೀಕೃತ ಬ್ಯಾಂಕುಗಳು
- 21 ಖಾಸಗಿ ಬ್ಯಾಂಕುಗಳು
- 19 ವಿದೇಶಿ ಬ್ಯಾಂಕುಗಳು
- ಗ್ರಾಮೀಣ ಬ್ಯಾಂಕುಗಳು
- ರಾಜ್ಯ ಸರ್ಕಾರದ & ಖಾಸಗಿ ಸಹಕಾರಿ ಬ್ಯಾಂಕುಗಳು
- ಇವು 8000 ಉಪಶಾಖೆಗಳಿಂದ ಕಾರ್ಯ ನಿರ್ವಹಣೆ.
- ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಅಂಚೆ ಕಛೇರಿಗಳು ಬ್ಯಾಂಕ್ ವ್ಯವಹಾರಗಳ ಅಂಕಿತಕ್ಕೆ ತಂದಿರುವುದು.
- ಭಾರತೀಯ ಅಂಚೆ ಇಲಾಖೆ "ಭಾರತೀಯ ಅಂಚೆ ಬ್ಯಾಂಕ್" ಜಾಲವನ್ನು ಅಂಚೆ ಕಛೇರಿಗಳೊಡನೆ ಪ್ರಾರಂಭ
- ಶೇ 90 ರಷ್ಟು ಗ್ರಾಮಾಂತರ & ಸಣ್ಣ ಸಣ್ಣ ಪಟ್ಟಣಗಳಲ್ಲಿ ಆರಂಭ
- ಅಂಚೆ ಬ್ಯಾಂಕಿನ ಹಣಕಾಸಿನ ವ್ಯವಹಾರಗಳು:–
- ರಾಷ್ಟ್ರೀಯ ಉಳಿತಾಯ ಪತ್ರಗಳು
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರಗಳು
- ಮಹೆಯಾನ ತೀರು ಠೇವಣಿಗಳು
- ಅಂಚೆ ವಿಮೆ
- ನಿವೃತ್ತ ವೇತನ
- ಹಣವನ್ನು ವರ್ಗಾಯಿಸುವುದು.
- ಬ್ಯಾಂಕುಗಳ ವಿಧಗಳು:–
- ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ್ ಬ್ಯಾಂಕ್
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು (ಲೇವಾದೇವಿಗಾರರು/ಸಾಹುಕಾರರು)
- ಸಹಕಾರಿ ಬ್ಯಾಂಕುಗಳು
- ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು:–
- ಉಳಿತಾಯ ಖಾತೆ
- ಚಾಲ್ತ ಖಾತೆ
- ಆವರ್ತ ಠೇವಣಿ ಖಾತೆ
- ನಿಶ್ಚಿತ ಠೇವಣಿ ಖಾತೆ
- ಉಳಿತಾಯ ಖಾತೆ:–
- ಇದನ್ನು ವೇತನ ಪಡೆಯುವವರು, ಒಂದು ನಿಯಮಿತ ಆದಾಯ ಹೊಂದಿರುವ ಜನ ತೆರೆಯುತ್ತಾರೆ.



RAMALINGAPPA L

- ಇದರ ಸೌಲಭ್ಯವನ್ನು ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ತೆರೆಯುತ್ತಾರೆ.
- ಇದು ಜನರು ಹಣ ಉಳಿತಾಯ ಮಾಡಲು ಸಹಾಯ.
- ಇದರ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.
- ಬ್ಯಾಂಕಿನಿಂದ ಹಣ ಪಡೆಯಲು ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿ ಬಳಕೆ
- ಚಾಲ್ತಿ ಖಾತೆ:–
- ಇದನ್ನು ಹೆಚ್ಚು ಬ್ಯಾಂಕ್ ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ & ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.
- ಠೇವಣಿಗಳ ಮರುಪಾವತಿ & ಬೇಡಿಕೆ ಹಿಂಪಡೆಯಲು/ಉಪಸರ್ಗ ವ್ಯವಹಾರಗಳ ಮೂಲಕ ಹಣ ಹಿಂಪಡೆಯಲು ಸಾಧ್ಯ.
- ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು & ಎಷ್ಟು ಬಾರಿಯಾದರೂ ಹಿಂಪಡೆಯಬಹುದು.
- ಇದರ ಠೇವಣೀಗಳಿಗೆ ಬ್ಯಾಂಕುಗಳು ಬಡ್ಡಿ ಕೊಡುವುದಿಲ್ಲ
- ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲಿ ಮಾಡುತ್ತವೆ.
- ಆವರ್ತ ಠೇವಣಿ ಖಾತೆ:–
- ಇದನ್ನು ಭವಿಷ್ಯ ಕಾಲದಲ್ಲಿ ಒಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯುತ್ತಾರೆ.
- ಭವಿಷ್ಯದ ಅವಶ್ಯಕತೆಗೆ ತಿಂಗಳು ತಿಂಗಳು ಠೇವಣಿ ಜಮಾ ಮಾಡುವುದು.
- ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ ಕಾರು ಕೊಳ್ಳಲು.
- ಅವಧಿ ಮುಗಿದ ನಂತರ ಠೇವಣಿ ಹಣಕ್ಕೆ ಬಡ್ಡಿಯನ್ನು ನೀಡುತ್ತದೆ.
- ನಿಶ್ಚಿತ ಠೇವಣಿ ಖಾತೆ:–
- ಇದನ್ನು ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ.
- ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ ಮಾಡಲಾಗುತ್ತದೆ.
- ನಿಶ್ಚಿತ ಅವಧಿ ಒಂದು ತಿಂಗಳು, ಆರು ತಿಂಗಳು, ಒಂದು ವರ್ಷ, ಐದು ವರ್ಷ, ಹತ್ತು ವರ್ಷಗಳಾಗಿರಬಹುದು.
- ಇದನ್ನು ನಿಗಧಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ.
- ಬಡ್ಡಿ ದರ ಅವಧಿಗೆ ಅನುಗುಣವಾಗಿ ಹೆಚ್ಚುತ್ತದೆ.
- ಬ್ಯಾಂಕು ಖಾತೆಯನ್ನು ತೆರೆಯುವ ವಿಧಾನ:–
- ಯಾವ ವಿಧವಾದ ಬ್ಯಾಣಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸಬಹುದು
- ನಿಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.
- ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬಿ:–
- ಇದರಲ್ಲಿ ನಿಮ್ಮ ಹೆಸರು, ವಿಳಾಸಮ ಉದ್ಯೋಗ, ವಯಸ್ಸು ವಿವರಗಳನ್ನು ತುಂಬಬೇಕು
- ಅರ್ಜಿ ಜೊತೆ ನಿಮ್ಮ 2–3 ಸಹಿಯ ಮಾದರಿಗಳನ್ನು ಸಹಿ ಕಾರ್ಡಿನಲ್ಲಿ ಮಾಡಬೇಕು
- ಇತ್ತೀಚಿನ ನಿಮ್ಮ 2–3 ಭಾವ ಚಿತ್ರಗಳನ್ನು ಲಗತ್ತಿಸಲಬೇಕು
- 2–3 ಜನರು ಕೂಡಿ ಒಟ್ಟಿಗೆ ಖಾತೆಯನ್ನು ತೆರೆಯಬೇಕಾದರೆ ಎಲ್ಲರ ಸಹಿ, ಭಾವಚಿತ್ರ, ವಿವರ ನೀಡಬೇಕು
- ಪರಿಚಿತರ ಉಲ್ಲೇಖನವನ್ನು ಕೊಡುವುದು:–
- ಬ್ಯಾಂಕಿನಲ್ಲಿ ಖಾತೆ ಹೊಂದಿರುವ/ ಗೌರವಾನ್ವಿತ ವ್ಯಕ್ತಿಗಳ ಪರಿಚಯವನ್ನು ಅರ್ಜಿಯಲ್ಲಿ ನಮೂದಿಸಬೇಕು
- ಇದು ಬ್ಯಾಂಕಿನ ರಕ್ಷಣಾದೃಷ್ಟಿಯಿಂದ ಅವಶ್ಯಕ.
- ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
- ಅಧಿಕಾರಿಯ ಒಪ್ಪಿಗೆ
- ಇದಕ್ಕೆ ಗುರುತಿನ ಚೀಟಿ, ಇತ್ತೀಚಿನ ವಿಳಾಸ ಗುರುತು, ಪಾನ್‌ಕಾರ್ಡ್ & ಆಧಾರ್ ಕಾರ್ಡ್ ನೀಡಬೇಕು
- ಪ್ರಾರಂಭಿಕ ಠೇವಣಿ:–
- ಪ್ರಸ್ತಾವನೆ ಅರ್ಜಿಯನ್ನು ಪರಿಶೀಲಿಸಿದ ನಂತರ ಪ್ರಾರಂಭಿಕ ಠೇವಣೀಯನ್ನು ಕಟ್ಟಬೇಕಾಗುತ್ತದೆ.
- ಈ ಹಣ ಪಾವತಿಗೆ ಒಂದು ನಮೂನೆ ಇದ್ದು ಇದನ್ನು 'ಚಲನ್' ಎನ್ನುವರು.
- ನಿಶ್ಚಿತ ಖಾತೆಯಾದರೆ ಮತ್ತೊಂದು ಅರ್ಜಿಯನ್ನು ಭರ್ತಿಮಾಡಬೇಕು.
- ಆವರ್ತ ಖಾತೆಗೆ ಪಾಸ್ ಪುಸ್ತಕ ಕೊಡಲಾಗುತ್ತದೆ.
- ಉಳಿತಾಯ ಖಾತೆ & ಚಾಲ್ತಿ ಖಾತೆಗೆ ಹಣ ಹಿಂಪಡೆಯಲು ಚೆಕ್ ಪುಸ್ತಕ ನೀಡಲಾಗುತ್ತದೆ.
- ಬ್ಯಾಂಕು ಖಾತೆಯನ್ನು ತೆಗೆಯುವದರಿಂದ ಆಗುವ ಅನುಕೂಗಳು:–
- ಹಣದ ಭದ್ರತೆ ಕಾಪಾಡುತ್ತದೆ.
- ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.



RAMALINGAPPA L

- ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
- ಖಾತೆ ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
- ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ
- ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.
- ಬ್ಯಾಂಕು ವ್ಯವಹಾರಗಳು:-
- ಗ್ರಾಹಕರಲ್ಲಿ ಉಳಿತಾಯಕ್ಕೆ ಬೆಂಬಲ ನೀಡುತ್ತದೆ.
- ಬ್ಯಾಂಕು ಉಳಿತಾಯಗಳನ್ನು ಒಟ್ಟುಗೂಡಿಸಿ ಸಾಲಗಳನ್ನು ನೀಡುತ್ತದೆ.
- ಖಾತೆ ಹೆಸರಿನ ಕ್ರಾಸ್ ಮಾಡಿದ ಚೆಕ್ಕು & ಹುಂಡಿಗಳನ್ನು ಅವರ ಖಾತೆಗೆ ಜಮಾ ಮಾಡುತ್ತದೆ.
- ಅವರ ಹೆಸರಿನ ಚೆಕ್ಕು/ಹುಂಡಿಗಳನ್ನು ಬೇರೆ ಬ್ಯಾಂಕುಗಳಿಂದ ವಸೂಲಿ ಮಾಡುತ್ತದೆ.
- ಹಣವನ್ನು ಚೆಕ್/ಚೀಟಿಯ ಮೂಲಕ ಹಿಂದಕ್ಕೆ ಪಡೆಯಬಹುದು.
- ಹಣವನ್ನು ಹಿಂದಕ್ಕೆ ಪಡೆಯಲು ಇತ್ತೀಚಿಗೆ ಎ.ಟಿ.ಎಂನ ಡೆಬಿಟ್ & ಕ್ರೆಡಿಟ್ ಕಾರ್ಡುಗಳು ರೂಢಿಗೆ ಬಂದಿವೆ.
- ಖಾತೆದಾರನು ಬ್ಯಾಂಕಿನ ಸ್ಥಿರ ಆದೇಶದ ಮೂಲಕ ನಿಯತಕಾಲಿಕ ಸಂದಾಯಗಳನ್ನು ಮಾಡಲು ಆದೇಶಿಸಬಹುದು.
- ಉದಾ:- ವಿಮಾ ಕಂತಿನ ಪಾವತಿ, ವರಮಾನ ತೆರಿಗೆ ಪಾವತಿ, ವಿದ್ಯುತ್ ಬಿಲ್ಲು, ದೂರವಾಣಿ ಬಿಲ್ಲು
- ನಿಗಧಿತ ದರದಲ್ಲಿ ದಿನವಹಿ, ಮಾಹೆಯಾನ, ತ್ರೈಮಾಸಿಕ, ಅರ್ಧವಾರ್ಷಿಕ, ವಾರ್ಷಿಕ ಬಡ್ಡಿಗಳನ್ನು ಜಮಾ ಮಾಡುತ್ತದೆ.
- ಅರ್ಧವರ್ಷಕ್ಕೊಮ್ಮೆ ಏಪ್ರಿಲ್ & ಅಕ್ಟೋಬರ್ ಅಥವಾ ಫೆಬ್ರವರಿ & ಜುಲೈ ತಿಂಗಳಲ್ಲಿ ಬಡ್ಡಿ ಪಾವತಿ.
- ಖಾತೆಗಳನ್ನು ಅದೇ ಬ್ಯಾಂಕಿನ ಇತರೆ ಶಾಖೆಗಳಿಗೆ ಖಾತೆದಾರರ ಆದೇಶದಂತೆ ಶಾಖೆಗಳಿಗೆ ವರ್ಗಾಯಿಸುವ ಅವಕಾಶ.
- ಬ್ಯಾಂಕಿನಲ್ಲಿ ಖಾತೆಗಳನ್ನು ಅಂತ್ಯ ಮಾಡಲು ಅವಕಾಶ.
- ಅಂತ್ಯಗೊಳಿಸಲು ಪಾಸ್‌ಪುಸ್ತಕ, ಚೆಕ್ಕು ಹಾಳೆಗಳು, ಎ.ಟಿ.ಎಂನ ಡೆಬಿಟ್ & ಕ್ರೆಡಿಟ್ ಕಾರ್ಡುಗಳನ್ನು ಹಿಂದಕ್ಕೆ ನೀಡಬೇಕು.
- 
- ಅ
- ಅ
- ಅ

- ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ:-
- ದ್ವಿತೀಯ ಮಹಾಯುದ್ಧ ನಂತರ ವಸಾಹತುಶಾಹಿತ್ವ & ಸಾಮ್ರಾಜ್ಯಶಾಹಿತ್ವ ಪತನವಾಯಿತು.
- 1945ರಲ್ಲಿ ವಿಶ್ವ ಸಂಸ್ಥೆ ಆರಂಭ
- ಜಾಗತಿಕ ಸಮಸ್ಯೆಗಳು:-
- ಮಾನವ ಹಕ್ಕುಗಳ ನಿರಾಕರಣೆ
- ಶಸ್ತ್ರಾಸ್ತ್ರಗಳ ಪೈಪೋಟಿ
- ಆರ್ಥಿಕ ಅಸಮಾನತೆ
- ವರ್ಣಭೇದ ನೀತಿ
- ಭಯೋತ್ಪಾದನೆ
- ಮಾನವ ಹಕ್ಕುಗಳ ನಿರಾಕರಣೆ:-
- ಮಾನವತಾವಾದಿಗಳು ಜನ್ಮತಃ ಅಥವಾ ಹಿಟ್ಟಿನಿಂದಲೇ ಬರುವ ಹಕ್ಕುಗಳ ಬಗ್ಗೆ ಪ್ರತಿಪಾದನೆ.
- ಆದರೆ ಪ್ರಪಂಚದ ಬಹುತೇಕ ಮಂದಿ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ.
- ಕಾರಣ:- ಧರ್ಮ, ಜನಾಂಗ, ಲಿಂಗ, ಜಾತಿ,ವರ್ಣ, ರಾಷ್ಟ್ರೀಯತೆಗಳನ್ನು ಕಾರಣವಾಗಿಸಿವೆ.
- ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ನೀಡಿದ ಅಂಶಗಳು:-
- 1776ರ ಅಮೇರಿಕಾ ಸ್ವಾತಂತ್ರ್ಯ ಯುದ್ಧ
- 1789ರ ಫ್ರಾನ್ಸಿನ ಮಹಾಕ್ರಾಂತಿ
- 1917ರ ರಷ್ಯಾಕ್ರಾಂತಿ
- 20ನೇ ಶತಮಾನದ ಪ್ರಥಮಾರ್ಧದ ಭಾರತ & ಇತರೆ ರಾಷ್ಟ್ರಗಳ ಸ್ವಾತಂತ್ರ ಹೋರಾಟ
- 1948ಎ ಡಿಸೆಂಬರ್ 10ರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉದ್ಘೋಷಣೆ ಒಂದು ಮೈಲುಗಲ್ಲು
- ಮಾನವ ಹಕ್ಕುಗಳ ರಕ್ಷಣೆಯಲ್ಲಿ ಭಾರತ:-
- ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾಧಿಸುತ್ತಾ ಬಂದಿದೆ.
- ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ
- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ರಕ್ಷಣೆಯನ್ನು ಪ್ರತಿಪಾಧಿಸಿದೆ.
- ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಗಳನ್ನು ನಿಷೇಧಿಸಿದೆ.

- ಬದುಕುವ ಹಾಗೂ ಸ್ವಾತಂತ್ರ್ಯದ ಹಕ್ಕು, ಸ್ವರಕ್ಷಣೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು ಪ್ರಜಾಪ್ರಭುತ್ವ ರಾಷ್ಟ್ರಗಳ ಸಂವಿಧಾನಿಕ ಹಕ್ಕುಗಳೆನಿಸಿವೆ.
- ಆದರೆ ನಿರಂಕುಶ ಪ್ರಭುತ್ವ ರಾಷ್ಟ್ರಗಳಲ್ಲಿ ಮೂಲಭೂತ ಹಕ್ಕುಗಳ ನಿರಾಕರಣೆ ಕಾಣಬಹುದು.
- ಜನಾಂಗ ಹತ್ಯೆ, ವಿವಿಧ ಶೋಷಣೆ ಹಾಗೂ ದಬ್ಬಾಳಿಕೆಯನ್ನು ಭಾರತ ವಿರೋಧಿಸಿದೆ.
- ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸಿದೆ.
- ಶಸ್ತ್ರಾಸ್ತ್ರಗಳ ಪೈಪೋಟಿ:–
- 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊಣೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತಿದೆ' ಎಂಬ ಮಾತಿದೆ.
- ಆದ್ದರಿಂದ ನಿಶಾಸ್ತ್ರೀಕರಣ ಇಂದಿನ ಹಾಗೂ ಮುಂದಿನ ಉಳುವಿಗೆ ಅಗತ್ಯ.
- ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಯಸ್ತ್ರೀಕರಣ ಒಂದೇ ಉಪಾಯ
- ನಿಶ್ಯಸ್ತ್ರೀಕರಣ ಎಂದರೆ:– ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆ.
- ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಲ್ಲಿ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧ ಸಂಭವ ತಲೆದೊರುತ್ತದೆ ಆದ್ದರಿಂದ ನಿಶ್ಯಸ್ತ್ರೀಕರಣ ಪ್ರಚಲಿತ ಜಗತ್ತಿಗೆ ಅವಶ್ಯಕ.
- ಶಸ್ತ್ರಾಸ್ತ್ರಗಳು & ಮದ್ದುಗುಂಡುಗಳು ಆರ್ಥಿಕವಾಗಿ ನಷ್ಟದಾಯಕ.
- ಅಮೇರಿಕಾದ ಅಧ್ಯಕ್ಷ ಐಸನ್ ಹೋವರ್:– "ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ; ಬದಲಿಗೆ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ದಿವಂತೆಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ" ಎಂದರು.
- ಭಾರತದ ಪಾತ್ರ:–
- ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದ್ದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ.
- ಜಾಗತಿಕ ಸುರಕ್ಷಯೆ ದೃಷ್ಟಿಯಿಂದ ಯುದ್ಧಗಳ ನಿವಾರಣೆ ಅಗತ್ಯ.
- 1963ರ ಬಳಿಕೆ ಅಮೇರಿಕಾ & ರಷ್ಯಾ ಬಣಗಳು ದ್ವಿಪಕ್ಷೀಯ ಒಪ್ಪಂದಗಳು ಮಾಡಿಕೊಂಡಿವೆ.
- ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್)
- ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ
- ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ)
- ಫಲಿಕೆ ನಿಷೇಧ ಒಪ್ಪಂದ
- ಹೀಗೆ "ಪರಸ್ಪರ ನಿಶ್ಚಿತ ನಾಶ"ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನ ಅವಶ್ಯಕ.
- ಆರ್ಥಿಕ ಅಸಮಾನತೆ:–
- ಅರ್ಥಿಕ ಅಸಮಾನತೆ ವಸಾಹತುಶಾಹಿತ್ವ & ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ಬಳುವಳಿ.
- ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಸವಾಹತು ಸ್ಥಾಪಿಸಿ ಆರ್ಥಿಕವಾಗಿ ತೀರ ಹಿಂದುಳಿದವು.
- 20ನೇ ಶತಮಾನದ ಪೂರ್ವಭಾಗದವರೆಗೂ ಅವುಗಳ ಪ್ರಗತಿ ಕುಂಠಿತವಾಗಿತ್ತು.
- ಆದರೆ ಇವು ಕೃಷಿ, ಕೈಗಾರಿಕೆ, ಸಾರಿಗೆ & ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು.
- ಇವುಗಳಿಗೆ ವಿದೇಶೀ ಆರ್ಥಿಕ ಸಹಕಾರ ತೀರ ಅವಶ್ಯಕವಾಗಿತ್ತು.
- ಈ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕ ರಾಜಕೀಯ ಧ್ರುವೀಕರಣ ಆಧರಿಸಿ ಅಮೇರಿಕಾ & ರಷ್ಯಾದ ಗುಂಪುಗಳು ಸಹಾಯ ಆರಂಭಿಸಿದವು.
- ಆದರೆ ಈ ರಾಷ್ಟ್ರಗಳ ಬಡತನ & ಮುಂದುವರೆದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಯಿತು.
- ಭಾರತದ ಪಾತ್ರ:–
- ಭಾರತ ಅಲಿಪ್ತ ನೀತಿಯನ್ನು ಮುಂದುವರಿಸಿತು.
- ಯಾವುದೇ ಷರತ್ತುಗಳಿಲ್ಲದೇ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೇರವು ನೀಡಬೇಕೆಂದು ಪ್ರತಿಪಾದಿಸಿತು.
- ಹೀಗೆ ಭಾರತ ಹಿಂದುಳೀದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಪಯತ್ನಿಸಿತು.
- ಇದರಿಂದ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ತೃತೀಯ ಜಗತ್ತು ಎಂಬ ವಿಚಾರ 'ಬಡರಾಷ್ಟ್ರಗಳು' ಎಂಬುದನ್ನು ಎತ್ತಿ ತೋರಿಸುತ್ತದೆ.
- ಇದರಿಂದ ಬಡರಾಷ್ಟ್ರಗಳು, ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗ ಅವಕಾಶಗಳ ಕೊರತೆಯಿಂದ ಹೊರಬರಲು ಪ್ರಯತ್ನಿಸಿದವು.

RAMALINGAPPA L

- ಮುಂದುವರೆದ ರಾಷ್ಟ್ರಗಳು ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣಗಳಿಂದ ಬಡರಾಷ್ಟ್ರಗಳಲ್ಲಿ ದುಷ್ಪರಿಣಾಗಳು ಬೀರಿದವು.
- ಭಾರತ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯಾ & ಸಮಾನತೆಯನ್ನು ಪ್ರತಿಪಾದಿಸುತ್ತಿದೆ.
- ಭಯೋತ್ಪಾದಕತೆ:–
- ಇದನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದು ಕರೆಯಬಹುದು.
- ಇದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ.
- ಇದು ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ವ್ಯಕ್ತಿಗಳಿಗೆ & ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ.
- ಉಗ್ರಗಾಮಿತ್ವ ಮಾನಸಿಕ ವೇದನೆ ನೀಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ & ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯೇ 'ಭಯೋತ್ಪಾದಕೆ' ಎನ್ನುವರು.
- ಈ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ & ಸಮಾಜದ್ರೋಹಿ ಎನಿಸಿವೆ.
- 2001ರಲ್ಲಿ ಅಮೇರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ & ವಿವಿಧ ದೇಶಗಳಲ್ಲಿ ಸರಣಿಬಾಂಬು ಸ್ಫೋಟಗಳು ಜಗತ್ತಿನಲ್ಲಿ ಕಳವಳಕಾರಿ ಸಂಗತಿಗಳು.
- ಭಯೋತ್ಪಾದನೆಯನ್ನು ಪ್ರೇರೆಪಿತ ಅಂಶಗಳು:–
- ಧಾರ್ಮಿಕ ಮೂಲಭೂತ ಚಿಂತನೆ
- ಪ್ರತ್ಯೇಕವಾದ
- ತೀವ್ರ ಎಡಪಂಥೀಯ ವಿಚಾರ
- ನಾಡ ಬಿಡುಗಡೆಯ ಛಲ
- ವರ್ಣದ್ವೇಷ ನೀತಿ
- ಈ ಉಗ್ರಗಾಮಿತ್ವವು,
- ರಾಷ್ಟ್ರದ ನಾಗರಿಕರ ಮೇಲೆ
- ಮಿಲಿಟರಿ ಪಡೆಗಳ ಮೇಲೆ
- ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟುಮಾಡುತ್ತವೆ.
- ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ & ಪ್ರಚಾರವನ್ನು ಪಡೆಯುವ ಉದ್ದೇಶ ಹೊಂದಿದೆ.
- ಅಧಿಕ ಸ್ಫೋಟಕ ವಸ್ತು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ.
- ಉಗ್ರಗಾಮಿಗಳು ಗುಪ್ತಚರರನ್ನು ಹಾಗೂ ರತಬೇತು ಜಾಲವನ್ನು ಹೊಂದಿರುತ್ತದೆ ಹಾಗೂ ಅವರ ಸಹಾಯದಿಂದ ಹಣವನ್ನು ಸಂಗ್ರಹಿಸುತ್ತಾರೆ.
- ಇವರು ಅತ್ಯಾಧುನಿಕ ಸಾರಿಗೆ–ಸಂಪರ್ಕ ಸಾಧನ ಬಳಸುತ್ತಾರೆ.
- ಇವರು ನಿರ್ದಿಷ್ಟ ಗುರಿ & ಸಂಘಟನೆಗೆ ಪ್ರಚಾರವನ್ನು ಪಡೆಯುತ್ತಾರೆ.
- ಭಯೋತ್ಪಾದನೆಗೆ ಸಿಗುವ ಸಾಮಾನ್ಯ ತಾಣಗಳು:–
- ರಸ್ತೆಸಾರಿಗೆ
- ರೈಲ್ವೆ ನಿಲ್ದಾಣ
- ವಿಮಾನ ನಿಲ್ದಾನ
- ಸರ್ಕಾರಿ ಕಛೇರಿಗಳು
- ಕಿಕ್ಕಿರಿದ ಜನಜಂಗುಳಿ
- ಮಾರುಕಟ್ಟೆ ಪ್ರದೇಶ
- ಇದು ಅಸಾಂಪ್ರದಾಯಿಕ ಯುದ್ಧ ಎನ್ನಬಹುದು.
- ಉಗ್ರಗಾಮಿಗಳ ಹೀನ ಕೃತ್ಯಗಳು:–
- ಆತ್ಮಾಹುತಿ ದಾಳಿ
- ವಿಮಾನಕಳ್ಳತನ
- ಗುಂಡಿನಕಾಳಗ
- ಬಾಂಬುದಾಳಿ
- ಮುಗ್ಧ ಜನರನ್ನು ಒತ್ತೆ ಇರಿಸುವಿಕೆ
- ಭಾರತ:–
- ಭಾರತ ಉಗ್ರಗಾಮಿತ್ವಕ್ಕೆ ಬಹಳ ತುತ್ತಾಗಿದೆ.
- ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಮ್, ಅಸ್ಸಾಂಗಳಲ್ಲಿ ಇದು ತಲೆ ಎತ್ತಿದೆ.
- 2007 ನವೆಂಬರ್ 26 ಮುಂಬೈ ತಾಜ್‌ಹೋಟಲ್ ದಾಳಿ
- ರೈಲ್ವೆ ನಿಲ್ದಾನ ದಾಳಿ
- ದೆಹಲಿಯ ಸಂಸತ್ ಭವನದ ಮೇಲೆ ದಾಳಿ
- ಹೈದರಾಬಾದ್, ಚೈನ್ನೈ, ಬೆಂಗಳೂರು, ಬುದ್ಧಗಯಾಗಳಲ್ಲಿ ಕೃತ್ಯ
- ನಕ್ಸಲವಾದಿಗಳು ಭೀಕರವಾದ ಭಯೋತ್ಪಾದಕತೆ ನಡೆಸುತ್ತಿವೆ.

RAMALINGAPPA

- ಪಾಕಿಸ್ತಾನ ಮತ್ತು ಚೈನಾಗಳು ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತವೆ.
- ಆದ್ದರಿಂದ ಭಾರತ ಅನ್ಯರಾಷ್ಟ್ರಗಳ ಮೇಲಿನ ಭಯೋತ್ಪಾದನೆಗೆ ವಿರೋಧ ವ್ಯಕ್ತಪಡಿಸುತ್ತದೆ.
- ನಮ್ಮ ಕೇಂದ್ರ & ರಾಜ್ಯ ಸರ್ಕಾರಗಳು ಇದರ ನಿಗ್ರಹಕ್ಕೆ ಪ್ರಯತ್ನ.
- ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಯನ್ನು ರಚಿಸಿದೆ.
- ಶಾಂತಿ ಪ್ರಿಯ ರಾಷ್ಟ್ರವಾದ ಭಾರತ ಭಯೋತ್ಪಾದಕತೆಯನ್ನು ವಿರೋಧಿಸುತ್ತಿದೆ.
- ಮನುಕುಲದ ಇತಿಹಾಸದಲ್ಲಿ ಹಿಂಸೆ, ಭಯೋತ್ಪಾದನೆಯಿಂದ ಸಾಧಿಸಿದ್ದು ಕ್ಷುಲಕ ಹಾಗೂ ಅಹಿಂಸೆ, ಸತ್ಯ, ಪ್ರೇಮ, ತ್ಯಾಗಗಳಿಂದ ಸಾಧಿಸಿದ್ದು ಅಪಾರ.
- ಜಾಗತಿಕ ಸಂಸ್ಥೆಗಳು
- ವಿಶ್ವ ಸಂಸ್ಥೆ(ಯು.ಎನ್.ಓ)
- ಒಂದನೇ ವಿಶ್ವಯುದ್ಧದ ನಂತರ ಜಾಗತಿಕ ಶಾಂತಿಗಾಗಿ "ಲೀಗ್ ಆಫ್ ನೇಷನ್ಸ್" ಸ್ಥಾಪನೆಯಾಯಿತು.
- ಆದರೆ 1939ರಲ್ಲಿ ಎರಡನೇ ಮಹಾಯುದ್ಧ ಆರಂಭದೊಂದಿಗೆ ಇದು ನಾಶವಾಯಿತು.
- ಆಗ ವಿಶ್ವಶಾಂತಿಗಾಗಿ ಪ್ರಯತ್ನ:-
- ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರು:-
- ಇಂಗ್ಲೇಂಡಿನ ವಿನ್‌ಚರ್ಚಿಲ್
- ರಷ್ಯಾದ ಜೋಸೆಫ್ ಸ್ಟಾಲಿನ್
- ಅಮೇರಿಕಾದ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್
- ವಿಶ್ವಸಂಸ್ಥೆ ಎಂಬ ಪದ ಮೊದಲ ಬಾರಿಗೆ 'ಅಮೇರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಚಾಲ್ತಿಗೆ ತಂದರು.
- 1942 ಜನವರಿ 1 ರಂದು 26 ದೇಶಗಳು ಸಹಿಹಾಕುವುದರ ಮೂಲಕ ಈ ಪದವನ್ನು ಉಪಯೋಗಿಸಿದರು.
- ಈಗ ಇದನ್ನು "ವಿಶ್ವ ರಾಷ್ಟ್ರಗಳು" ಎಂದು ಕರೆಯುತ್ತಾರೆ.
- 1945 ಜೂನ್ 26ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಕಛೇರಿಯಲ್ಲಿ ಶಾಂತಿ ಸನ್ನದಿಗೆ 51 ದೇಶಗಳು ಹಸ್ತಾಕ್ಷರ ನೀಡಿದರು.
- 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆಯ ಉದಯ
- 193 ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯತ್ವ ಪಡೆದಿವೆ.
- ಇದರ ಕೇಂದ್ರ ಕಛೇರಿ ಅಮೇರಿಕಾದ ನ್ಯೂಯಾರ್ಕ್ ನಗರದಲ್ಲಿದೆ.
- ಉದ್ದೇಶಗಳು:- ಇದು ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ.
- 19 ಅಧ್ಯಾಯಗಳಿವೆ
- 111 ವಿಧಿಗಳನ್ನು ಹೊಂದಿದೆ.
- "ವಿಶ್ವದ ಜನಸಮುದಾಯವೆನಿಸಿದ ನಾವು ----" ಎಂಬ ವಾಕ್ಯದಿಂದ ಆರಂಭವಾಗುತ್ತದೆ.
- ಉದ್ದೇಶಗಳು:-
- ಅಂತರಾಷ್ಟ್ರೀಯ ಶಾಂತಿ & ಸುಭದ್ರತೆಯನ್ನು ಕಾಪಾಡುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ಮಾನವನ ಮೂಲಭೂತ ಹಕ್ಕುಗಳ ನಂಬಿಕೆ ಹೆಚ್ಚಿಸುವುದು.
- ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಅಂತರಾಷ್ಟ್ರೀಯ ಸಹಕಾರದಿಂದ ಪರಿಹಾರ
- ಅಂತರಾಷ್ಟ್ರೀಯ ನ್ಯಾಯ & ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಣೆ
- ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು:-
- ಸಾಮಾನ್ಯ ಸಭೆ:-
- ರಚನೆ:-
- ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಹೊಂದಿದ ಸಂಸ್ಥೆ
- ಪ್ರತಿ ರಾಷ್ಟ್ರ 5 ಜನ ಪ್ರತಿನಿಧಿಗಳನ್ನು ಕಳುಹಿಸಬೇಕು
- ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತ ಚಲಾಯಿಸುವ ಹಕ್ಕು
- ಸಾಮಾನ್ಯ ಸಭೆಯ ಪ್ರಥಮ ಸಭೆಯಲ್ಲಿ ಒಂದು ವರ್ಷಕ್ಕೆ ಅಧ್ಯಕ್ಷ, 17 ಉಪಾಧ್ಯಕ್ಷರು, 7 ಸ್ಥಾಯಿ ಸಮಿತಿಗೆ ಏಳು ಮಂದಿ ಅಧ್ಯಕ್ಷರನ್ನು ಆರಿಸಲಾಗುತ್ತದೆ.
- ಅಧಿವೇಶನ ಸೆಪ್ಟಂಬರ್‌ನಲ್ಲಿ ಆರಂಭಗೊಂಡು ಡಿಸೆಂಬರ್‌ನಲ್ಲಿ ಕೊನೆಯಾಗುತ್ತದೆ.
- ನಿರ್ಧಾರಗಳು ಮೂರನೇ ಎರಡಂಶದಷ್ಟು ಸದಸ್ಯರಿಂದ ಅನುಮೋದನೆ
- ಕಾರ್ಯಗಳು:-
- ವಾರ್ಷಿಕ ಆಯ್ಯವಯ ಪಟ್ಟಿಗೆ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕು
- ತುರ್ತು ವಿಷಯಗಳನ್ನು ಚರ್ಚೆ ಮಾಡಬೇಕಿದ್ದರೆ ವಿಶೇಷ ಅಧಿವೇಶನ ಕರೆಯುತ್ತಾರೆ.
- ಜಾಗತಿಕ ಸಂಸತ್ತಿನ ರೀತಿ ಕಾರ್ಯ ನಿರ್ವಹಣೆ

RAMALINGAPPA

- ವಿಶ್ವದ ಪ್ರಮುಖ ವಿದ್ಯಮಾನಗಳನ್ನು ಚರ್ಚಿಸುತ್ತಾರೆ.
- ಭದ್ರತಾ ಸಮಿತಿ:–
- ರಚನೆ:–
- ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವರು
- ಇದು 15 ಮಂದಿ ಸದಸ್ಯರನ್ನು ಹೊಂದಿದೆ.
- ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ & ಚೀನಾ ಖಾಯಂ ಸದಸ್ಯ ರಾಷ್ಟ್ರಗಳು
- 10 ಮಂದಿ ಹಂಗಾಮಿ ಸದಸ್ಯರು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತಿದೆ.
- ಪ್ರತಿ ರಾಷ್ಟ್ರಕ್ಕೂ ಒಂದು ಮತ ಚಲಾಯಿಸುವ ಹಕ್ಕಿದೆ.
- ಪ್ರತಿಯೊಂದು ಪ್ರಮುಖ ನಿಧಾರಕ್ಕೂ ಖಾಯಂ ಸದಸ್ಯ ರಾಷ್ಟ್ರದ ಸಮ್ಮತಿ ಬೇಕು.
- ಭಾರತ ಕೂಡ ಖಾಯಂ ಸದಸ್ಯತ್ವಕ್ಕೆ ಪ್ರಯತ್ನಿಸುತ್ತಿದೆ.
- ಕಾರ್ಯಗಳು:–
- ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕೆ ಯತ್ನ
- ವಿಶ್ವಸಂಸ್ಥೆಯ ಶಾಂತಿಪಾಲನೆ ಪಡೆಯನ್ನು ನಿಯೋಜಿಸುತ್ತದೆ.
- ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶತನ್ನು ನೇಮಕ ಮಾಡುತ್ತದೆ.
- ವಿಶ್ವಸಂಸ್ಥೆಗೆ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹಸರು ಸೂಚಿಸುತ್ತದೆ.
- ಆರ್ಥಿಕ ಹಾಗೂ ಸಾಮಾಜಿಕ ಸಮಿತಿ:–
- ಇದರಲ್ಲಿ 54 ಮಂದಿ ಸದಸ್ಯರಿರುತ್ತಾರೆ.
- 18 ಮಂದಿಯನ್ನು ಪ್ರತಿ 3 ವರ್ಷಕ್ಕೊಮ್ಮೆ ಆರಿಸಲ್ಪಡುತ್ತಾರೆ.
- ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುತ್ತಾರೆ.
- ಕಾರ್ಯಗಳು:–
- ಆರ್ಥಿಕ, ಸಾಮಾಜಿಕ, ಸಾಂಸ್ಕೃತಿ, ಶೈಕ್ಷಣಿಕ, ಆರೋಗ್ಯ ವಿಷಯಗಳ ಅಧ್ಯಯನ & ವರದಿ ಮಾಡುವಿಕೆ.
- ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ವಿಚಾರಗಳ ಬಗ್ಗೆ ಚರ್ಚೆ.
- ಮಾನವ ಹಕ್ಕುಗಳ ಬಗ್ಗೆ & ಮೂಲಭೂತ ಸ್ವಾತಂತ್ರ್ಯಗಳ ಬಗ್ಗೆ ಶಿಫಾರಸ್ಸು ಮಾಡುತ್ತದೆ.
- ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ವಿಷಯಗಳ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.
- ಅಂತರಾಷ್ಟ್ರೀಯ ಕಾರ್ಮಿಕ ಸಂಘ, ಆಹಾರ & ಕೃಷಿ ಸಂಸ್ಥೆ, ಜಾಗತಿಕ ಆರೋಗ್ಯ ಸಂಸ್ಥೆಗಳ ಕಾರ್ಯಗಳನ್ನು ಸಮನ್ವಯ ಮಾಡುವುದು.
- ದತ್ತಿ ಸಮಿತಿ(ಟ್ರಸ್ಟಿಶಿಪ್ ಕೌನ್ಸಿಲ್):–
- ಇದು ಸಾಮಾನ್ಯ ಸಭೆಯ ಉಪಸಂಸ್ಥೆ ಅಥವಾ ಸಹಾಯಕ ಸಂಸ್ಥೆ
- ಟ್ರಸ್ಟ್ ಆಶ್ರಿತ ಪ್ರದೇಶ ಸಂಖ್ಯೆ ಕಡಿಮೆಯಾದ್ದರಿಂದ ಈ ಸಮಿತಿಯ ಕಾರ್ಯಕ್ಷೇತ್ರ ಕಡಿಮೆಯಾಗಿದೆ.
- ಸ್ವತಂತ್ರ ರಾಜ್ಯದ ಮಟ್ಟಕ್ಕೇರದ ಪ್ರದೇಶಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ.
- ಈಗ ಇದು ಅಸ್ತಿತ್ವದಲ್ಲಿ ಇಲ್ಲ ಕಾರಣ ಯಾವುದೇ ದತ್ತಿ ಉಳಿದಿಲ್ಲ.
- ಅಂತರಾಷ್ಟ್ರೀಯ ನ್ಯಾಯಾಲಯ:–
- ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆ
- 15 ಮಂದಿ ನ್ಯಾಯಾಧೀಶರಿದ್ದರು.
- ಅಧಿಕಾರದ ಅವಧಿ 9 ವರ್ಷಗಳು
- ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ.
- ಇದರ ಕಛೇರಿ ನೆದರ್‌ಲ್ಯಾಂಡ್‌ನ ಹೇಗ್‌ನಲ್ಲಿದೆ.
- 3 ವರ್ಷಗಳ ಅವಧಿಗೆ ಒಬ್ಬ ಅಧ್ಯಕ್ಷ & ಉಪಾಧ್ಯಕ್ಷರನ್ನು ಮುಖ್ಯನ್ಯಾಯಾಧೀಶರು ಆರಿಸುತ್ತಾರೆ.
- ಬಹುಮತದ ಆಧಾರದಲ್ಲಿ ಇದರ ನಿರ್ಣಯಗಳು ಕೈಗೊಳ್ಳಲ್ಪಡುತ್ತದೆ.
- ನ್ಯಾಯಾ ತೀರ್ಪುಗಳ ಜೊತೆಗೆ ಕಾನೂನು ವಿಚಾರದಲ್ಲಿ ಯೋಗ್ಯ ಸಲಹೆಗಳನ್ನು ನೀಡುತ್ತದೆ.
- ನೈತಿಕ & ವೈಚಾರಿಕ ನೆಲೆಗಟ್ಟಿನ ಮೇಲೆ ಈ ನ್ಯಾಯಲಯ ನಿರ್ಣಗಳ ಮಹತ್ವ
- ನ್ಯಾಯಾಲಯದ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಸುವಂತಿಲ್ಲ
- ಅಂತರಾಷ್ಟ್ರೀಯ ಶಾಂತಿ & ಸುಭದ್ರತೆಗೆ ಈ ನ್ಯಾಯಾಲಯ ಕೊಡುಗೆ ನೀಡಿದೆ.
- ಸಚಿವಾಲಯ:–
- ಮಹಾಕಾರ್ಯದರ್ಶಿ ಹಾಗೂ ವಿಶ್ವಸಂಸ್ಥೆಯ ಸಿಬ್ಬಂದಿವರ್ಗ ಈ ಅಂಗ ಸಂಸ್ಥೆಗೆ ಸೇರಿದ್ದಾರೆ.
- ಮಹಾಕಾರ್ಯದರ್ಶಿಯವರು ಈ ಕಾರ್ಯಾಂಗದ ಮುಖ್ಯಸ್ಥರು.
- ಇವರನ್ನು ಭದ್ರತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯು 5 ವರ್ಷಗಳ ಅವಧಿಗೆ ಆರಿಸುತ್ತದೆ.
- ಪ್ರಧಾನ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದೆ.

RAMALINGAPPA L

- ಜಿನೇವಾ, ವಿಯೆನ್ನಾ, ನೈರೋಬಿಗಳಲ್ಲಿ ಶಾಕೆಗಳಿವೆ
- ದಿನನಿತ್ಯ ಆಡಳಿತಾತ್ಮಕ ಕಾರ್ಯ ಯೋಜನೆ & ಸಾಂಸ್ಥಿಕ ಕಾರ್ಯಗಳು ಸಚಿವಾಲಯದ ವ್ಯಾಪ್ತಿಗೆ ಬರುತ್ತವೆ.
- ವಿಶ್ವಸಂಸ್ಥೆಯ ಸಾಧನೆಗಳು:–
- ಶಾಂತಿಸ್ಥಾಪನೆಯ ಕಾರ್ಯಗಳು:–
- ಹಲವು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಖಾಯಂ ಸದಸ್ಯರ ಒಮ್ಮತದ ಕೊರತೆ & ಜಾಗತಿಕ ವಿದ್ಯಮಾನಗಳ ಸಂಕೀರ್ಣತೆಯಿಂದ ಸಾಧನೆಯು ಮಿಶ್ರರೂಪದಿಂದ ಕೂಡಿದೆ.
- ಕಾರ್ಯಾಚರಣೆ ಯುದ್ಧ ಸ್ತಂಭನರೇಖೆಯ ವೀಕ್ಷಕರ ಅಥವಾ ಶಾಂತಿ ಪಡೆಗಳ ಮೂಲಕ ನಡೆಯುತ್ತದೆ.
- ಸುಯೆಜ್ ಕಾಲುವೆ ಬಿಕ್ಕಟ್ಟು
- ಇರಾನ್ ಸಂಘರ್ಷ
- ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲಿಸ್ಟೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರಸ್, ಅರಬ್–ಇಸ್ರೇಲ್, ನಮೀಬಿಯಾ, ಅಫಘಾನಿಸ್ತಾನ ವಿವಾದಗಳ ಪರಿಹಾರಕ್ಕೆ ಶ್ರಮಿಸಿದೆ.
- ಅಣ್ವಸ್ತ್ರ ಹಾಗೂ ನಿಶ್ಯಸ್ತ್ರೀಕರಣ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತದೆ.
- ಶೀತಲ ಸಮರದ ಸಮಯದಲ್ಲಿ ಶ್ರಮಿಸಿದೆ.
- ಈಗ ವಿಶ್ವಶಾಂತಿ ನೆಲೆಯಲ್ಲಿ ಉತ್ತಮ ವಲಯ ನಿರ್ಮಾಣವಾಗಿದೆ.
- ಆರ್ಥಿಕ ಹಾಗೂ ಹಣಕಾಸಿನ ಸಾಧನೆ:–
- ಪ್ರಸ್ತಾವನೆಯಲ್ಲಿ "ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು" ಎಂದು ಘೋಷಿಸಿದೆ.
- ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ ಆಗಿದೆ.
- ವಿಶ್ವ ಸಂಸ್ಥೆಯ ಪ್ರಗತಿ ಯೋಜನೆಯು ಉಲ್ಲೇಖನಾರ್ಹ ಸಾಧನೆ
- ವಿಶ್ವಬ್ಯಾಂಕ್, ಐ.ಎಂ.ಎಫ್ ನಂತಹ ವಿತ್ತೀಯ ಸಂಸ್ಥೆಗಳ ಸಹಯೋಗದೊಂದಿಗೆ ಉತ್ತಮ ಸಾಧನೆ ಮಾಡಿದೆ.
- ಸಾಮಾಜಿಕ ಸಾಧನೆಗಳು:–
- ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್, ವಿಶ್ವ ನಿರಾಶ್ರಿತರ ಆಯೋಗ ಸಾಮಾಜಿಕ ಕಳಕಳಿಯ ಸೇವಾ ಸಂಸ್ಥೆಗಳು
- 1948ರ ಸಾರ್ವತ್ರಿ ಮಾನವ ಹಕ್ಕುಗಳ ಘೋಷಣೆ ಒಂದು ಸಾಧನೆ
- ವರ್ಣಭೇದ ನೀತಿಯನ್ನು ಅಳಿಸಿ ಹಾಕಿದೆ.
- ಸಾಮ್ರಾಜ್ಯಶಾಹಿತ್ವ & ವಸಾಹತುಶಾಹಿತ್ವ ಇಲ್ಲವಾಗಿಸುವಲ್ಲಿ ಸಂಸ್ಥೆಯ ಪಾತ್ರ ಗಮನಾರ್ಹ
- ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು:–
- ಆಹಾರ & ಕೃಷಿ ಸಂಸ್ಥೆ:–
- ಉದ್ದೇಶ:– ಜಗತ್ತಿನಾದ್ಯಂತ ಬಡತನ, ಹಸಿವು & ಅಪೌಷ್ಠಿಕತೆಯ ವಿರುದ್ಧ ಹೋರಾಡಲು
- ಉದಯ:– 1945
- ಕೇಂದ್ರ ಕಛೇರಿ:– ರೋಮ್
- 3 ವಿಭಾಗಗಳು:–
- ಸಮ್ಮೇಳನ
- ಸಮಿತಿ
- ಮಹಾನಿರ್ದೇಶಕರು
- ಉದ್ದೇಶಗಳು:–
- ಕೃಷಿ ಕ್ಷೇತ್ರದ ಅಭಿವೃದ್ಧಿ
- ಪೌಷ್ಠಿಕ ಆಹಾರ ಒದಗಿಸುವುದು
- ಹಸಿವಿನಿಂದ ಜಾಗತಿಕ ಜನಸಮುದಾಯದ ವಿಮುಕ್ತಿ
- ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೇ
- ವಿಶ್ವ ಆರೋಗ್ಯ ಸಂಸ್ಥೆ:–
- ಪ್ರಪಂಚದ ಮಾನವ ಆರೋಗ್ಯ ಸುಧಾರಿಸಲು
- 1948ರಲ್ಲಿ ಸ್ಥಾಪನೆ
- ಕೇಂದ್ರ ಕಚೇರಿ:– ಸ್ವಿಟ್ಜರ್‌ಲ್ಯಾಂಡಿನ ಜಿನೇವಾ
- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ರೋಗಗಳನ್ನು ಸಂಪೂರ್ಣವಾಗಿ ತಡೆಯಲು ಪ್ರಯತ್ನ
- ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚ ವಿಮುಕ್ತಿ
- ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸಲು ಯಶಸ್ಸು.
- ಆನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಠಿಕತೆಯ ಕೊರತೆ ನಿವಾರಣೆ
- ಯುನೆಸ್ಕೋ:–
- ಸ್ಥಾಪನೆ:– 1946
- ಕೇಂದ್ರ ಕಛೇರಿ:– ಪ್ಯಾರಿಸ್
- ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತದೆ.
- ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರ & ಪರಿಸರ ವಿಜ್ಞಾನದ ಬಗ್ಗೆ ಕಾರ್ಯ
- ಪ್ರಪಂಚದಲ್ಲಿ ಶಿಕ್ಷಣ & ಜ್ಞಾನ ಪ್ರಸಾರದಲ್ಲಿ ಸರ್ಕಾರ & ಸರ್ಕಾರೇತರ ಸ್ವಯಂ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.
- ಯುನಿಸೆಫ್:–
- ಸ್ಥಾಪನೆ:– 1946



RAMALINGAPPAL

- ಉದ್ದೇಶ:– ಮಕ್ಕಳ ಕ್ಷೇಮಾಭಿವೃದ್ಧಿಗೆ
- 1953ರಲ್ಲಿ ಇದು ಶಾಶ್ವತ ಸಂಸ್ಥೆಯಾಗಿದೆ.
- ಇದರಲ್ಲಿ 30 ಮಂದಿ ಸದಸ್ಯರಿದ್ದಾರೆ.
- ಮಹಿಳೆಯರು & ಮಕ್ಕಳ ಅಭಿವೃದ್ಧಿಗೆ ಪೂರಕ ಪರಿಸರ ಒದಗಿಸುವ ಉದ್ದೇಶ
- 1965ರಲ್ಲಿ ಇದು ನೋಬೆಲ್ ಬಹುಮಾನ ಪಡೆದಿದೆ.
- ಶುಭಾಶಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆ ಬಳಕೆ
- ಇದು ಮಾನವೀಯ ದೃಷ್ಟಿಕೋನ ಹೊಂದಿದೆ.
- ಐ.ಎಂ.ಎಫ್:–
- 1945ರಲ್ಲಿ ಆರಂಬಗೊಂಡು 1947ರಲ್ಲಿ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ
- ಕೇಂದ್ರ ಕಛೇರಿ:– ಅಮೇರಿಕಾದ ವಾಷಿಂಗ್ ಟನ್
- ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತಿದೆ.
- ವಿಶ್ವವಾಣಿಜ್ಯ ವ್ಯವಹಾರದ ಬೆಳವಣಿಗೆ, ಆರ್ಥಿಕ ಸ್ಥಿರತೆ, ಉತ್ತಮ ವಿದೇಶಿ ಪಾವತಿ ಸಮತೋಲನ ಕಾಯ್ದುಕೊಳ್ಳಲು ಸಹಾಯ
- ಇದು ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ, ಆಡಳಿತ ನಿರ್ದೇಶಕರು ಕಾರ್ಯನಿರ್ವಹಿಸುತ್ತಾರೆ.
- ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರಬ್ಯಾಂಕು ಆಗಿ ಕಾರ್ಯನಿರ್ವಹಣೆ
- ಮುಂದುವರೆದ & ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧ ಬೆಸೆಯುತ್ತದೆ.
- ಐ.ಬಿ.ಆರ್.ಡಿ:–
- ಇದನ್ನು 'ವಿಶ್ವ ಬ್ಯಾಂಕ್' ಎನ್ನುವರು.
- ಇದು 1947ರಲ್ಲಿ ಆರಂಭ
- ಮುಖ್ಯ ಕಛೇರಿ:– ವಾಷಿಂಗ್‌ಟನ್
- ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಸ್ಥಾಪನೆ.
- ಕೃಷಿ, ಕೈಗಾರಿಕೆ, ಸಾರಿಗೆ–ಸಂಪರ್ಕ ಅಭಿವೃದ್ಧಿಗಾಗಿ ಸಾಲ ನೀಡುತ್ತದೆ.
- ವಿಶ್ವ ವ್ಯಾಪಾರ & ವಿದೇಶಿ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ.
- ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಸಹಾಯ
- ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ, ಅಧ್ಯಕ್ಷರು ಕಾರ್ಯನಿರ್ವಹಣೆ
- ಎರಡು ಸಹಕಾರಿ ಅಂಗಗಳಿವೆ:–
- ಅಂತರಾಷ್ಟ್ರೀಯ ಪ್ರಗತಿ ಕೂಟ
- ಅಂತರಾಷ್ಟ್ರೀಯ ಹಣಕಾಸು ನಿಗಮ
- ಅಂತರಾಷ್ಟ್ರೀಯ ಕಾರ್ಮಿಕ ಸಂಘ:–
- ಇದು ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಆರಂಭ
- ಮುಖ್ಯ ಕಾರ್ಯಾಲಯ:– ಸ್ವಿಟ್ಜರ್‌ಲ್ಯಾಂಡ್‌ನ ಜಿನೇವಾದಲ್ಲಿ
- ಪ್ರತಿ ಸದಸ್ಯ ರಾಷ್ಟ್ರ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕು.
- ಇದರಲ್ಲಿ ಒಬ್ಬರು ಕಾರ್ಮಿಕ ಪ್ರತಿನಿಧಿ & ಇನ್ನೊಬ್ಬರು ಆಡಳಿತ ನಡೆಸುವ ಪ್ರತಿನಿಧಿ
- ಇದರ ವ್ಯಾಪ್ತಿಗೆ:– ಕಾರ್ಮಿಕರ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ, ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ
- ಸಾಮಾನ್ಯ ಸಮ್ಮೇಳನ ಕಾರ್ಮಿಕ ವರ್ಗದ ಜಾಗತಿಕ ಸಂಸತ್ತಿನಂತೆಯೇ ಇದ್ದು ರಕ್ಷಿಸುತ್ತದೆ.
- ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ:–
- ಜಾಗತಿಕ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯ ಸಂಗತಿಗಳ ಪ್ರಗತಿಗೆ ಯತ್ನ
- ಅಂತರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಬೇಕಾದ ತಾಂತ್ರಿಕ ಸಹಕಾರ
- ಜಾಗತಿಕ ಮಟ್ಟದಲ್ಲಿ ತೊಂದರೆಗಳನ್ನು ನಿವಾರಿಸುತ್ತದೆ.
- ಅಂತರಾಷ್ಟ್ರೀಯ ವ್ಯಾಪಾರ & ವಾಣಿಜ್ಯದ ಬೆಳವಣಿಗೆಗ ಸಹಕರಿಸುತ್ತದೆ.
- ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.
- ವಿಶ್ವ ವ್ಯಾಪಾರ ಸಂಘ:–
- ಇದು 1995 ಜನವರಿ 1 ರಂದು ಹುಟ್ಟಿತು.
- ಸದಸ್ಯ ರಾಷ್ಟ್ರಗಳು ಸಾಮಾನ್ಯ ವ್ಯಾಪಾರ ಮತ್ತು ಸುಂಕ ಒಪ್ಪಂದ(ಗ್ಯಾಟ್) ಕ್ಕೆ ಒಪ್ಪಿವೆ.
- ಜಾಗತಿಕ ಮಟ್ಟದ ವ್ಯಾಣಿಜ್ಯ & ವ್ಯಾಪಾರದ ತೋಡಕುಗಳ ನಿವಾರಣೆಗೆ ಯತ್ನ
- ಅಂತರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ದೋರಣೆಗಳನ್ನು ರೂಪಿಸುವಲ್ಲಿ ಸಹಾಯ

- ಐ.ಎಂ.ಎಫ್ & ಐ.ಬಿ.ಆರ್.ಡಿ ಸಂಸ್ಥೆಯೊಂದಿಗೆ ತೃತೀಯ ಆರ್ಥಿಕ ಆಧಾರ ಸ್ತಂಭ ಎನ್ನುವರು.
- ಪ್ರಾದೇಶಿಕ ಸಹಕಾರ ಸಂಸ್ಥೆಗಳು:–
- ಕಾಮನ್‌ವೆಲ್ತ್ ರಾಷ್ಟ್ರ ಸಂಘ:–
- ಇದನ್ನು 'ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್' ಎಂದು ಕರೆಯುತ್ತಿದ್ದರು.
- ನಂತರ 'ಬ್ರಿಟಿಷ್' ಎಂಬ ಶಬ್ದವನ್ನು ತೆಗೆಯಲಾಯಿತು.
- 1926ರಲ್ಲಿ ಸ್ಥಾಪನೆ
- ಭಾರತವೂ ಸೇರಿದಂತೆ ಸ್ವಾತಂತ್ರ್ಯಗಳಿಸಿದ ರಾಷ್ಟ್ರಗಳು ಸದಸ್ಯತ್ವ ಪಡೆದಿವೆ.
- ಇದಕ್ಕೆ ಬ್ರಿಟನ್ ದೊರೆಯ ಹಿರಿತವಿದೆ.
- ಒಟ್ಟು 54 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ಇದರ ಕೇಂದ್ರ ಕಛೇರಿ ಬ್ರಿಟನ್‌ನಿ ಲಂಡನ್‌ನಲ್ಲಿದೆ.
- ಇದರ ಕಾರ್ಯಕಲಾಪಗಳಲ್ಲಿ ಪ್ರಧಾನಮಂತ್ರಿ, ಅರ್ಥ ಸಚಿವರು, ವಿದೇಶಾಂಗ ಮಂತ್ರಿಗಳು ಭಾಗವಹಿಸುತ್ತಾರೆ.
- ಇದರ ಉದ್ದೇಶಗಳು:–
- ಪ್ರಜಾತಂತ್ರವನ್ನು ಎತ್ತಿಹಿಡಿಯುವುದು.
- ಸ್ವಾತಂತ್ರ್ಯದ ಸಂರಕ್ಷಣೆ
- ಬಡತನ ನಿರ್ಮೂಲನೆ
- ವಿಶ್ವಶಾಂತಿ ನೆಲೆಗೊಳಿಸುವಿಕೆ
- ಕ್ರೀಡೆ, ವಿಜ್ಞಾನ, ಕಲೆಯ ಬೆಳವಣಿಗೆ & ಸಂಬಂಧಗಳ ವೃದ್ಧಿ
- ಸಾರ್ಕ್:–
- ಇದು 1985ರಲ್ಲಿ ಸ್ಥಾಪನೆಯಾಯಿತು.
- ಇದು 8 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ಸದಸ್ಯ ರಾಷ್ಟ್ರಗಳು:– ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್ಡೀವ್ಸ್, ಭೂತಾನ್ & ಆಫ್ಘಾನಿಸ್ತಾನ
- ಮೂಲ ಉದ್ದೇಶ:– ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ & ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವುದು.
- ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ, ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ.
- ಎಲ್ಲಾ ನಿಯಮಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲಿ ಇರಬೇಕು ಎಂಬುದು ಸೂತ್ರವು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿದೆ.
- ಸದಸ್ಯ ರಾಷ್ಟ್ರಗಳ ಮಧ್ಯೆ ಸಾಕಷ್ಟು ವಿವಾದಗಳಿವೆ.
- ಆದರೂ, ನಿಯತಕಾಲಿಕ ಸಮಾವೇಶಗಳು ಪರಸ್ಪರ ಶಾಂತಿಯುತ ಪರಿಹಾರಕ್ಕೆ ಅನುವು ಮಾಡಿವೆ.
- ವಿಜ್ಞಾನ, ತಾಂತ್ರಿಕತೆ, ಕೃಷಿ ಬಗ್ಗೆ ಸದಸ್ಯ ರಾಷ್ಟ್ರಗಳು ಕಮ್ಮಟಗಳು & ತರಬೇತಿ ಕಾರ್ಯಗಾರಗಳು ಜಂಟಿಯಾಗಿ ನಡೆಸುತ್ತವೆ.
- ಭಾರತಚು ಸಾರ್ಕ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ.
- ಮುಖ್ಯ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.
- ಯುರೋಪಿಯನ್ ಯೂನಿಯನ್:–
- ಇದು 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಫಿಯನ್ ಯೂನಿಯನ್ ಒಪ್ಪಂದಕ್ಕೆ ಅನುಗುಣವಾಗಿ 1992ರಲ್ಲಿ ಉದಯ
- ಇದು ಸದಸ್ಯ ರಾಷ್ಟ್ರಗಳ ಮಧ್ಯ ಸಮಾನ ಏಕ ಮಾರುಕಟ್ಟೆ, ಒಂದೇ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆಗೆ ಅವಕಾಶ
- ಇದರ ಮುಖ್ಯ ಅಂಗ ಸಂಸ್ಥೆಗಳು:–
- ಸಮಿತಿ
- ಆಯೋಗ
- ಯುರೋಪಿನ ಸಂಸತ್ತು
- ಯುರೋಪಿನ ನ್ಯಾಯಾಲಯ
- ಇದು ಒಂದು ಸಂಯುಕ್ತ ರಾಜ್ಯವನ್ನು ಹೋಲುತ್ತಿದೆ.
- ಇದು ಶಾಂತಿ & ಪ್ರಜಾತಂತ್ರಕ್ಕಾಗಿ ಕಾರ್ಯನಿರ್ವಹಿಸುತ್ತದೆ
- ಇದು ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀಯ ವಾರಸುದಾರ ಸಂಸ್ಥೆಯಾಗಿದೆ.
- ಇದು ಸದಸ್ಯ ರಾಷ್ಟ್ರಗಳಿಗೆ ಸಾರ್ವಭೌಮ ಅಧಿಕಾರ ನೀಡುತ್ತದೆ.
- ಆಸಿಯಾನ್:–
- ಇದು 1967ರಲ್ಲಿ ಉದಯ
- ಸ್ಥಾಪಕ ರಾಷ್ಟ್ರಗಳು:– ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಲಿಪೈನ್ಸ್ & ಥೈಲ್ಯಾಂಡ್
- ಈಗ 10 ರಾಷ್ಟ್ರಗಳು ಸದಸ್ಯತ್ವ ಹೊಂದಿವೆ
- ಮುಖ್ಯ ಉದ್ದೇಶಗಳು:–
- ಆರ್ಥಿಕ ಅಭಿವೃದ್ಧಿ
- ಸಾಮಾಜಿಕ ಬೆಳವಣಿಗೆಗೆ ಯತ್ನ
- ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ



RAMALINGAPPA L

- ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಪರಸ್ಪರ ನೆರವು & ಸಹಭಾಗಿತ್ವ ಹೊಂದಿವೆ.
- ಇದು ಮಿಲಿಟರಿ ಒಕ್ಕೂಟವಲ್ಲ
- ಇದರ ಬಗ್ಗೆ ಭಾರತ ಉದಾರ ನೀತಿ ಹೊಂದದೆ.
- ಆದರೆ ಭಾರತ ಇದರ ಸದಸ್ಯತ್ವ ಹೊಂದಿಲ್ಲ, ವೀಕ್ಷಕರ ಸ್ಥಾನ ಹೊಂದಿದೆ.
- ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯೂನಿಟಿ:–
- ಇದು 1963ರಲ್ಲಿ ಸ್ಥಾಪನೆ
- ಸ್ವಾತಂತ್ರ್ಯ ಗಳಿಸಿದ ಆಫ್ರಿಕನ್ ರಾಷ್ಟ್ರಗಳು ತಮ್ಮ ತಮ್ಮೊಳಗೆ ಹಲವು ಪ್ರಾದೇಶಿಕ ಸಂಸ್ಥೆಗಳನ್ನು ರಚಿಸಿಕೊಂಡವು
- ಒಟ್ಟಾಗಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ ಎಂಬ ಹೊಸ ಸಂಸ್ಥೆ ಸ್ಥಾಪನೆ
- ಎಲ್ಲಾ ಸ್ವತಂತ್ರ ಆಫ್ರಿಕನ್ ರಾಷ್ಟ್ರಗಳ ಸ್ವಯಂ ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತಿದೆ.
- ಸ್ವಾತಂತ್ರ್ಯ, ಸಮಾನತೆ, ನ್ಯಾಯ & ಒಗ್ಗಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲಸಲು ಶ್ರಮಿಸುತ್ತವೆ.
- ನೂತನ ವಸಾಹತುಶಾಹಿತ್ವದ ವಿರುದ್ಧ ಧ್ವನಿ ಎತ್ತಲು ಬದ್ಧರಾಗಿದ್ದಾರೆ.
- ವಸಾಹತುಶಾಹಿತ್ವ, ವರ್ಣಭೇದ ನೀತಿ & ಸಾಮ್ರಾಜ್ಯಶಾಹಿತ್ವ ವಿರೋಧಿ
- ಈ ಸಂಸ್ಥೆಯಲ್ಲಿ:–
- ಸದಸ್ಯ ರಾಷ್ಟ್ರಗಳ ಮುಖ್ಯಸ್ಥರ ಹಾಗೂ ಅಲ್ಲಿನ ಸರ್ಕಾರದ ಮುಖ್ಯಸ್ಥರ ಸಭೆ
- ಸಚಿವ ಸಂಪುಟ
- ಮಧ್ಯಸ್ಥಿಕೆ ಒಪ್ಪಂದ ಹಾಗೂ ರಾಜಿಪಂಚಾಯಿತಿ ಸಮಿತಿಯಿದೆ.
- ಸಾಮಾಜಿಕ ವರ್ತನೆ ಮತ್ತು ಪ್ರತಿಭಟನೆಗಳು:–
- ಸಮೂಹದಲ್ಲಿ ಇರುವಾಗ ಮಾಡು ಮನುಷ್ಯ ವರ್ತನೆಯನ್ನು 'ಸಾಮೂಹಿಕ ವರ್ತನೆ' ಎನ್ನುವರು
- ಸಾಮೂಹಿಕ ವರ್ತನೆ ಮಾನವನ ಸಂಘಿಕ ಜೀವನದ ಅವಿಭಾಜ್ಯ ಅಂಗ
- ಸಮೂಹ ವರ್ತನೆ:– ಸಾಕಷ್ಟು ದೊಡ್ಡ ಸಂಖ್ಯೆ ಜನರ ಆಕಸ್ಮಿಕವಾದ ಹಾಗೂ ಯೋಜನಬದ್ಧವಲ್ಲದ ರೀತಯ ಆಲೋಚನೆ, ಭಾವನೆ ಹಾಗೂ ವರ್ತನೆ
- ಉದಾ:– ಜನಮಂದೆ, ದೊಂಬಿ ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ, ಸಾಮಾಜಿಕ ಆಂದೋಲನ
- ಜನಮಂದೆ:–
- ಯಾವುದೇ ಪೂರ್ವ ಯೋಜನೆ ಇಲ್ಲದ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ 'ಜನಮಂದೆ' ಎನ್ನುವರು
- ಇದು ಜನರ ತಾತ್ಕಾಲಿಕ ಜನಸಂದಣಿ
- ಉದಾ:– ಚಲನಚಿತ್ರ ಟಿಕೇಟ್ ಪಡೆಯಲು ಸೇರಿದ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಿಲು ಸೇರಿರುವ ಜನ ಸಮೂಹ
- ಸ್ವರೂಪ:–
- ತಾತ್ಕಾಲಿಕ ಸ್ವರೂಪದ ಸಮೂಹ
- ಒಂದು ಸ್ಥಳದಲ್ಲಿ ಭೌತಿಕವಾಗಿ ಸೇರಿರುತ್ತಾರೆ.
- ಪರಸ್ಪರ ಅಭಿಪ್ರಾಯ, ಭಾವನೆಗಳು & ಕ್ರಿಯೆಗಳ ಪ್ರಭಾವಕ್ಕೆ ಒಳಗಾಗುತ್ತಾರೆ.
- ವ್ಯಕ್ತಿಯ ಅಂತರಾಳದ ಭಾವನೆಗಳು ಪ್ರಕಟ & ಸ್ಫೋಟಗೊಳ್ಳುತ್ತವೆ.
- ಪ್ರಭಾವ:–
- ಸಮಾಜದ ಲೋಪದೋಷಗಳನ್ನು ಸೂಚಿಸುತ್ತದೆ.
- ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುತ್ತದೆ.
- ಸರ್ಕಾರದ ಯೋಜನೆಗಳು, ಧೋರಣೆಗಳ ಬಗೆಗೆ ಜನರ ಅಸಮಾಧಾನ ಪ್ರತಿನಿಧಿಸುತ್ತದೆ.
- ಇದು ಅತಿರೇಕಕ್ಕೆ ಹೋದಾಗ ನಿಯಂತ್ರಿಸಲು ಕಾಯ್ದೆ, ಪೋಲಿಸ್ ಪಡೆ, ರಕ್ಷಣಾ ಪಡೆ ಅಗತ್ಯ.
- ದೊಂಬಿ:–
- ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು 'ದೊಂಬಿ' ಎನ್ನುವರು
- ಸ್ವರೂಪ:–
- ಆನಮಂದೆಯಲ್ಲಿ ಕಾಣುವ ಕನಿಷ್ ಮಟ್ಟದ ಉದ್ದೇಶ, ಏಕತೆ ಕಾಣುವುದಿಲ್ಲ
- ಇಲ್ಲಿ ಜನರು ತಮಗೆ ಸಿಕ್ಕದ್ದನೆಲ್ಲಾ ಹಾಳು ಮಾಡುತ್ತಾರೆ
- ಇದರ ಉದ್ದೇಶ:– ಗೊಂದಲವನ್ನು ಸೃಷ್ಟಿ ಮಾಡುವುದು
- ಇವು ಅಪಾರ ಹಾನಿಯನ್ನುಂಟು ಮಾಡುತ್ತದೆ.
- ಇವಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ
- ಇವು ಕಾನೂನು & ಸುವ್ಯವಸ್ಥೆಗೆ ಗಂಭೀರ ಸವಾಲಾಗಿದೆ.

- ಉದಾ:– ಪ್ರಚೋದನೆ ಸನ್ನಿವೇಶ
- ವ್ಯಕ್ತಿಗಳ ಅನಿಯಂತ್ರಿತ ವರ್ತನೆ
- ಅನಾಗರಿಕ ನಡವಳಿಕೆ
- ಕಲಹ ನಡೆಸುವವರ ಅಫರಾಧಿ ಗುಣ
- ದೊಂಬಿ ಪರ ಮನೋಭಾವನೆ
- ನಿಯಂತ್ರಣ:–
- ಅಧಿಕಾರಿಗಳ ಸಮಯ ಪ್ರಜ್ಞೆ
- ಪೋಲಿಸ್ ವ್ಯವಸ್ಥೆ
- ರಕ್ಷಣಾ ಪಡೆ
- ಕಾನೂನು ವ್ಯವಸ್ಥೆ
- ಸಾಮೂಹಿಕ ವರ್ತನೆ & ಚಳುವಳಿಗಳು:–
- ಸಾಮೂಹಿಕ ವರ್ತನೆಯು ಯೋಜನಾಬದ್ಧವಾಗಿ ಒಂದು ನಿರ್ದಿಷ್ಟ ಗುರಿಯನ್ನು ಹೊಂದಿದ್ದು ಸಾಮಾಜಿಕ ಬದಲಾವನೆಗೆ ಪ್ರಯತ್ನಿಸಿದರೆ ಅದನ್ನು 'ಚಳುವಳಿ' ಎನ್ನುವರು
- ಪರಿಸರದ ಚಳುವಳಿಗಳು:–
- ಭೂಮಿ, ಗಾಳಿ, ನೀರು & ಜೀವ ಮಂಡಲವನ್ನೊಳಗೊಂಡ ನಮ್ಮ ಸುತ್ತಮುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕುಲಿಷಿತವಾಗುವುದನ್ನು 'ಪರಿಸರ ಮಾಲಿನ್ಯ' ಎನ್ನುವರು.
- ಕಾರಣಗಳು:– ಜನಸಂಖ್ಯೆ ಹೆಚ್ಚಿದ ಪರಿಣಾಮ ಬದುಕಿನ ಅಗತ್ಯತೆ ಹೆಚ್ಚಾಗಿದೆ.
- ಆನರ ಪರಿಸರದ ಮೇಲೆ ಒತ್ತಡ/ಆಕ್ರಮಣ ಹೆಚ್ಚಿದೆ.
- ದೇಶಗಳ ಅಭಿವೃದ್ಧಿ ಪಥದಲ್ಲಿ ಸಂಪನ್ಮೂಲ ಬಳಕೆ ಹೆಚ್ಚು.
- ಆನರ ಸುಖಭೋಗದ ಜೀವನಕ್ಕೆ ಪರಿಸರ ದುರ್ಬಳಕೆ
- ಜಗತ್ತಿನ ದೇಶಗಳ ಜನಸಂಖ್ಯೆ ಹೆಚ್ಚಳ
- ನಗರಗಳ ಬೆಳವಣಿಗೆ
- ಕೈಗಾರಿಕಾ ಅಭಿವೃದ್ಧಿ
- ತಾಂತ್ರಿಕ ಪ್ರಗತಿ
- ಸಾರಿಗೆ ವ್ಯವಸ್ಥೆಯ ಬೆಳವಣಿಗೆ
- ಚಿಪ್ಕೋ ಚಳುವಳಿ:–
- ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ನಡೆದಿದೆ.
- ಮರ ಕಡಿಯಲು ಸರ್ಕಾರ ಅನುಮತಿ ನೀಡಿತು.
- ಅರಣ್ಯನಾಶ, ಪರಿಸರದ ನಾಶದಿಂದ ಜನರು ಮರಗಳನ್ನು ಅಪ್ಪಿಕೊಂಡರು
- 1973ರಲ್ಲಿ ಸುಂದರಲಾಲ್ ಬಹುಗುಣ & ಚಂಡಿ ಪ್ರಸಾದ್ ಭಟ್ಟರ ನೇತೃತ್ವದಲ್ಲಿ ನಡೆಯಿತು
- ಮರ ಕಡಿಯಲು ಸರ್ಕಾರ ಅನುಮತಿ ರದ್ದು ಮಾಡಿತು.
- ಅಪ್ಪಿಕೋ ಚಳುವಳಿ:–
- ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದಲ್ಲಿ ರೈತರು 1983ರಲ್ಲಿ ನಡೆಸಿದರು
- ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದರು
- ರೈತರು ಮರ ಅಪ್ಪಿಕೊಂಡು ಪ್ರತಿಭಟಿಸಿದರು
- ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸವುದು, ಪರಿಸರ ಮಹತ್ವ ಜನರಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶ
- ನರ್ಮದಾ ಆಂದೋಲನ:_
- ಗುಜರಾತ್ ರಾಜ್ಯದ ಸರ್ದಾರ್ ಸರೋರವ ಯೋಜನೆಯಲ್ಲಿ ನರ್ಮದ ನದಿಗೆ ಅಣೆಕಟ್ಟು ನಿರ್ಮಾಣ
- ಇದರಿಂದ ಅರಣ್ಯನಾಶ, ಪರಿಸರ ನಾಶ, ಜೀವಸಂಕುಲಗಳಿಗೆ ತೊಂದರೆ ಕಾರಣ
- ಮೃಧಾಪಾಟ್ಕರ್ & ಬಾಬಾ ಆಮ್ಟೆರವರ ನೇತೃತ್ವದಲ್ಲಿ ನಡೆಯಿತು
- ಮೌನ ಕಣಿವೆ ಆಂದೋಲನ:–
- ಕೇರಳದ ಪಾಲ್‌ಘಾಟ್ ತಾಲ್ಲೂಕಿನ ಮೌನಕಣಿವೆಯಲ್ಲಿ ಅಣೆಕಟ್ಟು ನಿರ್ಮಾಣದ ವಿರುದ್ಧ
- ಕಾರಣ:– ಪರಿಸರ ನಾಶ, ಜೀವ ಪ್ರಭೇದಗಳು ಜೀವಿಸಲು ತೊಂದರೆ
- ಕೇರಳ ಸಾಹಿತ್ಯ ಪರಿಷತ್ & ವನ್ಯಮೃಗ ಆಸಕ್ತರು ಚಳುವಳಿ ನಡೆಸಿದರು
- ಯಶಸ್ಸಿನಿಂದ ಅನೇಕ ಜೀವಸಂಕುಲ ರಕ್ಷಣೆ
- ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳುವಳಿ:–
- ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿದ್ದ ತೈಲ ಕಾರ್ಯಾಗಾರದಿಂದ ಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶ
- ಮಂಗಳೂರು ರಿಫೈನ್‌ರೀಸ್ & ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ವಿರುದ್ಧ ಚಳುವಳಿ
- ಕೈಗಾ ಅಣು ವಿರೋಧಿ ಚಳುವಳಿ:–
- ಕಾರವಾರಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನೆ ಕೇಂದ್ರ ಸ್ಥಾಪಿಸುವ ಇರುದ್ಧ
- ಡಾ.ಶಿವರಾಂ ಕಾರಂತರ ನೇತೃತ್ವದಲ್ಲಿ

- ಕಾರಣ:– ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮ ಉಂಟಾಗುತ್ತವೆಂಬ ಉದ್ದೇಶ.
- ನಿಯಂತ್ರಣ:–
- ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕ ಜಾಗೃತಿ
- ಪರಿಸರವನ್ನು ಸಂರಕ್ಷಿಸುವುದು & ಪೋಷಣೆ ನಮ್ಮ ಆದ್ಯ ಕರ್ತವ್ಯ ಎಂಬ ಟರಿವು
- ಪ್ರತಿ ನಾಗರಿಕನು ನಿಸ್ವಾರ್ಥದಿಂದ ಪರಿಸರ ಸಂರಕ್ಷಣೆಯಲ್ಲಿ ತೊಡಗಿಕೊಳ್ಳುವುದು.
- ಪರಿಸರ ಸಂರಕ್ಷಣೆಗಾಗಿ ಪರಿಣಾಮಕಾರಿ ಯೋಜನೆಗಳು
- ಇನರಲ್ಲಿ ಅರಿವು ಮೂಡಿಸುವುದು.
- ಮಹಿಳೆಯರ ಸ್ವ–ಸಹಾಯ ಸಮೂಹಗಳು:–
- ಸ್ವಪ್ರಜ್ಞೆ, ಸ್ವಪ್ರೇರಣೆ, ಪರಸ್ಪರ ನಂಬಿಕೆಯೊಂದಿಗೆ ತನ್ನ ಆರ್ಥಿಕ, ಸಾಮಾಜಿಕ ಅಗತ್ಯಗಳನ್ನು ತಾವೇ ತಮ್ಮ ಸ್ವಂತ ಪ್ರಯತ್ನದಿಂದ ಪೂರೈಸುವ ಉದ್ದೇಶದಿಂದ 10–20 ಸ್ತ್ರೀಯರಿಂದ ಸ್ಥಾಪಿಸಿದ ಸ್ಥಳೀಯ ಸಮೂಹ
- ಉದ್ದೇಶಗಳು:–
- ಸ್ತ್ರೀಯರು ತಮ್ಮ ದುಡಿಮೆ ಹಣವನ್ನು ಉಳಿಸಲು
- ಹಣ ಸಂಗ್ರಹದಿಂದ ಮಹಿಳೆಯರ ಕೌಟುಂಬಿಕ ಜೀವನಕ್ಕೆ ನೆರವು
- ಸ್ತ್ರೀ–ಪುರುಷರ ಸಮಾನತೆಗೆ ಪ್ರಯತ್ನ
- ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುತ್ತವೆ.
- ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುತ್ತವೆ
- ಭಾರತ ಸರ್ಕಾರ ಪ್ರೋತ್ಸಾಹಿಸುತ್ತದೆ.
- ಗ್ರಾಮೀಣ ಭಾಗದ ಸ್ತ್ರೀಯರ ಸಬಲೀಕರಣ
- ಸ್ತ್ರೀಯರಲ್ಲಿ ಶಿಕ್ಷಣ ಜಾಗೃತಿಯೊಂದಿಗೆ ಸ್ವಾವಲಂಬಿ ಜೀವನಕ್ಕೆ ಸಹಕಾರಿ
- ಸ್ತ್ರೀಯ ಮೇಲಿನ ದೌರ್ಜನ್ಯಗಳನ್ನು ಎದುರಿಸಲು ಸಹಾಯಕ
- ಸ್ತ್ರೀಯರು ತಮ್ಮ ಹಕ್ಕುಗಳನ್ನು ಸ್ವತಂತ್ರವಾಗಿ ಪಡೆಯಲು
- ಸ್ತ್ರೀಯರ ಪ್ರಜಾಸತ್ತಾತ್ಮಕ ಹಕ್ಕು ಅಧಿಕಾರ, ಗೌರವಗಳನ್ನು ಕಾಪಾಡುತ್ತವೆ.
- ಸಾಮಾಜಿಕ ಜೀವನ ಕ್ಷೇತ್ರಗಳಲ್ಲಿ ಸೂಕ್ತ ಅವಕಾಶ ಒದಗಿಸುತ್ತದೆ.
- ಅಭೀವೃದ್ಧಿ ಯೋಜನೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುತ್ತವೆ.
- ಸಾಮೂಹಿಕ ಹೋಣೆಗಾರಿಕೆ ಮೂಲಕ ಸಂಘರ್ಷ ನಿವಾರಣೆ ಸಾಮಾರ್ಥ್ಯ ವೃದ್ಧಿ
- ಸಾಮಾಜಿಕ ಸವಾಲುಗಳು:–
- ಮಿತಿಮೀರಿದ ಜನಸಂಖ್ಯೆ
- ಬಡತನ
- ನಿರುದ್ಯೋಗ
- ಭಿಕ್ಷಾಟನೆ
- ಬಾಲಾಪರಾಧ
- ಬಾಲಕಾರ್ಮಿಕ ಸಮಸ್ಯೆ
- ಭ್ರಷ್ಟಾಚಾರ
- ಮಹಿಳೆಯರ ಶೋಷಣೆ
- ವರದಕ್ಷಿಣೆ ಕಿರುಕುಳ
- ಯುಜನರ ಅಶಾಂತಿ
- ಬಾಲಾ ಕಾರ್ಮಿಕತೆ:–
- ಅಪ್ರಾಪ್ತ ವಯಸ್ಸಿನ ಮಕಕ್ಳ ದುಎಇಮೆಯನ್ನು ಬಾಲಕಾರ್ಮಿಕತನ ಎನ್ನುವರು.
- ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುವುದನ್ನು ಬಾಲ ಕಾರ್ಮಿಕರು ಎನ್ನವುರು
- ಅಭಿವೃದ್ಧಿ ಹೊಂದುತ್ತೀರುವ ದೇಶಗಳಲ್ಲಿ ಮಕ್ಕಳ ದುರ್ಬಳಕೆ & ದುಡಿತ ಸಾಮಾಜಿಕ ದುರಂತ
- ಬಾಲ ಕಾರ್ಮಿಕರು ಹೊಲ, ಗದ್ದೆ, ತೋಟ – ಗ್ರಾಮೀಣ ಪ್ರದೇಶ
- ನಗರ & ಕೈಗಾರಿಕಾ ಪ್ರದೇಶಗಳಲ್ಲಿ ಹೆಚ್ಚು ಕಂಡುಬರುತ್ತದೆ.
- ಕಾರಣಗಳು:–
- ಕಡುಬಡತನ
- ಕೌಟುಂಬಿಕ ಕಲಹ
- ವಿಚ್ಛೇದನ
- ಕೌಟುಂಬಿಕ ಹಿಂಸೆ
- ಪೋಷಕರ ಅತಿಯಾದ ನಿಯಂತ್ರಣ
- ಉದ್ಯಮಿಗಳ ಲಾಭಕೋರಿತನ
- ಅನಕ್ಷರತೆ
- ಮಕ್ಕಳ ಅಪಹರಣ
- ಜೀತ
- ಸಮಸ್ಯೆಗಳು:–
- ಅನಾರೋಗ್ಯ

RAMALINGAPPAL

- ಪೌಷ್ಠಿಕ ಆಹಾರದ ಕೊರತೆ
- ವೈದ್ಯಕೀಯ ಸೌಲಭ್ಯಗಳ ಕೊರತೆ
- ಒತ್ತಾಯದ ದುಡಿತ
- ಆರ್ಥಿಕ/ಸಾಮಾಜಿಕ ಶೋಷಣೆ
- ಮಾನಸಿಕ & ಭಾವನಾತ್ಮಕ ಹಿಂಸೆ
- ಶೈಕ್ಷಣಿಕ ಕೊರತೆ
- ನಿಯಂತ್ರಣ:–
- ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ:– ಉದ್ದೇಶ:– ಶೈಕ್ಷಣಿಕ, ವೈದ್ಯಕೀಯ, ಮೂಲಭೂತ ಅಗತ್ಯತೆಗಳ ಪೂರೈಕೆ & ಶೋಷಣೆ ತಡೆಯುವುದು
- ಬಾಲಕಾರ್ಮಿಕ ನಿಷೇಧ & ನಿಯಂತ್ರಣ ಕಾಯ್ದೆ(1986):–
- ಉದ್ದೇಶ:– ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದು ನಿಲ್ಲಿಸಲು
- ಶಿಕ್ಷೆ:– 20000 ರೂ. ದಂಡ
- ಸಂವಿಧಾನಾತ್ಮಕ ಪರಿಹಾರಗಳು:–
- ಸಂವಿಧಾನದ 24ನೇ ವಿಧಿ 14 ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ
- ಅಪಾಯಕಾರಿ ಕೈಆರಿಕಾ ಘಟಕಗಳಲ್ಲಿ ಮಕ್ಕಳನ್ನು ನೇಮಕ ಮಾಡಬಾರದು
- ರಾಜ್ಯ ನಿರ್ದೇಶಕ ಸೂತ್ರಗಳ ಪ್ರಕಾರ ಮಕ್ಕಳ ಹಿತರಕ್ಷಣೆ ಸರ್ಕಾರದ ಕರ್ತವ್ಯ
- ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ(ಎನ್.ಸಿ.ಎಲ್.ಪಿ):–
- ರಾಜ್ಯಗಳು, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಮಕ್ಕಳು ಮತ್ತು ಮಹಿಳಾ ಕಲ್ಯಾಣ ಇಲಾಖೆಗಳು ಕಾರ್ಮಿಕರನ್ನು ಪತ್ತೆ ಹಚ್ಚುವುದು.
- ಬಾಲಕಾರ್ಮಿಕರನ್ನು ಕರೆತಂದು ಉಚಿತ ಸೌಲಭ್ಯದಿಂದ ಶಿಕ್ಷಣ ನೀಡುವುದು
- ಇವರನ್ನು ತಾಲ್ಲೂಕು & ಜಿಲ್ಲಾ ಹಂತ ಬಾಲಮಂದಿರಗಳಲ್ಲಿ ಇಡುವುದು.
- ಸರ್ವಶಿಕ್ಷಣ ಅಭಿಯಾನ–2001
- ಕೂಲಿಯಿಂದ ಶಾಲೆಗೆ – ಬಾಲಕಾರ್ಮಿಕರನ್ನು ಶಾಲೆಗೆ ಕರೆತಂದು ಉಚಿತ ಶಿಕ್ಷಣ ನೀಡುವುದು
- ಶಿಕ್ಷಣ ಹಕ್ಕು ಕಾಯ್ದೆ–2009:–
- 6–14 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣ
- ಖಾಸಗಿ ಶಾಲೆಗಳಲ್ಲಿ ಹಿಂದುಳಿದ ಮಕ್ಕಳಿಗೆ ಉಚಿತ ಶಿಕ್ಷಣ
- ರಾಷ್ಟ್ರೀಯ ನೀತಿ–1987:–
- 1988 ರಲ್ಲಿ ಕಾರ್ಯಯೋಜನೆ(ಪ್ರಕಲ್ಪಿತ ಯೋಜನೆ) ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರೂಪಿಸಿತು.
- ಬಾಲಶ್ರಮ ನಿರ್ಮೂಲನೆ & ಪುನರ್ವಸತೀಕರಣ ಕಾಯ್ದೆ–2006
- ಬಾಲ್ಯವಿವಾಹ:–
- 18 ವರ್ಷದೊಳಗಿನ ಹುಡುಗಿ/21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡಿದರೆ ಇದನ್ನು ಬಾಲ್ಯವಿವಾಹ ಎನ್ನುವರು.
- ಕಾರಣಗಳು:–
- ಲಿಂಗತಾರತಮ್ಯ
- ಅಪ್ರಾಪ್ತರನ್ನು ಮದುವೆ ಮಾಡುವ ಒಂದು ಸಂಪ್ರದಾಯ
- ಶಿಕ್ಷಣ ಇಲ್ಲದಿರುವುದು
- ಬಾಲ ಕಾರ್ಮಿಕತೆ
- ಮಕ್ಕಳ ಕಳ್ಳಸಾಗಾಣಿಕೆ & ಮಾರಾಟ
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ & ಬಳಕೆಯ ಕೊರತೆ
- ಶಿಕ್ಷಣಕ್ಕೆ ಸಮಾಜ/ಸಮುದಾಯ/ಸಾರ್ವಜನಿಕರ ಅಸಹಕಾರ
- ಮಕ್ಕಳ ಹಕ್ಕುಗಳ & ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತ ಅನುಷ್ಠಾನ.
- ದುಷ್ಪರಿಣಾಮಗಳು:–
- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ
- ಮಕ್ಕಳ ಪ್ರಶ್ನಿಸುವ ಸ್ವಾತಂತ್ರ ಕಳೆದುಕೊಳ್ಳುತ್ತಾರೆ:– ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ, ಲೈಂಗಿಕ ದೌರ್ಜನ್ಯ
- ಮಕ್ಕಳ ಹಕ್ಕುಗಳ ಉಲ್ಲಂಘನೆ:– ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ದಕ್ಕೆ, ಅಪೌಷ್ಠಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿ ಮರಣಕ್ಕೆ ಕಾರಣರಾಗುತ್ತಾರೆ.
- ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು
- ತಡೆಗಟ್ಟುವುದು ಹೇಗೆ?
- ರಾಜ್ಯ ಸರ್ಕಾರ 47 ಹಂತದ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳ ನೇಮಕ
- ಮಕ್ಕಳ ಸಹಾಯವಾಣಿ 1098 ಕ್ಕೆ ಕರೆ ಮಾಡುವುದು
- ಬಾಲ್ಯವಿವಾಹ ನಿಷೇಧಾಧಿಕಾರಿಗಳು:– ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರು, ಗ್ರಾಮ ಲೆಕ್ಕಿಗರು, ಪಿ.ಡಿ.ಒ, ನಗರದಲ್ಲಿ ಆರೋಗ್ಯ ಅಧಿಕಾರಿಗಳು, ಪೋಲಿಸ್ ಠಾಣೆ
- ಪರಿಹಾರಗಳು:–

RAMALINGAPPA L

- 18 ವರ್ಷದ ತನಕ ಶಾಲೆ/ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ
- ಹೆಚ್ಚು ಮಕ್ಕಳ ಶಿಕ್ಷಣಕ್ಕೆ ಒತ್ತು
- ಬಾಲಕಿಯರ ಬಲವರ್ಧನೆ & ಸಬಲೀಕರಣ
- ಬಾಲ್ಯವಿವಾಹ ನಡೆದರೆ ತಪ್ಪದೇ ದೂರು ನೀಡುವುದು.
- ಬಾಲ್ಯವಿವಾಹ ನಿಷೇಧ ಕಾಯಿದೆ–2006
- ಎಲ್ಲಾ ರಾಜ್ಯಗಳಿಗೆ ಅನ್ವಯ(1929–1986)
- ಭಾರತ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992 ಡಿ. 11 ರಂದು ಸಹಿ ಹಾಕಿ ಹೊಸ ಕಾನೂನು ಜಾರಿ
- ಮದುವೆ ಮಾಡಿದ, ಮಾಡಿಸಿದ, ಕುಮ್ಮಕ್ಕು ನೀಡಿದ, ಸಹಾಯ ಮಾಡಿದ, ಭಾಗವಹಿಸಿದವರಿಗೆ 2 ವರ್ಷ ಜೈಲು, 1 ಲಕ್ಷ ದಂಡ
- ಕಲಂ–9,10,11 ಪ್ರಕಾರ ಪುರೋಹಿತ, ಅಡುಗೆಯವರು, ಶಾಮಿಯಾನದವರು, ಫೋಟೋಗ್ರಾಫರ್, ವೀಡಿಯೋಗ್ರಾಫರ್, ವಾಲಗದವರು, ವಾಹನಚಾಲಕರು ಭಾಗವಹಿಸಿದವರು ಅಪರಾಧಿಗಳು
- ಹುಡುಗ/ಹುಡುಗಿ ತಂದೆ–ತಾಯಿ, ಛತ್ರದ ಮುಖ್ಯಸ್ಥರು ಅಪರಾಧಿಗಳು
- ಮದುವೆ ಪತ್ರಿಕೆ ಟೈಪ್ ಮಾಡಿದ ಮುದ್ರಿಸಿದ, ಮುದ್ರಣಕಾರರೂ ಅಪರಾಧಿಗಳು
- ಕಾರಣ:–
- ಬಾಲ್ಯವಿವಾಹ ಮಕ್ಕಳ ಹಕ್ಕುಗಳ ಉಲ್ಲಂಘನೆ
- ಪ್ರಶ್ನಿಸದೇ ಭಾಗವಹಿಸಿರುತ್ತಾರೆ.
- ಸಾಮಾಜಿಕ ಜವಾಬ್ದಾರಿ ಮರೆತಿರುತ್ತಾರೆ.
- ಮಾನವ ಹಕ್ಕಿನ ಉಲ್ಲಂಘನೆ.
- ಸ್ತ್ರೀಯರ ಮೇಲಿನ ಹಿಂಸಾಚಾರ:–
- ಸ್ತ್ರೀಯರ ಮೇಲೆ ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಹಿಂಸಾಚಾರ ನಡೆಯುತ್ತಿದೆ.
- ಸ್ತ್ರೀಯರ ಮೇಲಿನ ಹಿಂಸಾಚಾರದ ರೂಪಗಳು:–
- ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಕಿರುಕುಳ, ದೈಹಿಕ ಮತ್ತು ಮಾನಸಿಕ ಕಿರುಕುಳ, ಗರ್ಭಪಾತಕ್ಕೆ ಪ್ರೇರೇಪಿಸುವುದು, ಅವಾಚ್ಯ ಪದಗಳ ಬಳಕೆ
- ವರದಕ್ಷಿಣೆ:–
- ವರದಕ್ಷಿಣೆಯಲ್ಲಿ ವರ ಎಂದರೆ, ವಿವಾಹವಾಗುವ ಪ್ರಾಪ್ತ ವಯಸ್ಸಿನ ಗಂಡು.
- ದಕ್ಷಿಣೆ ಎಂದರೆ, ಬಳುವಳಿ ನೀಡಿಕೆ.
- ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ನಾನಾರೂಪದಲ್ಲಿ ಅಪೇಕ್ಷಿಸುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇವು ವರದಕ್ಷಿಣೆ ರೂಪದಲ್ಲಿರುತ್ತವೆ.
- ವರದಕ್ಷಿಣೆಯನ್ನು ಕೊಡುವುದು ಹಾಗೂ ಪಡೆಯುವುದು ಅಪರಾಧ
- ವರನ ಕಡೆಯವರ ಬೇಡಿಕೆಗೆ ವಧುವಿನ ಕಡೆಯವರು ನೀಡುವುದು ಒಂದು ಶೋಷಣೆ
- ವರನು ಕೇಳುವಷ್ಟು ಹಣ, ಚಿನ್ನಾಭರಣವನ್ನು ಅನಿವಾರ್ಯವಾಗಿ ಕೊಡಬೇಕಾಗುತ್ತದೆ.
- ಇದರಿಂದ ವಧುವಿನ ಕಡೆಯವರು ತೀವ್ರ ಆರ್ಥಿಕ & ಮಾನಸಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ.
- ಹೀಗೆ ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುವತ್ತಿರುವ ಒಂದು ಸಾಮಾಜಿಕ ಪಿಡುಗಾಗಿದೆ.
- ವರದಕ್ಷಿಣೆಯ ದುಷ್ಪರಿಣಾಮಗಳು:–
- ಇದು ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ & ಕೌಟುಂಬಿಕ ಕಲಹವನ್ನು ಉಂಟುಮಾಡುತ್ತದೆ.
- ಸ್ತ್ರೀ–ಪುರುಷರ ನಡುವೆ ಒಡಕು ಉಂಟಾಗಲು ಕಾರಣ
- ಇದರಿಂದ ಅನೈತಿಕತೆ ಮತ್ತು ಕೌರ್ಯ ಹೆಚ್ಚುವುದು
- ಕೌಟುಂಬಿಕ ಸಂಬಂಧಗಳು ಹಾಳಾಗುವುವು
- ಹಣದ ದಾಹದಿಂದ ಮೋಸದ ವಿವಾಹಗಳು ಜಾಸ್ತಿ.
- ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತವೆ.
- ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ.
- ವರದಕ್ಷಿಣೆ ಪರಿಹಾರ ಕ್ರಮಗಳು:–
- 1961ರ ವರದಕ್ಷಿಣೆ ನಿಷೇಧ ಕಾಯ್ದೆ:–
- ಭಾರತ ಸರ್ಕಾರ 1961ರಲ್ಲಿ 'ವರದಕ್ಷಿಣೆ ನಿಷೇಧ' ಕಾಯ್ದೆ ಜಾರಿ
- ವರದಕ್ಷಿಣೆ ಷರತ್ತಿನ ಮೇಲೆ ವಿವಾಹವಾಗುವುದನ್ನು ಇದು ನಿಷೇಧಿಸಿದೆ.
- ಇದನ್ನು ಉಲ್ಲಂಘಿಸಿದವರಿಗೆ 5000 ದಂಡ, 6 ತಿಂಗಳು ಕಾರಾಗೃಹವಾಸ, ಅಥವಾ ಇವೆರಡು ಒಟ್ಟಿಗೆ ವಿಧಿಸಬಹುದು.
- ಇದಕ್ಕೆ 986ರಲ್ಲಿ ತಿದ್ದುಪಡಿ ಮಾಡಿ ಇನ್ನಷ್ಟು ಕಠಿಣಗೊಳಿಸಿದೆ.
- ಇದರ ಪ್ರಕಾರ:– ವರದಕ್ಷಿಣೆ ಕೊಡುವ, ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗೆ 5 ವರ್ಷ ಕಾರಾಗೃಹವಾಸ, 15000 ರೂ. ದಂಡ ವಿಧಿಸಬಹುದು.

RAMALINGAPPA L

- ವರದಕ್ಷಿಣೆ ಸಾವು ಪ್ರಕರಣವನ್ನು ಭಾರತ ದಂಡ ಸಂಹಿತೆ ಹಾಗೂ ಭಾರತ ಅಪರಾಧ ವಿಚಾರಣಾ ಸಂಹಿತೆಗೆ ಸೇರ್ಪಡಿಸಿದೆ.
- ಈ ವಿಚಾರಣೆಯನ್ನು ಜಾಮೀನು ರಹಿತ & ರಾಜಿರಹಿತ ನೆಲೆಯಲ್ಲಿ ನಡಿಸಬಹುದು.
- ಜನಜಾಗೃತಿ
- ಅಂತರಜಾತಿ ವಿವಾಹ
- ಆಧುನಿಕ ಪ್ರಚಾರ ಮಾಧ್ಯಮ
- ಸ್ವಯಂ ಸೇವಾ ಸಂಘಟನೆಗಳು
- ಮಹಿಳಾ ಸಂಘಟನೆಗಳ ಮೂಲಕ ತೊಲಗಿಸಬಹುದು.
- ಹೆಣ್ಣು ಭ್ರೂಣ ಹತ್ಯೆ & ಹೆಣ್ಣು ಶಿಶು ಹತ್ಯೆ:–
- ಹೆಣ್ಣು ಭ್ರೂಣ ಹತ್ಯೆ:–
- ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದ ಅದು ತಂದೆ–ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಪ್ರಹಾಕುವುದೇ 'ಹೆಣ್ಣು ಭ್ರೂಣಹತ್ಯೆ'
- ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದರಿಂದ ಗರ್ಭದಲ್ಲಿ ಹೆಣ್ಣೊ ಅಥವಾ ಗಂಡೊ ಎಂದು ಲಿಂಗಾ ಪರೀಕ್ಷಾ ವಿಧಾನಗಳ ಮೂಲಕ ತಿಳಿಯಬಹುದು.
- ಗಂಡು ಮಕ್ಕಳ ವ್ಯಾಮೋಹದಿಂದ ಆಧುನಿಕ ತಂತ್ರಜ್ಞಾನದ ದುರ್ಬಳಕೆ ನಡೆಯುತ್ತಿದೆ.
- ಸ್ಕ್ಯಾನಿಂಗ್ ಮೂಲಕ ಗರ್ಭದಲ್ಲಿ ಲಿಂಗ ಮತ್ತೆ ಹಚ್ಚಿ ಕೊಲ್ಲಲಾಗುತ್ತಿದೆ.
- ಇದರಿಂದ ಗರ್ಭಪಾತದ ಪ್ರಕರಣಗಳು ಹೆಚ್ಚಿತ್ತಿವೆ.
- ಕಾರಣಗಳು:–
- ಬಡತನ
- ವರದಕ್ಷಿಣೆಯ ಭೀತಿ
- ಅನಕ್ಷರತೆ
- ಸ್ತ್ರೀ ವಿರೋಧಿ ನಿಲುವುಗಳು
- ಗಂಡು ಮಗುವಿನ ಬಯಕೆ
- ದುಷ್ಪರಿಣಾಮಗಳು:–
- ಲಿಂಗಾನುಪಾತದಲ್ಲಿ ಏರುಪೇರು
- ಲಿಂಗತಾರತಮ್ಯ
- ಹೆಣ್ಣಿನ ಅಪಮೌಲ್ಯೀಕರಣ
- ನಿಯಂತ್ರಣ:– ಗರ್ಭದಲ್ಲಿರುವ ಲಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು 1994 ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ' ಜಾರಿ
- ಹೆಣ್ಣು ಶಿಶುಹತ್ಯೆ:–
- ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ 'ಹೆಣ್ಣು ಶಿಶು ಹತ್ಯೆ' ಎನ್ನುವರು.
- ಇದನ್ನು ತಡೆಗಟ್ಟಲು ಸರ್ಕಾರ ಹೆಣ್ಣು ಶಿಶುಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿ ಮಾಡಿದೆ.
- ಭಾರತದ ಭೂ ಬಳಕೆ ಹಾಗೂ ಕೃಷಿ:–
- ಭೂ ಬಳಕೆ:–
- ಭೂಮಿಯನ್ನು ಸಾಗುವಳಿ, ಅರಣ್ಯ, ಹುಲ್ಲುಗಾವಲು, ಬೀಳುಭೂಮಿ, ವ್ಯವಸಾಯೇತರ ಬಳಕೆ ಹೀಗೆ ವಿವಿಧ ಉದ್ದೇಶಗಳಿಗೆ ಭೂಮಿಯನ್ನು ಬಳಸುವುದಕ್ಕೆ "ಭೂ ಬಳಕೆ" ಎನ್ನುವರು.
- ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು:–
- ಪ್ರಾಕೃತಿಕವಾಗಿ ಪ್ರಭಾವ
- ಭೂ ಸ್ವರೂಪಗಳು
- ವಾಯುಗುಣ
- ಮಣ್ಣಿನ ಲಕ್ಷಣಗಳು
- ಭೂ ಹಿಡುವಳಿ
- ಜನಸಂಖ್ಯೆ
- ವ್ಯವಸಾಯೋತ್ಪನ್ನಗಳ ಬೇಡಿಕೆ
- ಉದ್ಯೋಗ
- ಜನರ ಮನೋಭಾವ
- ಸಾಮಾಜಿಕ ಪರಿಸ್ಥಿತಿ
- ಮಾರುಕಟ್ಟೆ
- ತಾಂತ್ರಿಕತೆ
- ನೀರಾವರಿ ಸೌಲಭ್ಯ
- ಮಾನವನ ಸಾಮರ್ಥ್ಯ
- ಭೂ ಒಡೆತನ
- ಭೂ ಬಳಕೆಯ ಪ್ರಕಾರಗಳು:–
- ನಿವ್ವಳ ಸಾಗುವಳಿ ಕ್ಷೇತ್ರ
- ಅರಣ್ಯ ಭೂಮಿ
- ವ್ಯವಸಾಯೇತರ ಭೂ ಬಳಕೆ

- ಬೀಳು ಭೂಮಿ
- ಹುಲ್ಲುಗಾವಲು
- ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ
- ನಿವ್ವಳ ಸಾಗುವಳಿ ಕ್ಷೇತ್ರ:–
- ಇದು ಅತ್ಯಂತ ಪ್ರಮುಖವಾದದ್ದು
- ಭಾರತ ಒಂದು ವ್ಯವಸಾಯ ಪ್ರಧಾನ ದೇಶ ಕಾರಣ
- ಭಾರತ ಸಾಗುವಳಿ ಕ್ಷೇತ್ರದ ವಿಸ್ತೀರ್ಣದಲ್ಲಿ ಪ್ರಪಂಚದಲ್ಲಿ ಎರಡನೇ ಸ್ಥಾನ
- ರಾಜ್ಯಗಳು:– ಹರಿಯಾಣ, ಪಂಜಾಬ್, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರಗಳಲ್ಲಿ ಹೆಚ್ಚು.
- ಪ್ರತಿಶತ 60ಕ್ಕಿಂತ ಹೆಚ್ಚಾಗಿದೆ.
- ಅರಣ್ಯ ಭೂಮಿ:–
- ಒಟ್ಟು ಭೂ ಪ್ರದೇಶದ ಶೇ.21.3 ರಷು ಅರಣ್ಯಗಳಿಂದ ಕೂಡಿದೆ.
- ರಾಷ್ಟ್ರೀಯ ಅರಣ್ಯ ಯೋಜನೆಯ ಪ್ರಕಾರ 33 ರಷ್ಟು ಅರಣ್ಯವಿರಬೇಕು.
- ಆದ್ದರಿಂದ ಅರಣ್ಯ ಭೂಮಿಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.
- ವ್ಯವಸಾಯೇತರ ಭೂ ಬಳಕೆ:–
- ಈ ರೀತಿಯ ಭೂಮಿಯನ್ನು ಹೆಚ್ಚಾಗಿ ಬಳಸಲಾಗುತ್ತದೆ.
- ಕಟ್ಟಡ ನಿರ್ಮಾಣ, ಜಲಾಶಯ, ಕೈಗಾರಿಕೆ, ರಸ್ತೆಗಳ ನಿರ್ಮಾಣಕ್ಕೆ ಬಳಸುತ್ತಾರೆ.
- ಬೀಳು ಭೂಮಿ:–
- ಬೀಳು ಬಿದ್ದಿದ್ದ ಹಾಗೂ ವ್ಯವಸಾಯ ಯೋಗ್ಯವಲ್ಲದ ಭೂ ಪ್ರದೇಶವನ್ನು ತಾಂತ್ರಿಕತೆಯ ಅಳವಡಿಕೆಯಿಂದ ವ್ಯವಸಾಯಕ್ಕೆ ಬಳಸಲಾಗುತ್ತದೆ.
- ಹುಲ್ಲುಗಾವಲು:–
- ಹುಲ್ಲುಗಾವಲುಗಳ ಕ್ಷೇತ್ರ ನಿರಂತರವಾಗಿ ಕಡಿಮೆಯಾಗುತ್ತಿದೆ.
- ಹಿಮಾಚಲ ಪ್ರದೇಶ ರಾಜ್ಯವು ಹೆಚ್ಚು ಹುಲ್ಲುಗಾವಲು ಪ್ರದೇಶ ಹೊಂದಿದೆ.
- ಪಂಜಾಬ್, ಹರಿಯಾಣ ರಾಜ್ಯಗಳು ಅತ್ಯಂತ ಕಡಿಮೆ ಹುಲ್ಲುಗಾವಲು ಹೊಂದಿವೆ.
- ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ:–
- ಇಂದೆ ವ್ಯವಸಾಯಕ್ಕೆ ಬಳಸುತ್ತಿದ್ದ ಭೂಮಿ ಇಂದು ಮಣ್ಣಿನ ರಾಸಾಯನಿಕ ಸಂಯೋಜನೆಯಿಂದ ಅನುಪಯುಕ್ತವಾಗಿವೆ.
- ವ್ಯವಸಾಯ:–
- ವ್ಯವಸಾಯ ಪುರಾತನ ವೃತ್ತಿಗಳಲ್ಲಿ ಒಂದು
- ವ್ಯವಸಾಯವನ್ನು 'ಭೂಮಿಯನ್ನು ಉಳುಮೆ ಮಾಡುವ ಕಲೆ' ಎಂದು ವ್ಯಾಖ್ಯಾನಿಸಲಾಗಿದೆ.
- ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಇದರಿಂದ ಮಾನವ & ಪ್ರಾಣಿಗಳಿಗೆ ಉಪಯೋಗ ಪಡೆಯುವುದನ್ನು 'ವ್ಯವಸಾಯ/ಕೃಷಿ' ಎನ್ನುವರು.
- ಇದು ಮೀನುಗಾರಿಕೆ, ಪಶುಪಾಲನೆ & ಅರಣ್ಯಗಾರಿಕೆಯನ್ನು ಒಳಗೊಂಡಿದೆ.
- ವ್ಯವಸಾಯದ ಪ್ರಾಮುಖ್ಯತೆ:–
- ಅಗಾದ ಜನಸಂಖ್ಯೆಗೆ ಆಹಾರ ಧಾನ್ಯಗಳನ್ನು ಪೂರೈಸುತ್ತದೆ.
- ಇದು ಜೀವನಾಧಾರ ಉದ್ಯೋಗವಾಗಿದೆ.
- ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ.
- ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ.
- ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.
- ದೇಶದ ರಾಷ್ಟ್ರೀಯ ವರಮಾನದ ಮೂಲವಾಗಿದೆ.
- ವ್ಯವಸಾಯದ ವಿಧಗಳು:–
- ಸಾಂದ್ರ ಬೇಸಾಯ:–
- ಒಂದು ವರ್ಷದಲ್ಲಿ ಒಂದೇ ಕ್ಷೇತ್ರದಿಂದ 2–3 ಬೆಳೆಗಳನ್ನು ಬೆಳೆಯುವುದಕ್ಕೆ 'ಸಾಂದ್ರ ಬೇಸಾಯ' ಎನ್ನುವರು.
- ಇದು ಅಧಿಕ ಜನಸಂಖ್ಯೆ ಇರುವ ಫಲವತ್ತಾದ ಪ್ರದೇಶಗಳಲ್ಲಿ ರೂಢಿಯಲ್ಲಿದೆ.
- ಜೀವನಾಧಾರದ ಬೇಸಾಯ:–
- ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವದಕ್ಕೆ 'ಜೀವನಾಧಾರದ ಬೇಸಾಯ' ಎನ್ನುವರು.
- ಇದರಲ್ಲಿ ರೈತರು ಆಹಾರ ಧಾನ್ಯ, ಎಣ್ಣೆಕಾಳು, ತರಕಾರಿ ಬೆಳೆಯುತ್ತಾರೆ.
- ಎರಡು ಪ್ರಕಾರಗಳಿವೆ
- ಸ್ಥಿರ ಬೇಸಾಯ:–
- ಯಾವುದೇ ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯ ಮಾಡುವುದಕ್ಕೆ 'ಸ್ಥಿರ ಬೇಸಾಯ' ಎನ್ನುವರು.
- ಇದು ಸಾಂಪ್ರದಾಯಿಕವಾಗಿದೆ.
- ಚಿಕ್ಕ ಹಿಡುವಳಿಯನ್ನು ಹೊಂದಿರುತ್ತದೆ.
- ಸ್ಥಳಾಂತರ ಬೇಸಾಯ:–

RAMALINGAPPA L

- ಯಾವುದೇ ಒಂದು ಪ್ರದೇಶದಲ್ಲಿ ಜನರು ಸ್ಥಿರವಾಗಿ ನೆಲೆಸದೆ ಅಲ್ಲಿರುವ ಅರಣ್ಯಗಳನ್ನು ಕಡಿದು ಬೇಸಾಯ ಮಾಡುವುದು.
- 1–2 ವರ್ಷಗಳ ನಂತರ ಅಲ್ಲಿನ ಫಲವತ್ತತೆ ಕಡಿಮೆಯಾದ ನಂತರ ಬೇರೆ ಹೋಗಿ ವ್ಯವಸಾಯ ಮಾಡುವುದು.
- ಇಂದು ಇದನ್ನು ನಿಷೇಧಿಸಲಾಗಿದೆ.
- ವಾಣಿಜ್ಯ ಬೇಸಾಯ:–
- ವ್ಯಾಪಾರದ ಉದ್ದೇಶದ ಸಲುವಾಗಿ ಕೈಗೊಳ್ಳುವ ಬೆಸಾಯವನ್ನು 'ವಾಣಿಜ್ಯ ಬೇಸಾಯ' ಎನ್ನುವರು.
- ಬೆಳೆಗಳು:– ಹೊಗೆಸೊಪ್ಪು, ಅಡಿಕೆ, ತೆಂಗು, ಕಬ್ಬು, ಹತ್ತಿ, ಚಹ, ಕಾಫಿ, ರಬ್ಬರ್
- ಮಿಶ್ರ ಬೇಸಾಯ:–
- ಕೃಷಿಯ ಜೊತೆಗೆ ದನ ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಇತ್ಯಾದಿ ಉದ್ದೇಶಗಳಿಗೆ ಬಳಸಲಾಗುವುದಕ್ಕೆ 'ಮಿಶ್ರ ಬೇಸಾಯ' ಎನ್ನುವರು.
- ತೋಟಗಾರಿಕಾ ಬೇಸಾಯ:–
- ಭಾರತದ ಮುಖ್ಯ ಬೇಸಾಯ ಪದ್ಧತಿ
- ಕಾಫಿ, ಚಹ ಮತ್ತು ರಬ್ಬರ್ ತೋಟಗಾರಿಕಾ ಬೆಳೆಗಳು
- ಒಂದೇ ಬೆಳೆಯನ್ನು ವಿಸ್ತಾರವಾದ ತೋಟಗಳಲ್ಲಿ ಬೆಳೆಯುತ್ತಾರೆ.
- ಬೆಳೆಗಳ ಮಾದರಿ:–
- ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವು ಬೆಳೆಗಳಿಂದ ಆವರಿಸಿರುತ್ತದೆ ಇವುಗಳ ಅನುಪಾತವನ್ನು 'ಬೆಳೆ ಮಾದರಿ' ಎನ್ನುವರು.
- ಇದರಲ್ಲಿ ಆಹಾರ ಧಾನ್ಯಗಳು & ವಾಣಿಜ್ಯ ಬೆಳೆಗಳೆಂದು ಎರಡು ಬೆಳೆಗಳ ಅನುಪಾತವನ್ನು ಕಾಣಬಹುದು.
- ಭಾರತದ ಬೆಳೆ ಮಾದರಿಯು ಭೂಸ್ವರೂಪ, ವಾಯುಗುಣ, ಮಣ್ಣು, ನೀರಿನ ಪೂರೈಕೆ, ಆರ್ಥಿಕ ಅಂಶಗಳು, ಸಾಮಾಜಿಕ ಅಂಶಗಳು ಮತ್ತು ತಂತ್ರಜ್ಞಾನವನ್ನು ಅವಲಂಬಿಸಿದೆ.
- ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು:–
- ನೈಸರ್ಗಿಕ ಅಂಶಗಳು:– ಭೂಸ್ವರೂಪ, ವಾಯುಗುಣ & ಮಳೆ
- ಆರ್ಥಿಕ ಅಂಶಗಳು:– ವಿಶಾಲ ಹಿಡುವಳಿ ಇರುವ ಪ್ರದೇಶಗಳಲ್ಲಿ ಹೆಚ್ಚು ಬೆಲೆಕೊಡುವ ವಾಣಿಜ್ಯ ಉತ್ಪನ್ನಗಳನ್ನು ಬೆಳೆಯುತ್ತಾರೆ. ಇದರ ಮುಖ್ಯ ಉದ್ದೇಶ:– ಹೆಚ್ಚು ಆರ್ಥಿಕ ಲಾಭ ಪಡೆಯುವುದು
- ಸಾಮಾಜಿಕ ಅಂಶಗಳು:– ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ
- ರೈತರ ಮನೋಭಾವ:–
- ಉತ್ತರ ಕರ್ನಾಟಕದಲ್ಲಿ ರೈತರು ಜೋಳ, ಗೋಧಿ ಬೆಳೆಯುತ್ತಾರೆ.
- ಇತ್ತೀಚಿಗೆ ಸೂರ್ಯಕಾಂತಿ, ಶೇಂಗಾ, ತೊಗರಿ, ಈರುಳ್ಳಿ ಬೆಳೆಯುತ್ತಾರೆ.
- ನೀರಿನ ಪೂರೈಕೆ
- ಸಾರಿಗೆ–ಸಂಪರ್ಕ
- ಮಾರುಕಟ್ಟೆ
- ಸುಧಾರಿತ ತಳಿಗಳು
- ರಾಸಾಯನಿಕ ಗೊಬ್ಬರ
- ಭೂಸುಧಾರಣೆ
- ಬೆಳೆ ಋತುಗಳು ಅಥವಾ ವ್ಯವಸಾಯದ ಅವಧಿಗಳು:–
- ಮುಂಗಾರು ಅಥವಾ ಖಾರೀಫ್ ಬೇಸಾಯ
- ಹಿಂಗಾರು ಅಥವಾ ರಬಿ ಬೇಸಾಯ
- ಬೇಸಿಗೆ ಅಥವಾ ಜೇಡ್ ಬೇಸಾಯ
- ಮುಂಗಾರು ಅಥವಾ ಖಾರೀಫ್ ಬೇಸಾಯ:–
- ನೈಋತ್ಯ ಮನದಸೂನ್ ಮಾರುತಗಳ ಅವಧಿಯ ಬೇಸಾಯವನ್ನು 'ಮುಂಗಾರು ಬೇಸಾಯ' ಎನ್ನುವರು
- ಜೂನ್ ಅಥವಾ ಜುಲೈನಲ್ಲಿ ಬಿತ್ತನೆ
- ಸೆಪ್ಟಂಬರ್ ಮತ್ತು ಅಕ್ಟೋಬರ್‌ನಲ್ಲಿ ಕಟಾವು ಮಾಡುವರು.
- ದೇಶದ ಹೆಚ್ಚು ಭಾಗವು ಈ ಅವಧಿಯಲ್ಲಿ ಸಾಗುವಳಿ ಮಾಡುವರು.
- ಇಲ್ಲಿ ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ, ಎಣ್ಣೆಕಾಳು ಬೆಳೆಗಳು ಬೆಳೆಯುವರು.
- ಹಿಂಗಾರು ಅಥವಾ ಚಳಿಗಾಲ ಅಥವಾ ರಬಿ ಬೇಸಾಯ:–
- ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳಲ್ಲಿ ಸಾಗುವಳಿ
- ವಾಯುವ್ಯ ಭಾರತದ ಪಂಜಾಬ್, ಹರಿಯಾಣ, ಜಮ್ಮು–ಕಾಶ್ಮೀರ, ಉತ್ತರ ಪ್ರದೇಶ, ದಕ್ಷಿಣದ ಆಂದ್ರ, ತಮಿಳುನಾಡುಗಳಲ್ಲಿ ಬೇಸಾಯ
- ಇಲ್ಲಿ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿದ ವಾಯುಗುಣ
- ಗೋಧಿ ಬೇಸಾಯಕ್ಕೆ ಅತ್ಯಂತ ಸೂಕ್ತ
- ಅಕ್ಟೋಬರ್–ನವೆಂಬರ್‌ನಲ್ಲಿ ಭಿತ್ತನೆ
- ಫೆಬ್ರವರಿ–ಮಾರ್ಚ್‌ನಲ್ಲಿ ಕಟಾವು
- ಬೇಸಿಗೆಯ ಅಥವಾ ಜೇಡ್ ಬೇಸಾಯ:–
- ರಬಿ ಹಾಗೂ ಖಾರೀಫ್ ಬೇಸಾಯದ ನಡುವಿನ ಅವಧಿ
- ಬೇಸಿಗೆಯ ಈ ಬೇಸಾಯವನ್ನು 'ಜೇಡ್ ಬೇಸಾಯ' ಎನ್ನುವರು

RAMALINGAPPAL

- ಇಲ್ಲಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಎಣ್ಣೆಕಾಳುಗಳು & ತರಕಾರಿ ಬೆಳೆಯುವರು.
- ಭಾರತದ ಆಧುನಿಕ ವ್ಯವಸಾಯ ಕ್ಷೇತ್ರದ ಅಭಿವೃದ್ಧಿಗೆ ಕಾರಣ:–
- ನೀರಾವರಿ
- ಆಧುನಿಕ ಯಂತ್ರೋಪಕರಣ
- ರಾಸಾಯನಿಕ ಗೊಬ್ಬರ
- ಅಧಿಕ ಇಳುವರಿ ಕೊಡುವ ತಳಿಗಳು
- ಕ್ರಿಮಿನಾಶಕ
- ರೋಗನಾಶಕ
- ಭಾರತದ ಪ್ರಮುಖ ಬೆಳೆಗಳು:–
- ಆಹಾರ ಬೆಳೆಗಳು
- ವಾಣಿಜ್ಯ ಬೆಳೆಗಳು
- ನಾರಿನ ಬೆಳೆಗಳು
- ಪಾನೀಯ ಬೆಳೆಗಳು
- ಆಹಾರ ಬೆಳೆಗಳು:–
- ಭತ್ತ:–
- ಭಾರತದ ಪ್ರಮುಖ ಆಹಾರ ಬೆಳೆ ಭತ್ತ
- ಪ್ರಪಂಚದಲ್ಲಿ ಭತ್ತ ಬೆಲೆಯುವ 2ನೇ ದೇಶ ಭಾರತ
- ಭತ್ತ ಪ್ರಮುಖ ಖಾರೀಫ್ ಬೆಳೆ
- ಇದಕ್ಕೆ 250 ಸೆ. ಉಷ್ಣಾಂಶ & 100 ರಿಂದ 200 ಸೆ.ಮೀ ವಾರ್ಷಿಕ ಮಳೆ ಅಗತ್ಯ
- ಫಲವತ್ತಾದ ಮೆಕ್ಕಲು ಮಣ್ಣು, ಜೇಡಿ ಮಣ್ಣು ಸೂಕ್ತ
- ಬೆಳೆ ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕು ಆದ್ದರಿಂದ ಸಮತಟ್ಟಾದ ಭೂಮಿ ಬೇಕು
- ಕಡಿಮೆ ಮಳೆ ಬೀಳುವ ಕಡೆ ನೀರಾವರಿಯ ಅಗತ್ಯ.
- ಹೆಚ್ಚು ಭತ್ತ ಬೆಳೆಯುವ ರಾಜ್ಯ ಪಶ್ಚಿಮ ಬಂಗಾಳ
- ಇತರೆ:– ಆಂದ್ರ, ತಮಿಳುನಾಡು, ಒರಿಸ್ಸಾ, ಕರ್ನಾಟಕ, ಉತ್ತರ ಪ್ರದೇಶ
- ಗೋಧಿ:–
- ಇದು ಚಳಿಗಾಲದ(ರಬಿ) ಮುಖ್ಯ ಬೆಳೆ
- ಭಾರತ ಗೋಧಿಯನ್ನು ರಫ್ತು ಮಾಡುವ ದೇಶಗಳಲ್ಲಿ ಒಂದು
- ಗೋಧಿ ಬೆಳೆಗೆ 100ರಿಂದ 150ಸೆ. ಉಷ್ಣಾಂಶ ಮತ್ತು 50 ರಿಂದ 70 ಸೆಂ.ಮೀ ವಾರ್ಷಿಕ ಮಳೆ ಅಗತ್ಯ.
- ಮರಳು ಮಿಶ್ರಿತ ಜೇಡಿ ಮಣ್ಣು & ಕಪ್ಪುಮಣ್ಣು ಅವಶ್ಯಕ
- ಪಂಜಾಬ್, ಹರಿಯಾಣ & ಉತ್ತರ ಪ್ರದೇಶಗಳಲ್ಲಿ ಗೋಧಿ ಬೆಳೆಯುತ್ತಾರೆ.
- ಪಂಜಾಬ್‌ನ್ನು ಗೋಧಿಯ ಕಣಜ ಎನ್ನುವರು
- ಉತ್ತರ ಪ್ರದೇಶವು ಗೋಧಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ.
- ವಾಣಿಜ್ಯ ಬೆಳೆಗಳು:–
- ಕಬ್ಬು:–
- ಇದು ಭಾರತದ ಮುಖ್ಯ ವಾಣೀಜ್ಯ ಬೆಳೆ
- ಭಾರತ ಕಬ್ಬಿನ ಉತ್ಪಾದನೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ.
- ಪ್ರಪಂಚದಲ್ಲಿ 2ನೇ ಸ್ಥಾನ ಪಡೆದಿದೆ.
- ಇದು ವಾರ್ಷಿಕ ಬೆಳೆಯಾಗಿದ್ದು ನೀರಾವರಿ ಪ್ರದೇಶಗಳಲ್ಲಿ ಬೆಳೆಯುವರು.
- ಇದಕ್ಕೆ ಹೆಚ್ಚು ಉಷ್ಣಾಂಶ & ತೇವಾಂಶದ ವಾಯುಗುಣ ಅವಶ್ಯಕ
- ಇದಕ್ಕೆ 210 ರಿಂದ 260 ಸೆ. ಉಷ್ಣಾಂಶ & 100 ರಿಂದ 150ಸೆಂ.ಮೀ ವಾರ್ಷಿಕ ಮಳೆ ಬೇಕು
- ಮೆಕ್ಕಳು ಮಣ್ಣು & ಕಪ್ಪು ಮಣ್ಣು ಬೇಕು
- ಕಬ್ಬನ್ನು ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಡು, ಕರ್ನಾಟಲ, ಗುಜರಾತ್, ಆಂದ್ರ ಗಳಲ್ಲಿ ಬೆಳೆಯುತ್ತಾರೆ.
- ಹೊಗೆಸೊಪ್ಪು:–
- ಭಾರತ ಇದರ ಉತ್ಪಾದನೆಯಲ್ಲಿ ಜಗತ್ತಿನಲ್ಲಿ 3ನೇ ಸ್ಥಾನ
- ಇದನ್ನು ಬೀಡಿ, ಸಿಗರೇಟು, ಹುಕ್ಕಾ, ನಸ್ಯಾಗಳ ತಯಾರಿಕೆಯಲ್ಲಿ ಬಳಕೆ
- ಇದರ ಸೇವನೆ ಆರೋಗ್ಯಕ್ಕೆ ಹಾನಿಕಾರ ಎಂದು ಗೊತ್ತಿದ್ದರು ತಯಾರಿಕೆ ಮತ್ತು ಬಳಕೆ ಹೆಚ್ಚಿದೆ.
- ಇದು ಉಷ್ಣವಲಯದ ಬೆಳೆ
- ಇದಕ್ಕೆ 210 ರಿಂದ 270 ಸೆ. ಉಷ್ಣಾಂಶ ಹಾಗೂ ಸಾಧಾರಣ ಮಳೆ ಹಾಗೂ ಸರಾಸರಿ 50ಸೆ.ಮೀ ಮಳೆ ಅಗತ್ಯ
- ಮರಳುಮಿಶ್ರಿತ ಮಣ್ಣು, ರಾಸಾಯನಿಕ ಗೊಬ್ಬರ ಅಗತ್ಯ.
- ಇದನ್ನು ಆಂದ್ರ, ಗುಜರಾತ್, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಉತ್ಪಾದನೆ
- ಕರ್ನಾಟಕದ ನಿಪ್ಪಾಣಿ ಬೆಳಗಾವಿ ಜಿಲ್ಲೆ ನಗರವು ಹೊಗೆಸೊಪ್ಪು ಮಾರುಕಟ್ಟೆ ಕೇಂದ್ರ.

RAMALINGAPPA L

- ನಾರಿನ ಬೆಳೆಗಳು:–
- ಹತ್ತಿ:–
- ಭಾರತದ ನಾರಿನ ಬೆಳೆಗಳಲ್ಲಿ ಇದು ಪ್ರಮುಖವಾದುದ್ದು.
- ಕಚ್ಚಾಹತ್ತಿಯನ್ನು ಹತ್ತಿ ಗಿರಣೀಗಳಲ್ಲಿ ಕಚ್ಚಾವಸ್ತುವಾಗಿ ಬಳಕೆ
- ಇದನ್ನು ರಫ್ತು ಮಾಡಿ ವಿದೇಶಿ ವಿನಿಮಯವನ್ನು ಗಳಿಸುತ್ತದೆ.
- ಭಾರತ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಮೊದಲ ಸ್ಥಾನ & ಉತ್ಪಾದನೆಯಲ್ಲಿ 2ನೇ ಸ್ಥಾನ ಪಡೆದಿದೆ.
- ಇದು ಉಷ್ಣವಲಯದ & ಉಪ ಉಷ್ಣವಲಯದ ಬೆಳೆ
- ಇದಕ್ಕೆ 200 ರಿಂದ 250 ಸೆ. ಉಷ್ಣಾಂಶ
- 75 ರಿಂದ 150 ಸೆ.ಮೀ ಮಳೆ ಬೇಕು
- ಕಪ್ಪು ಮಣ್ಣು, ಮೆಕ್ಕಲು ಮಣ್ಣು ಬೇಕು.
- ತೇವಾಂಶ ಹಿಡಿದಿಟ್ಟುಕೊಳ್ಳುವ ಮಣ್ಣು ಸೂಕ್ತ
- ಇದನ್ನು ಮುಂಗಾರು(ಖಾರೀಫ್) ಬೆಳೆಯಾಗಿ ಬೆಳೆಯುತ್ತಾರೆ.
- ಗುಜರಾತ್, ಮಹಾರಾಷ್ಟ್ರ, ಆಂಧ್ರ, ಹರಿಯಾಣ, ಕರ್ನಾಟಕ ಮಧ್ಯಪ್ರದೇಶಗಳಲ್ಲಿ ಬೆಳೆಯುತ್ತಾರೆ.
- ಪಾನೀಯ ಬೆಳೆಗಳು:–
- ಇವು ತೋಟಗಾರಿಕೆ ಬೆಳೆಗಳು ಕೂಡ.
- ಚಹಾ & ಕಾಫಿ ಮುಖ್ಯ ಪಾನೀಯ ಬೆಳೆಗಳು.
- ಚಹಾ:–
- ಚಹಾ ಪ್ರಪಂಚದಲ್ಲಿ ಮುಖ್ಯ ಬೆಳೆ.
- ಬಾರತವು ಚಹಾ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನ
- ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತ ರಫ್ತಿನಲ್ಲಿ ಏಕಸ್ವಾಮ್ಯ ಹೊಂದಿತ್ತು.
- ಇದು ಅಪಾರ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಿದ್ದರಿಂದ ಪ್ರಾಮುಖ್ಯತೆ ಗಳಿಸಿದೆ.
- ಇದು ಉಷ್ಣವಲಯ & ಉಪಉಷ್ಣವಲಯದಲ್ಲಿ ಬೆಳೆಯುವ ನಿತ್ಯ ಹರಿದ್ವರ್ಣದ ವಾರ್ಷಿಕ ಬೆಳೆ.
- ಇದಕ್ಕೆ ಸರಾಸರಿ 21 ಸೆ. ಉಷ್ಣಾಂಶ & 150–200 ಸೆಂ.ಮೀ ಮಳೆ ಅವಶ್ಯಕ.
- ಕೊಳೆತ ಜೈವಿಕಾಂಶವುಳ್ಳ & ನೀರು ಸುಲಭವಾಗಿ ಬಸಿದು ಹೋಗುವ ಮರಳು ಮಿಶ್ರಿತ ಜೇಡಿ ಮಣ್ಣು ಅಗತ್ಯ
- ಆದ್ದರಿಂದ 1200 ರಿಂದ 2400 ಮೀ ಎತ್ತರವುಳ್ಳ ಇಳಿಜಾರುಗಳಲ್ಲಿ ಬೆಳೆಯುತ್ತಾರೆ.
- ಇದನ್ನು ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳಗಳಲ್ಲಿ ಬೆಳೆಯುತ್ತಾರೆ.
- ವ್ಯವಸಾಯದ ಅಭಿವೃದ್ಧಿಯಲ್ಲಿ ತೋಟಗಾರಿಕೆ ಹಾಗೂ ಪುಷ್ಪ ಬೇಸಾಯದ ಪಾತ್ರ:–
- ತೋಟಾಗಾರಿಕಾ ಅಥವಾ ಕೈತೋಟಗಾರಿಕೆ ಬೆಳೆಗಳು:–
- ಇಉ ಹಣ್ಣು, ತರಕಾರಿ & ಹೂಗಳ ಉತ್ಪಾದನೆ ಒಳಗೊಂಡಿದೆ.
- ಇದು ಅಲ್ಪಾವಧಿಯ ಅಥವಾ ನಿರ್ದಿಷ್ಟ ಅವಧಿಯಲ್ಲಿ ಪಸಲು ನೀಡುವ ಬೆಳೆ
- ಇದು ಇತರೆ ಬೇಸಾಯಕ್ಕಿಂತ ಹೆಚ್ಚು ಸಾಮದ್ರಯುತ & ವಾಣಿಜ್ಯ ಮಾದರಿಯದಾಗಿದೆ.
- ಭಾರತ ಮಾವು, ಬಾಳೆ, ಸಪೋಟ & ನಿಂಬೆ ಜಾತಿಯ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನ
- ಇದರಿಂದ ಸರ್ಕಾರ ತೋಟಗಾರಿಕಾ ಬೇಸಾಯಕ್ಕೆ ಹೆಚ್ಚು ಮಹತ್ವ ನೀಡಿದೆ.
- ತೋಟಗಾರಿಕೆ ಬೇಸಾಯದ ಪ್ರಗತಿಗೆ "ಸುವರ್ಣ ಕ್ರಾಂತಿ" ಎನ್ನುವರು.
- ತೋಟಗಾರಿಕೆಗೆ ಬೇಕಾಗುವ ವೈವಿಧ್ಯಮಯ ಭೂಸ್ವರೂಪ, ವಾಯುಗುಣ, ಮಣ್ಣು, ನೀರಾವರಿ ಸೌಲಭ್ಯ, ಕಾರ್ಮಿಕರು, ಮಾರುಕಟ್ಟೆ, ಸರ್ಕಾರದ ಉತ್ತೇಜನ ಪೂರಕವಾಗಿದೆ.
- ಪುಷ್ಪ ಬೇಸಾಯ:–
- ಹೂ ಬೆಳೆಯುವ ಕಲೆ ಭಾರತೀಯರಿಗೆ ಅತಿ ಪುರಾತನ ಕಾಲದಿಂದ ತಿಳಿದಿತ್ತು.
- ವಾಣಿಜ್ಯ ಮಾದರಿಯ ಪುಷ್ಪ ಕೃಷಿ ಅಥವಾ ಬೇಸಾಯವನ್ನು "ಫ್ಲೋರಿಕಲ್ಚರ್" ಎನ್ನವರು.
- ಭಾರತದಲ್ಲಿ ಮಲ್ಲಿಗೆ, ದುಂಡುಮಲ್ಲಿಗೆ, ಸಂಪಿಗೆ, ಚೆಂಡು, ಸೇವಂತಿಗೆ, ಕನಕಾಂಬರ, ಗುಲಾಬಿ, ಲಿಲ್ಲಿ ಪ್ರಮುಖವಾಗಿವೆ.
- ಉದ್ದವಾಗಿ ಕತ್ತರಿಸಿ ಗುಲಾಬಿ, ಆರ್ಕಿಡ್, ಲಿಲ್ಲಿ, ಗ್ಲಾಡಿಯೋಲಸ್, ಕಾರನೇಷನ್, ಆಂಥೋರಿಯಂ ಹೂವುಗಳಿಗೆ ಬೇಡಿಕೆಯಿದೆ.
- ಪುಷ್ಪ ಬೇಸಾಯ ಕೆಲವೇ ರಾಜ್ಯಗಳಿಗೆ ಸೀಮತ.
- ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಆಂದ್ರ, ಹಿಮಾಚಲ ಪ್ರದೇಶ, ಹರಿಯಾಣ, ರಾಜಸ್ಥಾನಗಳಲ್ಲಿ ಬೆಳೆಯುತ್ತಾರೆ.
- ಪುಷ್ಪ ಬೇಸಾಯವು ಉದ್ಯಮದ ಮಾದರಿಯಲ್ಲಿ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶವಿದೆ ಕಾರಣ, ಭಾರತದ ಬೇಸಾಯ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ.

RAMALINGAPPA L

- ತೋಟಗಾರಿಕಾ & ಪುಷ್ಪ ಬೇಸಾಯವು ಇತ್ತೀಚಿಗೆ ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖ ಆರ್ಥಿಕತೆಯನ್ನು ಹೊಂದಿದೆ.
- ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಗಳು:–
- ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ಒಳಗೊಂಡಿರುವ ಮಿಶ್ರಣವನ್ನೇ "ಖನಿಜ" ಎನ್ನುವರು.
- ಇವು ಶಿಲೆ & ಭೂ ಮೇಲ್ಮೈ ವಲಯದ ಮಿಶ್ರಣಗಳೊಡನೆ ದೊರೆಯುತ್ತದೆ.
- ಭಾರತದ ಖನಿಜಗಳು:– ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಬಾಕ್ಸೈಡ್ ಅದಿರು, ಅಭ್ರಕ, ಚಿನ್ನದ ಅದಿರು.
- ಶಕ್ತಿ ಸಂಪನ್ಮೂಲಗಳು:– ಕಲ್ಲಿದ್ದಲು, ಪೆಟ್ರೋಲಿಯಂ, ಅಣು ಖನಿಜ, ಶೌರಶಕ್ತ, ಗಾಳಿಶಕ್ತಿ
- ಕಬ್ಬಿಣದ ಅದಿರು:–
- ಅದಿರುಗಳಲ್ಲಿ ಇದು ಮುಖ್ಯವಾಗಿದೆ.
- ಉತ್ಪಾದಿಸುವ ಖನಿಜಗಳ ಮೌಲ್ಯದಲ್ಲಿ ಶೇ.20 ರಷ್ಟನ್ನು ಕಬ್ಬಿಣದ ಅದಿರು ಒಳಗೊಂಡಿದೆ.
- ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಭಾರತ ಪ್ರಪಂಚದಲ್ಲಿ 6ನೇ ಸ್ಥಾನ ಪಡದಿದೆ.
- ಜಾರ್ಖಂಡ್, ಒಡಿಶಾ, ಕರ್ನಾಟಕದಲ್ಲಿ ಹೆಚ್ಚು ನಿಕ್ಷೇಪಗಳಿವೆ
- ಜಾರ್ಖಂಡಿನ ಸಿಂಗಭೂಮ್
- ಒರಿಸ್ಸಾದ ಕೆಯೊಂಜ್ಹಾರ್, ಮಯೂರ್ ಭಂಜ್, ಸುಂದರ್ ಘರ್
- ಛತ್ತಿಸಘಡದ ಬಸ್ತಾರ್, ದುರ್ಗ, ರಾಯಪುರ
- ಕರ್ನಾಟಕದ ಕೆಮ್ಮಣ್ಣುಗುಂಡಿ, ಹೊಸಪೇಟೆ, ಸೊಂಡೂರು, ಕುದುರೆಮುಖ
- ಇದನ್ನು ಕರ್ನಾಟಕ, ಔತ್ತಿಸಘಡ, ಜಾರ್ಖಂಡ್, ಪ.ಬಂಗಾಳ, ಮಧ್ಯಪ್ರದೇಶ, ಒಡಿಶಾ, ಆಂಧ್ರಗಳ ಕಬ್ಬಣ & ಉಕ್ಕಿನ ಕೈಗಾರಿಕೆಗಳಲ್ಲಿ ಬಳಸುತ್ತಾರೆ.
- ಅಲ್ಲದೆ ಜಪಾನ್, ಚೈನಾ, ಇಟಲಿ, ಇರಾನ್‌ಗಳಿಗೆ ರಫ್ತು ಮಾಡಲಾಗುತ್ತದೆ.
- ಮ್ಯಾಂಗನೀಸ್ ಅದಿರು:–
- ಕಬ್ಬಣದ ಮಿಶ್ರಲೋಹಗಳಲ್ಲಿ ಇದು ಮುಖ್ಯವಾದುದು.
- ಇದರ ಉಪಯೋಗಗಳು:– ಉಕ್ಕಿನ ಉತ್ಪಾದನೆಯಲ್ಲಿ , ರಾಸಾಯನಿಕ & ವಿದ್ಯುತ್ ಉಪಕರಣಗಳ ತಯಾರಿಕೆ, ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸುವರು.
- ವಿಧಗಳು:– ಪೈರೋಲೋಸೈಟ್, ಸೈಲೊಮೆಲೆನ್, ಮ್ಯಾಗ್ನೆಟೈಟ್, ಬ್ರಾನ್ನೈಟ್ & ಹೋಲ್ಯಾಂಡೈಟ್
- ಭಾರತದ ಮ್ಯಾಂಗನೀಸ್ ಅದಿರು ಅತ್ಯುತ್ತಮವಾಗಿದೆ
- ಪೈರೋಲೋಸೈಟ್ & ಸೈಲೋಮೆಲೇನ ಅದಿರುವಗಳು ಮುಖ್ಯ.
- ರಾಜ್ಯಗಳು:– ಒಡಿಶಾ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ್, ಛತ್ತಿಸಘಡ್, ರಾಜಸ್ತಾನ, ಪಂಜಾಬ್, ಗೋವಾ
- ಬಾಕ್ಸೈಟ್ ಅದಿರು:–
- ಇದು ಅಲ್ಯೂಮಿನಿಯಂ ಲೋಹದ ಮುಖ್ಯ ಅದಿರು.
- ಇದು ಕಬ್ಬಿಣದ ಆಕ್ಸೈಡ್ & ಮರಳಿನೊಂದಿಗೆ ಮಿಶ್ರಿತವಾಗಿರುತ್ತದೆ.
- ಕಂದು ಹಳದಿ & ಬೂದು ಬಣ್ಣಗಳಿಂದ ಮಿಶ್ರಿತವಾದ ಬಾಕ್ಸೈಟ್ ಜೇಡಿಮಣ್ಣಿನಂತೆ ಜಿಗುಟು ಗುಣವನ್ನು ಹೊಂದಿದೆ.
- ಇದು ಪ್ರತಿಶತ 60 ರಿಂದ 70 ರಷ್ಟು ಅಲ್ಯೂಮಿನಿಯಂ ಆಕ್ಸೈಟ್ ಹೊಂದಿದ್ದು ಇದನ್ನು ಸಂಸ್ಕರಿಸಿ ಪಡೆಯಲಾಗುತ್ತದೆ.
- ಇದು ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ 20ನೇ ಶತಮಾನದ "ಅದ್ಭುತ ಲೋಹ" ಎನ್ನುವರು
- ಭಾರತ ಹೇರಳವಾದ ನಿಕ್ಷೇಪ ಹೊಂದಿರುವುದರಿಂದ ಉತ್ಪಾದನೆಯಲ್ಲಿ ಸ್ವಾವಲಂಬನೆಯಾಗಿದೆ.
- ಭಾರತ ಪ್ರಪಂಚದಲ್ಲಿ 5ನೇ ಸ್ಥಾನದಲ್ಲಿದೆ.
- ಒಡಿಶಾದ ಕೋರಾಪಟ್, ಕಾಳಹಂದಿ, ಬೋಲಾಂಗೀರ್, ಸುಂದರಘರ್
- ಗುಜರಾತಿನ ಜಾಮನಗರ, ಭಾವನಗರ, ಜುನಾಗಡ, ಬರೂಚ್, ಸೂರತ್
- ಜಾರ್ಖಂಡಿನ ರಾಂಚಿ, ಪಲಮಾವು, ಶಹಬಾದ್, ಲೋಹರದಗ
- ಮಹಾರಾಷ್ಟ್ರದ ರತ್ನಗಿರಿ, ಕೊಲ್ಲಾಪುರ, ಅಂಬೋಲಿಘಾಟ, ಉದಯಗಿರಿ, ರಾಧಾನಗರಿ, ದಂಗರ್ವಾಡಿ, ದರ್ಭಾಂಗ್
- ಛತ್ತಿಸಘಡದ ಬಸ್ತಾರ, ಬಿಲಾಸ್ಪುರ, ರಾಯಗಡ್, ಸುರಗುಜಾ
- ಭಾರತ ಸೌದಿ ಅರೇಬಿಯಾ, ಯು.ಎ.ಇ, ಬ್ರಿಟನ್, ಜರ್ಮನಿ, ಜಪಾನ್, ಯು.ಎಸ್.ಎ ಗಳಿಗೆ ರಫ್ತು ಮಾಡುತ್ತದೆ.
- ಅಭ್ರಕ:–
- ಕಬ್ಬಿಣೇತರ ಖನಿಜಗಳಲ್ಲಿ ಅತಿ ಮುಖ್ಯವಾದದ್ದು.
- ಭಾರತ ಅಭ್ರಕದ ನಿಕ್ಷೇಪ & ಫಲಕಅಭ್ರಕದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಅಗ್ರಸ್ಥಾನದಲ್ಲಿದೆ.
- ಇದು ಒಳ್ಳೆಯ ಪಾರದರ್ಶಕತೆ, ಸ್ಥಿತಿಸ್ಥಾಪಕತ್ವ, ಶಾಖ ನಿರೋಧಕ, ಹೊಳಪುಳ್ಳ ಸಿಲಿಕೇಟ್ ಖನಿಜ

RAMALINGAPPA L

- ಇದು ಶಾಖ & ವಿದ್ಯುತ್ತಿನ ಮಂದವಾಹಕ ಆದ್ದರಿಂದ ಇದನ್ನು ಶಾಖ ನಿರೋಧಕ & ವಿದ್ಯುತ್ ನಿರೋಧಕ ವಸ್ತುವಾಗಿ ಬಳಕೆ
- ಇದನ್ನು ಟೆಲಿಫೋನ್, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ವಾರ್ನಿಷ್, ಕೃತಕ ರಬ್ಬರ್, ಡೈನೊಮೊಗಳು, ರಾಸಾಯನಿಕ ಕೈಗಾರಿಕೆಗಳಲ್ಲಿ ಉಪಯೋಗ
- ಇದು "ಕಾಗೆ ಬಂಗಾರ" ಎಂದು ಪ್ರಸಿದ್ಧಿ.
- ವಿಧಗಳು:–
- ರಾಸಾಯನಿಕ ಅಂಶ & ಬಣ್ಣಗಳಿಗನುಗುಣವಾಗಿ
- ಮಸ್ಕೊವೈಟ್(ಶ್ವೇತ ಅಭ್ರಕ)
- ಬಯೋಟೈಟ್(ಕಪ್ಪು ಅಭ್ರಕ)
- ಫ್ಲೊಗೋವೈಟ್(ಕಂದು ಅಭ್ರಕ)
- ಭಾರತದಲ್ಲಿ ಅತ್ಯುತ್ತಮ ದರ್ಜೆಯ ಶ್ವೇತ ಅಭ್ರಕವು ವ್ಯಾಪಕವಾಗಿದೆ.
- ಅಭ್ರಕವು ಆಂಧ್ರದ ನೆಲ್ಲೂರು, ವಾರಂಗಲ್, ಕೃಷ್ಣಾ & ಪೂರ್ವ ಗೋದಾವರಿ
- ಜಾರ್ಖಂಡಿನ ಧನಭಾದ್, ಪಲಮಾವು, ಗಿರಧಿ, ಕೋಡರ್ಮ
- ಬಿಹಾರದ ಗಯಾ, ಮೊಂಗೈರ್, ಬಾಗಲ್‌ಪುರ, ನಾವಡ
- ರಾಜಸ್ತಾನದ ಉದಯಪುರ, ಅಜ್ಮೀರ ಬಿಲ್ವಾರ, ಜೈಪುರ
- ಕೇರಳದ ತಿರುವನಂತಪುರ
- ತಮಿಳುನಾಡಿನ ಸೇಲಂ
- ಮಧ್ಯಪ್ರದೇಶದ ಜಿಂದ್ವಾರ, ಬಸ್ತಾರ್ ಬಾಲಘಾಡಗಳಲ್ಲಿ
- ಹಿಂದಿನ ವರ್ಷಗಳಲ್ಲಿ ಅಪಾರವಾಗಿ ಉತ್ಪಾದಿಸಿ ರಫ್ತು ಮಾಡುತ್ತಿತ್ತು ಆದರೆ ಇಂದು ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿದ್ದರಿಂದ ರಫ್ತು ಕಡಿಮೆಯಾಗಿದೆ.
- ಒನ್ನದ ಅದಿರು:–
- ಇದು ಅತ್ಯಮೂಲ್ಯ ಲೋಹ
- ಪ್ರಪಂಚದ ಪ್ರಾಚೀನ ಕಾಲದಿಂದಲೂ ಹೆಚ್ಚಿನ ಮೌಲ್ಯ ಹೊಂದಿದೆ.
- ಅಂತರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಹಾಗೂ ಅಂತರಾಷ್ಟ್ರೀಯ ಮೌಲ್ಯ ನಿರ್ಧರಿಸುವಲ್ಲಿ ಇದು ನಿರ್ಧಾರಕ ಮಾಧ್ಯಮ
- ಭಾರತದಲ್ಲಿ ಚಿನ್ನದ ನಿಕ್ಷೇಪವು ಕಡಿಮೆಯಿದೆ.
- ಕರ್ನಾಟಕದ ಕೋಲಾರ, ರಾಯಚೂರು, ಹಟ್ಟಿ ನಿಕ್ಷೇಪಗಳು
- ಆಂಧ್ರದ ಅನಂತಪುರ,
- ಬಿಹಾರ, ಕೇರಳ, ತಮಿಳುನಾಡುಗಳಲ್ಲಿ ಕಂಡುಬರುತ್ತದೆ.
- ಗದಗ ಬಳಿ ಕಪ್ಪತಗುಡ್ಡದಲ್ಲಿ ಬೆಣಚುಕಲ್ಲಿನ ಶಿಲಾಸ್ತರಗಳಲ್ಲಿ ಎಳೆಗಳ ರೂಪದಲ್ಲಿ ದೊರೆಯುತ್ತದೆ.
- ಸದ್ಯ ಹಟ್ಟಿಗಣಿ ದೇಶದಲ್ಲಿ ಅತಿ ಹೆಚ್ಚು ಚಿನ್ನ ಉತ್ಪಾದಿಸುತ್ತದೆ.
- ಶಕ್ತಿ ಸಂಪನ್ಮೂಲಗಳು:–
- ಮುಗಿದು ಹೋಗುವ ಶಕ್ತಿ ಸಂಪನ್ಮೂಲಗಳು:– ಕಲ್ಲಿದ್ದಲು, ಪೆಟ್ರೋಲಿಯಂ, ಅಣುಶಕ್ತಿ
- ಮುಗಿಯದೇ ಇರುವ ಶಕ್ತಿ ಸಂಪನ್ಮೂಲಗಳು:– ಸೌರಶಕ್ತಿ, ಪವನಶಕ್ತಿ, ಜಲವಿದ್ಯುತ್ ಶಕ್ತಿ
- ಕಲ್ಲಿದ್ದಲು:–
- ಭಾರತದಲ್ಲಿ ಇದು ಪ್ರಮುಖ ಶಕ್ತಿ ಸಂಪನ್ಮೂಲ
- ಭಾರತ ಪ್ರಪಂಚದಲ್ಲಿ ಉತ್ಪಾದನೆಯಲ್ಲಿ 3ನೇ ಸ್ಥಾನ
- ಹಿಂದೆ ದಟ್ಟವಾದ ಅರಣ್ಯಗಳು ಭೂಮಿಯ ಪದರುಗಳಲ್ಲಿ ಹುದುಗಿ ಹೋಗಿ ಶಾಖ & ಒತ್ತಡದಿಂದ ಕಲ್ಲಿದ್ದಲಾಗಿ ಮಾರ್ಪಡು.
- ಇದು ಕೀಟ ನಿರೋಧಕಗಳು, ಸ್ಫೋಟಕ ವಸ್ತುಗಳು, ಕೃತಕ ನಾರು, ಕೃತಕ ರಬ್ಬರ್, ಪ್ಲಾಸ್ಟಿಕ್, ರಾಸಾಯನಿಕ ಗೊಬ್ಬರ ತಯಾರಿಕೆಯಲ್ಲಿ ಬಳಸುತ್ತಾರೆ.
- ಇದು ಬಹು ಉಪಯೋಗಿ ಖನಿಜವಾಗಿದ್ದರಿಂದ ಇದನ್ನು "ಕಪ್ಪು ಬಂಗಾರ" ಎನ್ನುವರು.
- ಭಾರತದಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ ನದಿ ಕಣಿವೆಯಲ್ಲಿ ವ್ಯಾಪಕ ಹಂಚಿಕೆ.
- ಜಾರ್ಖಂಡ್ & ಛತ್ತಿಸಘಡಗಳಲ್ಲಿ ಹೆಚ್ಚು ಉತ್ಪಾದಿಸಲಾಗುತ್ತದೆ.
- ಘರಿಯಾ, ಬೊಕಾರೊ, ಗಿರಿಧಿ, ಕರಣಪುರ ಮುಖ್ಯ ಪ್ರದೇಶಗಳು
- ಅಲ್ಲದೆ ಗೋದಾವರಿ, ಮಹಾನದಿ, ವಾರ್ಧಾ ನದಿ ಕಣಿವೆಗಳಲ್ಲಿ ನಿಕ್ಷೇಪಗಳಿವೆ.
- ರಾಜ್ಯಗಳು:– ಜಾರ್ಖಂಡ್, ಛತ್ತಿಸಘಡ್, ಒರಿಸ್ಸಾ, ಪ.ಬಂಗಾಳ, ಆಂಧ್ರ, ಮಧ್ಯಪ್ರದೇಶ
- ಭಾರತದಲ್ಲಿ ಬೇಡಿಕೆ ಅಧಿಕವಾಗಿದೆ ಆದ್ದರಿಂದ ಆಮದು ಮಾಡಿಕೊಳ್ಳಲಾಗುತ್ತದೆ.
- ಪೆಟ್ರೋಲಿಯಂ:–
- ಇದು ಪುರಾತನ ಕಾಲದಲ್ಲಿ ಜೀವಿಗಳ ಅವಶೇಷಗಳಿಂದ ಉತ್ಪತ್ತಿ.
- ಭೂಮಿಯಿಂದ ಹೊರ ತೆಗೆಯುವ ಪೆಟ್ರೋಲಿಯಂ ಹಲವು ಬಗೆಯ ಮಿಶ್ರಣಗಳಿಂದ ಕೂಡಿದ್ದ ಅದನ್ನು "ಕಚ್ಚಾತೈಲ" ಎನ್ನುವರು
- ಇದನ್ನು ಶುದ್ಧೀಕರಿಸಿ ಗ್ಯಾಸೋಲಿನ್, ಪೆಟ್ರೋಲ್, ಡೀಸಲ್, ಸೀಮೆಎಣ್ಣೆ ಪಡೆಯಲಾಗುತ್ತದೆ.
- ಇದು ಮುಖ್ಯ ಕಚ್ಚಾವಸ್ತುವಾಗಿದ್ದು ಇದರಿಂದ ಹಲವು ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ.



RAMALINGAPPA L

- ವ್ಯವಸಾಯ, ಕೈಗಾರಿಕೆ, ಸಾರಿಗೆ ಕ್ಷೇತ್ರಗಳಲ್ಲಿ ಇದು ಅಮೂಲ್ಯ ಶಕ್ತಿ ಸಂಪನ್ಮೂಲ.
- ಇದು ಶಾಂತಿ ಹಾಗೂ ಯುದ್ಧ ಕಾಲಗಳಲ್ಲಿ ಅಮೂಲ್ಯವಾದುದ್ದು
- ಆದುದ್ದರಿಂದ ಇದನ್ನು "ದ್ರವರೂಪದ ಚಿನ್ನ" ಎನ್ನುವರು.
- ಭಾರತದಲ್ಲಿ ಅಸ್ಸಾಂನ 'ದಿಗ್ಬಾಯಿ' ಎಂಬಲ್ಲಿ ಪೆಟ್ರೋಲಿಯಂನ್ನು ಮೊದಲ ಪತ್ತೆ ಮಾಡಲಾಯಿತು.
- ಸ್ವಾತಂತ್ರ್ಯ ನಂತರ ಲಕಿಮ್‌ಪುರ್, ಹುಗ್ರಿಜನ್, ಮೊರಾನ್, ನಹರ್‌ಕಟಿಯಾಗಳಲ್ಲಿ ಉತ್ಪಾದಿಸಲಾಗುತ್ತಿದೆ.
- ಗುಜರಾತ್‌ನ ಅಂಕಲೇಶ್ವರದಲ್ಲಿ ಮೊದಲ ತೈಲಬಾವಿಯನ್ನು ಕೊರೆಯಲಾಯಿತು.
- 1974ರಲ್ಲಿ ಅರಬ್ಬಿಸಮುದ್ರದಲ್ಲಿ ಮುಂಬೈನಿಂದ 110 ಕಿ.ಮೀ ದೂರದ 'ಬಾಂಬೈ ಹೈ' ನಲ್ಲಿ ತೈಲ್ ಪತ್ತೆ ಮಾಡಿ 1976ರಲ್ಲಿ ಉತ್ಪಾದನೆ ಆರಂಭ
- ಇದು ಭಾರತದ ಅತಿ ದೊಡ್ಡ ತೈಲ ನಿಕ್ಷೇಪ
- ಇತ್ತೀಚಿಗೆ ಕಾವೇರಿ, ಕೃಷ್ಣಾ, ಗೋದಾವರಿ, ಮಹಾನದಿಗಳ ಮುಖಜ ಭೂಮಿಗಳಲ್ಲಿ ಪತ್ತೆ ಮಾಡಲಾಗಿದೆ.
- ಒಟ್ಟು 19 ತೈಲ ಶುದ್ಧಕರಣ ಕೇಂದ್ರಗಳಿವೆ.
- ಆದರೆ ಭಾರತದಲ್ಲಿ ಉತ್ಪಾದನೆ ಕಡಿಮೆಯಿದ್ದು, ಇರಾನ್, ಇರಾಕ್, ಸೌದಿ ಅರೇಬಿಯಾ, ರಷ್ಯಾಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.
- ಪರಮಾಣು ಖನಿಜಗಳು:–
- ಭಾರತ ಹೇರಳವಾದ ಪರಮಾಣು ಖನಿಜ ಹೊಂದಿದೆ.
- ಪರಮಾಣು ಖನಿಜಗಳಿಂದ ಅಣುಶಕ್ತಿಯನ್ನು ಉತ್ಪಾದಿಸಾಗುತ್ತಿದೆ.
- ಇದು ಒಂದು ಸ್ಥಾನಮಾನ & ಶಕ್ತಿಯನ್ನು ಪ್ರದರ್ಶಿಸುತ್ತಿದೆ.
- ಇದನ್ನು ಕೇವಲ ದೇಶದ ರಕ್ಷಣೆಗೆ ಉತ್ಪಾದಿಸಲಾಗುತ್ತಿದೆ.
- ಇಂದು ಇದನ್ನು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತದೆ.
- ಭಾರತದಲ್ಲಿ ಯುರೇನಿಯಂ, ಥೋರಿಯಂ, ಬೆರಿಲಿಯಂ, ಲಿಥಿಯಂ ಖನಿಜಗಳಿವೆ.
- ಯುರೇನಿಯಂ:– ಇದು
- ಜಾರ್ಖಂಡ್‌ನ ಸಿಂಗಭೂಮ್, ಗಯಾ, ಹಜಾರಿಬಾಗ್
- ಉತ್ತರಪ್ರದೇಶದ ಶಹರಣ್‌ಪುರ
- ಕೇರಳದ ತೀರದಲ್ಲಿ ಹಂಚಿಕೆಯಾಗಿದೆ.
- ಥೋರಿಯಂ:– ಕೇರಳ, ಬಿಹಾರ, ತಮಿಳುನಾಡು, ರಾಜಸ್ತಾನ
- ಬೆರಿಲಿಯಂ:– ಇದನ್ನು ಪರಮಾಣು ವಿದ್ಯುತ್ ಉತ್ಪಾದನೆಯ ರಿಯಾಕ್ಟರುಗಳಲ್ಲಿ ;ಮಾಡರೇಟರ್' ಕಾರ್ಯಕ್ಕೆ ಬಳಕೆ
- ಭಾರತದಲ್ಲಿ ಅಗತ್ಯವಾದಷ್ಟು ಬೆರಿಲಿಯಂ ನಿಕ್ಷೇಪ ಹೊಂದಿದೆ.
- ಲಿಥಿಯಂ:– ಇದು ಹಗುರವಾದ ಲೋಹವಾಗಿದ್ದು ಲೆಪಿಡೋಲೆಟ್ & ಫ್ಯೂಡೋಮಿನ್ ಅದಿರುಗಳಿಂದ ಪಡೆಯಲಾಗುತ್ತದೆ.
- ಇದನ್ನು ಜಾರ್ಖಂಡ್ ಹಾಗೂ ಮಧ್ಯಪ್ರದೇಶಗಳಲ್ಲಿ ಹಂಚಿಕೆ
- ಅಸಾಂಪ್ರದಾಯಕ ಶಕ್ತಿ ಮೂಲಗಳು:–
- ಸಾಂಪ್ರದಾಯಕ ಶಕ್ತಿ ಮೂಲಗಳಿಂದ ಹಸಿರು ಮನೆಯ ಪರಿಣಾಮ ಉಂಟಾಗುತ್ತಿದ್ದು, ಭೂಮಿಯ ವಾಯುಮಂಡಲದ ಉಷ್ಣಾಂಶ ಹೆಚ್ಚಾಗುವ ಸಂಭವನೀಯತೆ ಇದೆ ಇದನ್ನು "ಗ್ಲೋಬಲ್ ವಾರ್ಮಿಂಗ್(ಜಾಗತಿಕ ತಾಪಮಾನ ಏರಿಕೆ)" ಎನ್ನುವರು.
- ಇವುಗಳ ಬಳಕೆ ಹೆಚ್ಚಾಗಲು ಕಾರಣ;– ಜನಸಂಖ್ಯಾ ಹೆಚ್ಚಳ, ನಗರೀಕರಣ, ಕೈಗಾರಿಕಾಭಿವೃದ್ಧಿ
- ಇದರಿಂದ ಪರಿಸರ ಮಾಲಿನ್ಯ ಸಹ ಹೆಚ್ಚಾಗುತ್ತದೆ.
- ಇದರಿಂದ ಇವುಗಳ ಬಳಕೆ ಕಡಿಮೆಗೊಳಿಸಿ ಅಸಾಂಪ್ರದಾಯಿಕ ಶಕ್ತಿ ಮೂಲಗಳ ಉಪಯೋಗಕ್ಕೆ ಒತ್ತು.
- ಅಸಾಂಪ್ರದಾಯಕ ಶಕ್ತಿ ಮೂಲಗಳು:– ಸೌರಶಕ್ತಿ, ಪವನಶಕ್ತಿ, ಸಾಗರನೀರಿನ ಉಬ್ಬರ ಇಳಿತ ಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲ ಶಕ್ತಿ
- ಸೌರಶಕ್ತಿ:–
- ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನು "ಸೌರಶಕ್ತಿ" ಎನ್ನುವರು.
- ಇದು ಮುಗಿದ ಸಂಪನ್ಮೂಲ
- ಸೌರಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸಬಹುದು.
- ಸೌರಶಕ್ತಿಯ ಬಳಕೆ:–
- ಸೋಲಾರ್ ವಾಟರ್ ಹೀಟರ್.
- ಕುಕ್ಕರ್
- ಸೋಲಾರ್ ಥರ್ಮಲ್
- ವಿದ್ಯುತ್ ದೀಪ
- ರೈಲ್ವೆ ಸಿಗ್ನಲ್
- ನೀರೆತ್ತುವ ಹಾಗೂ ಸಂಪರ್ಕ ಮಾಧ್ಯಮಗಳು
- ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನ ಕೇಂದ್ರವನ್ನು ರಾಜಸ್ತಾನದ "ಬಾರ್‌ಮರ್' ನಲ್ಲಿ ಸ್ಥಾಪನೆ

RAMALINGAPPA L

- ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸೌರವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
- ಪವನ ಶಕ್ತಿ:–
- ಭಾರತದಲ್ಲಿ ಇದನ್ನು ವಾಣಿಜ್ಯ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತಿದೆ.
- ಭಾರತವು ಪ್ರಪಂಚದಲ್ಲಿ ಗಾಳಿಯಿಂದ ಉತ್ಪಾದಿಸುವ 5ನೇ ದೊಡ್ಡ ದೇಶ.
- ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ರಾಜಸ್ತಾನ, ಗುಜರಾತ್ ರಾಜ್ಯಗಳಲ್ಲಿ ಇದನ್ನು ಉತ್ಪಾದಿಸಲಾಗುತ್ತಿದೆ.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ:–
- ಭಾರತದ ಶಕ್ತಿ ಸಂಪನ್ಮೂಲಗಳಲ್ಲಿ ಮುಗಿದು ಹೋಗುವ ಸಂಪನ್ಮೂಲಗಳೇ ಪ್ರಧಾನವಾಗಿವೆ.
- ಇದರ ಉತ್ಪಾದನೆ ಕಡಿಮೆಯಿದ್ದು, ವಿದೇಶಿಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.
- ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ
- ಆದ್ದರಿಂದ ಅಸಾಂಪ್ರದಾಯಿಕ ಶಕ್ತಿ ಸಂಘನ್ಮೂಲಗಳ ಬಳಕೆ ಅನಿವಾರ್ಯ
- ಮುಗಿಯದೇ ಇರುವ ಸಂಪನ್ಮೂಲಗಳ ಶೋಧನೆ & ಬಳಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಮುಖ್ಯತೆ.
- ಪರಿಹಾರಗಳು:–
- ಭಾರತದಲ್ಲಿ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿಗಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.
- 1. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಗಳನ್ನು ಹೆಚ್ಚಾಗಿ ಬಳಸುವುದ.
- 2. ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.
- 3. ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು.
- 4. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದು.
- 5. ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು.
- 6. ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು
- ಭಾರತದ ಸಾರಿಗೆ ಮತ್ತು ಸಂಪರ್ಕ:–
- ವಸ್ತುಗಳು, ಸೇವೆಗಳು, ಮಾಹಿತಿ & ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನೇ "ಸಾರಿಗೆ" ಎನ್ನುವರು.
- ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆ ವ್ಯವಸ್ಥೆಯ ಮಹತ್ವ:–
- ಉತ್ಪಾದಿತ ಪ್ರದೇಶಗಳಿಂದ ಬೇಡಿಕೆಯಿರುವ ಪ್ರದೇಶಗಳಿಗೆ ಪೂರೈಕೆ
- ಇವುಗಳು ಕೊರತೆ ಇರುವ ಪ್ರದೇಶಗಳಿಗೆ ಸಾಗಿಸಲ್ಪಡುತ್ತದೆ.
- ವ್ಯವಸಾಯ, ಕೈಗಾರಿಕೆ, ಗಣಿಗಾರಿಕೆ, ಅರಣ್ಯಗಾರಿಕೆ, ಮೀನುಗಾರಿಕೆ, ಹೈನುಗಾರಿಕೆಗಳನ್ನು ಮಾರುಕಟ್ಟೆಗೆ ಸಂಪರ್ಕಿಸುವುದು.
- ತ್ವರಿತ ಆರ್ಥಿಕ ಬೆಳವಣಿಗೆಗೆ ಸಾರಿಗೆಯ ಅಭಿವೃದ್ಧಿ ಅಗತ್ಯ.
- ಸಾರಿಗೆಯ ವಿಧಗಳು:–
- ರಸ್ತೆ ಸಾರಿಗೆ
- ರೈಲು ಸಾರಿಗೆ
- ವಾಯು ಸಾರಿಗೆ
- ಜಲ ಸಾರಿಗೆ
- ರಸ್ತೆ ಸಾರಿಗೆ:–
- ಭಾರತದಲ್ಲಿ ಪುರಾತನ ಕಾಲದಿಂದಲೂ ನಿರ್ಮಾಣಗೊಂಡಿವೆ.
- ರಾಜರು ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು.
- ಬ್ರಿಟಿಷರ ಕಾಲದಲ್ಲಿ ರಕ್ಷಣಾ ವ್ಯವಸ್ಥೆಗೆ ನಿರ್ಮಿಸುತ್ತಿದ್ದರು.
- ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆ:–
- ಭಾರತ ಹಳ್ಳಿಗಳ ದೇಶ ಹಾಗೂ ಕೃಷಿ ಪ್ರಧಾನ ದೇಶ.
- ಹಳ್ಳಿ ಮತ್ತು ಕೃಷಿಯ ಅಭಿವೃದ್ಧಿಗೆ ರಸ್ತೆಗಳ ಅಗತ್ಯ.
- ರೈತರು ಬೆಳೆದ ವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು ರಸ್ತೆಗಳಿಂದ ಮಾತ್ರ ಸಾಧ್ಯ.
- ಹಳ್ಳಿಗಳಿಗೆ ಅವಶ್ಯಕ ವಸ್ತುಗಳನ್ನು ಪೂರೈಸಲು ಸಹಾಯ
- ರಸ್ತೆ ಸಾರಿಗೆಗಳು ರೈಲು ಸಾರಿಗೆಗೆ ಪೂರಕ
- ಸರಕು ಸಾಗಾಣಿಕೆ ರಸ್ತೆ ಮಾರ್ಗಗಳಿಂದ ಸಾಧ್ಯ.
- ರಸ್ತೆ ಸಾರಿಗೆಯ ವರ್ಗೀಕರಣ:–
- ರಾಷ್ಟ್ರೀಯ ಹೆದ್ದಾರಿಗಳು
- ರಾಜ್ಯ ಹೆದ್ದಾರಿಗಳು
- ಜಿಲ್ಲಾ ರಸ್ತೆಗಳು
- ಗ್ರಾಮೀಣ ರಸ್ತೆಗಳು:–
- ರಾಷ್ಟ್ರೀಯ ಹೆದ್ದಾರಿಗಳು:–
- ಇವು ದೇಶದ ಅತಿ ಮುಖ್ಯ ರಸ್ತೆಗಳು
- ಇವು ದೇಶದ ಉದ್ದಗಲಕ್ಕೂ ನಿರ್ಮಿತವಾಗಿವೆ.
- ಇವು ರಾಜಧಾನಿ, ಬಂದರು, ಕೈಗಾರಿಕಾ ನಗರಗಳನ್ನು ಸಂಪರ್ಕಿಸುತ್ತವೆ.

RAMALINGAPPA L

- ಇವುಗಳ ನಿರ್ಮಾಣ & ನಿರ್ವಹಣೆ ಕೇಂದ್ರ ಸರ್ಕಾರದ ಜವಾಬ್ದಾರಿ.
- ಒಟ್ಟು 70,934 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮಾರ್ಗವಿದೆ.
- ಭಾರತ ಇವುಗಳ ನಿರ್ಮಾಣಕ್ಕೆ 1989ರಲ್ಲಿ 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್.ಹೆಚ್.ಎ.ಐ) ಸ್ಥಾಪಿಸಿದೆ.
- ಮೊದಲ ವರ್ಗದ ರಾಷ್ಟ್ರೀಯ ಹೆದ್ದಾರಿಗಳು ಭಾರತ ನೆರೆಯ ರಾಷ್ಟ್ರಗಳ ರಾಜಧಾನಿಗಳನ್ನು ಸಂಪರ್ಕಿಸುತ್ತವೆ.
- ಉದಾ:– ಲಾಹೋರ್–ಅಮೃತಸರ–ದೆಹಲಿ–ಆಗ್ರಾ–ಕೋಲ್ಕೊತ್ತಾ–ಇಂಫಾಲ
- ಮಾಂಡಲೆ–ಬಾರಿ–ಕಟ್ಮಂಡು
- ಎರಡನೆ ವರ್ಗದ ರಾ.ಹೆದ್ದಾರಿಗಳು:– ರಾಜ್ಯದ ರಾಜಧಾನಿಗಳು & ಪ್ರಧಾನ ಬಂದರುಗಳನ್ನು ಸಂಪರ್ಕಿಸುತ್ತವೆ.
- ವಾರಾಣಾಸಿ–ಕನ್ಯಾಕುಮಾರಿ 7ನೇ ರಾಷ್ಟ್ರೀಯ ಹೆದ್ದಾರಿಯು ಭಾರತದ ಅತಿ ಉದ್ದದ(2343ಕಿ.ಮೀ) ಹೆದ್ದಾರಿ.
- ಕುಲುಮನಾಲಿ(ಹಿಮಾಚಲ ಪ್ರದೇಶ)–ಲ್ಹೇ (ಕಾಶ್ಮೀರ) ಹೆದ್ದಾರಿಯು ಜಗತ್ತಿನ ಎತ್ತರದ (4267 ಮೀ) ರಸ್ತೆ ಮಾರ್ಗ
- ಸುವರ್ಣ ಚತುಷ್ಕೋನ & ಕಾರಿಡಾರ್ ಹೆದ್ದಾರಿಗಳು:–
- ಇದು ಚತುಷ್ಪತ/ಷಟ್ಪಥ ರಸ್ತೆಗಳನ್ನು ಹೊಂದಿದೆ.
- ಇದು 15000 ಕಿ.ಮೀ ಉದ್ದದ ಹೆದ್ದಾರಿ.
- ಈ ಯೋಜನೆ 1999 ರಿಂದ ಆರಂಭ
- ಒಟ್ಟು ವೆಚ್ಚ 54000 ಕೋಟಿ ರೂ.
- ಇದು ಪ್ರಪಂಚದಲ್ಲಿ ಅತಿ ದೊಡ್ಡ ಯೋಜನೆಯಾಗಿದೆ.
- ಇದು ದೇಶದ ಆರ್ಥಿಕ ಅಭಿವೃದ್ಧಗೆ ಅತಿ ಅಗತ್ಯ.
- ಇದು ದೇಶವನ್ನು ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ 'ಕಾರಿಡಾರ್ ರಸ್ತೆಗಳು'
- ಸರಕು & ಸೇವೆಗಳನ್ನು ಅತ್ಯಲ್ಪ ಅವಧಿಯಲ್ಲಿ ಕಡಿಮೆ ವೆಚ್ಚದಲ್ಲಿ ಸಾಗಿಸಲು ಉಪಯುಕ್ತ.
- ಇದು ಕೈಗಾರಿಕೆಗಳಿಗೆ ವರದಾನವಾಗಿದೆ.
- ಇದು ದೇಶದ ಮಹಾನಗರಗಳಾ ದೆಹಲಿ, ಮುಂಬಾಯಿ, ಬೆಂಗಳೂರು, ಚೆನ್ನೈ, ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತದೆ.
- ಇತರೆ ನಗರಗಳು:– ಪುಣೆ, ಸತಾರ, ಬೆಳಗಾವಿ, ಕಾಂಚೀಪುರಂ, ಆಗ್ರಾ, ಕಾನ್ಪುರ, ಪ್ರಯಾಗ, ವಾರಾಣಾಸಿ, ವಿಶಾಖಪಟ್ಟಣ, ಖರಗಪುರ, ವಿಜಯವಾಡ.
- ರಸ್ತೆ ಸಾರಿಗೆಯ ತೊಡಕುಗಳು:–
- ಅನೇಕ ಗ್ರಾಮೀಣ & ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನುಪಯುಕ್ತ
- ಇದು ಪರಿಸರ ಮಾಲಿನ್ಯ, ವಾಹನ ದಟ್ಟಣೆ, ಅಪಘಾರಗಳಿಗೆ ಕಾರಣ
- ಮಳೆ, ಪ್ರವಾಹ & ಚಂಡಮಾರುತಗಳಿಂದ ಪ್ರತಿ ವರ್ಷ ಹಾಳಾಗುತ್ತದೆ.
- ರಾಷ್ಟ್ರೀಯ & ರಾಜ್ಯ ಹೆದ್ದಾರಿಗಳ ನಿರ್ಮಾಣ & ನಿರ್ವಹಣೆ ಅಸಮರ್ಪಕ
- ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯನ್ನು ಕಾಣಬಹುದು.
- ಪ್ರಮುಖ ಬಂದರುಗಳು:–
- ಕಾಂಡ್ಲಾ:– ಕಚ್ ಖಾರಿಯ ಶಿರೋಭಾಗದಲ್ಲಿದೆ.
- ಮುಂಬಯಿ:–
- ಇದು ಮಹಾರಾಷ್ಟ್ರ ರಾಜ್ಯದಲ್ಲಿದೆ.
- ಇದು ಹೆಚ್ಚು ಒತ್ತಡವನ್ನು ಹೊಂದಿದ್ದರಿಂದ 'ನವಾಶೇವಾ' ಬಂದರನ್ನು ಆತ್ಯಾಧುನಿಕ ಸೌಲಭ್ಯಗಳಿಂದ ನಿರ್ಮಾಣ
- ಈ ಬಂದರನ್ನು "ಭಾರತದ ಹೆಬ್ಬಾಗಿಲು" ಎನ್ನುವರು.
- ಮರ್ಮಗೋವಾ:– ಗೋವಾದ ಝುವಾರಿ ಕೊಲ್ಲಿಯಲ್ಲಿದೆ.
- ನವಮಂಗಳೂರು: ಇದು ಕರ್ನಾಟಕದ ಪ್ರಮುಖ ಬಂದರು
- ಕೊಚ್ಚಿ:– ಇದು ಕೇರಳ ರಾಜ್ಯದಲ್ಲಿದೆ.
- ತುತುಕುಡಿ:– ಇದು ತಮಿಳುನಾಡು ರಾಜ್ಯದಲ್ಲಿದೆ.
- ಚೆನ್ನೈ:– ಇದು ಕೃತಕ ಬಂದರು ಹಾಗೂ ಹಳೆಯ ಬಂದರು
- ವಿಶಾಖಪಟ್ಟಣ:– ಇದು ನೈಸರ್ಗಿಕ ಬಂದರು, ಆಂದ್ರ ಪ್ರದೇಶದಲ್ಲಿದೆ.
- ಪಾರಾದೀಪ:– ಇದು ಒರಿಸ್ಸಾ ರಾಜ್ಯದಲ್ಲಿದೆ. ಇದನ್ನು ಇತ್ತೀಚೆಗೆ ಅಭಿವೃದ್ಧಿ ಪಡಿಸಿದೆ.
- ಕೊಲ್ಕತ್ತಾ:– ಇದು ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ. ಇದು ನೈಸರ್ಗಿಕ ರೇವುಪಟ್ಟಣ, ಇದನ್ನು "ಭಾರತದ ಚಹದ ಬಂದರು" ಎನ್ನುವರು.
- ಹಾಲ್ದಿಯಾ:– ಕೊಲ್ಲತ್ತಾ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ನಿರ್ಮಿಸಿದ ಕೃತಕ ಬಂದರು, ಇದು ಪಶ್ಚಿಮ ಬಂಗಾಳದಲ್ಲಿದೆ.
- ಪ್ರಮುಖ ವಿಮಾನ ನಿಲ್ದಾಣಗಳು:–
- ಸುವರ್ಣ ಚತುಷ್ಕೋನ & ಕಾರಿಡಾರ್ ರಸ್ತೆಗಳು ಭಾರತದ ರಾಷ್ಟ್ರೀಯ & ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.

RAMALINGAPPA L

- ಭಾರತ ಸರ್ಕಾರವು 1955ರಲ್ಲಿ "ದಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ" ಸಂಸ್ಥೆಯನ್ನು ಸ್ಥಾಪಿಸಿದೆ.
- ಇದು ದೇಶಗಳ ವಿಮಾನ ನಿಲ್ದಾಣಗಳ ನಿರ್ವಹಣೆ ಮಾಡುತ್ತದೆ.
- ಭಾರತದಲ್ಲಿ 11 ಅಂತರಾಷ್ಟ್ರೀಯ ಹಾಗೂ 115 ಆಂತರಿಕ ವಿಮಾನ ನಿಲ್ದಾಣಗಳಿವೆ.
- ಅಂತರಾಷ್ಟ್ರೀಯ ನಿಲ್ದಾಣಗಳು:–
- ಮುಂಬೈ (ಸಹರಾ & ಸಾಂತ್ರಾಕ್ರೂಜ)
- ದೆಹಲಿ (ಇಂದಿರಾಗಾಂಧಿ)
- ಕೋಲ್ಕತ್ತಾ (ಸುಭಾಷ್ ಚಂದ್ರ ಬೋಸ್)
- ಚೆನ್ನೈ (ಅಣ್ಣಾ ಅಥವಾ ಮೀನಾಂಬಾಕಂ)
- ಬೆಂಗಳೂರು (ನಾಡಪ್ರಭು ಕೆಂಪೇಗೌಡ)
- ಹೈದರಾಬಾದ್
- ಅಹಮದಾಬಾದ್
- ಪಣಜಿ
- ಅಮೃತಸರ್
- ಗುವಾಹಟು
- ತಿರುವನಂತಪುರ
- ಸಂಪರ್ಕ:–
- ಸುದ್ಧ ಮತ್ತು ಸಾಮಾಚರಗಳನ್ನು ಜನರಿಗೆ ತಲುಪಿಸುವುದೇ ಸಂಪರ್ಕ ಸಮೂಹ ಮಾಧ್ಯಮ.
- ಸಂಪರ್ಕದ ವಿಧಗಳು:–
- ಸಾಂಪ್ರದಾಯಿಕ ವಿಧಾನಗಳಾದ ಅಂಚೆ & ವೃತ್ತ ಪತ್ರಿಕೆ
- ರೇಡಿಯೋ
- ದೂರದರ್ಶನ
- ಕೃತಕ ಉಪಗ್ರಹಗಳು
- ಕಂಪ್ಯೂಟರ್ ಜಾಲ
- ಅಂತರ್ಜಾಲ
- ಇ–ಮೇಲ್
- ಸಂಚಾರಿ ದೂರವಾಣಿಗಳು
- ಸಂಪರ್ಕದ ಪ್ರಾಮುಖ್ಯತೆ:–
- ದೇಶದ ಜನರಿಗೆ ವಿವಿಧ ಪ್ರದೇಶಗಳ ಆಗು–ಹೋಗುಗಳನ್ನು ತಿಳಿಯಲು ಅಗತ್ಯ.
- ಸರ್ಕಾರದ ನೀತಿ–ನಿಯಮಗಳನ್ನು ತಿಳಿಸಿ, ತಿಳುವಳಿಕೆ ಮೂಡಿಸುತ್ತವೆ.
- ಜನರಿಗೆ ವ್ಯವಸಾಯ, ಕೈಗಾರಿಕೆ ಜ್ಞಾನ ನೀಡುತ್ತವೆ.
- ಇದರಿಂದ ಅಭಿವೃದ್ಧಿ ಪ್ರಕ್ರಿಯೆ ಶೀಘ್ರವಾಗಿ ಮುಂದುವರೆಯುತ್ತದೆ.
- ವಾಣಿಜ್ಯ ವ್ಯಾಪಾರದ ಅಭಿವೃದ್ಧಿಗೆ ಸಂಪರ್ಕ ಮಾಧ್ಯಮಗಳ ಅಗತ್ಯ.
- ದೇಶದ ಏಕತೆ, ಒಗ್ಗಟ್ಟು ಹಾಗೂ ಸ್ಥಿರತೆ ಕಾಪಾಡಿಕೊಳ್ಳಲು ಅನುಕೂಲ.
- ಭೌಗೋಳೀಕ ಮಾಹಿತಿ ವ್ಯವಸ್ಥೆ:–
- ಪೃಥ್ವಿಯ ಮೇಲ್ಮೈನ ಅಂಕಿ–ಅಂಶ ಅಥವಾ ಮಾಹಿತಿಯನ್ನು ಕಲೆಹಾಕುವ, ಸಂಗ್ರಹಿಸುವ, ಅಗತ್ಯವಿದಾಗ ಬಳಕೆ ಮಾಡುವ, ಮಾರ್ಪಡಿಸುವ ಹಾಗೂ ತೋರಿಸುವ ಪ್ರಬಲ ಸಲಕರಣೆಯ ಸಮೂಹವನ್ನು "ಭೌಗೋಳಿಕ ಮಾಹಿತಿ(ಜಿ.ಐ.ಎಸ್) ವ್ಯವಸ್ಥೆ" ಎನ್ನುವರು.
- ಇದು ಮೊದಲು 1960ರಲ್ಲಿ ಕೆನಡಾದಲ್ಲಿ ಆರಂಭ
- ಇದು:–
- ಭೂ ಮೇಲ್ಮೈ ವಿವಿಧ ಬಗೆಯ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಲಕ್ಷಣ ಹೊಂದಿದೆ.
- ಇದರಲ್ಲಿ ಜಿಲ್ಲೆಗಳು, ಭೂಸ್ವರೂಪಗಳು, ನದಿ ವ್ಯವಸ್ಥೆ, ನಸತಿಗಳ ಹಂಚಿಕೆ, ಭೂ ಸ್ವರೂಪ, ಭೂ ಬಳಕೆ, ಮಣ್ಣು–ಬೆಳೆಗಳ ಹಂಚಿಕೆಗಳನ್ನು ವಿಶ್ಲೇಷಿಸಬಹುದು.
- ಹೀಗೆ "ಜಿ.ಐ.ಎಸ್ ಕಂಪ್ಯೂಟರ್ ಆಧಾರಿತ ಭೂಮೇಲ್ಮೈಯ ವೈವಿಧ್ಯಮಯ ಅಂಕಿ–ಅಂಶಗಳನ್ನು ಸಂಸ್ಕರಿಸುವ & ವಿಶ್ಲೇಷಿಸುವ ಒಂದು ವ್ಯವಸ್ಥೆ"
- ಉಪಯೋಗಗಳು:–
- ಜಿ.ಐಎಸ್ ತಂತ್ರಜ್ಞಾನ ಆಧಾರಿತ ನಕ್ಷೆಗಳು ಹೆಚ್ಚು ಆಕರ್ಷಕ & ಮಾಹಿತಿ ಸ್ಪಷ್ಟವಾಗಿರುತ್ತದೆ.
- ಭೌಗೋಳಿಕ ಸಾಮಾಜಿಕ, ಆರ್ಥಿಕ ಭೂಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು & ಮಾದರಿ ರಚಿಸಬಹುದು.
- ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಇದರ ಪ್ರಾಮುಖ್ಯತೆ ಹೆಚ್ಚು.
- ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ
- ನಕ್ಷೆಗಳನ್ನು ಅತಿ ಶೀಘ್ರವಾಗಿ, ಅಗತ್ಯಕ್ಕೆ ತಕ್ಕಂತೆ ನಕ್ಷಾ ಶಾಸ್ತ್ರಜ್ಞರ ನೆರವಿಲ್ಲದೆ ಕಡಿಮೆ ಅವಧಿಯಲ್ಲಿ ಪಡೆಯಬಹುದು.

RAMALINGAPPA L

- ಭೌಗೋಳಿಕ ಮಾಹಿತಿ ವ್ಯವಸ್ಥೆ & ನಕ್ಷೆಗಳ ರಚನೆಯ ತಂತ್ರಾಂಶದಲ್ಲಿ ಆ್ಯಪಲ್, ಆರ್ಕ್ ಇನ್ ಫೊ, ಆ್ಯಟೋಕ್ಯಾಡ್, ಮ್ಯಾಪ್ ಇನ್ ಫೋ, ಆಕ್ ವ್ಯೂ ಗಳು ಮುಖ್ಯವಾಗಿವೆ.
- ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ:–
- ಇದು ಭೂ ಮೇಲ್ಮೈಯಲ್ಲಿನ ಯಾವುದೇ ಒಂದು ಸ್ಥಿರವಾಗಿರುವ ಅಥವಾ ಚಲಿಸುತ್ತಿರುವ ವಸ್ತು ಅಥವಾ ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ & ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದು & ವಸ್ತುವಿನ ಸ್ಥಾನದ ಎತ್ತರವನ್ನು ಸೂಚಿಸುತ್ತದೆ.
- ಈ ತಂತ್ರಜ್ಞಾನವು ಕೃತಕ ಉಪಗ್ರಹಗಳು ಕಳುಹಿಸುವ ಮಾಹಿತಿ ಹಾಗೂ ಭೂ ಮೇಲ್ಮೈಯಲ್ಲಿ ಯಾವುದೇ ವ್ಯಕ್ತಿಯ ಬಳಿಯಿರುವ ರಿಸೀವರ್‌ಗಳಿಂದ ಕಾರ್ಯ ನಿರ್ವಹಣೆ.
- ಕಾರ್ಯನಿರ್ವಹಣೆ:–
- ಇದು 20 ಕ್ಕೂ ಹೆಚ್ಚು ಕೃತಕ ಉಪಗ್ರಹಗಳನ್ನು ಹೊಂದಿದೆ.
- ಇದನ್ನು ಅಮೇರಿಕಾ ಸಂಯುಕ್ತ ಸಂಸ್ಥಾನವು ನಿರ್ವಹಿಸುತ್ತದೆ.
- ಇವು ಭೂಮಿಯನ್ನು ನಿರಂತರವಾಗಿ ಸುತ್ತುತ್ತಿವೆ.
- ಇದು ಕ್ಯಾಮರಾ, ಸೌರಶಕ್ತಿಯಿಂದ ನಡೆಯುವ ಪರಮಾಣು, ಗಡಿಯಾರ & ಮಾಹಿತಿ ರವಾನೆಯ ಆ್ಯಂಟೆನಾವನ್ನು ಒಳಗೊಂಡಿದೆ.
- ಇದು ಭೂಮಿಯ ಮೇಲಿನ ರಿಸೀವರ್ ಪಡೆದು ವಿಶ್ಲೇಷಿಸಿ, ಆ ವ್ಯಕ್ತಿಯು ಇರುವ ಸ್ಥಾನ, ವ್ಯಕ್ತಿಯು ಇರುವ ಸ್ಥಳದ ಎತ್ತರ ಸೂಚಿಸುತ್ತದೆ.
- ಇದರಿಂದ ಆ ಕೃತಕ ಉಪಗ್ರಹಗಳ ಎತ್ತರವನ್ನು ಲೆಕ್ಕಾಚಾರ ಮಾಡಬಹುದು.
- ಜಿ.ಪಿ.ಎಸ್ ವ್ಯವಸ್ಥೆಯನ್ನು "ಮಾರ್ಗಸೂಚಿ ಅಥವಾ ಪಾತ್ ಫೈಂಡರ್" ಎನ್ನುವರು.
- ಇದು ರಕ್ಷಣಾ ದೃಷ್ಟಿಯಿಂದಲೂ ಅತಿಮುಖ್ಯ
- ಭಾರತ ತನ್ನದೇ ಆದ ಪ್ರಾದೇಶೀಕ ಜಿ.ಪಿ.ಎಸ್ ವ್ಯವಸ್ಥೆ ಹೊಂದಲು 7 ಉಪಗ್ರಹಗಳನ್ನು ಉಡಾಯಿಸಿದೆ.
- ಭಾರತದ ಪ್ರಾದೇಶಿಕ & ಸ್ವತಂತ್ರ ಜಿ.ಪಿ.ಎಸ್ ವ್ಯವಸ್ಥೆಗೆ 'ನಾವಿಕ್' ಎಂಬ ಹೆಸರು.
- ಉಪಯೋಗಗಳು:–
- ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಉಪಯುಕ್ತ
- ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತ
- ಸೈನಿಕರು, ವೈಮಾನಿಕ, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಅಗತ್ಯ ಮಾಹಿತಿ.
- ಸಾರಿಗೆ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ.
- ನಗರಗಳಲ್ಲಿ ಮನೆಬಾಗಿಲ ಸೇವೆ ಕೊಡುವ ಹಲವು ಸಂಸ್ಥೆಗಳಿಗೆ ಇಂದು ಜಿ.ಪಿ.ಎಸ್ ವ್ಯವಸ್ಥೆಯೇ ಜೀವಾಳ
- ಗೂಗಲ್ ಮ್ಯಾಪ್‌ನಂಥ ವ್ಯವಸ್ಥೆಗಳು ಜಿ.ಪಿಎಸ್ ವ್ಯವಸ್ಥೆ ಬಳಸಿ ದಾರಿ ತೋರಿಸುತ್ತವೆ.
- ದೂರ ಸಂವೇದಿ ತಂತ್ರಜ್ಞಾನ:–
- ಭೂ ಮೇಲ್ಮೈಗೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಣೆಯಲ್ಲಿ ಇಂದು ಬಳಕೆಯಲ್ಲಿರುವ ಆಧುನಿಕ ತಂತ್ರಜ್ಞಾನಗಳಲ್ಲಿ ದೂರಸಂವೇದಿ ಮುಖ್ಯವಾದುದು.
- ವಸ್ತುಗಳನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆಯನ್ನು "ದೂರ ಸಂವೇದಿ" ಎನ್ನುವರು
- ವೈಮಾನಿಕ ಚಿತ್ರಗಳು & ಉಪಗ್ರಹಳಿಂದ ಪಡೆದ ಚಿತ್ರಗಳು ದೂರ ಸಂವೇದಿ ಚಿತ್ರಗಳಾಗಿವೆ.
- ಉಪಯೋಗಗಳು:–
- ನೈಜ ಹಾಗೂ ನಂಬಲರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.
- ಭೂ ಮೇಲ್ಮೈನ ಸರ್ವೇಕ್ಷಣೆಗಿಂತ ಅತಿ ಶೀಘ್ರ, ಅಲ್ಪಾವಧಿ ಹಾಗೂ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನ
- ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರುಗಳಿಂದ ವಿಶ್ಲೇಷಿಸಬಹುದು.
- ಹವಾಮಾನದ ವೈಪರೀತ್ಯ ಹಾಗೂ ಭೂ ಮೇಲ್ಮೈ ಅಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು.
- ಚಂಡಮಾರುತ, ಬಿರುಗಾಳಿ, ಪ್ರವಾಹ, ಬರಗಾಲ ನೈಸರ್ಗಿಕ ವಿಕೋಪಗಳ ಪ್ರಭಾವದ ಪ್ರದೇಶ ಹಾಗೂ ಅನಾಹುತಗಳ ಅಧ್ಯಯನಗಳಿಗೆ ಇದರ ಚಿತ್ರಗಳು ಉಪಯುಕ್ತ.
- ಉಪಗ್ರಹ ಚಿತ್ರಗಳು, ಭೂ ಬಳಕೆ, ಅರಣ್ಯ ಪ್ರದೇಶ, ಜಲರಾಶಿಗಳು, ವಸತಿ ಪ್ರದೇಶಗಳು, ಬೆಳೆಗಳ ಹಂಚಿಕೆ, ಭೂ ಸವೆತ, ಖನಿಜ ನಿಕ್ಷೇಪಗಳ ವಿಶ್ಲೇಷಣೆಯಲ್ಲಿ ಮಹತ್ತರವಾದುದು.
- ಭಾರತದ ಪ್ರಮುಖ ಕೈಗಾರಿಕೆಗಳು:–
- ಕೈಗಾರಿಕೆಗಳ ಮಹತ್ವ:–
- ಮಾನವನ ಆಧುನಿಕ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ
- ದೇಶದ ಆರ್ಥಿಕ ಪ್ರಗತಿಯನ್ನು ನಿರ್ಧರಿಸುತ್ತದೆ.

RAMALINGAPPA L

- ಕೈಗಾರಿಕೆಗಳು ಆಧುನಿಕ ನಾಗರಿಕತೆಯ ಲಕ್ಷಣವಾಗಿದೆ.
- ಆನರಿಗೆ ಅಗತ್ಯ ವಸ್ತುಗಳನ್ನು ಪೂರೈಸುತ್ತದೆ.
- ಸಾಕಷ್ಟು ಉದ್ಯೋಗಾವಕಾಶಗಳನ್ನು ದೊರಕಿಸುತ್ತಿದೆ.
- ಕೈಗಾರಿಕೆ ಎಂದರೆ, ಕಚ್ಚಾವಸ್ತುಗಳನ್ನು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಮಾನವನ ಉದ್ಯೋಗಗಳನ್ನು "ಕೈಗಾರಿಕೆಗಳು" ಎನ್ನುವರು.
- ಉದಾ:– ಕಬ್ಬನ್ನು ಸಕ್ಕರೆಯನ್ನಾಗಿ, ಹತ್ತಿಯನ್ನು ಬಟ್ಟೆಯನ್ನಾಗಿ, ಬಾಕ್ಸೈಟ್‌ನ್ನು ಅಲ್ಯುಮಿನಿಯಂ ಲೋಹವನ್ನಾಗಿ, ಮರದ ತಿರುಳನ್ನು ಕಾಗದವನ್ನಾಗಿ ಪರಿವರ್ತನೆ.
- ಭಾರತದ ಕೈಗಾರಿಕಾ ಪ್ರದೇಶಗಳು:–
- ದೇಶದ ಕೆಲವು ಭಾಗಗಳಲ್ಲಿ ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿವೆ. ಇವುಗಳನ್ನು 'ಕೈಗಾರಿಕಾ ವಲಯ' ಎನ್ನುವರು.
- ಭಾರತದಲ್ಲಿ 8 ಕೈಗಾರಿಕಾ ವಲಯಗಳಿವೆ
- ಹೂಗ್ಲಿ ಪ್ರದೇಶ
- ಮುಂಬೈ–ಪೂನಾ ಪ್ರದೇಶ
- ಅಹಮದಾಬಾದ್–ವಡೋದರ ಪ್ರದೇಶ
- ದಾಮೋದರ ಕಣಿವೆ ಪ್ರದೇಶ
- ದಕ್ಷಿಣದ ಕೈಗಾರಿಕಾ ಪ್ರದೇಶ
- ನ್ಯಾಷನಲ್ ಕ್ಯಾಪಿಟಲ್ ಪ್ರದೇಶ
- ವಿಶಾಖಪಟ್ಟಣ–ಗುಂಟೂರು ಪ್ರದೇಶ
- ಕೊಲ್ಲಂ–ತಿರುವನಂತಪುರ ಪ್ರದೇಶ
- ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು:–
- ಕಚ್ಚಾವಸ್ತುಗಳು
- ಶಕ್ತಿ ಸಂಪನ್ಮೂಲಗಳು
- ಮಾರುಕಟ್ಟೆ
- ಸಂಚಾರ ಸೌಲಭ್ಯ
- ಕಾರ್ಮಿಕರ ಪೂರೈಕೆ
- ಬಂದರುಗಳ ಸೌಲಭ್ಯ
- ಕಡಿಮೆ ದರದ ಭೂಮಿ ದೊರೆಯುವಿಕೆ
- ತಾಂತ್ರಿಕತೆ
- ಸರ್ಕಾರದ ನೀತಿ ನಿಯಮಗಳು
- ಭಾರತದ ಪ್ರಮುಖ ಕೈಗಾರಿಕೆಗಳು:–
- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ:–
- ಇದನ್ನು ಮೂಲ ಕೈಗಾರಿಕೆ ಎನ್ನುವರು
- ಕಾರಣ:– ಇದು ಯಂತ್ರೋಪಕರಣ, ರೈಲ್ವೆ, ಹಡಗು ನಿರ್ಮಾಣ, ವಿದ್ಯುತ್ ಯೋಜನೆ, ನೀರಾವರಿ ಯೋಜನೆ, ಕಟ್ಟಡ ನಿರ್ಮಾಣ, ಗೃಹ ನಿರ್ಮಾಣ ಮುಂತಾದ ಕೈಗಾರಿಕೆಗಳಿಗೆ ಅಗತ್ಯ ಕಚ್ಚಾವಸ್ತು ಒದಗಿಸುತ್ತದೆ.
- ಹಂಚಿಕೆ:–
- ಭಾರತದಲ್ಲಿ ಒಟ್ಟು 9 ಬೃಹತ್ ಕಬ್ಬಿಣ & ಉಕ್ಕಿನ ಕೈಗಾರಿಕೆಗಳಿವೆ.
- ಪ್ರಥಮ ಉಕ್ಕಿನ ಕೈಗಾರಿಕೆ 1870ರಲ್ಲಿ ಪಶ್ಚಿಮ ಬಂಗಾಳದ 'ಕುಲ್ಟಿ' ಯಲ್ಲಿ 'ಬೆಂಗಾಲ್ ಐರನ್ ಕಂಪನಿ.ಲಿ' ಸ್ಥಾಪನೆ
- 1907ರಲ್ಲಿ 'ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ'ಯು ಜೆಮ್‌ಶೆಡ್‌ಪುರದ ಬಳಿ ಸ್ಥಾಪನೆ
- 1919ರಲ್ಲಿ 'ದಿ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ'ಯು ಪಶ್ಚಿಮ ಬಂಗಾಳದ 'ಬರ್ನಪುರ'ದಲ್ಲಿ ಸ್ಥಾಪನೆ
- 1923ರಲ್ಲಿ ಮೈಸೂರು ಸಂಸ್ಥಾನವು 'ದಿ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಕೈಗಾರಿಕೆ'ಯನ್ನು ಭದ್ರಾವತಿಯಲ್ಲಿ ಸ್ಥಾಪನೆ
- ಪ್ರಮುಖ ಕೈಗಾರಿಕೆಗಳು:–
- ಟಾಟಾ ಕಬ್ಬಿಣ & ಉಕ್ಕಿನ ಕೈಗಾರಿಕೆ–ಜಮ್‌ಶೆಡ್‌ಪುರ
- ಇಂಡಿಯನ್ ಐರನ್ & ಸ್ಟೀಲ್ ಕಂಫನಿ–ಬರ್ನಪುರ
- ವಿಶ್ವೇಶ್ವರಯ್ಯ ಐರನ್ & ಸ್ಟೀಲ್ ಕಂಪನಿ–ಭದ್ರಾವತಿ
- ಬಿಲಾಯಿ ಐರನ್ & ಸ್ಟೀಲ್ ಕಂಪನಿ–ಬಿಲಾಯಿ (ಛತ್ತಿಸಘಢ್)
- ಐರನ್ & ಸ್ಟೀಲ್ ಕಂಪನಿ–ರೂರ್ಕೆಲ (ಒರಿಸ್ಸಾ)
- ಐರನ್ & ಸ್ಟೀಲ್ ಕಂಪನಿ–ದುರ್ಗಾಪುರ (ಪಶ್ಚಿಮ ಬಂಗಾಳ)
- ಐರನ್ & ಸ್ಟೀಲ್ ಕಂಪನಿ–ಬೋಕಾರೋ(ಝಾರ್ಖಂಡ್)
- ಐರನ್ & ಸ್ಟೀಲ್ ಕಂಪನಿ–ಸೇಲಂ (ತಮಿಳುನಾಡು)
- ಐರನ್ & ಸ್ಟೀಲ್ ಕಂಪನಿ–ವಿಶಾಖಪಟ್ಟಣಂ (ಆಂದ್ರ ಪ್ರದೇಶ)
- ಹತ್ತಿ ಬಟ್ಟೆ ಕೈಗಾರಿಕೆ:–
- ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನು 'ಜವಳಿ ಕೈಗಾರಿಕೆ' ಎನ್ನುವರು.
- ಜವಳಿ ಕೈಗಾರಿಕೆಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಉಣ್ಣೆ ಬಟ್ಟೆ ಕೈಗಾರಿಕೆ, ಕೃತಕ ನಾರಿನ ಬಟ್ಟೆ ಕೈಗಾರಿಕೆ
- ದೇಶದಲ್ಲಿ ಪ್ರಥಮ ಹತ್ತಿ ಗಿರಣಿಯು 1854ರಲ್ಲಿ ಮುಂಬೈ & ಬರೂಚ್‌ಗಳಲ್ಲಿ ಸ್ಥಾಪನೆ

RAMALINGAPPA L

- 1951ರಲ್ಲಿ ಒಟ್ಟು 378 ಹತ್ತಿಬಟ್ಟೆ ಕೈಗಾರಿಕೆಗಳನ್ನು ಹೊಂದಿತ್ತು.
- 2008ರಲ್ಲಿ ಇವುಗಳ ಸಂಖ್ಯೆ 1773ರಕ್ಕೆ ಏರಿದೆ.
- ಹಂಚಿಕೆ:- ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕರ್ನಾಟಕ, ಉತ್ತರಪ್ರದೇಶ, ಮಧ್ಯಪ್ರದೇಶ
- ಮಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಗಿರಿಣಿಗಳಿದ್ದು ಇದನ್ನು 'ಭಾರತದ ಮ್ಯಾಂಚೆಸ್ಟರ್' ಅಥವಾ 'ಭಾರತದ ಕಾಟನೋಪೊಲಿಸ್' ಎನ್ನುವರು.
- ಕರ್ನಾಟಕದ ಬೆಂಗಳೂರು, ದಾವಣಗೆರೆ ಮುಖ್ಯ ಹತ್ತಿಗಿರಣಿ
- ಸಕ್ಕರೆ ಕೈಗಾರಿಕೆ:-
- ಭಾರತವು ಸಕ್ಕರೆ ಉತ್ಪಾದನೆಯಲ್ಲಿ ಬ್ರೆಜಿಲ್ ನಂತರ ಎರಡನೇ ಸ್ಥಾನ.
- ಸಕ್ಕರೆ ಉತ್ಪಾದನೆ ಭಾರತೀಯರಿಗೆ ಪುರಾತನ ಕಾಲದಿಂದ ತಿಳಿದಿದೆ.
- ಇದನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ಸ್ಥಾಪನೆ.
- ಬಹಳ ಕೈಗಾರಿಕೆಗಳು ಗಂಗಾ ನದಿಯ ಮೈದಾನದಲ್ಲಿ ಸ್ಥಾಪನೆ
- ರಾಜ್ಯಗಳು:- ಮಹಾರಾಷ್ಟ್ರ, ಉತ್ತರಪ್ರದೇಶ, ತಮಿಳುನಾಡು, ಕರ್ನಾಟಕ, ಆಂಧ್ರ, ಮಧ್ಯಪ್ರದೇಶ
- ಒಟ್ಟು 516 ಸಕ್ಕರೆ ಕೈಗಾರಿಕೆಗಳಿವೆ.
- 263.6 ಲಕ್ಷ ಟನ್ ಸಕ್ಕರೆ ಉತ್ಪಾದನೆ
- ಯು.ಎಸ್.ಎ, ಬ್ರಿಟನ್, ಇರಾನ್, ಕೆನಡಾ, ಮಲೇಷಿಯಾಗಳಿಗೆ ರಫ್ತು.
- ಅಲ್ಯೂಮಿನಿಯಂ ಕೈಗಾರಿಕೆ:-
- ಅಲ್ಯೂಮಿಯಂ 1886ರಲ್ಲಿ ಶೋಧಿಸಲ್ಪಟ್ಟಿತು.
- ಭಾರತದ ಕಬ್ಬಿಣೇತರ ಲೋಹಗಳಲ್ಲಿ ಮುಖ್ಯವಾದುದು.
- ಇದು ಮೂರು ಅಂಶಗಳನ್ನು ಹೊಂದಿದೆ.
- ವಿದ್ಯುತ್ ಶಕ್ತಿಯ ದೊರೆಯುವಿಕೆ
- ಬಾಕ್ಸೈಟ್‌ನ ಪೂರೈಕೆ
- ಇತರೆ ಲೋಹ & ಬಂಡವಾಳದ ಪೂರೈಕ್
- ರಾಜ್ಯಗಳು:- ಒರಿಸ್ಸಾ, ಜಾರ್ಖಂಡ್, ಛತ್ತಿಸಘಡ್, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು
- ಕಾಗದದ ಕೈಗಾರಿಕೆ:-
- ಭಾರತದ ಮೊದಲ ಕಾಗದದ ಕೈಗಾರಿಕೆ 1840ರಲ್ಲಿ ಪಶ್ಚಿಮ ಬಂಗಾಳದ ಸೆರಾಂಪುರದಲ್ಲಿ ಹೂಗ್ಲಿನದಿ ದಡದಲ್ಲಿ ಸ್ಥಾಪನೆ
- 1867ರಲ್ಲಿ ಕೋಲ್ಕತ್ತಾದ ಬಾಲ್ಲಿ ನಗರದಲ್ಲಿ ಸ್ಥಾಪನೆ
- ಇದರ ಕಚ್ಚಾವಸ್ತುಗಳು:- ಬಿದಿರು, ಮರದ ತಿರುಳು, ಹುಲ್ಲು
- ಈ ಕೈಗಾರಿಕೆಗಳು:- ಪಶ್ಚಿಮ ಬಂಗಾಳ, ಮುಂಬೈ, ಪೂನಾ, ಚಿಂದ್ವಾರ, ಅಮರಾವತಿ, ನಾಗಪುರ, ನಾಸಿಕ್, ಕರಾಡ, ರಾಜಮಂಡ್ರಿ, ರಾಯಘಡ್, ತಿರುಪತಿ, ಮಿರತ್, ವಾರಣಾಸಿ, ಗಾಜಿಯಾಬಾದ್, ಲ್ಕನೊ
- ಒಟ್ಟು 568 ಕಾಗದ ಕೈಗಾರಿಕೆಗಳು ಸ್ಥಾಪನೆ
- ನ್ಯೂಸ್ ಪ್ರಿಂಟ್ ಕಾಗದವನ್ನು ನಾರ್ವೆ, ಸ್ವೀಡನ್, ಕೆನಡಾ, ಯುಎಸ್ಎ ನಿಂದ ಆಮದು ಮಾಡಿಕೊಳ್ಳಲಾಗುತ್ತದೆ.
- ಜ್ಞಾನಾಧಾರಿತ ಕೈಗಾರಿಕೆಗಳು:-
- ಭಾರತದಲ್ಲಿ ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕೈಗಾರಿಕೆ ಎಂದರೆ ಮಾಹಿತಿ ತಂತ್ರಜ್ಞಾನ ಕೈಗಾರಿಕೆ.
- ಇದನ್ನು ಜ್ಞಾನಾಧಾರಿತ ಕೈಗಾರಿಕೆ ಎನ್ನುವರು.
- ಕಾರಣ ಇದಕ್ಕೆ ಮಾನವನ ಜ್ಞಾನವೇ ಆಧಾರ.
- ಇದು ದೇಶದ ಆರ್ಥಿಕತೆ ಹಾಗೂ ಜನರ ಜೀವನ ಶೈಲಿಯ ಮೇಲೆ ಪ್ರಭಾವ ಬೀರುತ್ತದೆ.
- ಇದರ ಬೆಳವಣಿಗೆ ಎಲ್ಲಾ ಕೈಗಾರಿಕೆಗಳಿಗಿಂತ ಮುಂದಿದೆ.
- ಮಾಹಿತಿ ತಂತ್ರಜ್ಞಾನ ಕೈಗಾರಿಕೆ:-
- ಭಾರತ ಸರ್ಕಾರ ಸಾಫ್ಟವೇರ್ ಉದ್ಯಮ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ರಫ್ತನ್ನು ಉತ್ತೇಜಿಸಲು ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್‌ಗಳನ್ನು 1991 ರಲ್ಲಿ ಸ್ಥಾಪಿಸಿದೆ.
- ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಈ ಉದ್ಯಮದ ಮೇಲೆ ಪೂರ್ಣ ಹತೋಟಿ ಸಾಧಿಸಿವೆ.
- ಇಲ್ಲಿ ಮಾಹಿತಿ ತಂತ್ರಜ್ಞಾನ ತರಬೇತಿ ಕೇಂದ್ರ ಹಾಗೂ ವಿ.ವಿ ಗಳನ್ನು ಅಭಿವೃದ್ಧಿ ಪಡಿಸಿವೆ.
- ಸಾಫ್ಟವೇರ್ ಮುಖ್ಯ ರಫ್ತಿನ ಸರಕಾಗಿದ್ದು ವಿದೇಶಿ ವಿನಿಮಯ ಗಳಿಕೆಗೆ ಸಹಾಯಕ
- ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದ್ದು ಇದನ್ನು "ಸಿಲಿಕಾನ್ ಸಿಟಿ" ಎನ್ನುವರು.
- ಜೈವಿಕ ತಂತ್ರಜ್ಞಾನ:-
- ಭಾರತ ಸರ್ಕಾರ 1980 ರಲ್ಲಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಿದೆ.
- ಇದರಿಂದ ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯೇ ಜರುಗಲು ಆರಂಭಿಸಿತು.
- ಸಸ್ಯ, ಪ್ರಾಣಿಗಳಿಗೆ ಕಸಿ ಮಾಡುವಿಕೆಯಿಂದ ಹೊಸ ಹೊಸ ಬೀಜ, ಔಷಧಿ, ರಸಗೊಬ್ಬರ, ಜೈವಿಕ ಗೊಬ್ಬರ ಬಳಕೆ



RAMALINGAPPA L

- ಇವುಗಳಿಂದ ಸೋಯಾ ಅವರೆ, ಮೆಕ್ಕೆಜೋಳ, ಹತ್ತಿಗಳ ಸಮ್ಮಿಶ್ರ ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ.
- ಇತ್ತೀಚಿಗೆ ಸಸ್ಯ ಜೈವಿಕ ತಂತ್ರಜ್ಞಾನ, ಪರಿಸರ, ಜೈವಿಕ ವೈವಿಧ್ಯ, ವೈದ್ಯಕೀಯ ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗಿದೆ.
- ರಾಜ್ಯಗಳು:– ಉತ್ತರ ಪ್ರದೇಶ, ಅರುಣಾಚಲ ಪ್ರದೇಶ, ಮಧ್ಯಪ್ರದೇಶ, ಕೇರಳ, ಪಶ್ಚಿಮ ಬಂಗಾಳ, ಜಮ್ಮು–ಕಾಶ್ಮೀರ, ಹರಿಯಾಣ, ಪಂಝಾಬ್, ಗುಜರಾತ್, ಕರ್ನಾಟಕ.
- ಉನ್ನತ ತಂತ್ರಜ್ಞಾನ:–
- ಮಾನವನ ಜ್ಞಾನ ಅಭಿವೃದ್ಧಿ ಹೊಂದಿದಂತೆ ಉನ್ನತ ಅಥವಾ ಸುಧಾರಿಸಿದ ತಂತ್ರಜ್ಞಾನ ಬಳಕೆ
- ಕಾನೂನಾತ್ಮಕ ಕೇಂದ್ರ ಸರ್ಕಾರ ನವೆಂಬರ್ 1990ರಲ್ಲಿ "ಉನ್ನತ ತಂತ್ರಜ್ಞಾನ" ಬಳಕೆಯನ್ನು ಅಧಿಕೃತವಾಗಿ ಜಾರಿ.
- ಇದರಿಂದ ಟೆಲಿಫೋನ್, ಅಂತರ್‌ಜಾಲ ಸಂಪರ್ಕ, ರಕ್ಷಣಾ ಇಲಾಖೆಗೆ ಸಂಬಂಧಿಸಿದ ಫೋನ್, ಯುದ್ಧ ಸಾಮಾಗ್ರಿಗಳ ತಯಾರಿಕೆ, ಪರಮಾಣು ಬಾಂಬ್ ತಯಾರಿಕೆ, ಉಪಗ್ರಹ ಉಡಾವಣೆ, ಚಂದ್ರನ ಮೇಲೆ ಪಾದಾರ್ಪಣೆ, ಸರ್ಕಾರಿ ಕಛೇರಿಗಳಲ್ಲಿ ಪಾರದರ್ಶಕ ಇ–ಆಡಳಿತ(ಉದಾ:– ನೆಮ್ಮದಿ, ಆಧಾರ, ಸಕಾಲ), ಜಾಗತಿಕ ವ್ಯವಸ್ಥೆಯ ಸುಧಾರಣೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಚುನಾವಣೆಗೆ ಬಳಕೆ.
- ನೈಸರ್ಗಿಕ ವಿಕೋಪಗಳು:–
- ನೈಸರ್ಗಿಕ ವಿನಾಶಕಾರಕಗಳು:–
- ಪ್ರಕೃತಿಯಲ್ಲಿ ಸಂಭವಿಸುವ ಹಲವು ಘಟನೆಗಳು ಮಾನವಾತೀತ.
- ಇವುಗಳನ್ನು ಊಹಿಸುವುದು ಇಂದಿನ ವೈಜ್ಞಾನಿಕ ಕಾಲದಲ್ಲಿ ಅಸಾಧ್ಯ.
- ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ–ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು "ಪ್ರಾಕೃತಿಕ ವಿನಾಶಕಾರ"ಗಳೆಂದು ಕರೆಯುವರು.
- ಉದಾ:–
- ಭೂಕಂಪಕಗಳು
- ಪ್ರವಾಹಗಳು
- ಕ್ಷಾಮಗಳು
- ಚಂಡಮಾರುತಗಳು
- ಭೂ ಕುಸಿತ
- ಕರಾವಳಿ ಕೊರೆತ
- ಹಿಮಪಾತ
- ಚಂಡಮಾರುತಗಳು:–
- ಪೃಥ್ವಿಯ ಮೇಲಿನ ವಿಕೋಪಗಳಲ್ಲಿ ಆವರ್ತಗಾಳಿಗಳು ಅತ್ಯಂತ ಹಾನಿಕಾರಕ & ವಿನಾಶಕಾರಕಗಳು.
- ಈ ಗಾಳಿಗಳನ್ನು ಸಾಮಾನ್ಯವಾಗಿ ಚಂಡಮಾರುತಗಳೆಂದು ಕರೆಯುವರು.
- ಕಾರಣಗಳು:–
- ಇವು ಬಂಗಾಳಕೊಲ್ಲಿಯಲ್ಲಿ ಉಗಮ
- ಮೂರು ಕಡೆಯಿಂದ ಸಮುದ್ರವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ & ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳ ಕೊಲ್ಲಿಯಲ್ಲಿ ಉಗಮವಾಗುತ್ತವೆ.
- ಬಂಗಾಳಕೊಲ್ಲಿಯಲ್ಲಿ ಉಗಮವಾಗಿ ಪಶ್ಚಿಮದ ಕಡೆ ಚಲಿಸಿ ತಮಿಳುನಾಡು & ಆಂದ್ರಪ್ರದೇಶದ ತೀರಕ್ಕೆ ಅಪ್ಪಳಿಸುತ್ತವೆ.
- ಕೆಲವೊಮ್ಮೆ ವಾಯುವ್ಯಕ್ಕೆ ಚಲಿಸಿ ಒಡಿಶಾ ತೀರಕ್ಕೆ ಅಪ್ಪಳಿಸುತ್ತವೆ.
- ಇವು ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತವೆ.
- ಕೆಲವೊಮ್ಮೆ ಮೇ–ಜೂನ್ ತಿಂಗಳಲ್ಲಿಯೂ ಸಂಭವಿಸುತ್ತವೆ.
- ಪರಿಣಾಮಗಳು:–
- ಜನಜೀವನವೇ ಸಂಪೂರ್ಣ ಮಾರ್ಪಾಡು ಹೊಂದುವುದು.
- ಇವುಗಳಿಂದ ಅಪಾರ ಸಾವು–ನೋವು ಉಂಟಾಗುತ್ತದೆ.
- ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.
- ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.
- ಸಾರಿಗೆ, ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವುದು.
- ಇವು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತದೆ.
- ಮುನ್ನೆಚ್ಚರಿಕೆಯ ಕ್ರಮಗಳು:–
- ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು
- ವಿದ್ಯುಜ್ಜನಕ ಯಂತ್ರ, ದೋಣಿಗಳು, ಹೆಲಿಕಾಪ್ಟರ್ ಸಾರಿಗೆಗಳನ್ನು ಸಜ್ಜಾಗಿರಿಸುವುದು.
- ರೈಲು–ಬಸ್ಸು ಮಾರ್ಗಗಳನ್ನು ಚಂಡಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು.
- ಸಮೂಹ ಮಾಧ್ಯಮಗಳ ಮೂಲಕ ಇವುಗಳ ಬಗ್ಗೆ ವಿವರಗಳನ್ನು ನಿರಂತರವಾಗಿ ಜನರಿಗೆ ನೀಡುವುದು.

RAMALINGAPPA L

- ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸುವುದು.
- ಸಾಕಷ್ಟು ಸಿಹಿನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.
- ಔಷಧಿ ಹಾಗೂ ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.
- ಪ್ರವಾಹಗಳು:–
- ಇದು ಅತ್ಯಂತ ಅಪಾಯಕಾರಿ.
- ಅತ್ಯಧಿಕ ಮಳೆ ಸುರಿದಾಗ & ಅತ್ಯಧಿಕ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಹೆಚ್ಚಾಗಿ ನದಿ ದಂಡೆಗಳ ಹಿಕ್ಕೆಲಗಳಲ್ಲಿ ಉಕ್ಕಿ ಹರಿಯುವುದಕ್ಕೆ "ನದಿ ಪ್ರವಾಹ"ಗಳು ಎನ್ನುವರು.
- ಕಾರಣಗಳು:–
- ಮಾನ್‌ಸೂನ್ ಮಳೆ ಅನಿಶ್ಚಿತ. ಅತ್ಯಧಿಕ ಮಳೆ ಬೀಳುವುದರಿಂದ
- ನದಿಯ ಪಾತ್ರಗಳಲ್ಲಿ ಹೂಳು ತುಂಬಿರುವುದು
- ಅಣೆಕಟ್ಟು & ಅಡ್ಡಗಟ್ಟೆಗಳು ಒಡೆದು ಒಮ್ಮೆಗೇ ನೀರು ಬಿಡುಗಡೆಯಾಗುವುದರಿಂದ.
- ನದಿಗಳು ಪಾತ್ರವನ್ನು ಬದಲಾಯಿಸಿರುವುದರಿಂದ
- ಚಂಡಮಾರುತಗಳಿಂದ ಅಪಾರ ಮಳೆ ಬೀಳುವುದರಿಂದ
- ಸಮುದ್ರಗಳ ಮಧ್ಯದಲ್ಲಿ ಭೂಕಂಪನಗಳು ಸಂಭವಿಸುವುದರಿಂದ
- ಅರಣ್ಯ ನಾಶ
- ಸರಿಯಾದ ರೀತಿಯಲ್ಲಿ ಕಟ್ಟಿರದ ಸೇತುವೆಗಳು
- ಒಡ್ಡುಗಳು
- ನದಿಪಾತ್ರ
- ಅಕ್ರಮ ಭೂ ಬಳಕೆ
- ಒಳಪಡುವ ಪ್ರದೇಶಗಳು:–
- ಗಂಗಾನದಿಯ ಉಪನದಿಗಳಾದ ಯಮುನಾ, ಗಂಡಕ್, ಕೋಸಿ, ಘಾಘ್ರಗಳು ಉತ್ತರಪ್ರದೇಶ, ಬಿಹಾರಗಳಲ್ಲಿ
- ದಾಮೋದರ & ಸುವರ್ಣ ರೇಖಾ ನದಿಗಳು ಛತ್ತಿಸಘಡ್, ಪಶ್ಚಿಮ ಬಂಗಾಳಗಳಲ್ಲಿ
- ಬ್ರಹ್ಮಪುತ್ರ & ಇದರ ಉಪನದಿಗಳಾದ ದಿಹಾಂಗ, ದಿಬಾಂಗ, ಸುಬನ್‌ಸಿರಿ, ಲೂಹಿತ್, ಅಸ್ಸಾಂ ಕಣಿವೆ ನದಿಗಳು ಅಸ್ಸಾಂನಲ್ಲಿ
- ಹಿಮಾಲಯ ಪರ್ವತಗಳಲ್ಲಿ ಮೇಘಸ್ಫೋಟದಿಂದ ಆಗಾಗ ಕ್ಷಿಪ್ರ ಪ್ರವಾಹಗಳು ಉಂಟಾಗುತ್ತವೆ.
- ನರ್ಮದಾ, ತಪತಿ, ಸಬರಮತಿ, ಮಹಿನದಿಗಳು ಗುಜರಾತ್‌ನಲ್ಲಿ
- ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ದೋಣಿ, ಬೆಣ್ಣೆಹಳ್ಳಗಳು ಕರ್ನಾಟಕದಲ್ಲಿ ಪ್ರವಾಹ ಉಂಟುಮಾಡುತ್ತವೆ.
- ಪರಿಣಾಮಗಳು:–
- ಇವು ಜನರ ಆಸ್ತಿ–ಪಾಸ್ತಿ, ಮನೆ, ಭೂಮಿ & ಬೆಳೆಗಳಿಗೆ ಹಾನಿ
- ದೂರ ಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯ ಅಸ್ತವ್ಯಸ್ತ.
- ಫಲವತ್ತಾದ ಮಣ್ಣಿನ ಮೇಲ್ಭಾಗವು ಕೊಚ್ಚಿ ಹೋಗುತ್ತದೆ.
- ಅನೇಕ ಮರ–ಗಿಡಗಳು ಹಾನಿಗೊಳಗಾಗುತ್ತವೆ.
- ವಿಶಾಲವಾಗಿ ಹರಡಿದ ನೀರು ಅನೇಕ ರೋಗಗಳ ಉಲ್ಬಣಕ್ಕೆ ಕಾರಣ
- ನಿಯಂತ್ರಣ ಕ್ರಮಗಳು:–
- ನದಿಯ ಇಕ್ಕೆಲಗಳಲ್ಲಿ ಟಡ್ಡಗಟ್ಟೆಗಳನ್ನು ನಿರ್ಮಿಸುವುದು.
- ನದಿಗಳಿಗೆ ಅಣೆಕಟ್ಟು ಕಟ್ಟಿ ನೀರನ್ನು ಸಂಗ್ರಹಿಸಿ ಬೇರೆ ಕಡೆಗಳಿಂದ ನೀರು ಹರಿಸುವುದು.
- ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಕೇಂದ್ರಗಳನ್ನು ಸ್ಥಾಪಿಸುವುದು.
- ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು.
- ಇದರಿಂದ ಮಣ್ಣಿನ ಸವೆತ ನಿಯಂತ್ರಣ & ಹೂಳು ತುಂಬುವುದನ್ನು ತಡೆಯಬಹುದು.
- ಭೂಕುಸಿತ ಅಥವಾ ಭೂಪಾತ:–
- ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂರಾಶಿಗೆ "ಭೂಕುಸಿತ" ಎನ್ನುವರು.
- ಕೆಳಕ್ಕೆ ಜಾರುವ ವಸ್ತುಗಳು:– ಕಲ್ಲು, ಮಣ್ಣು, ಭಗ್ನಾವಶೇಷಗಳು
- ಅತಿ ಹೆಚ್ಚು ಕಡಿದಾದ ಪ್ರದೇಶಗಳಲ್ಲಿ ಭೂಕುಸಿತವಾದರೆ ಅವು ಹೆಚ್ಚು ವಿನಾಶಕಾರಿ.
- ಹಿಮಾಲಗಳಲ್ಲಿ ಭೂಕುಸಿತದ ಜೊತೆ ಹಿಮಪಾತವಾಗುತ್ತದೆ.
- ಕಾರಣಗಳು:–
- ಪರ್ವತ & ಸಮುದ್ರ ತೀರದ ಹರಿಯುವ ನೀರು & ಅಲೆಗಳು ಭೂಮಿಯನ್ನು ಕೊರೆದು ಇಳಿಜಾರು ನಿರ್ಮಿಸುವುದರಿಂದ.
- ಕಡಿದಾದ ಪರ್ವತ ವಲಯಗಳಲ್ಲಿ ರಸ್ತೆ, ರೈಲು ಮಾರ್ಗ, ಕಾಲುವೆ ನಿರ್ಮಿಸುವುದರಿಂದ
- ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಲ್ಲಿ.
- ಗಣಿಗಾರಿಕೆ ಪ್ರದೇಶಗಳಲ್ಲಿ ಸಾಮಾನ್ಯ
- ಅರಣ್ಯಗಳನ್ನು ಕಡಿಯುವದರಿಂದ
- ಕಡಿದಾದ ಇಳಿಜಾರನ್ನು ಆಳವಾಗಿ ಉಳಿಮೆ ಮಾಡುವುದು.
- ಪರಿಣಾಮಗಳು:–
- ಅನೇಕ ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ.

RAMALINGAPPA L

- ಸಾರಿಗೆ ಸಂಚಾರಕ್ಕೆ ಅಡ್ಡಿ
- ಹಳ್ಳಗಳು & ಸಸ್ಯವರ್ಗಗಳು ಭೂಗತವಾಗುತ್ತವೆ.
- ಅನೇಕ ಜೀವಹಾನಿ & ಆಸ್ತಿ ಹಾನಿ
- ಕಡಲಕೊರತೆ:–
- ಸಮುದ್ರದ ಅಲೆಗಳಿಂದ ತೀರ ವಲಯವು ಸವೆಸಲ್ಪಡುವುದನ್ನು 'ತೀರ ಪ್ರದೇಶದ ಕೊರತೆ ಅಥವಾ ಕಡಲಕೊರೆತ" ಎನ್ನವುರು
- ಇವು ನೈಋುತ್ಯ ಮಾನ್ಸೂನ್ ಮಾರುತ ಅವಧಿ & ಚಂಡಮಾರುತಗಳ ಅವಧಿಯಲ್ಲಿ ಹೆಚ್ಚು.
- ನೈಋುತ್ಯ ಮಾನ್ಸೂನ್ ಮಾರುತಗಳು ಅರಬ್ಬಿಸಮುದ್ರದಲ್ಲಿ ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂ ಪ್ರದೇಶವನ್ನು ಕಬಳಿಸುತ್ತವೆ.
- ಇದರಿಂದ ಕೇರಳ, ಕರ್ನಾಟಕ, ಗೋವಾ ರಾಜ್ಯಗಳಲ್ಲಿ ಕೊರತೆ ಹೆಚ್ಚು.
- ತಮಿಳುನಾಡಿನ ಕನ್ಯಾಕುಮಾರಿ, ಮಹಾರಾಷ್ಟ್ರ & ಗುಜರಾತುಗಳಲ್ಲಿ ಕಂಡುಬರುತ್ತದೆ.
- ಆದರೆ ಪೂರ್ವ ಕರಾವಳಿಯಲ್ಲಿ ಕಡಲಕೊರೆತ ಕಡಿಮೆ.
- ಪರಿಣಾಮಗಳು:–
- ಅಲೆಗಳು ತೀರ ಸವೆಸುವುದರಿಂದ ಅಪಾರ ಭೂ ಪ್ರದೇಶ ಸಮುದ್ರದ ಪಾಲಾಗುತ್ತದೆ.
- ಮನೆ, ರಸ್ತೆಗಳು ಮುಳುಗಿ ಅಪಾರ ನಷ್ಟ
- ನಿರ್ವಹಣೆ:–
- ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು
- ತೀರ ಪ್ರದೇಶದುದ್ದಕ್ಕೂ ತಡೆಗೋಡೆ ನಿರ್ಮಾಣ
- ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿಹಾಕಿ ಅಲೆಗಳ ಪ್ರಬಾವ ನಿಯಂತ್ರಿಸುವುದು.
- ತೀರದುದ್ದಕ್ಕೂ ಮ್ಯಾಂಗ್ರೋವ್ ಆರಣ್ಯಗಳನ್ನು ಬೆಳೆಸುವುದು.
- ಭೂಕಂಪಗಳು:–
- ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಅನಿರೀಕ್ಷಿತವಾಗಿ ಭೂಮಿಯ ಮೇಲ್ಪದರವು ಕಂಪಿಸುವುದನ್ನು "ಭೂಕಂಪ" ಎನ್ನುವರು.
- ಕಾರಣಗಳು:–
- ಭೂಮಿಯ ಅಂತರಾಳದಲ್ಲಿರುವ ಶಿಲಾಫಲಗಳ ಚಲನೆ
- ಮ್ಯಾಗ್ಮ ಒಂದೆಡೆಯಿಂದ ಇನ್ನೊಂದೆಡೆಗೆ ಸರಿಯುವುದರಿಂದ
- ನಗರೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗುವುದು
- ಅರಣ್ಯನಾಶ
- ಅಣೆಕಟ್ಟುಗಳ ನಿರ್ಮಾಣ
- ಗಣಿಗಾರಿಕೆ
- ಹಂಚಿಕೆ:–
- ಉತ್ತರದ ಹಿಮಾಲಯ ಪರ್ವತ
- ಪೂರ್ವ ಅಸ್ಸಾಂ
- ಪಶ್ಚಿಮದಲ್ಲಿ ಗುಜರಾತ್ ವಲಯ
- ದಕ್ಷಿಣದ ಕೊಯ್ನಾ, ಲಾತೂರು
- ಪರಿಣಾಮಗಳು:–
- ಜನರ ಸಾವು ನೋವು & ಆಸ್ತಿ–ಪಾಸ್ತಿ ಹಾನಿ
- ಸಾರಿಗೆ ಸಂಪರ್ಕ ಕಡಿತ
- ರೋಗಗಳ ಹರಡುವಿಕೆ
- ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ
- ಸುನಾಮಿ
- ನದಿಯ ದಿಕ್ಕು ಬದಲಾಗುವಿಕೆ
- ಮುನ್ನಚ್ಚರಿಕೆಯ ಕ್ರಮಗಳು:–
- ಭೂಕಂಪ ಸಂಭವಿಸುವ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳ ನಿರ್ಮಾಣ.
- ಈ ವಲಯಗಳಲ್ಲಿ ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು.
- ಕಟ್ಟಡಗಳು ಸ್ಥಿತಿ ಸ್ಥಾಪಕತ್ವ ಗುಣವನ್ನು ಹೊಂದುವಂತೆ ನಿರ್ಮಿಸುವುದು.
- ಭೂಕಂಪ ಸಂಭವಿಸುವಾಗ ಹೇಗೆ ವರ್ತಿಸಬೇಕು ಎಂದು ಜನರಿಗೆ ತಿಳುವಳಿಕೆ ನೀಡುವುದು.
- ಭೂಕಂಪ ಸಂಭವಿಸುವ ಪ್ರದೇಶಗಳಿಗೆ ಶೀಘ್ರ ವೈದ್ಯಕೀಯ ಸೇವೆ ಸಿಗುವಂತೆ ಮಾಡುವುದು.
- ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರೋಪಾಯಗಳು:–
- ಸಿದ್ಧಪಿಸಿದ ಆಹಾರ
- ಆಹಾರದ ಹಂಚಿಕೆ
- ಶುದ್ಧ ಕುಡಿಯುವ ನೀರು ಪೂರೈಕೆ
- ಔಷಧಿ ಹಂಚಿಕೆ
- ತಾತ್ಕಾಲಿಕ ವಸತಿ ವ್ಯವಸ್ಥೆ



RAMALINGAPPA L

- ಅಗತ್ಯ ಮೂಲಭೂತ ಸೌಕರ್ಯಗಳು ಒದಗಿಸುವುದು.
- ಗ್ರಾಮೀಣಾಭಿವೃದ್ಧಿ
- ಭಾರತ ಒಂದು ಹಳ್ಳಿಗಳ ದೇಶ
- 2011ರ ಜನಗಣತಿ ಪ್ರಕಾರ ಶೇ.68.84 ರಷ್ಟು ಜನರು ಹಳ್ಳಿಗಳಲ್ಲಿ ವಾಸ
- ಮಹಾತ್ಮ ಗಾಂಧಿ:– "ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ" ಎಂದಿದ್ದಾರೆ.
- ಗ್ರಾಮಗಳು ಹಿಂದುಳಿಯಲು ಕಾರಣ:–
- ಸ್ವಾತಂತ್ರನಂತರ ಅಭಿವೃದ್ಧಿ ತಂತ್ರಗಳು ನಗರ ಕೇಂದ್ರಿತ.
- ನಗರಗಳಲ್ಲಿ ಕೈಗಾರಿಕೆಗಳು ಅಭಿವೃದ್ಧಿ
- ಗ್ರಾಮೀಣ ಕೈಗಾರಿಕೆಗಳು ನಾಶ
- ಇದರಿಂದ ಗ್ರಾಮೀಣ ಜನರು ನಗರಗಳಿಗೆ ವಲಸೆ.
- ಉದಾರೀಕರಣ & ಜಾಗತೀಕರಣ ಪ್ರಕ್ರಿಯೆಗಳಿಂದ ಆಧುನಿಕ ತಂತ್ರಜ್ಞಾನ ಬೆಳವಣಿಗೆ
- ಬಹುತೇಕ ಅವಕಾಶಗಳು ನಗರವಾಸಿಗಳಿಗೆ ದೊರೆಯುತ್ತಿವೆ.
- ಆಧುನಿಕ ಜೀವನಶೈಲಿಯಲ್ಲಿ ನಗರಗಳು ಪ್ರಕಾಶಿಸುತ್ತಿವೆ.
- ಕೃಷಿಯನ್ನು ಅವಲಂಬಿಸಿರುವ ಗ್ರಾಮಗಳಲ್ಲಿ ಬಡತನವಿದೆ.
- ಗ್ರಾಮೀಣ ಗುಡಿ ಕೈಗಾರಿಕೆಗಳ ನಾಶ
- ಶೇ.60 ಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದಾರೆ.
- ರಾಷ್ಟ್ರೀಯ ಆದಾಯಕ್ಕೆ ಇದರ ಕೊಡುಗೆ ಕಡಿಮೆ.
- ನಗರ & ಗ್ರಾಮೀಣ ಪ್ರದೇಶಗಳ ಅಂತರ ಹೆಚ್ಚುತ್ತಿದೆ.
- ಇದನ್ನು ಕಡಿಮೆ ಮಾಡಲು ಗ್ರಾಮಗಳನ್ನು ಅಭಿವೃದ್ಧಿ ಪಡಿಸುತ್ತಿವೆ.
- ಗ್ರಾಮೀಣಾಭಿವೃದ್ಧಿಯ ಅರ್ಥ:– ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು "ಗ್ರಾಮೀಣಾಭಿವೃದ್ಧಿ" ಎನ್ನುವರು.
- ಗ್ರಾಮೀಣಾಭಿವೃದ್ಧಿಯ ಮಹತ್ವ:–
- ದೇಶದ ಆರ್ಥಿಕ ಅಭೀವೃದ್ಧಿಯಲ್ಲಿ ಪ್ರಮುಖ ಪಾತ್ರ
- ಮೂಲಭೂತ ಸೌಕರ್ಯಗಳ ನೀಡಿಕೆ.
- ಜನರ ಜ್ಞಾನ, ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯ ಹೆಚ್ಚಿಸುವುದು.
- ಮಿಶ್ರ ಬೇಸಾಯವನ್ನು ಪ್ರೋತ್ಸಾಹಿಸುವ ಮೂಲಕ ಕೃಷಿಯನ್ನು ಲಾಭದಾಯಕ ಉದ್ಯೋಗವನ್ನಾಗಿ ಅಭಿವೃದ್ಧಿ.
- ಗ್ರಾಮೀಣ ಜನರು ನಗರಗಳಿಗೆ ವಲಸೆಹೋಗುವುದನ್ನು ತಪ್ಪಿಸುವುದು.
- ಅಗತ್ಯ ಮೂಲ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸುವುದು.
- ಗ್ರಾಮೀಣ ಉತ್ಪಾದಕತೆಯನ್ನು ಹೆಚ್ಚಿಸಬೇಕಾಗಿದೆ.
- ಕೃಷಿ ಉತ್ಪನ್ನಗಳನ್ನು ಹಳ್ಳಿಗಳಲ್ಲಿಯೇ ಸಂಸ್ಕರಿಸಿ ಮಾರಾಟ ಮಾಡುವುದು.
- ಹಳ್ಳಿಯ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚಿಸಿ, ಆದಾಯವೂ ಹೆಚ್ಚಿಸುವುದು.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.
- ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸುವುದು.
- ಕೃಷಿ ಕಾರ್ಮಿಕರು, ಪ.ಜಾತಿ, ಪ.ಪಂಗಡ, ಹಿಂದುಳಿದ & ಬಡವರ್ಗದ ಜನರಿಗೆ ಉದ್ಯೋಗಾವಕಾಶಗಳು ದೊರೆಯುವಂತೆ ನಿರ್ಮಿಸಬೇಕಾಗಿದೆ.
- ನಗರಗಳಲ್ಲಿನ ಸೌಲಭ್ಯಗಳನ್ನು ಗ್ರಾಮೀಣ ಜನರಿಗೂ ದೊರೆಯುವಂತೆ ಮಾಡುವುದು.
- ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಳ್ಳಿಗರೂ ಭಾಗವಹಿಸುವಂತಗಾಗಬೇಕು.
- ವಿಕೇಂದ್ರೀಕರಣ:–
- ಪ್ರತಿ ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು "ಅಧಿಕಾರ ವಿಕೇಂದ್ರೀಕರಣ" ಎನ್ನುತ್ತಾರೆ.
- ಇದರಿಂದ ಸ್ವಾಲಂಬನೆ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವುದನ್ನೇ ಗಾಂಧೀಜಿಯವರು "ಗ್ರಾಮ ಸ್ವರಾಜ್ಯ" ಎನ್ನುವರು.
- ಈ ವಿಕೇಂದ್ರೀಕರಣವು:– ಎಲ್ಲಾ ರೀತಿಯ ಶೋಷಣೆಗಳನ್ನು ತಡೆಯುತ್ತದೆ, ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ, ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.
- ಇದಕ್ಕಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ.
- ಭಾರತ ಸರ್ಕಾರ 1993 ರ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ದೇಶದಲ್ಲಿ ಏಕರೂಪದ ಪಂಚಾಯಿತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವ.
- ಇದರಿಂದ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನ.
- ಇದರ ಪ್ರಕಾರ ಮೂರು ಹಂತದ ಪಂಚಾಯ್ತಿಗಳು ಅಸ್ತಿತ್ವ.
- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ

RAMALINGAPPA L

- ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ:–
- ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವುದು.
- ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಯಲ, ಶಾಲೆ & ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುವುದು.
- ಪ್ರಾಥಮಿಕ & ಮಾಧ್ಯಮಿಕ ಶಿಕ್ಷಣ, ವಸಯ್ಕ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ.
- ಆರೋಗ್ಯ & ನೈರ್ಮಲ್ಯ ಸೌಲಭ್ಯ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ
- ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಅಭಿವೃದ್ಧಿಯ ಮೂಲಕ ಜನರಿಗೆ ದುಡಿಯುವ ಅವಕಾಶ.
- ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆ ನಿರ್ವಹಣೆ ಮೂಲಕ ಕೃಷಿ ನೀರಾವರಿ ವಿಸ್ತರಣೆ.
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬಹುದು.
- ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ.
- ಅಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು & ತರಬೇತಿ ಕಾರ್ಯಕ್ರಮ ಏರ್ಪಡಿಸುವುದು.
- ಉದ್ಯೋಗ ನಿರ್ಮಾಣ & ಬಡತನ ನಿರ್ಮೂಲನೆ ಯೋಜನೆಗಳು:
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.
- ಸ್ವರ್ಣಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ.
- ವಸತಿ ಯೋಜನೆಗಳು:–
- ಇಂದಿರಾ ಆವಾಸ್ ಯೋಜನೆ
- ಅಂಬೇಡ್ಕರ್–ವಾಲ್ಮೀಕಿ ಯೋಜನೆ
- ಆಶ್ರಯ ಯೋಜನೆ
- ಸುವರ್ಣ ಗ್ರಾಮೋದಯ ಯೋಜನೆಯ ಮೂಲಕ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು.
- ಗ್ರಾಮಗಳ ವಯೋವೃದ್ಧರು, ಅಂಗವಿಕಲರು, ವಿದವೆಯರು, ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡುವುದು.
- ಮಹಿಳಾ ಸ್ವಸಹಾಯ ಸಂಘಗಳನ್ನು ಸಂಗಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಪಾಲ್ಗೊಳ್ಳುವಂತೆ ಮಾಡುವುದು.
- ಗ್ರಾಮೀಣ ಜಾತೆಗಳು, ಹಬ್ಬ ಹರಿದಿನಗಳ ಮೂಲಕ ಸಾಮಾಜಿಕ & ಸಾಂಸ್ಕೃತಿ ಚಟುವಟಿಕೆಗಳ ಪ್ರೋತ್ಸಾಹ.
- ಗ್ರಾಮೀಣ ಅಂಸ್ಕೃತಿ ಅಭಿವೃದ್ಧಿ.
- ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ
- ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ
- ಬಡತನ & ನಿರುದ್ಯೋಗ ಹೋಗಲಾಡಿಸುವಲ್ಲಿ
- ಸ್ವಾವಲಂಬಿ & ಸಮೃದ್ಧ ಬದುಕನ್ನು ಕಟ್ಟಿಕೊಡುವಲ್ಲಿ
- ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ
- ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ:–
- ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ ಕರ್ತವ್ಯ.
- ಮಾನವನ ಬದುಕು ರೂಪಗೊಳ್ಳುವುದೇ ಮಹಿಳೆಯಿಂದ
- ಮನೆಯ ಹೊರಗೆ ಕೃಷಿ, ಕಾರ್ಮಿಕ, ನೌಕರ, ಅಧಿಕಾರಿ, ಉದ್ಯಮಿ, ನೀತಿರೂಪಕ, ಪುರುಷರಿಗೆ ಸರಿಸಮಾನಳಾಗಿ ದುಡಿಯುತ್ತಾಳೆ.
- ದೇಶದ ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಪಾತ್ರ.
- ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿಸಾಕಣೆಯ ಕ್ಷೇತ್ರದಲ್ಲಿ ದುಡಿಯುತ್ತಾಳೆ.
- ದೇಶದ ಆರ್ಥಿಕ ಕ್ಷೇತ್ರಗಳಲ್ಲಿ & ಉದ್ಯೋಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಣೆ.
- ವ್ಯಾಪಾರ, ಕಛೇರಿ, ಶಿಕ್ಷಣ ಸಂಸ್ಥೆ, ಆಸ್ಪತೆಗಳು, ವೃದ್ಧಾಶ್ರಮಗಳಲ್ಲಿ ಮಹಿಳೆಯ ಸೇವೆ ಅಸಧಾರಣ.
- ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ.
- ರಾಜಕೀಯ ಕ್ಷೇತ್ರದಲ್ಲೂ ಮುಂದಾಳುವಾಗಿ ಹಲವು ಜವಾಬ್ದಾರಿ ನಿರ್ವಹಣೆ.
- ಮೀಸಲಾತಿ ಕಲ್ಪಿಸಿರುವುದರಿಂದ ಗ್ರಾಮೀಣಾಭಿವೃದ್ಧಿಲ್ಲಿ ದುಡಿಯುತ್ತಾಳೆ.
- ಮಹಿಳಾ ಸ್ವಸಹಾಯ ಸಂಘಗಳು:–
- ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ(ಸ್ತ್ರೀಶಕ್ತಿ ಸಂಘ)' ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.
- ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ & ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ.



RAMALINGAPPA L

- ಇವುಗಳ ಮೂಲಕ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯಾವಾಗಿ ದುಡಿಯುತ್ತಾರೆ.
- ಇವು ಉಳಿತಾಯ ಸಂಗ್ರಹ & ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ.
- ಕುಡಿತ, ಜೂಜು, ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳಾ & ಮಕ್ಕಳ ಶೋಷಣೆ ತಡೆಯುವಲ್ಲಿ ಪ್ರಮುಖ ಪಾತ್ರ.
- ಸ್ವಚ್ಛ ಹಾಗೂ ಪ್ರಗತಿಪರ ಸಮಾಜ ಕಟ್ಟುವಲ್ಲಿ ನೆರವಾಗಬಹುದು.
- ಮನೆಯ ಒಳಗೆ & ಹೊರಗೆ ಪುರುಷರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದುಡಿಯುತ್ತಾರೆ.
- ಮಹಿಳಾ ಕಾರ್ಮಿಕರಿಗೆ ಸಮಾನವೇತನ & ಉದ್ಯೋಗಸ್ಥ ಮಹಿಳೆಯರಿಗೆ ಭದ್ರತೆ ಒದಗಿಸುವುದು ಅವಶ್ಯಕ.
- ಸಾರ್ವಜನಿಕ ಹಣಕಾಸು & ಆಯ–ವ್ಯಯ:–
- ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು "ವೈಯಕ್ತಿಕ ಹಣಕಾಸು" ಎನ್ನುವರು.
- ಸಾರ್ವಜನಿಕ ಹಣಕಸಿನ ಅರ್ಥ & ಮಹತ್ವ:–
- ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ "ಸಾರ್ವಜನಿಕ ಹಣಕಾಸು" ಎನ್ನುವರು.
- ಡಾಲ್ಟನ್:– "ಸರ್ಕಾರದ ಆದಾಯ ಹಾಗೂ ವೆಚ್ಚಗಳ ನಿರ್ವಹಣೆ ಮತ್ತು ಅವುಗಳಲ್ಲಿನ ಹೊಂದಾಣಿಕೆ ಮಾಡುವ ಪ್ರಕ್ರಿಯೆ ಬಗ್ಗೆ ಅಭ್ಯಸಿಸುವುದು.

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ–ವೆಚ್ಚಕ್ಕೆ ಸಂಬಂಧಿಸಿದೆ. | ಸರ್ಕಾರದ ಆದಾಯ–ವೆಚ್ಚಕ್ಕೆ ಸಂಬಂಧಿಸಿದೆ. |
| ಇಲ್ಲಿ ವ್ಯಕ್ತಿಗಳು ಮೊದಲು ತಮ್ಮ ಆದಾಯವನ್ನು ಅಂದಾಜು ಮಾಡಿ ವೆಚ್ಚ ಮಾಡುತ್ತಾರೆ | ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಆದಾಯವನ್ನು ಹೊಂದಿಸುತ್ತದೆ |
| ಇವು ಅದಷ್ಟೂ ಗೌಪ್ಯವಾಗಿಡಲಾಗುತ್ತದೆ. | ಇದನ್ನು ಶಾಸನ ಸಭೆಗಳಲ್ಲಿ ಚರ್ಚಿಸಿ, ಮಾಧ್ಯಮಗಳಲ್ಲಿ ಎಲ್ಲಾರಿಗೂ ತಿಳಿಯುವಂತೆ ಪ್ರಚಾರ |
| ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕ | ಸರ್ಕಾರವು ಉಳಿತಾಯ ಮಾಡಿದರೆ, ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಆದ್ದರಿಂದ ಸರ್ಕಾರ ಆದಾಯಕ್ಕಿಂತ ಅಭಿವೃದ್ಧಿ ಕೆಲಸಗಳಿಗೆ ವೆಚ್ಚ ಮಾಡುತ್ತದೆ. |

- ಮಹತ್ವ:–
- ಆರ್ಥಿಕ ಅಭಿವೃದ್ಧಿ & ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ಆದಾಯ, ವೆಚ್ಚ & ಸಾಲಕ್ಕೆ ಸಂಬಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ "ಕೋಶೀಯ ನೀತಿ ಅಥವಾ ವಿತ್ತೀಯ ನೀತಿ" ಎನ್ನುವರು.
- ಸರ್ಕಾರ ಕೋಶೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸನ್ನು ನಿರ್ವಹಿಸುತ್ತದೆ.
- ದೇಶದಲ್ಲಿ ನೈಸರ್ಗಿಕ ಸಂಪತ್ತು, ಶ್ರಮ & ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸರಿಯಾಗಿ ಹಂಚಿಕೆಯಾಗುವಂತೆ
- ಉತ್ಪಾದನೆಯು ಗರಿಷ್ಠ ಮಟ್ಟಕ್ಕೆ ಹೆಚ್ಚುವಂತೆ ತಂತ್ರ ರೂಪಿಸುತ್ತದೆ.
- ಉತ್ಪಾದನೆಯ ಆದಾಯವು ಎಲ್ಲಾ ಪ್ರಜೆಗಳಲ್ಲಿ ಸಮಾನವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳುತ್ತದೆ.
- ಸಮಾಜದ ಎಲ್ಲಾ ವರ್ಗದ ಜನರು ಶಾಂತಿ, ನೆಮ್ಮದಿಯಿಂದ ಬದುಕುವಂತೆ ಮಾಡಲು ಪ್ರಯತ್ನ.
- ಪ್ರಜೆಗಳ ಕಲ್ಯಾಣದ ಜೊತೆಗೆ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ
- ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ, ಕೃಷಿ, ಸಣ್ಣ ಕೈಗಾರಿಕೆ, ಮೂಲಸೌಕರ್ಯಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚುವಂತೆ ಮಾಡುತ್ತದೆ.
- ಆರ್ಥಿಕವ್ಯವಸ್ಥೆಯ ಎಲ್ಲಾ ಕ್ಷೇತ್ರಗಳು ಸಮತೋಲನ ಅಭಿವೃದ್ಧಿಗೆ ಕ್ರಮ.
- ಬಡತನ & ನಿರುದ್ಯೋಗ ಹೊಗಲಾಡಿಸಲು & ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ನಿರ್ವಹಣೆ & ನಿಯಂತ್ರಣ ಮಾಡುತ್ತದೆ.
- ಆಯ–ವ್ಯಯ(ಮುಂಗಡ ಪತ್ರ):–
- ಭಾರತ ಹಣಕಾಸು ವರ್ಷವು ಏಪ್ರಿಲ್ 1 ರಂದು ಆರಂಭ
- ಮುಂದಿನ ವರ್ಷ ಮಾರ್ಚ್ 31 ರಂದು ಮುಕ್ತಾಯ.
- ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು "ಆಯ–ವ್ಯಯ ಅಥವಾ ಮುಂಗಡ ಪತ್ರ" ಎಂದು ಕರೆಯುತ್ತಾರೆ.
- ಇದು ಸರ್ಕಾರದ ಆದಾಯ ಮತ್ತು ವೆಚ್ಚವನ್ನು ತಿಳಿಸುವ ದಾಖಲೆ.
- ಕೇಂದ್ರದಲ್ಲಿ ಮುಂಗಡ ಪತ್ರವನ್ನು ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ.

- ಹಣಕಾಸು ಸಚಿವರು ಪ್ರತಿ ವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಮಂಡಿಸುತ್ತಾರೆ.
- ಲೋಕಸಭೆ & ರಾಜ್ಯಸಭೆಗಳಲ್ಲಿ ಸುದೀರ್ಘ ಚರ್ಚೆ ನಡೆಸಿ ಮಾರ್ಚ್ 31ರ ಒಳಗಾಗಿ ಎರಡು ಸದಸನಗಳಲ್ಲಿ ಒಪ್ಪಿಗೆ ಪಡೆಯಬೇಕು.
- ಆಯ-ವ್ಯಯ ಪತ್ರಗಳ ವಿಧಗಳು:-
- ಉಳಿತಾಯ ಆಯ-ವ್ಯಯ ಪತ್ರ:- ಆಯ-ವ್ಯಯ ಪತ್ರದಲ್ಲಿ ಸರ್ಕಾರದ ಆದಾಯವು ಸರ್ಕಾರದ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ.
- ಕೊರತೆಯ ಆಯ-ವ್ಯಯ ಪತ್ರ:- ಆಯ-ವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ
- ಸಮತೋಲನ ಆಯ-ವ್ಯಯ ಪತ್ರ:- ಸರ್ಕಾರದ ಆದಾಯ & ವೆಚ್ಚವು ಸಮನಾಗಿದ್ದರೆ
- ಭಾರತದಂತಹ ಮುಂದುವರೆಯುತ್ತಿರುವ ದೇಶದಲ್ಲಿ ಕೊರತೆಯ ಆಯ-ವ್ಯಯ ಮಂಡಿಸಬೇಕು.
- ಸಾರ್ವಜನಿಕ ವೆಚ್ಚಗಳು:-
- ಸರ್ಕಾರವು ರಾಷ್ಟ್ರ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುವುದಕ್ಕೆ "ಸಾರ್ವಜನಿಕ ವೆಚ್ಚ" ಎನ್ನುವರು.
- 20ನೇ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರವು ಹೆಚ್ಚು.
- ಕೇಂದ್ರ ಸರ್ಕಾರದ ವೆಚ್ಚದ ಬಾಬ್ತುಗಳು:-
- ಕಂದಾಯ ವೆಚ್ಚ:- ಕೇಂದ್ರ ಸರ್ಕಾರವು ತನ್ನ ಕಂದಾಯ ಆದಾಯದಿಂದ ಮಾಡುವ ವೆಚ್ಚವನ್ನು 'ಕಂದಾಯ ವೆಚ್ಚ' ಎನ್ನುವರು.
- ಇದರಲ್ಲಿ:- ಆರ್ಥಿಕ & ಸಾಮಾಜಿಕ ಸೇವೆಗಳು, ರಾಷ್ಟ್ರರಕ್ಷಣೆ, ಆಡಳಿತ, ಬಡ್ಡಿಪಾವತಿ, ರಾಜ್ಯಗಳಿಗೆ ಅನುದಾನ ಇತ್ಯಾದಿ ಉದ್ದೇಶ
- ಇದರಲ್ಲಿ ಯೋಜನಾ ವೆಚ್ಚ & ಯೋಜನೇತರ ವೆಚ್ಚಗಳಾಗಿ ವರ್ಗೀಕರಣ.
- ಯೋಜನಾ ವೆಚ್ಚ:-ಸರ್ಕಾರವು ವಿವಿಧ ಆರ್ಥಿಕ & ಸಾಮಾಜಿಕ ಸೇವೆಗಳು, ರಾಷ್ಟ್ರ ನಿರ್ಮಾಣ ಕಾರ್ಯಗಳ ಅಭಿವೃದ್ಧಿ ಕಾರ್ಯಗಳಿಗೆ ಮಾಡುವ ವೆಚ್ಚಗಳನ್ನು 'ಯೋಜನಾ ವೆಚ್ಚ' ಎನ್ನುವರು.
- ಕೇಂದ್ರ ಸರ್ಕಾರವು ರಾಜ್ಯಗಳು & ಕೇಂದ್ರಾಡಳಿತ ಪ್ರದೇಶಗಳಲ್ಲಿನ ಯೋಜನೆಗಳಿಗೆ ಸಹಾಯ.
- ಮೂರು ರೀತಿಯ ಸೇವೆಗಳು:-
- ಆರ್ಥಿಕ ಸೇವೆಗಳು:- ಕೃಷಿ & ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ, ಸಂಪರ್ಕ, ಇಂಧನ, ವಿಜ್ಞಾನ & ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ.
- ಸಾಮಾಜಿಕ ಸೇವೆಗಳು:- ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ.
- ಸಾಮಾನ್ಯ ಸೇವೆಗಳು:- ದೇಶದಲ್ಲಿ ಶಾಂತಿ-ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.
- ಯೋಜನೇತರ ವೆಚ್ಚ:- ಅಭಿವೃದ್ಧಿ ಕಾರ್ಯಗಳನ್ನು ಹೊರತುಪಡಿಸಿ, ಆಡಳಿತ ನಿರ್ವಹಣೆ, ರಾಷ್ಟ್ರರಕ್ಷಣೆ, ಬಡ್ಡಿಪಾವತಿ ಬಾಬ್ತುಗಳಿಗೆ ಮಾಡುವ ವೆಚ್ಚವನ್ನು 'ಯೋಜನೇತರ ವೆಚ್ಚ' ಎನ್ನುವರು.
- ಯೋಜನೇತರ ವೆಚ್ಚಗಳು:- ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿಪಾವತಿ, ರಾಜ್ಯಗಳಿಗೆ ಯೋಜನೇತರ ಸಹಾಯ, ಸಹಾಯಧನದ ಮೇಲಿನ ವೆಚ್ಚ.
- ಬಂಡವಾಳ ವೆಚ್ಚ:- ಕೃಷಿ, ಕೈಗಾರಿಕೆ, ಸಾರಿಗೆ, ವಿದ್ಯುತ್, ನೀರಾವರಿ, ಯೋಜನೆಗಳು ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿಗಾಗಿ & ಹೊಸ ಆಸ್ತಿಗಳ ನಿರ್ಮಾಣಕ್ಕಾಗಿ ಬಂಡವಾಳ ಹೂಡುತ್ತದೆ ಇಂತಹ ವೆಚ್ಚವನ್ನು 'ಬಂಡವಾಳ ವೆಚ್ಚ' ಎನ್ನುವರು.
- ಇದನ್ನು ಸರ್ಕಾರವು ಬಂಡವಾಳ ಆದಾಯದಿಂದ ಭರಿಸುತ್ತದೆ.
- ಇದು ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳೆಂಬ ಎರಡು ವಿಧಗಳು.
- ಶಾಶ್ವತ ಅಭಿವೃದ್ಧಿಯ ದೃಷ್ಟಿಯಿಂದ ಕೃಷಿ, ಕೈಗಾರಿಕೆ, ಸಾರಿಗೆ, ನೀರಾವರಿ ಯೋಜನೆಗಳಿಗೆ ಮಾಡುವ ವೆಚ್ಚವನ್ನು 'ಬಂಡವಾಳ ಯೋಜನಾ ವೆಚ್ಚ' ಎನ್ನುವರು.
- ಸರ್ಕಾರದ ಈ ಅಭಿವೃದ್ಧಿ ಯೋಜನಗಳಿಂದಾಗಿ ಸಂತ್ರಸ್ತರಾಗುವ ಜನರಿಗೆ ಶಾಶ್ವತ ಪರಿಹಾರಗಳನ್ನು ಕಲ್ಪಿಸಲು ಮಾಡುವ ವೆಚ್ಚವನ್ನು 'ಯೋಜನೇತರ ಬಂಡವಾಳ ವೆಚ್ಚ' ಎನ್ನುವರು.
- ಇದನ್ನು ಆಡಳಿತ ನಿರ್ವಹಣೆ, ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಜನರ ಕಲ್ಯಾಣದ ಉದ್ದೇಶದಿಂದ ಮಾಡುವ ವೆಚ್ಚ.
- ಸಾರ್ವಜನಿಕ ಆದಾಯ:-
- ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ. ಇದನ್ನು 'ಸಾರ್ವಜನಿಕ ಆದಾಯ' ಎನ್ನುವರು.
- ಸಾರ್ವಜನಿಕ ವೆಚ್ಚ ಹೆಚ್ಚಾಗಲು ಕಾರಣ:- ಪ್ರಜೆಗಳ ಕಲ್ಯಾಣಕ್ಕೆ ಸೌಲಭ್ಯಗಳನ್ನು ಒದಗಿಸಲು & ಶೀಘ್ರ ಆರ್ಥಿಕ ಅಭಿವೃದ್ಧಿ ಸಾಧಿಸಲು.



RAMALINGAPPA

- ಇದಕ್ಕಾಗಿ ಸಾರ್ವಜನಿಕ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತದೆ.
- ಕೇಂದ್ರ ಸರ್ಕಾರದ ಆದಾಯದ ಮೂಲಗಳು:– ಕಂದಾಯ ಆದಾಯ & ಬಂಡವಾಳ ಆದಾಯ.
- ಕಂದಾಯ ಆದಾಯ:– ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು 'ಕಂದಾಯ ಆದಾಯ' ಎನ್ನುವರು.
- ಇದು ಸರ್ಕಾರದ ವಾಸ್ತವ ಆದಾಯ.
- ಇದನ್ನು ಎರಡು ವಿಧಗಳನ್ನಾಗಿ ವರ್ಗೀಕರಣ:– ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯ
- ತೆರಿಗೆ ಆದಾಯ:– ಪ್ರಜೆಗಳು ಯಾವುದೇ ಪ್ರತಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು 'ತೆರಿಗೆ' ಎನ್ನುವರು.
- ತೆರಿಗೆಗಳು ಸರ್ಕಾರದ ಬಹುಮುಖ್ಯ ಆದಾಯ.
- ಹೆಚ್ಚು ಆದಾಯವುಳ್ಳವರಿಗೆ ಹೆಚ್ಚಿನ ತೆರಿಗೆಯನ್ನು, ಕಡಿಮೆ ಆದಾಯವುಳ್ಳವರಿಗೆ ಕಡಿಮೆ ತೆರಿಗೆಯನ್ನು ವಿಧಿಸುತ್ತದೆ.
- ಬಡವರಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.
- ಶ್ರೀಮಂತರು ಬಳಸುವ ಸರಕು–ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನು, ಸಾಮಾನ್ಯ ಜನರು ಬಳಸುವ ಸರಕು–ಸೇವೆಗಳ ಮೇಲೆ ಕಡಿಮೆ ತೆರಿಗೆ ವಿಧಿಸುತ್ತಿದೆ. ಇದನ್ನು 'ಪ್ರಗತಿಪರ ತೆರಿಗೆ ನೀತಿ' ಎನ್ನುವರು.
- ಕೇಂದ್ರ ಸರ್ಕಾರ ವಿಧಿಸುವ ತೆರಿಗೆಗಳಲ್ಲಿ ಎರಡು ವಿಧಗಳು: ಪ್ರತ್ಯಕ್ಷ ತೆರಿಗೆ & ಪರೋಕ್ಷ ತೆರಿಗೆ
- ಪ್ರತ್ಯಕ್ಷ ತೆರಿಗೆ:– ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ ಅದನ್ನು ಪ್ರತ್ಯಕ್ಷ ತೆರಿಗೆ ಎನ್ನುವರು.
- ಈ ತೆರಿಗೆಗಳ ಹೊರೆಯನ್ನು ಇತರರ ಮೇಲೆ ವರ್ಗಾಹಿಸಲು ಬರುವುದಿಲ್ಲ.
- ಪ್ರತ್ಯಕ್ಷ ತೆರಿಗೆಗಳು:– ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪು ತೆರಿಗೆ.
- ಪರೋಕ್ಷ ತೆರಿಗೆ:– ಸರ್ಕಾರವು ವಿಧಿಸುವ ತೆರಿಗೆಉ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ ಅದನ್ನು 'ಪರೋಕ್ಷ ತೆರಿಗೆ' ಎನ್ನುವರು.
- ಇದನ್ನು ಸರಕು & ಸೇವೆಗಳ ಮೇಲೆ ವಿಧಿಸಲಾಗುತ್ತದೆ.
- ಸರ್ಕಾರ ತೆರಿಗೆಯನ್ನು ಉತ್ಪಾದಕನ ಮೇಲೆ ವಿಧಿಸಿದರೆ ಅದರ ಹೊರೆ ಹೊರುವವನು ಬಳಕೆದಾರ.
- ಪರೋಕ್ಷ ತೆರಿಗೆಗಳು:– ಕೇಂದ್ರ ಅಬಕಾರಿ ತೆರಿಗೆ, ಆಮದು–ರಫ್ತು ಸುಂಕುಗಳು, ಸೇವಾ ತೆರಿಗೆ, ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ.
- ತೆರಿಗೆಯೇತರ ಆದಾಯ:– ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ಆದಾಯವನ್ನು ಸಂಗ್ರಹಿಸುತ್ತದೆ ಇದಕ್ಕೆ 'ತೆರಿಗೆಯೇತರ ಆದಾಯ' ಎನ್ನುವರು.
- ತೆರಿಗೆಯೇತರ ಆದಾಯದ ಮೂಲಗಳು:–
- ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ
- ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ
- ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ
- ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ
- ನಾಣ್ಯ & ಟಂಕಸಾಲೆಯಿಂದ ಬರುವ ಆದಾಯ
- ವಿವಿಧ ರೀತಿಯ ಶುಲ್ಕಗಳು, ದಂಡಗಳು
- ಬಂಡವಾಳ ಆದಾಯ:–
- ಸರ್ಕಾರವು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಹಾಗೂ ಹೊಸ ಆಸ್ತಿಗಳನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ ಹೊಸದಾಗಿ ಬಂಡವಾಳ ಹೂಡುವ ಸಲುವಾಗಿ ಸಂಗ್ರಹಿಸುವ ಆದಾಯವನ್ನು 'ಬಂಡವಾಳ ಆದಾಯ' ಎನ್ನುವರು.
- ಕೃಷಿ, ಕೈಗಾರಿಕೆ, ನೀರಾವರಿ, ವಿದ್ಯುತ್, ಮೂಲಸೌಲಭ್ಯಗಳ ಅಭಿವೃದ್ಧಿಗಾಗಿ ಸಂಗ್ರಹ.
- ಇದನ್ನು ಆಂತರಿಕ ಹಾಗೂ ವಿದೇಶಿ ಮೂಲಗಳಿಂದ ಸಾಲ ಎತ್ತುವ ಮೂಲಕ ಸಂಗ್ರಹ.
- ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳಿಂದ ಸಂಗ್ರಹಿಸುವ ಸಾಲವನ್ನು 'ಆಂತರಿಕ ಸಾಲ' ಎನ್ನುತ್ತಾರೆ.
- ವಿದೇಶಿ ಸರ್ಕಾರಗಳು, ವಿದೇಶಿ ಹಣಕಾಸು ಸಂಸ್ಥೆಗಳು & ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲವನ್ನು 'ವಿದೇಶಿ ಸಾಲ' ಎನ್ನುವರು.
- ಸರ್ಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೋಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ ಇದನ್ನು 'ಹೂಡಿಕೆ ಹಿಂತೆಗತ' ಎನ್ನುವರು.
- ರಾಜ್ಯ ಸರ್ಕಾರಗಳು ಕೇಂದ್ರದಿಂದ ಪಡದ ಸಾಲವನ್ನು & ಹಣಕಾಸಿನ ನೆರವನ್ನು ಕಾಲಕಾಲಕ್ಕೆ ಮರುಪಾವತಿ ಮಾಡುತ್ತದೆ ಇದನ್ನು 'ಸಾಲ ಮರುಪಾವತಿ' ಎನ್ನುವರು.
- ಹೀಗೆ ಸಾಲ ಮರುಪಾವತಿ & ಹೂಡಿಕೆ ಹಿಂತೆಗತಗಳಿಂದ ಸಂಗ್ರಹವಾಗುವ ಹಣವನ್ನು 'ಸಾಲೇತರ ಬಂಡವಾಳ' ಎನ್ನುವರು.

- ಕೊರತೆಯ ಹಣಕಾಸು:–
- ಸರ್ಕಾರ ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ ಅದಕ್ಕೆ ಆದಾಯವನ್ನು ಹೊಂದಿಸುತ್ತದೆ.
- ಆದಾಯಕ್ಕಿಂತ ವೆಚ್ಚವನ್ನು ಹೆಚ್ಚು ಮಾಡುತ್ತದೆ.
- ಇದು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮವಾದುದು.
- ಸರ್ಕಾರವು:–
- ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ತಾನು ಹೊಂದಿರುವ ನಗದು ಸಂಗ್ರಹ ಹಿಂಪಡೆಯುವುದು.
- ಆಂತರಿಕ & ವಿದೇಶಿ ಮೂಲಗಳಿಂದ ಸಾಲ ಸಂಗ್ರಹಿಸುವುದು.
- ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು.
- ಕೊರತೆ ಹಣಕಾಸು (ಭಾರತ ಯೋಜನಾ ಆಯೋಗದ ಪ್ರಕಾರ) ಎಂದರೆ, ಸರ್ಕಾರದ ಆಯ–ವ್ಯಯ ಪತ್ರದ ಕಾರ್ಯಾಚರಣೆ ಮೂಲಕ ಅರ್ಥವ್ಯವಸ್ಥೆಯ ನಿವ್ವಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿದೆ.
- ಸರ್ಕಾರವು ತನ್ನ ಆದಾಯಕ್ಕಿಂತಲೂ ವೆಚ್ಚವನ್ನು ಹೆಚ್ಚು ಮಾಡುವುದನ್ನು 'ಕೊರತೆ ಹಣಕಾಸು' ಎನ್ನುವರು.
- ಕೊರತೆ ಹಣಕಾಸಿನ ಪರಿಣಾಮವಾಗಿ:–
- ದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚುತ್ತವೆ.
- ಹಣದ ಚಲಾವಣಾ ಪ್ರಮಾಣ ಹೆಚ್ಚುತ್ತದೆ.
- ಜನರ ಕೊಳ್ಳುವ ಶಕ್ತಿ ಹೆಚ್ಚುತ್ತದೆ.
- ಕೊರತೆಯನ್ನು ಋಣ(–) ಚಿಹ್ನೆಯಲ್ಲಿ ಗುರುತಿಸಲಾಗುತ್ತದೆ.
- ಕೊರತೆ ಹಣಕಾಸಿನ ವಿಧಗಳು:–
- ವಿತ್ತೀಯ ಕೊರತೆ
- ಆಯ–ವ್ಯಯ ಕೊರತೆ
- ಕಂದಾಯ ಕೊರತೆ
- ಪ್ರಾಥಮಿಕ ಕೊರತೆ
- ವಿತ್ತೀಯ ಕೊರತೆ:–
- ಆಯ–ವ್ಯಯದಲ್ಲಿ ಸರ್ಕಾರದ ಕಂದಾಯ ಆದಾಯ & ಸಾಲೇತರ ಬಂಡವಾಳ ಆದಾಯಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ ಅದನ್ನು 'ವಿತ್ತೀಯ ಕೊರತೆ' ಎನ್ನುವರು.
- ಆದಾಯ:– ಸರ್ಕಾರ ನೀಡಿದ್ದ ಸಾಲ ಮರುಪಾವತಿ & ಹೂಡಿಕೆ ಹಿಂತೆಗೆತದ ಮೂಲಕ ಸಂಗ್ರಹ.
- ವೆಚ್ಚ:– ಕಂದಾಯ ವೆಚ್ಚ & ಬಂಡವಾಳ ವೆಚ್ಚವನ್ನು ಒಳಗೊಂಡಿದೆ.
- ಇದು ಸರ್ಕಾರದ ಖಜಾನೆ ಮೇಲೆ ಬೀಳುವ ವಾಸ್ತವಿಕ ಹೊರೆ.
- ಇದು ಆಂತರಿಕ & ವಿದೇಶಿ ಮೂಲಗಳಿಂದ ಎಷ್ಟು ಸಾಲ ಸಂಗ್ರಹಿಸಬೇಕಾಗುತ್ತದೆ ಎಂಬುದನ್ನು ತಿಳಿಸುತ್ತದೆ.
- ಭಾರತೀಯ ರಿಸರ್ವ್ ಬ್ಯಾಂಕ್ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಮೂಲಕ ಸರ್ಕಾರಕ್ಕೆ ಸಾಲ ನೀಡುತ್ತದೆ.
- ಸೂತ್ರ:– ವಿತ್ತೀಯ ಕೊರತೆ = (ಕಂದಾಯ ಆದಾಯ + ಸಾಲೇತರ ಬಂಡವಾಳ ಆದಾಯ) – ಒಟ್ಟು ವೆಚ್ಚ
- ಉದ್ಯಮಶೀಲತೆ:–
- ಉದ್ಯಮಶೀಲತೆ ಇಂದು ಆರ್ಥಿಕ ಮಾರುಕಟ್ಟೆಯ ಮುಂಚೂಣಿಯಲ್ಲಿದೆ.
- ಇದು ಆರ್ಥಿಕ ಚಟುವಟಿಕೆಗಳಲ್ಲಿ ಒಂದಾಗಿದೆ
- ಆರ್ಥಿಕ ಚಟುವಟಿಕೆಗಳು:– ಭೂಮಿ, ದುಡಿಮೆ, ಬಂಡವಾಳ, ಸಂಘಟನೆ.
- ಉದ್ಯಮದ ಅರ್ಥ:–
- ಉದ್ಯಮಿ ಪದವು ಫ್ರೆಂಚ್ ಪದ 'ಎಂಟ್ರ ಪ್ರೆಂಡೆ'ಯಿಂದ ಬಂದಿದೆ.
- ಇದರ ಅರ್ಥ:– ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವ
- ಉದ್ಯಮಿ ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುತ್ತಾನೆ.
- ಇವನಲ್ಲಿ ಆಡಳಿತ ನಿರ್ವಹಣೆಯ ಕೌಶಲ್ಯ, ತಂಡವನ್ನು ನಿರ್ಮಿಸುವ ಸಾಮರ್ಥ್ಯ, ಮುಂದಾಳತ್ವ ಗುಣಗಳು ಇರುತ್ತವೆ.
- ಉದ್ಯಮಿಯನ್ನು ಉದ್ಯಮಶೀಲ ಅಥವಾ ಉದ್ದಿಮೆಗಾರ ಎನ್ನುವರು.
- ಉದ್ಯಮಶೀಲತೆ:–
- ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಶೀಲತೆ ಎನ್ನುವರು.
- ಇದು ಸೃಜನಾತ್ಮಕ ಚಟುವಟಿಕೆ
- ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯ
- ಅವಕಾಶಗಳನ್ನು ಹುಡುಕಿ, ನಷ್ಟಗಳನ್ನು ಲೆಕ್ಕ ಹಾಕಿ ಲಾಭಪಡೆಯಲು ಸಾಹಸಕಾರ್ಯ ಸ್ಥಾಪಿಸುವುದು.
- ಇದು ಒಂದು ಕಾರ್ಯವಿಧಾನ.
- ಅನ್ವೇಷಣೆಯನ್ನು ಕ್ರಮಬದ್ಧವಾದ ಪರಿಸರದಲ್ಲಿ ವಿಶ್ಲೇಷಿಸುವ ಕಾರ್ಯ
- ಒಂದು ತತ್ವಜ್ಞಾನವಾಗಿದೆ.
- ಒಬ್ಬ ಮನುಷ್ಯನು ಯೋಜಿಸುವ & ಪ್ರವೃತ್ತಿಸುವ ಕಾರ್ಯ
- ಉದ್ಯಮಶೀಲತೆಯ ಗುಣಲಕ್ಷಣಗಳು:–
- ಸೃಜನಾತ್ಮಕ
- ಕ್ರಿಯಾತ್ಮಕ

RAMALINGAPPA L

- ಗುಂಪುಕಟ್ಟುವುದು
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನಬದ್ಧತೆ
- ಹೊಸ ಪದ್ಧತಿಯನ್ನು ರೂಢಿಸಿತರುವುದು.
- ನಾಯಕತ್ವ
- ಪ್ರಚೋದನೆಯ ಸಾಧನೆ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.
- ಉದ್ಯಮಿಯ ಕಾರ್ಯಗಳು:-
- ವ್ಯಾಪಾರ ಚಟುವಟಿಕೆಗಳನ್ನು ಯೋಜನೆಗಳ ಮೂಲಕ ಆರಂಭ
- ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
- ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆಯ ಬಗ್ಗೆ, ಮಾರುಕಟ್ಟೆಯ ಬಗ್ಗೆ, ನಿರ್ಧಾರ ಕೈಗೊಳ್ಳುತ್ತಾನೆ.
- ಎಲ್ಲಾ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ತನ್ನ ಉದ್ಯಮದ ಹಣಕಾಸಿನ ಆಯ-ವ್ಯಯವನ್ನು ನಿಭಾಯಿಸುತ್ತಾನೆ.
- ಕಷ್ಟನಷ್ಟಗಳನ್ನು & ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
- ವ್ಯಾಪಾರದ ಮಾರ್ಗಗಳ ಬಗ್ಗೆ ಮಾರ್ಗದರ್ಶ ನೀಡುತ್ತಾನೆ.
- ಉದ್ಯಮಿಯ ಪಾತ್ರ & ಪ್ರಾಮುಖ್ಯತೆ:-
- ಉದ್ಯಮಿಯ ಪಾತ್ರ:-
- ಜನರ ಅನುಪಯುಕ್ತ ಉಳಿತಾಯವನ್ನು ಬಂಡವಾಳ ರೂಪದಲ್ಲಿ ನಿರ್ಮಾಣ.
- ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸಿ ಅಧಿಕ ಉದ್ಯೋಗ ಒದಗಿಸುತ್ತಾರೆ.
- ದೇಶದ ನಿವ್ವಳದೇಶಿಯ ಉತ್ಪನ್ನ & ಜನರ ತಲಾವರಮಾನ ಹೆಚ್ಚಿಸುತ್ತಾರೆ.
- ಹೊಸ ವಸ್ತು & ಸೇವೆಗಳನ್ನು ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಉತ್ತಮ ವಸ್ತುಗಳನ್ನು ಕಡಿಮೆ ಬೆಲೆಗೆ ಒದಗಿಸಿ ಜನರ ಜೀವನಮಟ್ಟ ಉತ್ತಮಗೊಳಿಸುತ್ತಾರೆ.
- ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಪ್ರಾಂತೀಯ ತಾರತಮ್ಯ ನಿವಾರಣೆ.
- ಸಂಪತ್ತಿನ ಕೇಂದ್ರೀಕರಣವನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗ ಸಹಾಯ.
- ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.
- ಹೊಸ ಬದಲಾವಣೆ ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.
- ಉದ್ಯಮಿಗಳ ಪ್ರಾಮುಖ್ಯತೆ:-
- ಮಾರುಕಟ್ಟೆಯ ಆರ್ಥಿಕ ಸ್ಥಿತಿಯಲ್ಲಿ ಕೇಂದ್ರ ಸ್ಥಾನ.
- ಅಗ್ನಿಬಿರಟೆಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕ.
- ದೇಶದ ಯಶಸ್ಸು, ಅಭಿವೃದ್ಧಿ, ಬೆಳವಣಿಗೆ & ಸಮಯೋಚಿತ ವಿಮರ್ಶಾತ್ಮಕ ನಿರ್ಣಯಗಳಾಗಿರುತ್ತಾರೆ.
- ಅನುಪಯುಕ್ತ ಬಂಡವಾಳವನ್ನು ಬೆಳೆಸುತ್ತಾರೆ.
- ತಮ್ಮದೇ ಆದ ಸಂಪನ್ಮೂಲಗಳಿಂದ ಉದ್ಯಮ ಸ್ಥಾಪನೆ.
- ದೇಶದ ಮೌಲ್ಯಾಧಾರಿತ ಸಂಪತ್ತನ್ನು ಸೃಜಿಸುತ್ತವೆ.
- ಆರ್ಥಿಕ & ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳು & ಸೇವೆಗಳನ್ನು ಮಾರಾಟಕ್ಕೆ ಸಹಾಯ.
- ಸಾಮರ್ಥ್ಯ & ಪ್ರಚೋದನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ.
- ತನ್ನ ಉದ್ಯಮದ ನಷ್ಟಭರಿಕೆಯನ್ನು ಹೊರುತ್ತಾನೆ.
- ಲಾಭವನ್ನು ಹುಡುಕುತ್ತಾ ಹೋಗುತ್ತಾನೆ.
- ಅವಕಾಶಗಳನ್ನು ಹುಡುಕುತ್ತಾನೆ.
- ಉದ್ಯಮಿಗಳಿಗೆ ಸ್ವಂತ ಉದ್ಯೋಗ ಅವಕಾಶಗಳು:-
- ಜಾಹಿರಾತು ಸೇವಾಸಂಸ್ಥೆಗಳು
- ಮಾರುಕಟ್ಟೆ ಸಲಹಾ ಸಂಸ್ಥೆ
- ಕೈಗಾರಿಕಾ ಸಲಹಾ ಸಂಸ್ಥೆ
- ವಸ್ತುಗಳನ್ನು ಬಾಡಿಗೆಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು
- ಛಾಯಾಪ್ರತಿ ತೆಗೆಯುವ ಕೇಂದ್ರಗಳು
- ಕೈಗಾರಿಕಾ ಸಂಶೋಧನೆ & ಅಭಿವೃದ್ಧಿ ಪ್ರಯೋಗಾಲಯಗಳು
- ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
- ಅಂತರ್ಜಾಲ ಮತ್ತು ಸಂವಹನ ಅಂಗಡಿಗಳು
- ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು
- ಕ್ರೆಚ್ & ಬ್ಯೂಟಿಪಾರ್ಲರ್‌ಗಳು

RAMALINGAPPAL

- ಸ್ವಯಂ ಉದ್ಯೋಗಕ್ಕೆ ಯೋಜನೆಗಳು:–
- ಪ್ರಮುಖ ಹಣಕಾಸು ಸಂಸ್ಥೆಗಳು:–
- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ & ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು–ರಫ್ತು ಬ್ಯಾಂಕು
- ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಭಾರತೀಯ ಕೈಗಾರಿಕಾ ಹಣಕಾಸು ನಿಗಮ
- ಭಾರತೀಯ ಕೈಗಾರಿಕಾ ಹಣಕಾಸಿನ ಹೂಡಿಕೆ & ಸಾಲದ ನಿಗಮ
- ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು
- ಭಾರತೀಯ ವಾಣಿಜ್ಯ & ಇತರೆ ಬ್ಯಾಂಕುಗಳು
- ಭಾರತೀಯ ಜೀವಾ ವಿಮಾ ನಿಗಮ
- ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ
- ಉದ್ಯಮಗಳ ಪ್ರವರ್ತಕ ಸಂಸ್ಥೆಗಳು:–
- ಜಿಲ್ಲಾ ಕೈಗಾರಿಕಾ ಕೇಂದ್ರಗಳು
- ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
- ಕೈಗಾರಿಕಾ ಪ್ರದೇಶಗಳು
- ಖಾದಿ & ಗ್ರಾಮೋದ್ಯೋಗ ಮಂಡಲಿ
- ತಾಂತ್ರಿಕ ಸಲಹಾ ಸಂಸ್ಥೆಗಳು
- ಜಿಲ್ಲಾ ಕೈಗಾರಿಕಾ ಕೇಂದ್ರಗಳು:–
- ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು & ಆಡಳಿತ & ಸಮಗ್ರತೆಯನ್ನು ಕೇಂದ್ರೀಕರಿಸಲು ಸರ್ಕಾರವು 1978ರಲ್ಲಿ ಸ್ಥಾಪಿಸಿತು.
- ಇವು ಸರ್ಕಾರದ ವಿವಿಧ ಇಲಾಖೆಗಳೊಡನೆ ಸಂಯೋಜಕರಾಗಿ ಕೆಲಸ & ಸೇವೆಗಳನ್ನು ಒದಗಿಸುವ ಕೇಂದ್ರಗಳು
- ಇವು ಏಕಗವಾಕ್ಷಿ ರೀತಿಯಲ್ಲಿ ಹೊಸದಾಗಿ ಉದ್ಯಮವನ್ನು ಆರಂಭಿಸಲು ಈ ಕೆಳಗಿನ ಸೇವೆಗಳನ್ನು ಒದಗಿಸುತ್ತವೆ.
- ಉದ್ದಿಮೆ ಸ್ಥಾಪಿಸಲು ಮೊದಲು ಸಿದ್ದಪಡಿಸಬೇಕಾದ ಯೋಜನಾವರದಿ.
- ಯಂತ್ರಗಳು & ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ
- ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ
- ವಿಶೇಷ ರೀತಿಯ ಯೋಜನಾ ವರದಿಗಳನ್ನು ಅಂಗೀಕರಿಸುವುದು.
- ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದಡೆ ತರಬೇತಿ
- ಕಚ್ಚಾಪದಾರ್ಥಗಳ ಹಂಚಿಕೆ
- ಸ್ವಯಂ ಉದ್ಯೋಗದಡಿಯಲ್ಲಿನ ವ್ಯವಸ್ಥೆಯಲ್ಲಿ ಹಣಕಾಸಿನ ನೆರವು
- ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆ ಸಹಾಯ
- ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ ಮಾಡುವುದು.
- ವಸ್ತುಗಳನ್ನು ರಫು ಮಾಡಲು ಸಹಾಯ ಮಾಡುವುದು
- ಅತಂತ್ರಗೊಳ್ಳುತ್ತೀರುವ ಉದ್ದಿಮೆಗಳಿಗೆ ಸಹಾಯ ಮಾಡುವುದು
- ವಸ್ತು ಪ್ರದರ್ಶನಗಳಲ್ಲಿ, ವ್ಯಾಪಾರಿ ಜಾತ್ರೆಗಳಲ್ಲಿ ಮಾರುಕಟ್ಟೆ ವ್ಯವಸ್ಥೆ
- ಪ್ರಮಾಣಬದ್ಧ ವಸ್ತುಗಳ ತಯಾರಿಕೆಯಲ್ಲಿ ಸಹಾಯ
- ಸಾಂಪ್ರದಾಯಕವಲ್ಲದ ಶಕ್ತಿಸಾಧನಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆಗೆ ಉತ್ತೇಜನ
- ಕುಶಲಕೈಗಾರಿಕಾ ವಸ್ತುಗಳ ತಯಾರಿಕೆಯಲ್ಲಿ ಮಾದರಿ ವಸ್ತುಗಳ ತಯಾರಿಕೆಗೆ ಸಹಾಯ.
- ಗ್ರಾಹಕರ ಶಿಕ್ಷಣ & ರಕ್ಷಣೆ:–
- ಬಳಕೆದಾರ ಮತ್ತು ಪೂರೈಕೆದಾರ:–
- ಸೇವೆ ಮತ್ತು ವಸ್ತುಗಳನ್ನು ಬಳಸುವವರನ್ನು ಸ್ವಯಂ ಸೇವಾ ಸಂಸ್ಥೆಗಳು 'ಬಳಕೆದಾರ' ಎಂದು ಕರೆದರು
- ಬಳಕೆದಾರರಿಂದ ಹಣ ಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ 'ಪೂರೈಕೆದಾರ'
- ಗ್ರಾಹಕರ ಸಂರಕ್ಷಣೆ ಕಾಯ್ದೆಯಲ್ಲಿ ಬಳಕೆದಾರರನ್ನು ಗ್ರಾಹಕ ಎಂದು ಕರೆದಿದೆ.
- ಗ್ರಾಹಕರು ನೀಡುವ ಹಣಕ್ಕೆ ಯೋಗ್ಯ ಗುಣಮಟ್ಟದ ವಸ್ತು ನೀಡಬೇಕು.
- ಆದರೆ ವ್ಯಾಪಾರಿಗಳು ಅಥವಾ ಪೂರೈಕೆದಾರರು ಗ್ರಾಹಕರನ್ನು ಅನೇಕ ರೀತಿಯಲ್ಲಿ ಶೋಷಣೆ ಮಾಡುತ್ತಾರೆ.
- ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲು ಅಮೇರಿಕಾದಲ್ಲಿ ಆರಂಭ.
- ಭಾರತದಲ್ಲಿ ಯೋಜನಾ ಆಯೋಗವು ಭಾರತದ ಗ್ರಾಹಕ ಸಂಘದ ಸ್ಥಾಪನೆಗೆ 1956ರಲ್ಲಿ ಒತ್ತು ನೀಡಿತು.
- ಮೊಟ್ಟಮೊದಲ ಬಾರಿಗೆ ಭಾರತದಲ್ಲಿ 1965ರಲ್ಲಿ ಮುಂಬೈ ಪಟ್ಟಣದಲ್ಲಿ ಮಹಿಳೆಯರು "ಅವೇರ್" ಸಂಸ್ಥೆಯನ್ನು ಆರಂಭಿಸಿದರು.

RAMALINGAPPA L

- ಇದು ರಾಷ್ಟ್ರೀಯ ಗ್ರಾಹಕ ಸಂಘಟನೆ & ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಕೌನ್ಸಿಲ್ ಸ್ಥಾಪನೆಗೆ ಪ್ರೋತ್ಸಾಹ
- ಬಳಕೆದಾರರ ಶೋಷಣೆಗೆ ಕಾರಣಗಳು:–
- ಮಧ್ಯವರ್ತಿಗಳ ಹಾವಳಿ
- ಮಾರಾಟದ ವಿಧಾನದಲ್ಲಿ ಬದಲಾವಣೆ
- ಗ್ರಾಹಕ & ಪೂರೈಕೆದಾರರ ನಡುವೆ ಅಂತರ ಹೆಚ್ಚಾಯಿತು.
- ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸುತ್ತಾರೆ.
- ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳಬಹುದಾಗಿದೆ ಇದನ್ನು "ಟೆಲಿಷಾಪಿಂಗ್" ಎನ್ನುವರು.
- ಗ್ರಾಹಕ:–
- ಗ್ರಾಹಕ ಎಂದರೆ, ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಕೊಟ್ಟು ಪಡೆದುಕೊಳ್ಳುವವರು.
- ವ್ಯಾಪಾರ ಎಂದರೆ, ಯಾವುದೇ ವ್ಯವಹಾರವನ್ನು ಲಾಭದ ಉದ್ದೇಶಕ್ಕಾಗಿ ಮಾಡುವುದು.
- ಗ್ರಾಹಕರನ್ನು 'ಮಾರುಕಟ್ಟೆಯ ರಾಜ' ಎನ್ನುವರು.
- ಆದ್ದರಿಂದ ಗ್ರಾಹಕನು ಅತ್ಯಂತ ಮುಖ್ಯ ಸ್ಥಾನ ಅಲಂಕರಿಸುತ್ತಾನೆ.
- ಆದರೆ ಗ್ರಾಹಕರನ್ನು ಅನೇಕ ಕಡೆ ಶೋಷಣೆ ಮಾಡುತ್ತಾರೆ
- ವಿಶ್ವಗ್ರಾಹಕ ದಿನಾಚರಣೆ:–
- ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಮಹತ್ವದ ದಿನ.
- ಅಂದು ಅಮೇರಿಕಾದ ಅಧ್ಯಕ್ಷರಾದ ಜಾನ್ ಎಫ್ ಕೆನಡಿ ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ, ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕ ಅಂಗೀಕರ.
- ಅಂದಿನಿಂದ ಪ್ರತಿವರ್ಷ ಮಾರ್ಚ್ 15ನೇ ತಾರೀಖು "ವಿಶ್ವಗ್ರಾಹಕರ ಹಕ್ಕುಗಳ ದಿನ" ಎಂದು ಆಚರಣೆ.
- ಗ್ರಾಹಕ ರಕ್ಷಣೆ:–
- ಗ್ರಾಹಕರನ್ನು ಉತ್ಪಾದಕರ & ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು "ಗ್ರಾಹಕ ರಕ್ಷಣೆ" ಎನ್ನುವರು.
- ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ಹಕ್ಕುಗಳನ್ನು ಮತ್ತು ಭರವಸೆಗಳನ್ನು ಕೊಡಲಾಗಿದೆ ಇವುಗಳನ್ನು "ಗ್ರಾಹಕರ ಹಕ್ಕುಗಳು" ಎನ್ನುವರು.
- ಗ್ರಾಹಕ ಸಂರಕ್ಷಣಾ ಕಾಯ್ದೆ:–
- ಭಾರತ ಸರ್ಕಾರವು 1986ರಲ್ಲಿ 'ಗ್ರಾಹಕ ಸಂರಕ್ಷಣಾ ಕಾಯ್ದೆ' ಜಾರಿ ಮಾಡಿದೆ.
- ಉದ್ದೇಶಗಳು:–
- ಇದು ಸುರಕ್ಷತೆ & ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ & ಮಾರಾಟ ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ಗ್ರಾಹಕರ(ಗ್ರಾಹಕರ ಹಕ್ಕುಗಳು) ಹಿತಾಸಕ್ತಿಗಳನ್ನು ಕಾಪಾಡುವ ಅಂಶಗಳು:–
- ಗ್ರಾಹಕರ ಜೀವನ & ಆಸಕ್ತಿಗೆ ಅಪಾಯಕಾರಿಯೆನಿಸಿದ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು
- ವಸ್ತುಗಳ ಆಯ್ಕೆಯ ಹಕ್ಕು
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
- ಗ್ರಾಹಕ ಶಿಕ್ಷಣದ ಹಕ್ಕು
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು
- ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು
- ಕಾಯ್ದೆಯ ಪ್ರಕಾರ:–
- ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆ
- ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆ
- ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಲಿಗಳನ್ನು ಸ್ಥಾಪಿಸಿದೆ.
- ಕೇಂದ್ರ ಸರ್ಕಾರದ ಗ್ರಾಹಕರ ಕಲ್ಯಾಣ ಇಲಾಖೆಯ ಮಂತ್ರಿಗಳು 'ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ
- ರಾಜ್ಯ ಸರ್ಕಾರದ ಗ್ರಾಹಕ ಸಂಬಂಧಿ ಇಲಾಖೆಯ ಮಂತ್ರಿಗಳು ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ.
- ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಲಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ.
- ಜಿಲ್ಲಾ ವೇದಿಕೆ:–

RAMALINGAPPA

- ಪ್ರತಿ ಜಿಲ್ಲೆಗೆ ಒಂದು ವೇದಿಕೆ ಇರುತ್ತದೆ.
- ಇದಕ್ಕೆ ರಾಜ್ಯ ಸರ್ಕಾರದಿಂದ ನಾಮಾಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿ ಅಧ್ಯಕ್ಷರು.
- ಇದು 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ.
- ಇದರಲ್ಲಿ ಇಬ್ಬರು ಸದಸ್ಯರಲ್ಲಿ ಒಬ್ಬರು ಮಹಿಳೆ ಇರುತ್ತಾರೆ.
- ರಾಜ್ಯ ಆಯೋಗ:–
- ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು & ಹಾಲಿ ನ್ಯಾಯಾಧೀಶರಾಗಲಿ ಅಧ್ಯಕ್ಷರಾಗಿರುತ್ತಾರೆ.
- ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ.
- ಒಬ್ಬರು ಮಹಳಾ ಸದಸ್ಯರಿರುತ್ತಾರೆ.
- 20 ಲಕ್ಷ ರೂ.ಗಳಿಂದ 1 ಕೋಟಿ ರೂಪಾಯಿಯವರೆಗಿನ ಮೌಲ್ಯದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ.
- ರಾಷ್ಟ್ರೀಯ ಆಯೋಗ:–
- ಇದು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರು ಅಧ್ಯಕ್ಷರು.
- ನಾಲ್ಕು ಜನ ಸದಸ್ಯರಿರುತ್ತಾರೆ.
- ಇವರು ಸಾರ್ವಜನಿಕ ವ್ಯವಹಾರ ಅಥವಾ ಆಡಳಿತದಲ್ಲಿ ನುರಿತವರಾಗಿರಬೇಕು.
- ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ.
- ಇದು 1 ಕೋಟಿ ರೂಪಾಯಿಗಳಿಗಿಂತ ಹೆಚ್ಚಯ ಮೌಲ್ಯದ ದೂರುಗಳನ್ನು ಇತ್ಯರ್ಥ ಮಾಡುತ್ತದೆ.
- ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು:–
- ದೂಗಳು ಕೈಬರಹದ ಅಥವಾ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಮಾಹಿತಿಯಲ್ಲಿ ದೂರು ಕೊಡುವವನ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ನಮೂದಾಗಿರಬೇಕು.
- ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ವಿವರ ಪೂರ್ಣವಾಗಿ ನಮೂದಾಗಿರಬೇಕು.
- ಯಾವ ವಸ್ತುವಿನಿಂದ ನಷ್ಟವಾಗಿದೆ & ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಸಂಬಂಧ ಪಟ್ಟ ರಸೀದಿ ಅಥವಾ ಬಿಲ್ಲನ್ನು ಲಗತ್ತಿಸಬೇಕು
- ದೂರಿನ ಯಾವುದೇ ಶುಲ್ಕ ಅಥವಾ ನೋಂದಾವಣಿ ಶುಲ್ಕ ಇರುವುದಿಲ್ಲ.
- ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.
- 
- ಅ
- ಅ
- ಅ
- ಅ
- ಅ

RAMALINGAPPA L